
ಬಲ್ಲಿರೇನೈ

# 'ಭಾಗವತ'ರ....



ಶ್ರೀ ಕೃಷ್ಣ ಭಾಗವತ ಬಾಳೆಹದ್ದ ಅಭಿನಂದನಾ ಗ್ರಂಥ



# ಯಕ್ಷ ಶಾಲ್ಮಲಾ

ಭೈರುಂಬೆ, ಶಿರಸಿ 581402 (ಉ.ಕ.)

## YAKSHA SHALMALA

Bhairumbe, SIRSI581 402 (U.K.)

ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ, ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಪೀಠಾಧೀಶ್ವರರಾದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಗೌರವಾಧ್ಯಕ್ಷತೆಯಲ್ಲಿ ಯಕ್ಷಶಾಲ್ಮಲಾ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ.

ಯಕ್ಷಗಾನ ಕಲೆಯ ಸಂರಕ್ಷಣೆ, ಪ್ರೋಷಣೆ, ಗ್ರಂಥಗಳ ಮುದ್ರಣ, ಯಕ್ಷಗಾನ ತರಬೇತಿ ಹಾಗೂ ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸುವುದು ಈ ಸಂಸ್ಥೆಯ ಪ್ರಮುಖ ಉದ್ದೇಶಗಳು.

ಯಕ್ಷಗಾನ ಭಾಗವತರಾಗಿ, ಯಕ್ಷಗಾನ ಗುರುವಾಗಿ ಹಲವು ಯಕ್ಷಗಾನ ಸಂಘಟನೆಗಳನ್ನು ನಿರ್ದೇಶಿಸಿ, ಅಪೂರ್ವ ಕಂಠಸಿರಿಯ ಯಕ್ಷಗಾನ ಜ್ಞಾನನಿಧಿಯಾಗಿರುವ ಶ್ರೀ ಬಾಳೆಹದ್ದ ಕೃಷ್ಣ ಭಾಗವತರು ಯಕ್ಷಗಾನ ರಂಗದ ಅಮೂಲ್ಯ ಸಂಪತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರ ಸನ್ಮಾನ ಯಥೋಚಿತವಾಗಿದ್ದು, ಯಕ್ಷ ಶಾಲ್ಮಲಾ ಸಂಸ್ಥೆಯು ಈ ಸಂದರ್ಭದಲ್ಲಿ ಶುಭ ಹಾರೈಸುತ್ತದೆ.

ಕಾರ್ಯಾಧ್ಯಕ್ಷರು
ಶ್ರೀ ಆರ್. ಎಸ್. ಹೆಗಡೆ, ಭೈರುಂಬೆ

ಅಧ್ಯಕ್ಷರು
ಶ್ರೀ ಮಂಜುನಾಥ ಭಾಗವತ, ಹೊಸ್ತೋಟ

ಕಾರ್ಯದರ್ಶಿ
ಶ್ರೀ ನಾಗರಾಜ ಜೋಶಿ, ಬಾಡಲಕೊಪ್ಪ

ಜೊತೆ ಕಾರ್ಯದರ್ಶಿ
ಶ್ರೀ ನಾರಾಯಣ ಮ. ಹೆಗಡೆ, ಗಡಿಕೈ

ನಿರ್ದೇಶಕರು
ಪ್ರೊ॥ ಎಂ. ಎ. ಹೆಗಡೆ, ಸಿದ್ದಾಪುರ
ಪ್ರೊ॥ ಭಾಸ್ಕರ ಭಟ್ಟ, ಕಟೀಲು
ಶ್ರೀ ಎನ್. ಎಂ. ಹೆಗಡೆ, ಯಡಳ್ಳಿ

# ಬಲ್ಲಿರೇನೈ
# 'ಭಾಗವತ'ರ.....

ಶ್ರೀ. ಎಂ. ಎ. ಹೆಗಡೆ ದಂಟಕಲ್
ಇವರಿಗೆ ಗೌರವ ಪೂರ್ವಕವಾಗಿ

## ಶ್ರೀ ಕೃಷ್ಣ ಭಾಗವತ ಬಾಳೆಹದ್ದ
## ಅಭಿನಂದನಾ ಗ್ರಂಥ

- ಪ್ರಕಾಶಕರು -

**ಶ್ರೀ ಕೃಷ್ಣ ಭಾಗವತ ಬಾಳೆಹದ್ದ ಸಂಮಾನ ಸಮಿತಿ**

ಶ್ರೀ ರಾಜರಾಜೇಶ್ವರಿ ಯಕ್ಷಗಾನ ಸಂಸ್ಥೆ (ರಿ.), ಮಂಚಿಕೇರಿ

ಯಲ್ಲಾಪುರ - 581 347 (ಉತ್ತರ ಕನ್ನಡ)

*Ballirenai 'Bhagavata' ra* - A Felicitaiton of Shri Krishna Bhagvat Balehadda consisting of various articles by reputed schollars. Published by Shri Krishna Bhagvat Balehadda Sanman Samittee, Rayasam (R.), Manchikeri - 581 347 (U. K.)



14-05-2005

ಪ್ರತಿಗಳು : 1,000

ಪುಟಗಳು : XII + 196

Rs. : **150/-**

ಸಂಪಾದಕ ಮಂಡಳಿ :

**ಶ್ರೀ ಜಿ. ಟಿ. ಭಟ್ಟ, ಬೊಮ್ಮನಹಳ್ಳಿ - ಪ್ರಧಾನ ಸಂಪಾದಕರು**

**ಶ್ರೀ ರಮಾನಂದ ಐನಕೈ - ಸದಸ್ಯರು**

**ಶ್ರೀ ಡಿ. ಜಿ. ಹೆಗಡೆ, ಕೆರೆಹೊಂಡ - ಸದಸ್ಯರು**

ಸಂಪಾದಕೀಯ ಸಲಹೆ :

**ಡಾ|| ರಾಮಕೃಷ್ಣ ಜೋಶಿ, ಮೈಸೂರು**

**ವಿ|| ಉಮಾಕಾಂತ ಭಟ್ಟ, ಮೇಲುಕೋಟೆ**

**ಶ್ರೀ ಯಂಕಣ್ಣ ಜಾಲೀಮನೆ**

[redacted]

ವಿಶೇಷ ಸಹಕಾರ :


**ಶ್ರೀ ಪ್ರಭಾಕರ ಎ. ಹೆಗಡೆ, ಕಂಪ್ಲಿ**

ಮುದ್ರಣ :

**ದಿ ಚೇತನಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಶಿಂಗ್ ಕೋ-ಆಪ್. ಸೊಸೈಟಿ ಲಿ., ಶಿರಸಿ**

ಸಿ. ಪಿ. ಬಝಾರ್, ಶಿರಸಿ - 581 401 (ಉ. ಕ.)

✆ : (08384) - **227002**




ಪರಮಪೂಜ್ಯ

ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ

**ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು**

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ

श्री लक्ष्मीनृसिंहः



श्री नारायणः

ಪಾರ್ಥಿವ ಸಂ॥ದ
ಚೈತ್ರ ಬ॥ ತ್ರಯೋದಶಿ ಯು
ಶುಕ್ರವಾರ 06/05/05

ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯಪ್ರಮಾಣಪಾರಾವಾರಪಾರೀಣ
ಯಮನಿಯಮಾಸನ ಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣ ಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ
ಷಣ್ಮತವ್ಯವಸ್ಥಾಪನಾಚಾರ್ಯ, ತಪಶ್ಚಕ್ರವರ್ತ್ಯನಾಧ್ಯವಿಚ್ಛಿನ್ನ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶಿಷ್ಯ
ಶ್ರೀ ಭಾಸ್ಕರೇಂದ್ರ ಸರಸ್ವತೀ ಕರಕಮಲ ಸಂಜಾತ ಶ್ರೀ ಶ್ರೀಮದ್ ವಿಶ್ವವಂದ್ಯಸರಸ್ವತೀ
ಗುರುಪರಂಪರಾಪ್ರಾಪ್ತ ಸಕಲನಿಗಮಾಗಮಸಾರಹೃದಯ ಸಾಂಖ್ಯತ್ರಯಪ್ರತಿಪಾದಕ
ಕ್ರಮಾಗತಶ್ರೌತಸ್ಮಾರ್ತಕರ್ಮಮಾರ್ಗವ್ಯವಸ್ಥಾಪಕ, ಅಶೇಷತ್ರಯ್ಯಂತಾದ್ವದ್ವೈತಸಿದ್ಧಾಂತಪ್ರಬಂಧ
ಪ್ರವರ್ತಕ ಆದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಶ್ರೀಮತ್ ಸುಧಾಪುರವರಸಿಂಹಾಸನಾಧೀಶ್ವರ
ಸರ್ವತಂತ್ರಸ್ವತಂತ್ರವ್ಯಾಖ್ಯಾನ ಸಿಂಹಾಸನಾಧಿಷ್ಠಿತ, ರಾಜಾಧಿರಾಜದೇಶಿಕ ಗೋಕರ್ಣ ಮಂಡಲಾಧೀಶ , ಸಹ್ಯಾದ್ರಿ
ಪುರವರಾಧೀಶ್ವರ, ಶಾಲ್ಮಲೀತೀರವಾಸ, ಶ್ರೀ ಮಲ್ಲಕ್ಷ್ಮೀನೃಸಿಂಹ
ಚಂದ್ರಮೌಳಿಪದಪಂಕೇರುಹರಸಗ್ರಾಸಾಳಿವನ್ಮಾನಸ ಶ್ರೀ ಲಲಿತಾಚರಣದಾಸ ಶ್ರೀಮತ್ ಸೋಂದಾ ಸ್ವರ್ಣವಲ್ಲೀ
ಮಹಾಸಂಸ್ಥಾನಾಧೀಶ್ವರ ಶ್ರೀ ಶ್ರೀಮತ್ ಸರ್ವಜ್ಞೇಂದ್ರ ಸರಸ್ವತೀ ಶ್ರೀ ಸ್ವಾಮಿಕರಕಮಲಸಂಜಾತ-

## ಶ್ರೀ ಶ್ರೀಮತ್ ಗಂಗಾಧರೇಂದ್ರ ಸರಸ್ವತೀ ಶ್ರೀ ಸ್ವಾಮಿಭಿಃ

ಅಧ್ಯಕ್ಷರು,
ಶ್ರೀಕೃಷ್ಣ ಭಾಗವತ ಬಾಳೇಹದ್ದ ಸನ್ಮಾನ ಸಮಿತಿ,
ಶ್ರೀ ರಾಜರಾಜೇಶ್ವರಿ ಯಕ್ಷಗಾನ ಸಂಸ್ಥೆ (ರಿ.)
ಮಂಚೀಕೇರಿ. ಇವರ.ವಿಷಯದಲ್ಲಿ ಕೃತಾನೇಕ ನಾರಾಯಣ ಸ್ಮರಣೆಗಳು.

ಯಕ್ಷಗಾನದ ಖ್ಯಾತ ಭಾಗವತರಾದ ಬಾಳೆಹದ್ದ ಕೃಷ್ಣ ಭಾಗವತರನ್ನು ಸಂಮಾನಿಸಿ "ಬಲ್ಲಿರೇನೈ ಭಾಗವತರೆ" ಎಂಬ ಅಭಿನಂದನಾ ಗ್ರಂಥವನ್ನು ಪ್ರಕಟಿಸಲಿರುವ ವಿಷಯವನ್ನು ವಿಜ್ಞಾಪಿಸಿರುತ್ತೀರಿ. ತುಂಬಾ ಮೆಚ್ಚುಗೆಯ ಕಾರ್ಯವನ್ನು ಕೈಗೆತ್ತಿಕೊಂಡಿರುತ್ತೀರಿ. ಯಕ್ಷಗಾನ ಈ ನಾಡಿನ ಸಮರ್ಥ ಕಲೆ. ಈ ಕಲೆಯ ಆಟ,ಕೂಟಗಳೆಂಬ ಎರಡು ಪ್ರಕಾರಗಳಲ್ಲೂ ಹಿಮ್ಮೇಳದ ಹೊಣೆ ಬಹು ದೊಡ್ಡದು. ಕೃಷ್ಣ ಭಾಗವತರು ಹೆಚ್ಚಾಗಿ ಕೂಟಗಳಲ್ಲಿಯೇ ತಮ್ಮ ಪ್ರತಿಭೆಯನ್ನು ಮೆರೆದವರೆಂದು ನಮ್ಮ ಅರಿವು. ಅವರು ತಾಳ ಹಿಡಿದರೆಂದರೆ ಆ ಕೂಟ ನಿಜಕ್ಕೂ "ತಾಳಮದ್ದಳೆ"ಯ ಕೂಟವೇ ಆಗುತ್ತಿತ್ತು. ಕೂಟಗಳಲ್ಲಿ ತಾಳಮದ್ದಳೆಗಳ ವೈಭವವನ್ನು ಮೆರೆಸಿದ ಭಾಗವತರುಗಳಲ್ಲಿ ಇವರು ಅಗ್ರಮಾನ್ಯರೆಂಬುದು ಹೆಮ್ಮೆಯ ವಿಷಯವೇ ಆಗಿದೆ. ಇವರು ಹಿಮ್ಮೇಳಕ್ಕೆ ವಾಯಲಿನ್ ವಾದ್ಯವನ್ನು ನುಡಿಸುವ ಮೂಲಕ ಪ್ರಸಿದ್ಧಿ ಪಡೆದವರು.

ಖಚಿತವಾದ ತಾಳ,ಲಯ,ಶೃತಿಗಳೊಂದಿಗೆ ಮೇಳೈಸಿದ ಗಾನವು ಭಗವಂತನಿಗೆ ಅತ್ಯಂತ ಪ್ರಿಯವಾದ ನಾದೋಪಾಸನೆಯೇ ಆಗಿದೆ. ಭಾಗವತರು ಇಂತಹ ಸಿದ್ಧಿಯ ಮೂಲಕ ಭಗವಂತನಿಗೆ ಪ್ರಿಯರಾದವರು. ತಮ್ಮ ವಿದ್ಯೆಯನ್ನು ಹೊಸ್ತೋಟ ಭಾಗವತರಂಥ ಕಲಾ ತಪಸ್ವಿಗಳಿಗೆ ಧಾರೆಯೆರೆದು ಸಾರ್ಥಕಗೊಳಿಸಿದ್ದಲ್ಲದೇ ಸ್ವತಃ ತಮ್ಮ ಮಗ ತಿಮ್ಮಪ್ಪನನ್ನೂ ಉತ್ತಮ ಭಾಗವತನನ್ನಾಗಿ ಪಳಗಿಸಿ ಯಕ್ಷಲೋಕಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ. ಯಕ್ಷಗಾನದ ಹಿಮ್ಮೇಳಕ್ಕೆ ಸೈದ್ಧಾಂತಿಕ ತಳಪಾಯವನ್ನು ಒದಗಿಸಿದ್ದಾರೆ. ಇಂತಹ ಮಹನೀಯರ ಸೇವೆಯನ್ನು ಗುರುತಿಸಿ, ಅವರನ್ನು ಸಂಮಾನಿಸಿ ಪೂಜಿಸಬೇಕಾದದ್ದು ಸಮಾಜದ ಹೊಣೆ. ಈ ಕಾರ್ಯವನ್ನು ಶ್ರೀ ರಾಜರಾಜೇಶ್ವರಿ ಯಕ್ಷಗಾನ ಸಂಸ್ಥೆ ಕೈಗೊಂಡಿರುವದು ಸ್ತುತ್ಯರ್ಹ. ಕಾರ್ಯಕ್ರಮಗಳೆಲ್ಲವೂ ಸಾರ್ಥಕವಾಗಿ ನಡೆಯಲಿ. ಅಭಿನಂದನಾ ಯಕ್ಷಗಾನಕ್ಕೊಂದು ಕೈಪಿಡಿಯಾಗಲಿ. ಭಾಗವತರು ನೂರ್ಕಾಲ ಆರೋಗ್ಯದಿಂದ ಇದ್ದು ಕಿರಿಯರಿಗೆ ಮಾರ್ಗದರ್ಶನ ಮಾಡುತ್ತಿರಲೆಂದು ಆರಾಧ್ಯ ದೇವರಲ್ಲಿ ಪ್ರಾರ್ಥಿಸಿ ಆಶೀರ್ವದಿಸುತ್ತಿದ್ದೇವೆ.


ಲೋಕಾಃ ಸಮಸ್ತಾಃ ಸುಖಿನೋ ಭವಂತು.




# ಶ್ರೀ ಕೃಷ್ಣ ಭಾಗವತ ಬಾಳೆಹದ್ದ ಸನ್ಮಾನ ಸಮಿತಿ



ಗೌರವಾಧ್ಯಕ್ಷರು
ವೇ. ಮೂ. ನಾಗೇಂದ್ರ ಭಟ್ಟ, ಹಿತ್ಲಳ್ಳಿ



ಕಾರ್ಯಾಧ್ಯಕ್ಷರು
ಶ್ರೀ ಜಿ. ಟಿ. ಭಟ್ಟ, ಬೊಮ್ಮನಳ್ಳಿ



ಉಪಾಧ್ಯಕ್ಷರು
ಶ್ರೀ ಆರ್. ಎಸ್. ಹೆಗಡೆ, ಸಂಕದಗುಂಡಿ




ಉಪಾಧ್ಯಕ್ಷರು
ಶ್ರೀ ಆರ್. ಜಿ. ಹೆಗಡೆ, ಭಟ್ರಕೇರಿ

ಉಪಾಧ್ಯಕ್ಷರು
ಶ್ರೀ ಆರ್. ಎಸ್. ಹೆಗಡೆ, ಮೇಲಿನಕಂಪ್ಲಿ



ಉಪಾಧ್ಯಕ್ಷರು
ಶ್ರೀ ಶ್ರೀಪಾದ ಹೆಗಡೆ, ಶಿರನಾಲಾ



ಕಾರ್ಯದರ್ಶಿ
ಶ್ರೀ ಅನಂತ ಎಂ. ಹೆಗಡೆ, ಜಾಲಿಮನೆ



ಸಹಕಾರ್ಯದರ್ಶಿ
ಶ್ರೀ ವಿಶ್ವನಾಥ ವೆಂ. ಹೆಗಡೆ, ಭಾಮನಕೊಪ್ಪ



ಸಹಕಾರ್ಯದರ್ಶಿ
ಶ್ರೀ ಶ್ರೀಪಾದ ಎಚ್. ಹೆಗಡೆ, ಚಿಕ್ಕೊತ್ತಿ

# ಬಲ್ಲಿರೇನೈ...............

ಸಾರ್ಥಕವಾದ ಜೀವನವನ್ನು ಅಭಿನಂದಿಸುವುದು ಸಜ್ಜನರ ಸಂಸ್ಕಾರ. ಬದುಕನ್ನು ಪ್ರೀತಿಸುವವರ ಹೆಜ್ಜೆಯದು; ಬಾಳಿನಲ್ಲಿ ಒಳಿತನ್ನು ಹಾರೈಸಿ ಬೆಳೆಸುವ ವ್ಯವಸಾಯಿಗಳ ಕಾಯಕವದು. ಅಭಿನಂದನೆ ಹಿರಿದಾದ ಬದುಕನ್ನು ಕಂಡು ಹಿಗ್ಗುವುದು; ಅದರ ಧನ್ಯತೆಯನ್ನು ಗೌರವಿಸುವುದು; ಆ ದಾರಿಯಲ್ಲಿ ದಾಪಿಕ್ಕಿ ನಮ್ಮ ಬಾಳನ್ನು ತುಂಬಿಸಿಕೊಳ್ಳುವುದು. ಇದೊಂದು ಬಗೆಯ ಕಾಳಜಿ. ಬಾಳಿನ ಸಮೃದ್ಧಿಗಾಗಿ ಶ್ರಮಿಸುವ 'ವಿನಯ'. ಇದಕ್ಕೆ ಮೈಕೊಟ್ಟಾಗ ಇಟ್ಟ ಮೊದಲ ಹೆಜ್ಜೆ 'ಬಲ್ಲಿರೇನೈ..........'

ಮಂಚಿಕೇರಿ ರಾಯಸಂ ವತಿಯಿಂದ ಭಾಗವತರಿಗೊಂದು ಸನ್ಮಾನ ಮಾಡಿ ಅವರ ಹೆಸರಿನಲ್ಲಿ ಅಭಿನಂದನಾ ಗ್ರಂಥ ಪ್ರಕಟಿಸಬೇಕೆಂದು ಅನೇಕ ವರ್ಷಗಳ ಸಂಕಲ್ಪವಾಗಿತ್ತು, ಆದರೆ ಇಂದು ಈ ಕೆಲಸ ರಾಯಸಂ ಸಂಸ್ಥೆಯನ್ನೂ ಮೀರಿ ವಿಶಾಲ ವ್ಯಾಪ್ತಿ ಪಡೆದಿದೆ. ಕೃಷ್ಣ ಭಾಗವತರ ಸನ್ಮಾನಕ್ಕಾಗಿಯೇ ಪ್ರತ್ಯೇಕವಾದ ಸಮಿತಿಯೊಂದು ರಚನೆಯಾಗಿ ಹಲವಾರು ಗಣ್ಯರು ಇದರಲ್ಲಿ ಭಾಗಿಯಾಗಿದ್ದಾರೆ.

ಕೆಲವರು ಕಲೆಗಾಗಿ ಬದುಕುತ್ತಾರೆ. ಕೆಲವರು ಕಲಾತ್ಮಕವಾಗಿ ಬದುಕುತ್ತಾರೆ. ಮತ್ತೆ ಕೆಲವರು ಬದುಕನ್ನೇ ಕಲೆಯಾಗಿ ಸ್ವೀಕರಿಸುತ್ತಾರೆ. ಕಲೆಯ ನೆಲೆಯಲ್ಲೇ ಬಾಳಿನಹದವನ್ನು ಕಂಡವರು ಬಾಳೆಹದ್ದ ಭಾಗವತರು. ಕಲೆಯನ್ನು ಬದುಕಾಗಿಸಿಕೊಂಡವರು ಇವರು; ಬದುಕಿನುದ್ದ ಕಲೆಯ ನೆಲೆಯನ್ನು ಕಂಡರಸುತ್ತಿರುವವರು.

ಮಲೆನಾಡಿನ ಮುಗ್ಧಸಂಸಾರಿ. ಸರಳ ಸಜ್ಜನಿಕೆಯ ಗಾನ ವಿಶಾರದ. 'ಯಕ್ಷಗಾನ ಜ್ಞಾನನಿಧಿ'. ಪ್ರಶಸ್ತಿಗಳ ಬೆನ್ನು ಹತ್ತದೆ ಅವುಗಳಿಗೆ ಬೆನ್ನು ಹಾಕಿ ನಿಂತ ಧೀರ.

ಎಪ್ಪತ್ತೈದರ ಏರನ್ನು ಏರಿ ನಿರಾಳವಾಗಿ ಬಾಳುತ್ತಿರುವ ಬಾಳೆಹದ್ದ ಭಾಗವತರು 'ಭಾಗೋತಜ್ಜ..., ಭಾಗೋತ್‌ಮಾವ..., ಭಾಗೋತ್ ಭಾವ.... ಭಾಗೋತಣ್ಣ...' ಹೀಗೆ ಎಲ್ಲರಿಗೂ ಬಂಧುಗಳೇ. ಇವರ ಆತ್ಮೀಯತೆಯ ಬಳಕೆಯ ಸೆಳೆತಕ್ಕೆ ಸಿಗದಿರುವವರು ನತದೃಷ್ಟರು. ಇವರನ್ನು ತಿಳಿದವರು ಇವರನ್ನು ಅಭಿನಂದಿಸದೆ ಇರರು.

ಬಲ್ಲವರು ಹಲವರಿಲ್ಲ, ಬಲ್ಲವರೆ ಬಲ್ಲಿದರನ್ನು ತಿಳಿಸಬೇಕು. ಭಾಗವತರಲ್ಲೇ ಬಲ್ಲಿದರು ಬಾಳೆಹದ್ದ ಭಾಗವತರು. ಇವರನ್ನು ನಿಕಟವಾಗಿ ಬಲ್ಲ ಅನೇಕ ಹಿರಿಯರು ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ತಮ್ಮ ಒಡನಾಟದ ನೆನಪಿನ ಬುತ್ತಿಯನ್ನು

ಬಿಚ್ಚಿಟ್ಟಿದ್ದಾರೆ. ಅವರಿಗೆ ನಾವು ಋಣಿ.

ಭಾಗವತರು ಶೋಧಿಸಿ, ಪರಿಷ್ಕರಿಸಿ, ಸಂಯೋಜಿಸಿದ ರಾಗಗಳ ನಿರೂಪಣೆ ಯಕ್ಷಗಾನದ ಅಧ್ಯಯನಕ್ಕೊಂದು ಕೈಮರ. ಅದನ್ನೊಳಗೊಂಡ ಈ ಕಿರು ಹೊತ್ತಿಗೆ ಈ ಹೊತ್ತಿಗೆ ಸರ್ವಾದರಣೀಯ.

ಭಾಗವತರೊಡನೆ ನಿಕಟವಾಗಿ ಒಡನಾಡಿದ, ಭಾಗವತರಿಗೆ ಸ್ನೇಹಿತರೂ, ಮಾರ್ಗದರ್ಶಿಗಳೂ ಆದ ಹಲವಾರು ಹಿರಿಯ ಕಲಾವಿದರ ಕುರಿತು ಲೇಖನಗಳಿವೆ.

ಹೀಗೆ ಈ ಅಭಿನಂದನಾ ಗ್ರಂಥ ಕೇವಲ ಕೃಷ್ಣ ಭಾಗವತರ ಸುತ್ತಲ ಪ್ರಭಾವಳಿ ಮಾತ್ರವಾಗಿರದೆ ವರ್ತಮಾನದ ಯಕ್ಷಗಾನ ಪ್ರಪಂಚಕ್ಕೆ ಉಪಯುಕ್ತವಾಗಬಹುದಾದ ಅನೇಕ ಮಾರ್ಗದರ್ಶಿ ಸೂತ್ರಗಳನ್ನೂ ಒಳಗೊಂಡಿದೆ.

ಇಷ್ಟೆಲ್ಲ ವಿಷಯಗಳನ್ನು ಸಂಗ್ರಹಿಸಲು ನೆರವಾದ ಎಲ್ಲ ಗಣ್ಯರನ್ನೂ, ಜಾಹೀರಾತುದಾರರನ್ನು, ಪುಟಪ್ರಾಯೋಜಕರನ್ನು, ಅಲ್ಲದೇ ಈ ಕಾರ್ಯದಲ್ಲಿ ತಮ್ಮ ಶಕ್ತಿ ಮೀರಿ ಸಹಾಯ ಮಾಡಿದ ಪ್ರತಿಯೊಬ್ಬರ ಹೃದಯವಂತಿಕೆಯನ್ನು ಸಂಪಾದಕ ಮಂಡಳಿ ಸ್ಮರಿಸುತ್ತದೆ. ಈ ಹೊತ್ತಿಗೆ ಮುದ್ರಣಗೊಳ್ಳುವಲ್ಲಿ ಮುತುವರ್ಜಿವಹಿಸಿ ಸಹಕರಿಸಿದ ಶಿರಸಿ ಚೇತನಾ ಸಹಕಾರಿ ಮುದ್ರಣಾಲಯದ ಮುಖ್ಯಕಾರ್ಯನಿರ್ವಾಹಕ ಹಾಗೂ ಸಿಬ್ಬಂದಿ ವರ್ಗದವರನ್ನೂ ಸಹ ನಾವು ಕೃತಜ್ಞತೆಯಿಂದ ನೆನೆಯುತ್ತೇವೆ. ಈ ಗ್ರಂಥ ನಿಮಗೆ ಉಪಯುಕ್ತವಾದಷ್ಟೂ ನಮ್ಮ ಶ್ರಮ ಸಾರ್ಥಕ.

ನಮ್ಮ ಹಂಬಲಕ್ಕೆ ಬೆಂಬಲವಿತ್ತು ಸಂದೇಶ ನೀಡಿ ಆಶೀರ್ವದಿಸಿದ ಪರಮಪೂಜ್ಯ ಶ್ರೀ ಶ್ರೀಮತ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಚರಣದಾವರೆಗಳಿಗೆ ಅಭಿವಂದಿಸುತ್ತೇವೆ.

– ಪ್ರಧಾನ ಸಂಪಾದಕರು

## ಭಾಗವತ ದಂಪತಿಗಳು



ಶ್ರೀಮತಿ ರಾಧಾ ಮತ್ತು ಶ್ರೀ ಕೃಷ್ಣ ಹೆಗಡೆ, ಬಾಳೆಹದ್ದ



ಅಪ್ಪ ಮಗನ ನಿರಂತರ ತಾಲೀಮು.....

# ವಿವಿಧ ರಸಭಾವಗಳಲ್ಲಿ ಭಾಗವತರ ಭಾಗವತಿಕೆ

**ಭಕ್ತಿ**




ವಾರಣಾಃ ವದನಾ....

**ಶೃಂಗಾರ**




ಮಾನಿನಿ ಮಣಿಯೆ ಬಾರೆ.....

**ಹಾಸ್ಯ**



ಎಲ ಎಲ ಹಾರ್ವ ವಿರ್ಮ್ಯ ನೀನು......

**ದುಃಖ**




ರುಧಿರ ತೋಯದಿ ಭೂಮಿ ಕೆಸರಾಯ್ತು.....

**ವೀರ**




ಬಿಡದೆ ಖಾಡಾಖಾಡಿ ಹಳಚುವೆನು ಋಣವಿರಲು....

**ಅದ್ಭುತ**




ಹರಹರೇನಾಶ್ಚರ್ಯ.....

**ಭೀಭತ್ಸ**



ಖಂಡಖಂಡವ ಬೇರೆ ಬೇರೆ...

**ಸಂವಾದ**



ತೋಂ ತೋಂ.... ತೋಂ ತೋಂ ತೋಂ ತಾಕ್ಡ ಕಿಡ್ತಾ....



# ರಾ. ಯ. ಸಂ. ಕುರಿತು

ಶ್ರೀ ಕೃಷ್ಣ ಭಾಗವತರ ಸನ್ಮಾನ ಸಂದರ್ಭದಲ್ಲಿ ರಾಜರಾಜೇಶ್ವರಿ ಯಕ್ಷಗಾನ ಸಂಸ್ಥೆಯ ಕುರಿತು ಪರಿಚಯಿಸುವುದಾಗಲೀ, ಬರೆಯುವುದಾಗಲೀ ಸ್ವಲ್ಪ ಮುಜುಗರ ಎನಿಸಿದರೂ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ತಿಳಿದಾಗ ಸಮಂಜಸ ಎನಿಸದೇ ಇರದು.

ಶ್ರೀ ರಾಜ-ರಾಜೇಶ್ವರಿ ವಿದ್ಯಾ ಸಂಸ್ಥೆಯ ಸಹೋದರ ಸಂಸ್ಥೆಯಾಗಿ 2000 ರಲ್ಲಿ ನೋಂದಣಿಯಾಯಿತು. ಪ್ರಕೃತದಲ್ಲಿ ಕ್ಷೀಣಿಸುತ್ತಿರುವ ಯಕ್ಷಗಾನ ಕಲೆಯ ಕುರಿತು ಒಳ್ಳೆಯ ಅಭಿರುಚಿಯಾಗಲೀ, ಉತ್ತಮ ದರ್ಜೆಯ ಯಕ್ಷಗಾನವಾಗಲೀ, ಅದಕ್ಕೆ ಪ್ರತಿಯಾಗಿ ಹಂಸಕ್ಷೀರ ನ್ಯಾಯದಂತೆ ನೋಡುವ ಪ್ರೇಕ್ಷಕವೃಂದವಾಗಲೀ ಕ್ರಮೇಣ ಇಳಿಮುಖವಾಗುತ್ತಿರುವುದನ್ನು ಮನಗಂಡು ಈ ಭಾಗದಲ್ಲಿ ಒಂದು ಇಂತಹ ಸಂಸ್ಥೆಯನ್ನು ಕಟ್ಟಬೇಕೆಂತಲೂ, ಆ ಮೂಲಕ ಸದಭಿರುಚಿಯ ಪ್ರೇಕ್ಷಕರನ್ನು ಆಕರ್ಷಿಸುವುದು ಹಾಗೂ ಯಕ್ಷಗಾನ ತರಗತಿಯ ಮೂಲಕ ಹೊಸ ಆಸಕ್ತ ಕಲಾವಿದರನ್ನು ನಿರ್ಮಿಸುವುದು, ಪ್ರಮುಖವಾಗಿ ಭರತನಹಳ್ಳಿ ಸೀಮೆಯನ್ನೇ ಕಾರ್ಯಕ್ಷೇತ್ರದ ಗುರಿಯಾಗಿಸಿ ಈ ಕಲೆ ಮತ್ತೆ ಪ್ರಕಾಶಿಸುವ ಮಹತ್ತರ ಹೊಣೆಯೊಂದಿಗೆ ಅಂದು ಸೇರಿದ ಹಿರಿಕಿರಿಯರೆಲ್ಲರ ಮನೋಭಿಲಾಷೆಯಂತೆ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು.

ಆ ಕಾರಣಕ್ಕಾಗಿಯೇ ರಾಜ-ರಾಜೇಶ್ವರಿ ಯಕ್ಷಗಾನ ಸಂಸ್ಥೆಯು (ರಾಯಸಂ, ಮಂಚಿಕೇರಿ) ಸರಕಾರದಿಂದ ನೋಂದಾಯಿಸಲ್ಪಟ್ಟ ಈ ಭಾಗದ ಪ್ರಥಮ ಯಕ್ಷಗಾನ ಸಂಸ್ಥೆ ಎಂಬ ಖ್ಯಾತಿಯೊಂದಿಗೆ ಪ್ರಾರಂಭವಾಯಿತು.

ಶ್ರೀ ಜಿ. ಟಿ. ಭಟ್ಟ, ಬೊಮ್ನಳ್ಳಿ ಇವರು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ ನಿಯೋಜನೆಗೊಂಡರು. ಮತ್ತು ಆ ಸಮಯದಲ್ಲಿ ಕೆಲವು ಆಸಕ್ತ ಹವ್ಯಾಸೀ ಕಲಾವಿದರನ್ನೊಳಗೊಂಡ ತಂಡದಿಂದ ಶ್ರೀ ನಾರಾಯಣ ಹಾಸ್ಯಗಾರ, ಕರ್ಕಿ ಇವರ ನಿರ್ದೇಶನದಲ್ಲಿ 'ಶಬರಾರ್ಜುನ' ಯಕ್ಷಗಾನ ಪ್ರದರ್ಶನ ನಡೆಯಿತು.

ಶ್ರೀ ಆರ್ ಎನ್. ಹೆಗಡೆ, ಗೋರ್ಸಗದ್ದೆ, ಶ್ರೀ ರಮಾನಂದ ಐನಕೈ, ಶ್ರೀ ಎಸ್. ಜಿ. ಹೆಗಡೆ, ಶಿರನಾಲಾ ಮುಂತಾದ ಗಣ್ಯರು ಅಂದು ದೀಪ ಬೆಳಗಿಸಿ ಸಂಸ್ಥೆಯು ಯಶಸ್ವಿಯಾಗಲೆಂದು ಹರಸಿ ತಮ್ಮ ಹೃತ್ಪೂರ್ವಕ ಹಾರೈಕೆಯನ್ನು ನೀಡಿದರು.

ನಂತರ ಇದರ ಧ್ಯೇಯೋದ್ದೇಶಕ್ಕೆ ಮೂಲವಾಗಿ ಬೇಕಾದದ್ದು ಆರ್ಥಿಕ ನೆರವು. ಈ ಕುರಿತು ಒಂದು ಸಮಿತಿಯನ್ನು ರಚಿಸಿ ಸಂಸ್ಥೆಗೆ ಆಜೀವ ಸದಸ್ಯರನ್ನು, ದಾನಿಗಳನ್ನು, ಹಿತೈಷಿಗಳನ್ನು ಗುರುತಿಸಿ ಸಂಸ್ಥೆಯ ಮೂಲ ಅಡಿಪಾಯವನ್ನು ಭದ್ರಗೊಳಿಸಲಾಯಿತು. ಇಂದು ಸಂಸ್ಥೆಗೆ



ಒಂದು ನೂರಾ ಐವತ್ತಕ್ಕೂ ಅಧಿಕ ಆಜೀವ ಸದಸ್ಯರ ಜೊತೆ ಕಲಾಭಿಮಾನಿಗಳಿಂದಲೂ , ಕಾಲ ಕಾಲಕ್ಕೆ ಇನ್ನುಳಿದ ಸ್ಥಾನಿಕ ಸಂಸ್ಥೆಗಳಿಂದಲೂ ಕಿರು ಪ್ರಮಾಣದ ಪ್ರೋತ್ಸಾಹ, ನೆರವು ದೊರೆಯುತ್ತಿದೆ.

ತನ್ನ ಹೊಣೆಯನ್ನರಿತುಕೊಂಡ ಸಂಸ್ಥೆ ಕಾರ್ಯಕ್ರಮವನ್ನು ಮಾಡುತ್ತ ಬಂದಿದೆ. ಶ್ರೇಷ್ಠ ಅರ್ಥಧಾರಿಗಳನ್ನು ಕರೆಯಿಸಿ ಪ್ರತಿವರ್ಷವೂ ತಾಳಮದ್ದಳೆ ನಡೆಸುತ್ತಿದ್ದು, ಪ್ರಮುಖವಾಗಿ ಶ್ರೀ ಲಕ್ಷ್ಮೀನಾರಾಯಣ ಭಟ್ಟ ತ್ರಿವೇದಿ, ವೇ. ಮೂ. ಬುಚ್ಚನ್ ಶಾಸ್ತ್ರಿಗಳು, ಶ್ರೀ ಜಬ್ಬಾರ ಸಮೋ ಸಂಪಾಜೆ, ಶ್ರೀ ರಾಧಾಕೃಷ್ಣ ಕಲ್ಚಾರ್, ಶ್ರೀ ನೇವಣೆ ಗಣೇಶ ಭಟ್ಟ, ಶ್ರೀ ವಿ. ತಿ. ಹೆಗಡೆ, ಶೀಗೇಹಳ್ಳಿ , ಶ್ರೀ ಎಂ. ಎನ್. ಹೆಗಡೆ , ಶ್ರೀ ಗಣಪತಿ ಭಟ್ಟ, ಮಾಗೋಡ ಮುಂತಾದ ವಾಗ್ಮಿಗಳನ್ನು ಕರೆಯಿಸಿ ಈ ಭಾಗದ ತಾಳಮದ್ದಳೆ ಶ್ರೋತೃಗಳ ಆಶಯವನ್ನು ಈಡೇರಿಸುವ ಪ್ರಯತ್ನವನ್ನು ಸಂಸ್ಥೆಯು ಮಾಡಿದೆ.

ಇದಕ್ಕೆಲ್ಲ ಹಿನ್ನೆಲೆಯಾಗಿ ಶ್ರೀ ಕೃಷ್ಣ ಭಾಗವತರ ಪುತ್ರರಾದ ಶ್ರೀ ತಿಮ್ಮಪ್ಪ ಭಾಗವತ ಬಾಳೇಹದ್ದ ಇವರ ಅಪಾರ ಪರಿಶ್ರಮ ಇದೆ. ಇದನ್ನು ಬರೆದಾಗಲೀ, ಕೃತಜ್ಞತೆ ಅರ್ಪಿಸುವ ಮೂಲಕವಾಗಲೀ ಹೇಳಿಕೊಂಡರೆ ಕೇವಲ ಔಪಚಾರಿಕವೇ ಆಗುವುದು. ನಮ್ಮ ಆಟವಿದ್ದಾಗ ಇಂದಿನವರೆಗೂ ಶ್ರೀ ತಿಮ್ಮಪ್ಪ ಭಾಗವತರು ಹಾಗೂ ಶ್ರೀ ನಾರಾಯಣ ಭಾಗವತ ಬಾಳೆಹದ್ದ ಇವರುಗಳು ತಾಲೀಮು ನಡೆಸಲು ಪ್ರತಿದಿನ ಸಂಜೆ ನಮ್ಮೆಲ್ಲರಿಗಿಂತ ಮೊದಲೇ ಹಾಜರ ಇರುವುದು, ಪ್ರತಿ ಪದ್ಯಗಳಿಗೂ ಹೀಗೆಯೇ ಅಭಿನಯಿಸಬೇಕೆಂದು ತಿಳಿಸಿಹೇಳುವುದು, ಹತ್ತಾರು ಬಾರಿ ಅದನ್ನೇ ಹಾಡಿ ತೋರಿಸಿ ಎಂಥವನೂ ಅಭಿನಯ ಮಾಡಿಬಿಡೋಣ ಎಂಬಂತೆ ಉತ್ಸಾಹ ಪೂರ್ಣವಾಗಿ ಕಿಂಚಿತ್ತೂ ಬೇಸರಿಸದೇ ಸಲಹೆ ನೀಡುವುದು ಇತ್ಯಾದಿ ಯಾರ ಮನಸ್ಸೇ ಆದರೂ ಪರಿವರ್ತನೆಯಾಗದಿರದು. ಇದರ ಫಲವಾಗಿ ಈ ಸಂಸ್ಥೆಯ ಮೂಲಕ ಇಲ್ಲಿಯವರೆಗೆ ಹಲವಾರು ಯಕ್ಷಗಾನ ಪ್ರಯೋಗವನ್ನು ಹೊರರಾಜ್ಯಗಳಲ್ಲಿಯೂ ಯಶಸ್ವಿಯಾಗಿ ಅಭಿನಯಿಸಿದೆ. ಶ್ರೀ ಕೃಷ್ಣ ಭಾಗವತರಂತಹ ತ್ಯಾಗಿಗಳ ಆಶೀರ್ವಾದದ ಶ್ರೀರಕ್ಷೆ ಈ ಸಂಸ್ಥೆಯ ಮೇಲಿದೆ ಎಂಬ ಆತ್ಮೀಯ ವಿಶ್ವಾಸವೇ ಈ ಮೇಲಿನದಕ್ಕೆಲ್ಲ ಕಾರಣ. ಬಾಳೆಹದ್ದ ಮನೆತನದವರು ಯಕ್ಷಗಾನ ಕಲೆಗೆ ನೀಡಿದ ಕೊಡುಗೆಯನ್ನು ನೆನೆಸಿಕೊಂಡಾಗ ಅವರಿಗೆ ನಾವು ಕೊಡುತ್ತಿರುವ ಗೌರವ ಅತ್ಯಲ್ಪ. ಆದಕ್ಕಾಗಿ ಈ ಸಂಸ್ಥೆಯ ಮೂಲಕವೇ ಶ್ರೀ ಕೃಷ್ಣ ಭಾಗವತರಿಗೆ ಸಂಮಾನಿಸಬೇಕೆಂಬ ಪ್ರಸ್ತಾವನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಇಂದು ಇಡೀ ಸೀಮೆಯನ್ನು ಮೀರಿ ಯಕ್ಷಗಾನದ ಅಭಿಮಾನಿಗಳೂ ಮುಂದೆ ಬಂದು ನಮ್ಮ ಜೊತೆ ಕೈಜೋಡಿಸಿ ಈ ಕಾರ್ಯಕ್ರಮ ನಡೆಸಲು ಪ್ರೋತ್ಸಾಹಿಸುತ್ತಿದ್ದಾರೆ.

ಇಂತಹ ಘನ ಧ್ಯೇಯೋದ್ದೇಶಗಳನ್ನು ನೆರವೇರಿಸುವ ಮತ್ತು ಯಕ್ಷಗಾನ ಕಲೆ ಜೀವಂತವಾಗಿರಲು ಎಲ್ಲ ವಿಧವಾದ ಸರ್ವ ಪ್ರಯತ್ನ ಮಾಡುವ ಸಂಸ್ಥೆಯ ಸಂಕಲ್ಪ ಕೆಲ ಪ್ರಮಾಣದಲ್ಲಾದರೂ ಕಾರ್ಯರೂಪಕ್ಕೆ ಬರುತ್ತಿದೆ ಎಂಬ ಸಂತೃಪ್ತಿ ಮಾತ್ರ ನಮ್ಮದಾಗಿದೆ.




ತರಬೇತಿ ಶಿಬಿರಗಳನ್ನು ನಡೆಸಿದೆ. ಮಕ್ಕಳಿಗೆ ತರಬೇತಿ ನೀಡಿ ಯಕ್ಷಗಾನದ ಪ್ರದರ್ಶನ ಏರ್ಪಡಿಸಿದೆ. ಇದರ ಹೊರತಾಗಿ ಯೋಗ ಶಿಬಿರ, ಉಪನ್ಯಾಸ, ಆರೋಗ್ಯ ಶಿಬಿರಗಳನ್ನು ನಡೆಸಿದೆ. ಕುವೆಂಪು ಜನ್ಮ ಶತಮಾನೋತ್ಸವದ ನಿಮಿತ್ತ ಅವರ 'ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಯಕ್ಷಗಾನ ಪ್ರಸಂಗಕ್ಕೆ ಅಳವಡಿಸಿದ್ದು ಒಂದು ಅಪೂರ್ವ ಪ್ರಯೋಗ. 'ರಾಯಸಂ' ನ ಎಲ್ಲ ರಚನಾತ್ಮಕ ಕಾರ್ಯಕ್ರಮಗಳಿಗೆ ಶ್ರೀ ಸ್ವರ್ಣವಲ್ಲೀ ಸ್ವಾಮಿಗಳ ಕೃಪಾಶೀರ್ವಾದವಿದೆ. ಭವಿಷ್ಯದಲ್ಲಿ ರಾಯಸಂ ಇನ್ನೂ ಹೆಚ್ಚಿನ ಗುರಿ ಸಾಧಿಸುವ ಬಯಕೆ ಹೊಂದಿದೆ. ಎಲ್ಲರ ಹಾಲುಂಡು ಬೆಳೆಯುತ್ತಿರುವ ಈ ಸಂಸ್ಥೆಗೆ ಇನ್ನೂ ಹೆಚ್ಚಿನ ನಿರಂತರ ಪ್ರೋತ್ಸಾಹ ಎಲ್ಲ ಭಾಗಗಳಿಂದಲೂ ದೊರೆತಲ್ಲಿ, ಹೊಣೆ ಹೊತ್ತವರಿಗೆ ಇಮ್ಮಡಿ ಉತ್ಸಾಹ ಬರುವುದು ಸಹಜ. ಕಾರಣ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ನಿರೀಕ್ಷಿಸುತ್ತ ಹಿರಿಯರ, ಅನುಭವಿಗಳ, ಹಿತೈಷಿಗಳ ಆಶೀರ್ವಾದವನ್ನು ರಾಯಸಂ ಮಂಚಿಕೇರಿ ಯಾಚಿಸುತ್ತದೆ.

## ರಾ. ಯ. ಸಂ. ಪದಾಧಿಕಾರಿಗಳು



**ಶ್ರೀ ಜಿ. ಟಿ. ಭಟ್ಟ, ಬೊಮ್ಮನಹಳ್ಳಿ**
ಅಧ್ಯಕ್ಷರು



**ಶ್ರೀ ಆರ್. ಟಿ. ಹೆಗಡೆ, ಕಲಾವನ**
ಉಪಾಧ್ಯಕ್ಷರು



**ಶ್ರೀ ವಿಶ್ವನಾಥ ವಿ. ಹೆಗಡೆ, ಭಾಮನಕೊಪ್ಪ**
ಕಾರ್ಯದರ್ಶಿ



**ಶ್ರೀ ನಾರಾಯಣ ಜಿ. ಶೇರುಗಾರ**
ಸಹ ಕಾರ್ಯದರ್ಶಿ



**ಶ್ರೀ ಮಂಜುನಾಥ ಜಿ. ಹೆಗಡೆ, ಉಮಚಗಿ**
ಕೋಶಾಧ್ಯಕ್ಷರು



ಒಂದು ನೂರಾ ಐವತ್ತಕ್ಕೂ ಅಧಿಕ ಆಜೀವ ಸದಸ್ಯರ ಜೊತೆ ಕಲಾಭಿಮಾನಿಗಳಿಂದಲೂ , ಕಾಲ ಕಾಲಕ್ಕೆ ಇನ್ನುಳಿದ ಸ್ಥಾನಿಕ ಸಂಸ್ಥೆಗಳಿಂದಲೂ ಕಿರು ಪ್ರಮಾಣದ ಪ್ರೋತ್ಸಾಹ, ನೆರವು ದೊರೆಯುತ್ತಿದೆ.

ತನ್ನ ಹೊಣೆಯನ್ನರಿತುಕೊಂಡ ಸಂಸ್ಥೆ ಕಾರ್ಯಕ್ರಮವನ್ನು ಮಾಡುತ್ತ ಬಂದಿದೆ. ಶ್ರೇಷ್ಠ ಅರ್ಥಧಾರಿಗಳನ್ನು ಕರೆಯಿಸಿ ಪ್ರತಿವರ್ಷವೂ ತಾಳಮದ್ದಳೆ ನಡೆಸುತ್ತಿದ್ದು, ಪ್ರಮುಖವಾಗಿ ಶ್ರೀ ಲಕ್ಷ್ಮೀನಾರಾಯಣ ಭಟ್ಟ ತ್ರಿವೇದಿ, ವೇ. ಮೂ. ಬುಚ್ಚನ್ ಶಾಸ್ತ್ರಿಗಳು, ಶ್ರೀ ಜಬ್ಬಾರ ಸಮೋ ಸಂಪಾಂಜೆ, ಶ್ರೀ ರಾಧಾಕೃಷ್ಣ ಕಲ್ಚಾರ್, ಶ್ರೀ ನೇವಣೆ ಗಣೇಶ ಭಟ್ಟ, ಶ್ರೀ ವಿ. ತಿ. ಹೆಗಡೆ, ಶೀಗೇಹಳ್ಳಿ , ಶ್ರೀ ಎಂ. ಎನ್. ಹೆಗಡೆ , ಶ್ರೀ ಗಣಪತಿ ಭಟ್ಟ, ಮಾಗೋಡ ಮುಂತಾದ ವಾಗ್ಮಿಗಳನ್ನು ಕರೆಯಿಸಿ ಈ ಭಾಗದ ತಾಳಮದ್ದಳೆ ಶ್ರೋತೃಗಳ ಆಶಯವನ್ನು ಈಡೇರಿಸುವ ಪ್ರಯತ್ನವನ್ನು ಸಂಸ್ಥೆಯು ಮಾಡಿದೆ.

ಇದಕ್ಕೆಲ್ಲ ಹಿನ್ನಲೆಯಾಗಿ ಶ್ರೀ ಕೃಷ್ಣ ಭಾಗವತರ ಪುತ್ರರಾದ ಶ್ರೀ ತಿಮ್ಮಪ್ಪ ಭಾಗವತ ಬಾಳೇಹದ್ದ ಇವರ ಅಪಾರ ಪರಿಶ್ರಮ ಇದೆ. ಇದನ್ನು ಬರೆದಾಗಲೀ, ಕೃತಜ್ಞತೆ ಅರ್ಪಿಸುವ ಮೂಲಕವಾಗಲೀ ಹೇಳಿಕೊಂಡರೆ ಕೇವಲ ಔಪಚಾರಿಕವೇ ಆಗುವುದು. ನಮ್ಮ ಆಟವಿದ್ದಾಗ ಇಂದಿನವರೆಗೂ ಶ್ರೀ ತಿಮ್ಮಪ್ಪ ಭಾಗವತರು ಹಾಗೂ ಶ್ರೀ ನಾರಾಯಣ ಭಾಗವತ ಬಾಳೆಹದ್ದ ಇವರುಗಳು ತಾಲೀಮು ನಡೆಸಲು ಪ್ರತಿದಿನ ಸಂಜೆ ನಮ್ಮೆಲ್ಲರಿಗಿಂತ ಮೊದಲೇ ಹಾಜರ ಇರುವುದು, ಪ್ರತಿ ಪದ್ಯಗಳಿಗೂ ಹೀಗೆಯೇ ಅಭಿನಯಿಸಬೇಕೆಂದು ತಿಳಿಸಿಹೇಳುವುದು, ಹತ್ತಾರು ಬಾರಿ ಅದನ್ನೇ ಹಾಡಿ ತೋರಿಸಿ ಎಂಥವನೂ ಅಭಿನಯ ಮಾಡಿಬಿಡೋಣ ಎಂಬಂತೆ ಉತ್ಸಾಹ ಪೂರ್ಣವಾಗಿ ಕಿಂಚಿತ್ತೂ ಬೇಸರಿಸದೇ ಸಲಹೆ ನೀಡುವುದು ಇತ್ಯಾದಿ ಯಾರ ಮನಸ್ಸೇ ಆದರೂ ಪರಿವರ್ತನೆಯಾಗದಿರದು. ಇದರ ಫಲವಾಗಿ ಈ ಸಂಸ್ಥೆಯ ಮೂಲಕ ಇಲ್ಲಿಯವರೆಗೆ ಹಲವಾರು ಯಕ್ಷಗಾನ ಪ್ರಯೋಗವನ್ನು ಹೊರರಾಜ್ಯಗಳಲ್ಲಿಯೂ ಯಶಸ್ವಿಯಾಗಿ ಅಭಿನಯಿಸಿದೆ. ಶ್ರೀ ಕೃಷ್ಣ ಭಾಗವತರಂತಹ ತ್ಯಾಗಿಗಳ ಆಶೀರ್ವಾದದ ಶ್ರೀರಕ್ಷೆ ಈ ಸಂಸ್ಥೆಯ ಮೇಲಿದೆ ಎಂಬ ಆತ್ಮೀಯ ವಿಶ್ವಾಸವೇ ಈ ಮೇಲಿನದಕ್ಕೆಲ್ಲ ಕಾರಣ. ಬಾಳೆಹದ್ದ ಮನೆತನದವರು ಯಕ್ಷಗಾನ ಕಲೆಗೆ ನೀಡಿದ ಕೊಡುಗೆಯನ್ನು ನೆನೆಸಿಕೊಂಡಾಗ ಅವರಿಗೆ ನಾವು ಕೊಡುತ್ತಿರುವ ಗೌರವ ಅತ್ಯಲ್ಪ. ಆದಕ್ಕಾಗಿ ಈ ಸಂಸ್ಥೆಯ ಮೂಲಕವೇ ಶ್ರೀ ಕೃಷ್ಣ ಭಾಗವತರಿಗೆ ಸಂಮಾನಿಸಬೇಕೆಂಬ ಪ್ರಸ್ತಾವನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಇಂದು ಇಡೀ ಸೀಮೆಯನ್ನು ಮೀರಿ ಯಕ್ಷಗಾನದ ಅಭಿಮಾನಿಗಳೂ ಮುಂದೆ ಬಂದು ನಮ್ಮ ಜೊತೆ ಕೈಜೋಡಿಸಿ ಈ ಕಾರ್ಯಕ್ರಮ ನಡೆಸಲು ಪ್ರೋತ್ಸಾಹಿಸುತ್ತಿದ್ದಾರೆ.

ಇಂತಹ ಘನ ಧ್ಯೇಯೋದ್ದೇಶಗಳನ್ನು ನೆರವೇರಿಸುವ ಮತ್ತು ಯಕ್ಷಗಾನ ಕಲೆ ಜೀವಂತವಾಗಿರಲು ಎಲ್ಲ ವಿಧವಾದ ಸರ್ವ ಪ್ರಯತ್ನ ಮಾಡುವ ಸಂಸ್ಥೆಯ ಸಂಕಲ್ಪ ಕೆಲ ಪ್ರಮಾಣದಲ್ಲಾದರೂ ಕಾರ್ಯರೂಪಕ್ಕೆ ಬರುತ್ತಿದೆ ಎಂಬ ಸಂತೃಪ್ತಿ ಮಾತ್ರ ನಮ್ಮದಾಗಿದೆ.



ತರಬೇತಿ ಶಿಬಿರಗಳನ್ನು ನಡೆಸಿದೆ. ಮಕ್ಕಳಿಗೆ ತರಬೇತಿ ನೀಡಿ ಯಕ್ಷಗಾನದ ಪ್ರದರ್ಶನ ಏರ್ಪಡಿಸಿದೆ. ಇದರ ಹೊರತಾಗಿ ಯೋಗ ಶಿಬಿರ, ಉಪನ್ಯಾಸ, ಆರೋಗ್ಯ ಶಿಬಿರಗಳನ್ನು ನಡೆಸಿದೆ. ಕುವೆಂಪು ಜನ್ಮ ಶತಮಾನೋತ್ಸವದ ನಿಮಿತ್ತ ಅವರ 'ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಯಕ್ಷಗಾನ ಪ್ರಸಂಗಕ್ಕೆ ಅಳವಡಿಸಿದ್ದು ಒಂದು ಅಪೂರ್ವ ಪ್ರಯೋಗ. 'ರಾಯಸಂ' ನ ಎಲ್ಲ ರಚನಾತ್ಮಕ ಕಾರ್ಯಕ್ರಮಗಳಿಗೆ ಶ್ರೀ ಸ್ವರ್ಣವಲ್ಲೀ ಸ್ವಾಮಿಗಳ ಕೃಪಾಶೀರ್ವಾದವಿದೆ. ಭವಿಷ್ಯದಲ್ಲಿ ರಾಯಸಂ ಇನ್ನೂ ಹೆಚ್ಚಿನ ಗುರಿ ಸಾಧಿಸುವ ಬಯಕೆ ಹೊಂದಿದೆ. ಎಲ್ಲರ ಹಾಲುಂಡು ಬೆಳೆಯುತ್ತಿರುವ ಈ ಸಂಸ್ಥೆಗೆ ಇನ್ನೂ ಹೆಚ್ಚಿನ ನಿರಂತರ ಪ್ರೋತ್ಸಾಹ ಎಲ್ಲ ಭಾಗಗಳಿಂದಲೂ ದೊರೆತಲ್ಲಿ ಹೊಣೆ ಹೊತ್ತವರಿಗೆ ಇಮ್ಮಡಿ ಉತ್ಸಾಹ ಬರುವುದು ಸಹಜ. ಕಾರಣ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ನಿರೀಕ್ಷಿಸುತ್ತ ಹಿರಿಯರ, ಅನುಭವಿಗಳ, ಹಿತೈಷಿಗಳ ಆಶೀರ್ವಾದವನ್ನು ರಾಯಸಂ ಮಂಚಿಕೇರಿ ಯಾಚಿಸುತ್ತದೆ.

## ರಾ. ಯ. ಸಂ. ಪದಾಧಿಕಾರಿಗಳು



**ಶ್ರೀ ಜಿ. ಟಿ. ಭಟ್ಟ, ಬೊಮ್ಮನಹಳ್ಳಿ**
ಅಧ್ಯಕ್ಷರು



**ಶ್ರೀ ಆರ್. ಟಿ. ಹೆಗಡೆ, ಕಲಾವನ**
ಉಪಾಧ್ಯಕ್ಷರು



**ಶ್ರೀ ವಿಶ್ವನಾಥ ವಿ. ಹೆಗಡೆ,**
**ಭಾಮನಕೊಪ್ಪ**
ಕಾರ್ಯದರ್ಶಿ



**ಶ್ರೀ ನಾರಾಯಣ ಜಿ. ಶೇರುಗಾರ**
ಸಹ ಕಾರ್ಯದರ್ಶಿ



**ಶ್ರೀ ಮಂಜುನಾಥ ಜಿ. ಹೆಗಡೆ,**
**ಉಮಚಿಗಿ**
ಕೋಶಾಧ್ಯಕ್ಷರು



## —: ಸದಸ್ಯರು :—



ಶ್ರೀ ಆರ್. ಎನ್. ಹೆಗಡೆ,
ಗೋರ್ಸಗದ್ದೆ
ಅಧ್ಯಕ್ಷರು, ಶ್ರೀ ರಾ. ರಾ. ವಿದ್ಯಾಸಂಸ್ಥೆ



ಶ್ರೀ ತಿಮ್ಮಪ್ಪ ಭಾಗವತ,
ಬಾಳೆಹದ್ದ



ಶ್ರೀ ಜಿ. ಜಿ. ಹೆಗಡೆ,
ಕನೇನಹಳ್ಳಿ



ಶ್ರೀ ವೆಂಕಟ್ರಮಣ ವಿಶ್ವೇಶ್ವರ ಭಟ್ಟ,
ಗದ್ದೆ ಹಿರೇಸರ



ಶ್ರೀ ಜನಾರ್ಧನ
ಸತ್ಯನಾರಾಯಣ ಹೆಗಡೆ,
ಬಿದ್ರಳ್ಳಿ



ಶ್ರೀ ಕೃಷ್ಣಮೂರ್ತಿ ವಿ. ಹೆಗಡೆ,
ರಂಗದರ್ಶಿನಿ,
ಮಂಚಿಕೇರಿ



ಶ್ರೀ ಶ್ರೀಪಾದ ಹೇರಂಭ ಹೆಗಡೆ,
ಚಿಕ್ಕೊತ್ತಿ



ಶ್ರೀ ವಿನಯ ಸುಬ್ರಾಯ ಹೆಗಡೆ,
ಜೋಗಭಟ್ರಕೇರಿ




## –: ಸಕ್ರಿಯ ಕಾರ್ಯಕರ್ತರು :–



ಶ್ರೀ ನಾಗರಾಜ ಗ. ಹೆಗಡೆ,
ಉಮಚಗಿ



ಶ್ರೀ ನಾರಾಯಣ ಗ. ಹೆಗಡೆ,
ಬಾಳೆಹದ್ದ



ಶ್ರೀ ನರಸಿಂಹ ಭಟ್ಟ, ಹಂಡ್ರುಮನೆ



ಶ್ರೀ ಅನಂತ ಶಿ. ಹೆಗಡೆ,
ಕೂಕದಬೈಲು

# ಹೊನ್ನ ಹರಿವಾಣದಲಿ.......



# ಗೌರವಾಧ್ಯಕ್ಷರ ನುಡಿ

-ಜ್ಯೋತಿಷಾಚಾರ್ಯ ವಿದ್ವಾನ್ ನಾಗೇಂದ್ರ ಭಟ್ಟ, ಹಿತ್ಲಳ್ಳಿ

ಧಿ ನ ಕ ತ ಥೈ ಥೈ ಧಿ ನ ಕ ತ ಮೃದಂಗ ವಾದಯತೇ ॥ ಕಣಕ್ಕಣಲ ಲತಾವೇಣುಂ ಮಧುರಂ ಲಾಲಯತೇ ॥

ಶ್ರೀ ಭಾರತೇಸ್ಮಿನ್ ಬಹುರಾಜ್ಯಮಧ್ಯೇ ಕರ್ನಾಟಕಂ ತ್ವೇತದತಿ ಪ್ರಶಸ್ತಂ । ತತ್ರೋತ್ತರಂ ದಕ್ಷಿಣ ಕನ್ನಡ ಮಿತ್ಯ ಭೇದಂ ತತ್ರಾಪಿ ಶಸ್ತಂ ಖಿಲ ಚೋತ್ತರಂ ಸ್ಯಾತ್ ।

ಕರ್ನಾಟಕೇ ಪ್ಯುತ್ತರ ಪೂರ್ವಯುಕ್ತೇ ಜಾತಾ ವಿಶೇಷಾದತಿ ಬುದ್ಧಿ ಮಂತಃ । ವೇದೇಷು ಶಾಸ್ತ್ರೇಷು ತಥೈವ ಮಾನ್ಯ - ಸಂಗೀತಶಾಸ್ತ್ರೇ ಬಹುತೋತಿ ತಜ್ಞಾಃ

ಶಾಸ್ತ್ರಂತು ವಿದ್ವಜ್ಜನ ಮೇವ ರಂಜಯೇತ್ಸಂಗೀತಶಾಸ್ತ್ರಂ ಮೃಗ ಸರ್ಪ ಪಾಮರಾನ್। ಗಾನಂ ಹಿ ನಾನಾವಿಧಮೇವ ಭೂತಲೇ ತೇಷ್ವಾದ್ಯ ಮೇಕಂ ಶುಭ ಯಕ್ಷಗೀತಕಂ ।

ಗಾನಂ ಸಹೋಥಾಭಿನಯೇ ಪ್ರಶಸ್ತಂ ಧಿತ್ತಾ ದಿಶಬ್ದೈರತಿ ರಮ್ಯ ಪಾದ್ಯೆಃ। ರಂಗಸ್ಥಲೇ ಗಾಯಕ ತಾಲವಧ್ಭೋ ಮೃದಂಗ ಶಬ್ದಾನುಗತೋನಟೇತಾ ।

ಸ ಪಾತ್ರಧಾರೀ ನಟ ಸಾರ್ವಭೌಮಃ ಸಹಸ್ರ ಶೋನೇತ್ರಹರೋಸ್ತಿನಿತ್ಯಂ ....

ನಮ್ಮ ಭಾರತ ದೇಶದ ಮಧ್ಯದಲ್ಲಿ ಕರ್ನಾಟಕವೆಂಬ ಪ್ರಶಸ್ತ ರಾಜ್ಯವಿದೆ. ಅದರಲ್ಲಿ ದಕ್ಷಿಣೋತ್ತರಗಳೆಂದು ಎರಡು ಜಿಲ್ಲೆಗಳಿದ್ದು ಇಲ್ಲಿ ಹುಟ್ಟಿದ ಅನೇಕರು ವೇದ, ಶಾಸ್ತ್ರ ಇತಿಹಾಸ, ಪುರಾಣ, ಸಂಗೀತ, ಕಲಾದಿಗಳಲ್ಲಿ ಬುದ್ಧಿವಂತರೆಂದು ಕಾಣಿಸಿಕೊಂಡರು.

ಆದರೆ ಶಾಸ್ತ್ರ, ವೇದಗಳು ವಿದ್ವಾಂಸರಿಗೆ ಮಾತ್ರ ರಂಜಿಸುವವು. ಸಂಗೀತವು ಮೃಗ - ಸರ್ಪ ಪಾಮರಾದಿ ವಿದ್ವಾಂಸರವರೆಗೂ "**ಸದ್ಯಃಫಲಾನಿಸಂಗೀತ**" ಎಂಬಂತೆ ಮನರಂಜಿಸುವ ಶಾಸ್ತ್ರವಾಗಿದೆ. ಅದರಲ್ಲಿಯೂ ಸಂಗೀತ ಯಕ್ಷಗಾನಗಳೆಂದು ಎರಡು ಭೇದವಿದ್ದು ಯಕ್ಷಗಾನದಲ್ಲಿಯ ಪಾತ್ರಧಾರಿಯ ಕಲಾಭಿನಯ ಸಂದರ್ಭೋಚಿತ ಪ್ರತಿಭೆಯ ಪ್ರದರ್ಶನಕ್ಕೆ ಸೂತ್ರಧಾರಿಯಾದ ಭಾಗವತರೇ ಮೂಲ ಕಾರಣವೂ ಆಗಬಹುದು. ರಂಗ ಮಧ್ಯದಲ್ಲಿ ಅಭಿನಯಿಸುವ ಪಾತ್ರಧಾರಿಯ ಸನ್ನಿವೇಶ ಊಹಿಸಿ (ಕೋಪ, ದುಃಖ, ಸಂತೋಷ) ಸಂದರ್ಭದಲ್ಲಿ ಅದಕ್ಕನುಗುಣವಾದ ರಾಗ, ತಾಳಗಳಿಂದ ಸ್ಫೂರ್ತಿಯನ್ನು ಭಾಗವತರು ತಂದು ಕೊಟ್ಟರೆ ಮಾತ್ರ ವೇಷಧಾರಿಯು ನಟ ಮಾತ್ರನಲ್ಲದೇ ನಟ ಸೌರ್ವಭೌಮನೆಂಬ ಪದವಿಯನ್ನು ಪಡೆಯಬಹುದು.

ಪುಟ ಪ್ರಾಯೋಜಕರು : **ಶ್ರೀ ಎಂ. ಗೋಪಾಲ, ಬೆಂಗಳೂರು**



ರಂಗಭೂಮಿಯಲ್ಲಿ ಕೆಲಸ ಮಾಡುವ ವೇಷಧಾರಿಗೂ ಬಹು ಕಷ್ಟವಿದೆ. ಮೃದಂಗ ತಾಳಗಳ ಶಬ್ದದ ಅಬ್ಬರದಲ್ಲಿ ಭಾಗವತರ ಪದ್ಯವನ್ನು ಪೂರ್ಣ ಗ್ರಹಿಸಿಕೊಳ್ಳಬೇಕು. ತಕ್ಕಂತೆ ನೃತ್ಯಾಭಿನಯ ಇರಬೇಕು. ಅಲ್ಲದೇ ಎದುರಾಳಿಯ ಪ್ರಶ್ನೆಗೆ ಸಮರ್ಪಕ ಉತ್ತರವಿರಬೇಕು. ಕಥೆಯ ಸಂದರ್ಭ ಹಿಂದೆ ಮುಂದಾಗದಂತೆ ಭಾಗವತರ ಪದ್ಯಕ್ಕೇ ನಿಲ್ಲಿಸಬೇಕು. ಅಲ್ಲದೇ ಕುಣಿದ ದಣಿವಿನಲ್ಲೇ ಶ್ವಾಸ ತೆಗೆಯದೇ ಅರ್ಥ ಆರಂಭಿಸಬೇಕು. ಇವೆಲ್ಲಾ ಸಹಸ್ರಾರು ಜನರ ಮಧ್ಯದಲ್ಲಿ ಅವನೊಬ್ಬನ ಕಡೆ ಎಲ್ಲರ ಗಮನವಿರುವಾಗ ಆಗಬೇಕಾಗಿದೆ. ಇದು ಯಕ್ಷಗಾನದ ಒಂದು ವಿಶಿಷ್ಟ ಸಾಧನೆಯಾಗಿದೆ. ಹೀಗಾಗಿ ಕಲಾವಿದನ ಪರಿಶ್ರಮ ಮಾತ್ರ ಫಲಕಾರಿಯಾಗುವುದು ಇವಿಷ್ಟಕ್ಕೂ ಮೂಲ ಪ್ರಚೋದಕ ಭಾಗವತರದ್ದಾಗಿದೆ. ಆಗ ನಟನು ತನ್ನ ಪಾತ್ರವನ್ನು ಯಶಸ್ವಿಗೊಳಿಸಬಲ್ಲ. ವೀರರಸ ಪ್ರಧಾನವಿದ್ದ ಪದ್ಯವನ್ನು ದುಃಖರಸ ತುಂಬಿ ಭಾಗವತರು ಆರಂಭಿಸಿದರೆ ಪಾತ್ರಧಾರಿಯ ಪರಿಣಾಮವೇನು? ಪ್ರೇಕ್ಷಕರೂ ಹಣೆ ಮುಟ್ಟಿಕೊಳ್ಳಬೇಕು. ಇವೆಲ್ಲವನ್ನೂ ಊಹಿಸಿ ನಮ್ಮ ಪ್ರಾಚೀನನಾದ ಒಬ್ಬ ಸಂಸ್ಕೃತ ವಿದ್ವಾಂಸ ಮೇಲೆ ಉದಾಹರಿಸಿದ ಶ್ಲೋಕಗಳನ್ನು ರಚಿಸಿಹೋಗಿದ್ದಾನೆ. **''ರಂಗಸ್ಥಲೇ ಗಾಯಕ ತಾಲದಧ್ವೋಮೃದಂಗಶಬ್ದಾನು ಗತೋ ನಟೀತಾ ''** ಎಂಬ ಅವನ ಪದ್ಯದಲ್ಲಿ ಮಹಾ ಸ್ವಾರಸ್ಯ ತುಂಬಿದೆ. ನಿಜವಾಗಿಯೂ ಹರಿಕಥೆಯಲ್ಲಿ ಇಡೀ ರಾತ್ರಿ ಒಂದೇ ಕಡೆ ಮನಃಸ್ಸಿಟ್ಟು ಸಂತೋಷದಿಂದ ಕಾಲ ಕಳೆಯಲು ಯಕ್ಷಗಾನ ಒಂದು ಮಹಾ ಸಾಧನೆಯೂ ಆಗಿದೆ.

ಆದರೆ ತದೈಕ್ಯಭಾವದಿಂದ ಪರಿಶ್ರಮಿಸಿದ ಒಬ್ಬ ವ್ಯಕ್ತಿಯಿಂದ ಜೀವದಿಂದ ತುಂಬಿದ ಕಲೆಯಾಗಬಹುದು. ಅದಿಲ್ಲದಿದ್ದರೆ ಕಲೆಯು ಕೊಲೆಯಾಗಿ ಪ್ರೇಕ್ಷಕರಿಗೆ **''ಕೀಚಿತ್ತು ರಂಗಸ್ಥಲ ಭಾರಭೂತಾ ನಿದ್ರಾಹರಾದ್ರಪ್ಟುಜನಸ್ಯ ಪೂರ್ಣ''** ಎಂಬ ಕವಿಯ ವಾಕ್ಯ ಅನುಭವಕ್ಕೆ ಬರುತ್ತದೆ . ಅಂದರೆ ನಿದ್ದೆಯೂ ಇಲ್ಲಾ, ಆನಂದವಂತೂ ಇಲ್ಲವೇ ಇಲ್ಲ.

ನಮ್ಮ ಭರತನಹಳ್ಳಿಯ ಸೀಮೆಯಲ್ಲಿ ಯಕ್ಷಗಾನ ಕಲೆಯ ಸೇವೆಯನ್ನು ಮಾಡಿದವರು ಪುರಾತನ ಕಾಲದಿಂದಲೂ ಇದ್ದರು. ಪ್ರಸಿದ್ದರಾಗಿ ಹೋದವರೂ ಇದ್ದರು.

ಈಗ ಆರವತ್ತು ವರ್ಷಗಳ ಹಿಂದಿನ ಮಾತು. ಒಬ್ಬ ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧನಾಗಿ, ಪಂಡಿತನಾಗಿ ಈ ನೆಲದಲ್ಲಿ ಕೆಲವೇ ಕಾಲ ಬದುಕಿದ್ದ ಆತನು ಒಂದು ನಾಟಕವನ್ನು ಯಕ್ಷಗಾನದ ಬಗ್ಗೆ ಬರೆದಿದ್ದ. ಆ ನಾಟಕದ ಹೆಸರು 'ಏನು ಮುಂದೆ' ಆ ಕೈ ಬರಹದ ಪ್ರತಿ ಏನಾಯಿತು? ಇದು ನನಗೆ ಗೊತ್ತಿಲ್ಲ.

ನನ್ನ 13 ನೆಯ ವಯಸ್ಸಿರಬಹುದು. ನನ್ನ ತಂದೆಗೆ ಆ ಪ್ರತಿಯನ್ನು ನೋಡಲು ಕಳಿಸಿರಬೇಕು. ಕೈ ಬರಹ ಓದಲು ಕಲಿಯಬೇಕೆಂದು ನನ್ನ ತಂದೆ ಆ ನಾಟಕವನ್ನು ಓದಲು ನನಗೆ ಹೇಳಿದ್ದರಿಂದ ಈಗ ನೆನಪಿದ್ದಷ್ಟು ಬರೆಯುತ್ತಿದ್ದೇನೆ.



ನಾಟಕವು ಸಾಮಾಜಿಕ ನಾಟಕದಂತಿತ್ತು. ಆ ಕಾಲದ ನಮ್ಮ ಸೀಮೆಯ ಯಕ್ಷಗಾನ ಮಹಾಮೇಧಾವಿಗಳೇ ನಾಟಕಕ್ಕೇ ಪಾತ್ರಧಾರಿಗಳು ಎಂದು ಅವರ ಸ್ವಭಾವಕ್ಕೆ ತಕ್ಕಂತೆ ಹೆಸರಿಟ್ಟು ನಾಟಕ ರಚಿಸಿದ್ದಾನೆ. ನಾಟಕದ ಪಾತ್ರಧಾರಿಗಳು - 1) ಬುದ್ಧಿವಂತ ಭಟ್ಟರು, 2) ಕುಣಿತಪ್ರಖ್ಯ ಹೆಗಡೆ, 3) ಅಕ್ಷರ ಶತ್ರು ರಾಮೈಯ್ಯ, 4) ಧಕಡಧಿಂಮ್ಮ ಹೆಗಡೆ, 5) ಮಂದಿರ ಸನ್ಯಾಸಿ, 6) ಗೊಬ್ಬೆ ಸುಬ್ಬು, 7) ನುಣ್ಣನ ಸುಬ್ಬು, 8) ತಿರುಪುಗಾಲು ಸುಬ್ಬು, 9) ಬೆಂಕೀ ಶಿವೈಯ್ಯ. ಹೀಗೆ 9 ಪಾತ್ರಧಾರಿಗಳು. ಆ ನಾಟಕ ನೋಡುವಂತಿತ್ತು. ಪಾತ್ರಧಾರಿಗಳ ಹೆಸರು ನೋಡಿದರೆ ಇದೇನು ವಿಚಿತ್ರವೆಂದು ಕಾಣಬಹುದು. ಆದರೆ ನಾಟಕ ಈಗ ಇದ್ದರೆ ಇಂದಿನ ಪೀಳಿಗೆಗೆ ಅನುಕೂಲವಿತ್ತು. ಕಲಿಯುವುದೂ ಅದರಲ್ಲಿ ಬಹಳ ಇತ್ತು. ಕಲೆಯನ್ನು ಪರಿಶ್ರಮಿಸಿದವನ ಬಗ್ಗೆ ಅತ್ಯಂತ ಗೌರವ ಕಲಿಯದೇ ರಂಗ ಪ್ರವೇಶ ಮಾಡುವವನ ಅವಹೇಳನ ಬಹು ಸೊಗಸಾಗಿತ್ತೆಂದು ನನ್ನ ತಂದೆ ಹೇಳಿದ ನೆನಪಿದೆ. ಕೃತಿಯನ್ನು ರಚಿಸಿದವನು ಅರಾಯುಷಿಯಾದಂತೆ ಕೃತಿಯೂ ಅರಾಯುಷಿಯಾಗಿದ್ದಕ್ಕೆ ವ್ಯಸನಪಡಬೇಕಾಗಿದೆ.

ಬಹುಶಃ ನಮ್ಮ ಪುರಾತನದ ಬುದ್ಧಿವಂತರ ವಿದ್ಯೆ, ಕೃತಿಗಳೆಲ್ಲವೂ ಇಂದಿನ ಪೀಳಿಗೆಗೆ ಸಿಕ್ಕದೇ ಹೋದದ್ದೆ ಗುರುವಿಲ್ಲದ ಶಿಷ್ಯನ ಕತೆಯಾಗಿದೆ.

ಯಕ್ಷಗಾನವಿರಲೀ ಯಾವುದೇ ವಿದ್ಯೆಗಾದರೂ ಗುರುಬೇಕು. "**ಗುರುಮುಖಾತ್ಸಂ ಪ್ರದಾಯೇನಜ್ಞೇಯಂ**" ಎಂದಿದ್ದ ಕಾರಣ ಗುರುವೂ ಶಾಸ್ತ್ರ ಸಂಪ್ರದಾಯಗಳನ್ನು ಮೀರಿ ಹೇಳಬಾರದು.

"**ಕ್ರೋಧಲೋಭವಿವರ್ಜಿತಃ**" ಎಂದು ಗುರುವಿಗೂ ನಮ್ಮ ಪುರಾತನರು ಹೇಳಿದ್ದಾರೆ. ಯಾವುದೇ ವಿದ್ಯೆಯನ್ನು ಶಿಷ್ಯನಿಗೆ ಕೊಡಬೇಕಾದರೆ ಮದ, ಮಾತ್ಸರ್ಯ, ಕ್ರೋಧ, ಲೋಭ, ಮೋಹವಿಲ್ಲದೇ ಶಿಷ್ಯನಲ್ಲಿಟ್ಟರೆ ಅದು ಮುಂದೆ ಉತ್ತಮ ಫಲಕಾರಿ ನೀಡಬಲ್ಲದು. ಇಂದು ಎಲ್ಲರೂ ಗುರುಗಳೇ ಹೊರತೂ ಶಿಷ್ಯರೇ ಇಲ್ಲ. ಕಾರಣ ಕೇಳುವ ಶಿಷ್ಯನಿಲ್ಲ, ಹೇಳುವ ಗುರುವೂ ಇಲ್ಲ. ಹೀಗಾಗಿ ಯಕ್ಷಗಾನ ಕಲೆ ಒಂದಲ್ಲಾ ಎಲ್ಲವೂ ತನ್ನಷ್ಟಕ್ಕೆ ಮಾತ್ರ ಉಳಿದುಕೊಂಡಿದೆ.

"**ಗುರುಶುಶ್ರೂಷಯಾ ವಿದ್ಯಾ**" ಗುರುಶುಶ್ರೂಷೆ ವಿದ್ಯೆಯನ್ನು ಪಡೆಯಲು ಮೊದಲು ಹೇಳಿದ್ದು. ಇಂದೆಲ್ಲಿದೆ ಶುಶ್ರೂಷೆ.

ನಮ್ಮೂರು ಅನಂತ ಹೆಗಡೆಯವರ ಪಾತ್ರ ನೋಡಿದವರು ಈಗಲೂ ಹೇಳುತ್ತಾರೆ. ಪಾತ್ರಕ್ಕೆ ತಕ್ಕಂತೆ ಶುದ್ಧ ಗಂಭೀರ ಮಾತು ಹಾವ ಭಾವ ಕಲೆಗಳನ್ನು ಇನ್ನೆಲ್ಲಿಯೂ ಕಾಣಲು ಸಾಧ್ಯವಿಲ್ಲವೆಂದೇ. ಅವರು ಗುರುಕುಲದಲ್ಲಿ ಕಲಿತದ್ದು ವಿಚಿತ್ರ ಕಥೆಯಾಗಿದೆ.

ಹುಲೀಮಕ್ಕಿ ರಾಮಕೃಷ್ಣ ಹೆಗಡೆಯವರು (ಕರ್ಕಿ) ಅವರಲ್ಲಿ ಹೋಗಿ ತನಗೂ



ಕಲಿಸಿಕೊಡಬೇಕೆಂದು ಕೇಳಿದರಂತೆ. ಅದೇಕೋ ಅವರು ಒಪ್ಪಲಿಲ್ಲವಂತೆ. ಅಂತಹ ನಟ ಸಾರ್ವಭೌಮ ಬೇರೆ ಯಾರೂ ಆ ಕಾಲಕ್ಕೆ ಇರಲಿಲ್ಲ. ಅವರು ಹೇಳಿಕೊಡುವುದಿಲ್ಲ. ಏನು ಮಾಡಬೇಕೆಂದು ತಿಳಿಯದೆ ಊರಿಗೆ ಬಂದು ಒಂದು ವರ್ಷದ ನಂತರ ರಾಮಕೃಷ್ಣ ಹೆಗಡೆಯವರಲ್ಲಿ ಪುನಃ ಹೋಗಿ ''ಹೊಟ್ಟೆಗೆ ಗತಿಯಿಲ್ಲ, ನಿಮ್ಮಲ್ಲಿ ಕೆಲಸಗಾರನಾಗಿ ಉಳಿಯುತ್ತೇನೆ. ನಿಮ್ಮ ಪೆಟ್ಟಿಗೆ ಹೊರುತ್ತೇನೆ'' ಎಂದು ಮನೆ ಸೇರಿದನಂತೆ . ವಿಧಿಯೊಂದು ಬೇರೆ ಇದೆ. ಅದೇ ಸಮಯಕ್ಕೆ ಮೂಡಕಣಿ ನಾರಾಯಣ ಹೆಗಡೆಯವರು ಅವರಲ್ಲಿ ಕಲಿಯುತ್ತಿದ್ದರು. ರಾತ್ರಿ ಅವರಿಗೆ ಕಲಿಸುವ ಕಾಲದಲ್ಲಿ ದೂರದಲ್ಲಿ ಕವುಚಿ ಕೈ ಊರಿ ಮಲಗುವುದು ಅವರು ಹೇಳಿಕೊಟ್ಟಂತೆ ಕಾಲು ಅಲ್ಲಾಡಿಸಿ ಕಲೆಯನ್ನು ಅಭ್ಯಾಸ ಮಾಡುವುದು. ಹೀಗೆ ನಾಲ್ಕು ವರ್ಷಗಳ ಕಾಲ ಏಕಲವ್ಯನಂತೆ ತನ್ನ ಮುಂದಿನ ದೃಶ್ಯವನ್ನು ನೋಡಿ ಕಲಿತನಂತೆ. ಒಮ್ಮೆ ಕೀಚಕ ವಧೆ ಪ್ರಸಂಗ. ರಾಮಕೃಷ್ಣ ಹೆಗಡೆಯವರಿಗೆ ಅದೇ ದಿನ ಜ್ವರ ಬಂದು ಕೀಚಕನ ಪಾತ್ರ ಮಾಡುವವರಿಲ್ಲ. ಮೂಡಕಣಿ ನಾರಾಯಣರವರಿಗೆ ಕೀಚಕನ ಪಾತ್ರಕ್ಕೆ ಧೈರ್ಯವಿಲ್ಲ. ಇನ್ನೊಂದು ಹೆಣ್ಣಿನ ಮುಂದೆ ಲಜ್ಜೆಗೆಟ್ಟು ಏನೇನೋ ಹೇಳಬೇಕು. ಅವರು ಪಾತ್ರ ಮಾಡುವಂತಿಲ್ಲಾ. ಈ ಅನಂತ ಮಾಣಿ ಮುಂದಾಗಿಯೇ ಬಿಟ್ಟ. ಗೆಜ್ಜೆಸರ, ಉಡುಪು, ತೊಡುಪು ಸಾಮಾನುಗಳೆಲ್ಲಾ ಗುರುವಿನದು. (ಜನರಿಂದ ವದಂತಿಯಾದದ್ದನ್ನು ಬರೆಯುತ್ತಿದ್ದೇನೆ. ಸತ್ಯವೊ, ಮಿಥ್ಯವೋ ಗೊತ್ತಿಲ್ಲ.) ಮೊದಲನೆಯ ಕೀಚಕನ ಪಾತ್ರ ಪ್ರವೇಶಕ್ಕೇ ಕರತಾಡನ. ಜ್ವರದಲ್ಲಿ ಮಲಗಿದ್ದ ಗುರುಗಳಿಗೆ ತನ್ನ ಪಾತ್ರ ಬೇರೆ ಯಾರೋ ಮಾಡಿದ್ದಕ್ಕೆ ಸಭೆಯಲ್ಲಿ ಕರತಾಡನ ಆರಂಭವಾಯಿತು ಎಂದು ತಿಳಿದಿದ್ದರಂತೆ.

ಪದ, ಮಾತು ಆರಂಭವಾಯಿತು. ಅನಂತ ಹೆಗಡೆಯವರ ಬೇರೆ ಬೇರೆ ಭಾವ, ಭಂಗಿಗಳನ್ನು ನೋಡಿ ಮೆಚ್ಚಿದ ಪ್ರೇಕ್ಷಕರ ಕರತಾಡನಗಳು ಇಮ್ಮಡಿಯಾದವು.

ಜ್ವರ ಏರಿದ್ದರೂ ಕಂಬಳಿ ಹೊದೆದು ಗುರುಗಳು ಸಭೆಯಲ್ಲಿ ಕುಳಿತರು. ಇವ ಪೆಟ್ಟಿಗೆ ಹೊರುವ ಅನಂತ ಮಾಣಿ ಹೌದೋ ಅಲ್ಲವೋ ವಿಚಾರಕ್ಕೆ ಬಿದ್ದರಂತೆ. ಕೀಚಕನ ಪಾತ್ರ ಮುಗಿಯಿತು. ಬೆಳಗ್ಗೆ ಶಿಷ್ಯನು ಗುರುವಿಗೆ ಸಾಷ್ಟಾಂಗ ನಮಸ್ಕಾರ ಮಾಡುವಾಗ ತಲೆಯ ಮೇಲೆ ಕೈ ಇಟ್ಟು ಹೇಳಿದರಂತೆ ಗುರುಗಳು.

'ನನ್ನ ವೇಷ ಭೂಷಣಗಳು ಯಕ್ಷಗಾನದ ಪರಿಪೂರ್ಣತೆಯನ್ನು ಕಂಡವು. ನನ್ನದೇ ವೇಷಭೂಷಣಗಳನ್ನು ಹೊಂದಿ ನನಗೇ ತೋರಿಸಿದ ನೀನು ಇನ್ನು ಅನಂತ ಮಾಣಿಯಲ್ಲಾ ನಟ ಚಕ್ರವರ್ತಿ ಎಂದಿದ್ದರಂತೆ. ಅದೇ ವ್ಯಕ್ತಿಯ ಕೀಚಕನ ಪಾತ್ರ ನೋಡಲು ಪ್ರತಿ ವರ್ಷ ಕುದುರೆಯ ಮೇಲೆ ಕೂಡ್ರಿಸಿ ಶಿರಸಿಗೆ ಕರೆದೊಯ್ದು ಆಟ ನಡೆಯುತ್ತಿತ್ತಂತೆ. ಆದರೇನು ಅವರಿಗೆ ಒಂದು ಗಂಡು ಮಗು, ಇನ್ನೆರಡು ಹೆಣ್ಣು; ಅವಳಿ ಮಕ್ಕಳು. ಆರಾಯುಷ್ಯದಲ್ಲಿ ನಟ ಚಕ್ರವರ್ತಿ



ಚಕ್ರಧಾರಿಯ ಬಳಿ ಸೇರುವಂತಾಯಿತು. ಆದರೆ ರುಕ್ಮಾಂಗದ, ಸುಧನ್ವ ಇತ್ಯಾದಿ ಕೆಲವು ಪಾತ್ರಗಳನ್ನು ತನ್ನ ಸಂಗಡವೇ ತೆಗೆದುಕೊಂಡು ಹೋದನೆಂದು ಹಿರಿಯರು ಹೇಳುವುದು ಮಾತ್ರ ಇಲ್ಲಿ ಇನ್ನೂ ಉಳಿದಿದೆ. ಹಿತ್ತಲಹಳ್ಳಿಯಲ್ಲಿ ಒಂದು ಮೇಳವನ್ನೇ ಆತನು ನಿರ್ಮಿಸಿ ಪ್ರಸಿದ್ಧ ಕಲಾವಂತರನ್ನು ತಯಾರಿಸಿ ಹೋಗಿದ್ದಾನೆ. ಮೇಳವು ಕೆಲವೇ ವರ್ಷ ನಡೆಯಿತು. ನಂತರ ಹೆಸರಿಲ್ಲದಂತಾಯಿತು. ಆದರೆ ಕಲೆ ಇರಲಿ, ಯಾವುದೇ ವಿದ್ಯೆ ಇರಲಿ, ವೃಕ್ಷದ ಕೆಳಗೆ ಆ ವೃಕ್ಷದ ಒಂದೆರಡು ಬೀಜಗಳಾದರೂ ಇರುವಂತೆ ಅಥವಾ ಚಿಗುರು ಕಾಣುವಂತೆ, ಆ ಅಂಶ ಇರುತ್ತದೆ ಎನ್ನಬಹುದು, ಗರಿಕೆಯ ಮೂಲದಂತೆ ಈ ಊರಿನ ತದ್ಗಡಿಯಲ್ಲಿಯೇ ಇರುವ ಬಾಳೆಹದ್ದದ ಕೃಷ್ಣ ಭಾಗವತರು ಸದಾ ಪರಿಶ್ರಮ, ಆಳವಾದ ಅಧ್ಯಯನಗಳಿಂದ ಯಕ್ಷಗಾನದ ತಾಳ, ರಾಗಗಳನ್ನು ಅನೇಕರಿಗೆ ಬೋಧಿಸುವ ಗುರುವಾಗಿ ತನ್ನ ಮುಂದಿನ ಪೀಳಿಗೆಯನ್ನೂ ಬೇರೆ ವಿದ್ಯೆಯ ಕಡೆ ತಳ್ಳದೇ ತನ್ನದೇ ಆದ ಶೈಲಿ, ತಾಳ, ಹಾಡುಗಾರಿಕೆಗಳನ್ನು ಇಟ್ಟುಕೊಳ್ಳುವಂತೆ ಮಾಡಿ ಮುಂದುವರಿಸುತ್ತಿದ್ದಾರೆ. ಇದು ಹೆಮ್ಮೆಯ ವಿಷಯ. ಕೃಷ್ಣ ಭಾಗವತರು ಬಾಲ್ಯದಿಂದಲೂ ಸಂಗೀತದ ಅಭಿರುಚಿ ಇರುವವರು. ಒಂದು ವಿದ್ಯೆಯನ್ನು ಪಡೆಯಬೇಕಾದರೆ ಸತತ ಪರಿಶ್ರಮ, ಆಳವಾದ ಅಭ್ಯಾಸ ಮಾಡಿದವರಲ್ಲಿ ಅಭ್ಯಾಸ ಮಾಡಬೇಕಾಗುವುದು ಸಹಜ. ಬಾಲ್ಯದಿಂದಲೂ ಅವರಿಗೆ ಲಭ್ಯವಾದ ಕಾರಣ ಇಂದು ಪರಿಶ್ರಮವೆಂಬ ವೃಕ್ಷಕ್ಕೆ, ಗಾನವೆಂಬ ಹೂವು, ತಾಳವೆಂಬ ಫಲ, ರಾಗವೆಂಬ ಹಣ್ಣು ಸಮೃದ್ಧವಾಗಿ ನಿಂತಿದೆ. ಈ ಹಣ್ಣನ್ನು ಯಾರು ಶ್ರದ್ಧೆಯಿಂದ ಸ್ವೀಕರಿಸಿ ಕಲೆಯೆಂಬ ರಸವನ್ನು ಭುಂಜಿಸುತ್ತಾರೋ ಅವರಿಗೆ ತೃಪ್ತಿಯಾಗುವುದರಲ್ಲಿ ಸಂದೇಹವಿಲ್ಲಾ.

ಇಂದು ಒಬ್ಬನು ಯಾವುದೇ ಶಾಸ್ತ್ರದಲ್ಲಿ , ಕಲೆಗಳಲ್ಲಿ ಮುಂದುವರಿದರೂ. ಅವನ ಬಗ್ಗೆ ಪ್ರಶಂಸೆ ನಡೆಸುವವರೂ ಬಹು ಮಂದಿ ಇದ್ದಾರೆ. ಬರೇ ಪ್ರಶಂಸೆಗಿಂತ ಪರಿಶ್ರಮ ಮೇಲು. ಅವರಿಂದ ನಾವೂ ಅದನ್ನು ಪಡೆಯಬೇಕೆಂಬ ಪ್ರಯತ್ನ ಮುಂದರಿಯಬೇಕು. ಆಗಲೇ ನಾಡಿಗೆ ಕೀರ್ತಿ. ಇಂದಿನ ಪೀಳಿಗೆಯ ಮಕ್ಕಳು ಇದನ್ನು ಗ್ರಹಿಸಬೇಕು. ಇಲ್ಲದಿದ್ದರೆ ಎರಡು ತಪ್ಪು ಮಾಡಿದಂತಾಗುವುದು.

'ನಾವು ಪಡೆಯದೇ ಇರುವುದೊಂದು ತಪ್ಪು. ಮುಂದಿನವರಿಗೆ ಇಲ್ಲದಂತೆ ಮಾಡಿದ ಇನ್ನೊಂದು ತಪ್ಪು.'

ಹೀಗಾಗಬಾರದು. ನಾದಾಭಿಮಾನಿಯಾದ ಸರಸ್ವತಿಯು ಸನ್ಮಂಗಲವನ್ನುಂಟು ಮಾಡಲಿ .

- ಇತಿ ಶಮ್ -

**''ಸಂಗೀತಮೇವಂ ಪ್ರತಿದಿನ ಪಠನಂಯಃಕುರುತೇ ॥**
**ಶಿವಸಾಯುಜ್ಯಂಗಚ್ಛತಿ ಭಕ್ತ್ಯಾಯಃ ಶೃಣುತೇ ॥''**

ಪುಟ ಪ್ರಾಯೋಜಕರು : **ಶ್ರೀ ಮುದ್ದು ನಾರಾಯಣಸ್ವಾಮಿ, ಬೆಂಗಳೂರು**



# ಬಲ್ಲಿರೇನ್ನೈ ಭಾಗವತರ...

ಸರಳ ಸಜ್ಜನಿಕೆಗಳ ಸಾಕಾರ ಮೂರ್ತಿ
ಯಕ್ಷಗಾನದ ರಸಿಕರಿಂಗಿವರು ಸ್ಫೂರ್ತಿ ।
ಬಡಗಿನಲಿ ಹೃದಯಶ್ರೀಮಂತಿಕೆಯ ವ್ಯಕ್ತಿ
ಬಾಳೆಹದ್ದದ ಭಾಗವತರೆಂಬ ಕೀರ್ತಿ ॥

ಭಾವದಲಿ ಭಕ್ತಿತುಂಬಿದ ಮಧುರ ಗಾನ
ಗರ್ವಹಂಕಾರ ವರ್ಜಿತ ಜೀವಮಾನ ।
ವರ್ಚಸ್ವಿ ವಾಕ್ಯ ಸಂಪನ್ನ ನೇರನಡೆ
ತತ್ವನಿಷ್ಠರು ಕೃಷ್ಣ ತಿಮ್ಮಪ್ಪ ಹೆಗಡೆ ॥

ಬಾಳೆಹದ್ದದ ಭಾಗವತರೆಂದು ಖ್ಯಾತಿ
ಬಾಳೆಲ್ಲ ಯಕ್ಷಗಾನಕೆ ಮೀಸಲಾತಿ ।
ಹಾಡಿದರೆ ರಸಿಕಜನ ಮನವೆಲ್ಲ ಸೂರೆ
ನೋಡಿದರೆ ಕೃಷಿಕಪಂಡಿತರಿಹರು ಬೇರೆ ॥

ವಾಸದಲಿ ನಿತ್ಯ ದಾಸೋಹ ಸತ್ಕಾರ
ದಾಸೋಹವೆಂಬ ನಮ್ರತೆಯ ಆಕಾರ ।
ತಾಂಬೂಲರಾಗರಂಜಿತ ಸ್ಮಿತವದನ
ಬಲ್ಲಿರೇನ್ನೈ! ಭಾಗವತರ ಉಪಸದನ ॥

- ಬಲನಾಡು ಸುಬ್ಬಣ್ಣ ಭಟ್ಟ

ಪುಟ ಪ್ರಾಯೋಜಕರು : ಶ್ರೀ ವಿಶ್ವಾಸ ಪಿ. ಬಲ್ಸೆ, ಚವತ್ತಿ



# ರಾಗ ತಪಸ್ವಿ - ಗಾನಯೋಗಿ

-ರಮಾನಂದ ಐನಕೈ

''ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ ಕರ್ಮ ಎನಗೆ....''

ಈ ಮೇಲಿನ ಸಾಲುಗಳು ಬಾಳೆಹದ್ದ ಕೃಷ್ಣ ಭಾಗವತರಿಗೆ ಸರಿಯಾಗಿ ಅನ್ವಯಿಸುತ್ತದೆ. ಅವರಿಗೆ ಹಾಡುವುದು ಗೀಳು, ಶೋಕಿಯಲ್ಲ. ಹಾಗಾಗಿಯೇ ಅವರು ಶ್ರುತಿ, ಲಯ, ಸ್ವರ, ರಾಗಗಳ ಬೆನ್ನತ್ತಿ ಬಹುದೂರ ಹೋಗುತ್ತಾರೆ. ಅದರಲ್ಲೇ ಲೀನವಾಗಿ ಬದುಕನ್ನು ಮರೆಯುತ್ತಾರೆ. ರಾಗಕೋಶದ ನೂರಾರು ರಾಗಗಳ ತೆಗೆದು ಯಕ್ಷಗಾನ ಪ್ರಸಂಗದ ವಿವಿಧ ಪದ್ಯಗಳನ್ನು ಆಯ್ದು ಅವುಗಳಿಗೆ ಈ ರಾಗಗಳನ್ನು ಅಳವಡಿಸಿ ವಿಸ್ಮಯ ಹುಟ್ಟಿಸುತ್ತಾರೆ. ಯಾರೂ ಮಾಡದ ಅದ್ಭುತ ಸಂಶೋಧನೆಗಳನ್ನು ಮಾಡಿ ಅವುಗಳನ್ನೆಲ್ಲ ತಲೆದಿಂಬಿನಡಿ ಮಡಿಚಿಟ್ಟು ನಿರ್ಲಿಪ್ತರಾಗಿರುತ್ತಾರೆ. ಈ ಕಾರಣಕ್ಕಾಗಿ ಭಾಗವತರ ವ್ಯಕ್ತಿ ವ್ಯಾಖ್ಯಾನ ಮಾಡುವುದು ತುಂಬಾ ಕಷ್ಟದ ಕೆಲಸ. ಇವರಿಗೆ ''ಯಕ್ಷಗಾಯನ ಯೋಗಿ'' ಎಂದು ಕರೆದರೂ ನಾವು ಏನೂ ಹೇಳಿದಂತಾಗಲಿಕ್ಕಿಲ್ಲ.

ಹಲವರಿಗೆ ಸಾಧನೆ ಇರುತ್ತದೆ, ಸ್ವಭಾವ ಇರುವುದಿಲ್ಲ. ಕೆಲವರಿಗೆ ಸ್ವಭಾವ ಇರುತ್ತದೆ, ಸಾಧನೆ ಇರುವುದಿಲ್ಲ. ಆದರೆ ಭಾಗವತರು ಸ್ವಭಾವ ಮತ್ತು ಸಾಧನೆ ಎರಡರಲ್ಲೂ ಉತ್ತುಂಗಕ್ಕೆ ನಿಲ್ಲಬಲ್ಲವರು. ತಮ್ಮ ಪ್ರತಿಭೆಯ ಬಗ್ಗೆ ಕಿಂಚಿತ್ತೂ ಅಹಂಕಾರ ಹೊಂದಿದವರಲ್ಲ. ಹಾಗೆ ನೋಡಿದರೆ ಇವರ ಪ್ರತಿಭೆಯನ್ನು ಬೇರೆಯವರು ನಗದಾಗಿಸಿಕೊಂಡ ಸಂದರ್ಭವೇ ಹೆಚ್ಚಿರಬಹುದು! ಜಗುಲಿಯ ಚಾಪೆಯ ಮೇಲೆ ಎಲೆಯಡಿಕೆ ಜಗಿಯುತ್ತ ಕೂಡ್ರುವ ಇವರ ಮನಸ್ಸಿನ ಕಾರ್ಯಾಗಾರದಲ್ಲಿ ಏನೇನು ನಡೆಯುತ್ತಿರುತ್ತದೆಂದು ಊಹಿಸುವುದೇ ಕಷ್ಟ. ಸುಮ್ಮನೆ ಕುಳಿತಿರುವ ಇವರು ಒಮ್ಮೊಮ್ಮೆ ತಡೆಯಲಾಗದೆ ಥಟ್ಟನೆ ಪ್ರತಿಕ್ರಿಯಿಸಿಬಿಡುತ್ತಾರೆ. ಹಾಗಾಗಿ ಇವರನ್ನು 'ಮೌನಯೋಗಿ' ಎಂದು ಕರೆದರೂ ಅರ್ಥಪೂರ್ಣವೇ!

'ನನ್ನ ಬಗ್ಗೆ ತಿಳಿದುಕೊಂಡು ಯಾರಿಗೆ ಏನಾಗಬೇಕಾಗಿದೆ? ಅಷ್ಟಕ್ಕೂ ನಾನು ಮಾಡಿದ ದೊಡ್ಡಸಾಧನೆಯಾದರೂ ಏನು?' ಎನ್ನುವಾಗ ಭಾಗವತರ ನಿಗರ್ವ, ಮುಗ್ಧತೆ, ಪ್ರಾಮಾಣಿಕತೆ ಎದ್ದು ಕಾಣುತ್ತದೆ. 'ಬೇರೆಯವರಿಗೆ ಯಾವಾಗಲೂ ನಾವು ಸಿಹಿಯನ್ನೇ ನೀಡಬೇಕು. ಕಹಿ ನಮ್ಮಲ್ಲೇ ಇರಬೇಕು.' ಎನ್ನುವ ಭಾಗವತರು ಕೊನೆಗೂ ತಮ್ಮ ಜೀವನದ ಘಟನೆಗಳನ್ನು ಹೇಳಿಕೊಳ್ಳುವುದೇ ಇಲ್ಲ. ಇಂದಿನ ಅಪ್ಪಟ ವ್ಯಾವಹಾರಿಕ ಯುಗದಲ್ಲೂ ಕೂಡ ಇಂಥ ಸಜ್ಜನ ವ್ಯಕ್ತಿಗಳು



ಸಿಗುತ್ತಾರೆಂಬುದು ಜಗತ್ತು ಇನ್ನೂ ಪೂರ್ತಿ ಹಾಳಾಗಿಲ್ಲವೆಂಬುದಕ್ಕೆ ನಿದರ್ಶನವಾಗಬಲ್ಲದು.

ಶಿರಸಿ-ಯಲ್ಲಾಪುರ ಮುಖ್ಯ ರಸ್ತೆಯ ಬದಿಯಲ್ಲಿರುವುದೇ ಬಾಳೆಹದ್ದ ಊರು. ಊರೆಂದರೆ ಒಂದೊಂದೇ ಮನೆಯಿರುವ ಊರು ಇದು. ಈ ನೆಲದಲ್ಲೇ ಕೃಷ್ಣ ಭಾಗವತ (ಕೃಷ್ಣ ಹೆಗಡೆ) ಎಂಬ ಪ್ರತಿಭೆ ಅರಳಿದ್ದು. ಭಾಗವತರ ಪೂರ್ವಾಶ್ರಮದ ಕುರಿತು ಕಣ್ಣು ಹಾಯಿಸಿದರೆ ಸಂಕಷ್ಟಗಳ ಸರಮಾಲೆಯೇ ಎದುರು ಬರುತ್ತದೆ. ಮೂಲತಃ ಇವರ ಅಡ್ಡ ಹೆಸರು ಹೆಗಡೆ. ಭಾಗವತಿಕೆ ಹೇಳುತ್ತಿದ್ದುದರ ಪರಿಣಾಮವಾಗಿ ಇವರಿಗೆ ಭಾಗವತರು ಎಂತಲೇ ಹೆಸರು ಬಂತು.

ಬಾಳೆಹದ್ದ ತಿಮ್ಮಯ್ಯ ಹಾಗೂ ಮಹಾದೇವಿ ದಂಪತಿಗಳ ಮಗನಾಗಿ 30-05-1930 ರಲ್ಲಿ ಜನಿಸಿದರು. ಹುಟ್ಟುವಾಗಲೇ ಇವರು ಎಲ್ಲರ ಗಮನ ಸೆಳೆದವರು. ಏಕೆಂದರೆ ಇವರ ಅಮ್ಮ ಮಹಾದೇವಿ ಪ್ರತಿ ಸಲ ಹೆರಿಗೆಯಾದಾಗಲೂ ಮಗು ಬದುಕುತ್ತಿರಲಿಲ್ಲ. ಹಾಗಾಗಿ ಅವರು ಹರಕೆ ಹೊತ್ತುಕೊಂಡರು. ಅದರ ಫಲವಾಗಿ ಮಹಾದೇವಿಯ ಹದಿಮೂರನೇ ಗರ್ಭದಲ್ಲಿ ಇವರು ಜನಿಸಿದರು. ಹಾಗಾದ ಮೇಲೆ ಇವರಿಗೆ ಎಷ್ಟು ಪ್ರಾಮುಖ್ಯತೆ ಇರಲಿಕ್ಕಿಲ್ಲ ? ಆದರೆ ವಿಧಿ ಈ ಸಂತೋಷವನ್ನು ಬಹಳಕಾಲ ಉಳಿಸಲಿಲ್ಲ. ಕೃಷ್ಣ ಭಾಗವತರು ಜನಿಸಿ ಸರಿಯಾಗಿ ಏಳು ವರ್ಷಕ್ಕೆ ತಂದೆ ತಿಮ್ಮಯ್ಯ ಹೆಗಡೆ ವಿಧಿವಶರಾದರು. ತಂದೆ ತೀರಿಕೊಂಡ ಮೇಲೆ ಭಾಗವತರು ಒಂದರ್ಥದಲ್ಲಿ ಅನಾಥರೇ ಆದರು. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಇವರ ತಾಯಿ ಮಗನ ಅಭ್ಯುದಯಕ್ಕಾಗಿ ಪಟ್ಟ ಕ್ಲಷ್ಟ ಅಷ್ಟಿಷ್ಟಲ್ಲ. ಅಂದು ಇವರ ಮನೆಯಲ್ಲಿ ಅಡಿಕೆ ಹಾಳೆಯಲ್ಲಿ ಊಟ ಮಾಡುತ್ತಿದ್ದ ಸಂದರ್ಭವನ್ನು ಕೆಲವು ಹಿರಿಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಅದೇ ರೀತಿ ಭಾಗವತರು ದೊಡ್ಡವರಾಗುತ್ತಾ ಬಂದಂತೆ ಅವರ ದಾಯಾದಿಗಳ ದಬ್ಬಾಳಿಕೆಯನ್ನು ಅತಿಯಾಗಿ ಅನುಭವಿಸಿದರು. ಅವರ್ಯಾರೂ ಇಂದು ಬದುಕಿಲ್ಲ.

ಕೃಷ್ಣ ಭಾಗವತರ ತಾಯಿ ಮಹಾದೇವಿ ಒಳ್ಳೆ ಹಾಡುಗಾರ್ತಿ ಆಗಿದ್ದಳು. ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವುದಲ್ಲದೇ ಒಂಬತ್ತಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗ ಕಂಠಪಾಠವಾಗಿದ್ದವು. ಹಾಗಾಗಿಯೇ ಭಾಗವತರಿಗೆ ಚಿಕ್ಕಂದಿನಿಂದಲೇ ಸಂಗೀತದ ಸಂಸ್ಕಾರ ಸಿಕ್ಕಿತು. ಅಂದು ಬೆಳಗುಂದ್ಲಿ ಮಹಾಬಲೇಶ್ವರ ಭಾಗವತರು ಮೇಲ್ಗಟ್ಟ ಮತ್ತು ಕೆಳಘಟ್ಟದಲ್ಲಿ ಪ್ರಸಿದ್ಧ ಭಾಗವತರಾಗಿದ್ದರು. ಕೃಷ್ಣ ಭಾಗವತರ ಅಪ್ಪ ತಿಮ್ಮಯ್ಯ ಹೆಗಡೆಯವರಿಗೆ ಬೆಳಗುಂದ್ಲಿಯಲ್ಲಿ ಭಾಗವತರ ನಿಕಟ ಸ್ನೇಹ ಇತ್ತು . ಅಪ್ಪನ ಜೊತೆಗೆ ಕೃಷ್ಣ ಭಾಗವತರು ಯಕ್ಷಗಾನ ಹಾಗೂ ತಾಳಮದ್ದಲೆಗಳಿಗೆ ಹೋಗುತ್ತಿದ್ದರು. ಹೀಗೆ ಕೇಳಿ ಕೇಳಿಯೇ ಕೃಷ್ಣ ಭಾಗವತರು ಹಾಡುಗಾರರಾಗಿ ಬಿಟ್ಟರು.

ಕೃಷ್ಣ ಭಾಗವತರ ಅಪ್ಪ ತಿಮ್ಮಯ್ಯ ಹೆಗಡೆಯವರು ಸ್ವತಃ ಭಾಗವತರಾಗಿರದಿದ್ದರೂ ಬೆಳಗ್ಗೆ



ಉದಯರಾಗವನ್ನು ಚೆನ್ನಾಗಿ ಹೇಳುತ್ತಿದ್ದರು. ಇದರ ಪ್ರಭಾವ ಕೂಡಾ ಮಗನ ಮೇಲೆ ಬಿತ್ತು. ಅಲ್ಲದೆ ಬೆಳಗುಂದ್ಲಿ ಭಾಗವತರ ಶಿಷ್ಯ ತಾರೇಹಳ್ಳಿ ರಾಮಕೃಷ್ಣ ಹೆಗಡೆಯವರ ಭಾಗವತಿಕೆ ಕೂಡಾ ಬಾಲಕ ಕೃಷ್ಣನ ಆಸಕ್ತಿಯನ್ನು ಕೆರಳಿಸಿತು. ಹೀಗೆ ನೋಡನೋಡುತ್ತಾ ಬಾಲಕ ಕೃಷ್ಣ ಕೃಷ್ಣ ಭಾಗವತರಾಗಿ ರೂಪುಗೊಂಡರು. ಸ್ಥಾನಿಕವಾಗಿ ತಾಳಮದ್ದಲೆ ಕೂಟವೊಂದು ಸ್ಥಾಪಿತವಾಯಿತು. ಕಾನಗೋಡು ಮಹಾಬಲೇಶ್ವರ ಹೆಗಡೆ, ಕೆರೆಮನೆ ಸುಬ್ರಾಯ ಹೆಗಡೆ, ಭಟ್ರಕೇರಿ ಗಣಪತಿ ಹೆಗಡೆ, ಚಪ್ಪರಮನೆ ಗೋವಿಂದ ಹೆಗಡೆ, ಬಾಳೇಜಡ್ಡಿ ವೆಂಕಟ್ರಮಣ ಹೆಗಡೆ, ಹೊನ್ನೆಕಟ್ಟು ಗಿರಿಯಾ ಗೌಡ ಮುಂತಾದವರೆಲ್ಲ ಈ ಕೂಟದ ಅರ್ಥಧಾರಿಗಳಾಗಿದ್ದರು. ಇವರೆಲ್ಲರಿಗೆ ಕೃಷ್ಣ ಭಾಗವತರ ಹಾಡುಗಾರಿಕೆ. ಈ ಅನುಭವದಿಂದ ಕೃಷ್ಣ ಭಾಗವತರಿಗೆ ಯಕ್ಷಗಾನ ಹಾಡುಗಾರಿಕೆ ಕುರಿತು ವಿಚಿತ್ರವಾದ ಒಲವು ಕುತೂಹಲ ಉಂಟಾಯಿತು. ಭಾಗವತಿಕೆ ಎಂದರೆ ಕೇವಲ ಹಾಡುವುದಲ್ಲ. ಆ ಮೂಲಕ ರಸಪೋಷಣೆ, ಪಾತ್ರ ಪೋಷಣೆ ಮಾಡಬೇಕು. ಶ್ವಾಸೋಚ್ಛ್ವಾಸದ ಸರಿಯಾದ ಬಳಕೆಯಾಗಬೇಕು. ಸಾಹಿತ್ಯದ ಸ್ಪಷ್ಟತೆ ಇರಬೇಕು. ಹೀಗೆ ಕೃಷ್ಣ ಭಾಗವತರ ಸಂಶೋಧನೆ ಪ್ರಾರಂಭವಾಯಿತು.

ಕಂಪ್ಲಿ ತುದಿಮನೆ ಸುಬ್ರಾಯ ಹೆಗಡೆಯವರು ಆಗ ಪ್ರಸಿದ್ಧ ಮದ್ದಲೆವಾದಕರಾಗಿದ್ದರು. ಅವರ ಒಡನಾಟದಿಂದ ಭಾಗವತರು ಸಾಕಷ್ಟು ಅನುಭವ ಪಡೆದರು. ಈ ಹಂತದಲ್ಲೇ ಶೀಗೇಮನೆ ಎನ್.ಎಸ್. ಹೆಗಡೆಯವರ ಸಂಪರ್ಕ ಬಂದು ಅವರು ಅನೇಕ ತಾಳಮದ್ದಲೆಗಳಿಗೆ ಭಾಗವತರನ್ನು ಕರೆದೊಯ್ಯತೊಡಗಿದರು ಹಾಗೂ ಭಾಗವತರನ್ನು ಹೊರ ಜಗತ್ತಿಗೆ ಪರಿಚಯಿಸಲೂ ಪ್ರಯತ್ನಿಸಿದರು. ಯಕ್ಷಗಾನದ ಬಗ್ಗೆ ವಿಶೇಷ ಒಲವು ಹೊಂದಿದ ಜೋಗಭಟ್ಟರಕೇರಿ ಮಹಾಬಲ ಹೆಗಡೆಯವರು ಯಕ್ಷಗಾನಕ್ಕೆ ಹೋಗುವಾಗಲೆಲ್ಲ ಭಾಗವತರನ್ನು ಕರೆದೊಯ್ಯುತ್ತಿದ್ದರು. ಕಾಶಿಮಠ ಸುಬ್ಬಣ್ಣ, ಜಾಲೀಮನೆ ದೇವೇಂದ್ರ, ಹೆಗಡೆ ಮುಂತಾದವರೆಲ್ಲ ಸೇರಿ ಸಂಘಟನೆ ಮಾಡಿ ಒಂದು ಮೇಳ ಕಟ್ಟಿ 'ಮಹಾಗಣಪತಿ ಪ್ರಸಾದಿತ ಭರತನಹಳ್ಳಿ ಮೇಳ' ಎಂದು ಹೆಸರಿಟ್ಟರು. ವರ್ಷದಲ್ಲಿ ಸುಮಾರು 30-35 ಪ್ರದರ್ಶನ ನೀಡುತ್ತಿದ್ದರು. ಆ ಕಾಲದಲ್ಲೇ ಇವರು ಶಿರಸಿ ಮಾರಿಗುಡಿ ಗೋಕರ್ಣ, ಮಂಜುಗುಣಿ, ಕವಡಿಕೆರೆ ಮುಂತಾದ ಕಡೆಗಳೆಲ್ಲ ಹೋಗಿ ಆಟ ಕುಣಿಯುತ್ತಿದ್ದರು. ಆರ್ಥಿಕವಾಗಿ ಇದು ಲಾಭದಾಯಕ ವೃತ್ತಿ ಆಗಿರಲಿಲ್ಲ. ಇಡೀ ತಂಡಕ್ಕೆ ಒಂದು ಆಣೆ ಕೊಡುತ್ತಿದ್ದರಂತೆ. ಒಂದು ಆಣೆಯಲ್ಲಿ ಏನು ಮಾಡುತ್ತೀರಿ ? ಪ್ರಯಾಣಕ್ಕೆ ಸಾಕಾಗುತ್ತಿರಲಿಲ್ಲ ಅಲ್ಲವೇ ? ನಾವು ಕಾಲ್ನಡಿಗೆಯಲ್ಲೇ ಹೋಗುತ್ತಿದ್ದೆವು. ಎಂದು ಭಾಗವತರು ತುಂಟರ ಹಾಗೆ ನಗುತ್ತಾರೆ.



## ರಾಗಗಳ ಬೆನ್ನೇರಿದ ಭಾಗವತರು .....................

ಕೃಷ್ಣ ಭಾಗವತರು ಪ್ರವರ್ಧಮಾನಕ್ಕೆ ಬಂದಾಗ ಯಕ್ಷಗಾನ ಪ್ರಸಂಗಗಳ ಮುದ್ರಿತ ಪ್ರತಿಗಳು ಅಷ್ಟಾಗಿ ಲಭ್ಯವಿರಲಿಲ್ಲ. ಹಸ್ತಪ್ರತಿಗಳನ್ನು ನೋಡಿ, ಬೇರೆಯವರು ಹಾಡಿದ ರೀತಿಯನ್ನೆ ಅನುಕರಿಸಿ ಹಾಡುವುದು ರೂಢಿಯಲ್ಲಿತ್ತು. ಪ್ರತಿ ಪದ್ಯದ ಮೇಲೆ ರಾಗಗಳ ಹೆಸರು ಸಂಪೂರ್ಣವಾಗಿ ಇರುತ್ತಿರಲಿಲ್ಲ. ......ಭೈ.......ಮಾ... ಮುಂತಾಗಿ ಸಾಂಕೇತಿಕ ಅಕ್ಷರಗಳು ಮಾತ್ರ ಇರುತ್ತಿದ್ದವು. ಇದರಿಂದ ಕುತೂಹಲಗೊಂಡ ಭಾಗವತರು ಉಡುಪಿಯಿಂದ ಮುದ್ರಿತ ಪ್ರತಿ ತಂದು ಅಭ್ಯಸಿಸತೊಡಗಿದರು. ಕಬ್ಬಿನಗದ್ದೆ ಮಹಾಬಲೇಶ್ವರ ಭಾಗವತ ಅವರಿಂದ ರಾಗಜ್ಞಾನ ಪಡೆದುಕೊಂಡರು. ಅಲ್ಲಿಂದ ಅವರಿಗೆ ವಿವಿಧ ರಾಗಗಳ ಕುರಿತು ಜಿಜ್ಞಾಸೆ ಕೆದಕುತ್ತಾ ಹೋಯಿತು.

ಇದೇ ಸಮಯದಲ್ಲಿ ಧಾರವಾಡದ ಆಕಾಶವಾಣಿಯಲ್ಲಿ ಒಂದು ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮ ರೆಕಾರ್ಡ್ ಮಾಡಲು ಕರೆ ಬಂತು. ಇದರಲ್ಲಿ ಕೃಷ್ಣ ಭಾಗವತರದ್ದೇ ಹಾಡುಗಾರಿಕೆ. ಇದು ನಡೆದದ್ದು ಸುಮಾರು 1966-67 ರಲ್ಲಿ. ಆಕಾಶವಾಣಿ ಕಾರ್ಯಕ್ರಮಕ್ಕೆ ವಾಯಲಿನ್ ಸಾಥಿ ಪಡೆದುಕೊಳ್ಳಬೇಕೆಂಬುದು ಭಾಗವತರ ಬಯಕೆ. ಹಾಗಾಗಿಯೇ ಒಂದು ದಿನ ಮುಂಚಿತವಾಗಿಯೇ ಧಾರವಾಡಕ್ಕೆ ಬಂದಿಳಿದರು. ಭಾಗವತರು ಎಷ್ಟು ದೃಢ ಸಂಕಲ್ಪದವರೆಂದರೆ ನೇರವಾಗಿ ಆಕಾಶವಾಣಿ ನಿಲಯಕ್ಕೆ ಹೋಗಿ ಅಲ್ಲಿಯ ನೌಕರರೊಬ್ಬರಲ್ಲಿ ತಮ್ಮ ಅಭೀಷ್ಟೆಯನ್ನು ಹೇಳಿಕೊಂಡರು. ಅವರು ನೇರವಾಗಿ ಇವರನ್ನು ಆಕಾಶವಾಣಿ ನಿಲಯದ ಕಲಾವಿದ ರಾಜಯ್ಯಂಗಾರ್ ಅವರ ಮನೆಗೇ ಕರೆದೊಯ್ದರು. ರಾಜಯ್ಯಂಗಾರ್ ಅಂದಿನ ದಿನಗಳಲ್ಲಿ ಪ್ರಸಿದ್ಧ ವಾಯಲಿನ್ ವಾದಕರಾಗಿದ್ದರು. ಯಕ್ಷಗಾನ ಭಾಗವತಿಕೆಗೆ ವಾಯಲಿನ್ ಬಾರಿಸಲು ಸಾಧ್ಯವಿಲ್ಲವೆಂದು ತಮ್ಮ ಗತ್ತಿನಲ್ಲಿ ತಿರಸ್ಕಾರ ಮಾಡಿದರು. ಅವಮಾನವನ್ನು ಸಹಿಸಿಯೂ ಕೃಷ್ಣ ಭಾಗವತರು ಸ್ವಲ್ಪ ಸಮಯ ಅಲ್ಲೇ ಕುಳಿತರು. ನಂತರ ರಾಜಯ್ಯಂಗಾರರಿಗೆ ಏನನ್ನಿಸಿತೋ ಏನೋ 'ನೋಡೋಣ, ಒಂದು ಹಾಡು ಹೇಳಿ' ಎಂದರು. ಭಾಗವತರು ರಾಗ ಶುರುಮಾಡಿದ್ದೇ ರಾಜಯ್ಯಂಗಾರರ ಸ್ವರೂಪವೇ ಬದಲಾಗಿ ಹೋಯಿತು. 'ಇನ್ನೊಂದು ಹಾಡಿ' ಎಂದು ನಾಲ್ಕೈದು ಪದ್ಯ ಹಾಡಿಸಿದರು. ತಾವೂ ಅದಕ್ಕೇ ವಾಯಲಿನ್ ಕೂಡಿಸಿದರು. ಮಾರನೆಯ ದಿನ ಆಕಾಶವಾಣಿ ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂತು.

ಈ ಘಟನೆ ರಾಜಯ್ಯಂಗಾರ್ ಹಾಗೂ ಕೃಷ್ಣ ಭಾಗವತರ ಸಂಬಂಧವನ್ನು ಗಾಢವಾಗಿಸಿತು. ತಂತಿ ವಾದ್ಯಗಳಿಂದ ಗರಿಷ್ಠ ಸ್ವರಸ್ಥಾನಗಳನ್ನು ಕಂಡುಕೊಳ್ಳಬಹುದೆಂದು ಭಾಗವತರಿಗೆ ಅರಿವಾಯಿತು. ರಾಜಯ್ಯಂಗಾರ್ ಕೂಡಾ ಇವರ ಸ್ವರಮಾಧುರ್ಯ ಕಂಡು 'ನೀವೂ ವಾಯಲಿನ್ ಕಲಿಯಿರಿ' ಎಂದು ಪ್ರೋತ್ಸಾಹಿಸಿ ಪಾಠ ಶುರು ಮಾಡಿಯೇ ಬಿಟ್ಟರು.



ನಂತರ ಸುಮಾರು ವರ್ಷ ಭಾಗವತರಿಗೆ ರಾಜಯ್ಯಂಗಾರ್ ಅವರಿಂದ ಉಚಿತವಾಗಿ ವಾಯಲಿನ್ ಪಾಠವೂ ನಡೆಯಿತು. ಬಾಳೆಹದ್ದ ಭಾಗವತರ ಶೈಲಿ ಎಂಬ ಯಕ್ಷಗಾನ ಭಾಗವತಿಕೆಯ ಹೊಸ ಶೈಲಿಯೇ ಹುಟ್ಟಿಕೊಂಡಿತು.

ಆ ದಿನಗಳಲ್ಲಿ ಯಕ್ಷಗಾನ ಪ್ರಸಂಗ ಪಠ್ಯಗಳಲ್ಲಿ ಕೇವಲ ಆರೆಂಟು ರಾಗಗಳು ಮಾತ್ರ ಮೇಲಿಂದ ಮೇಲೆ ಉಲ್ಲೇಖವಾಗಿರುತ್ತಿದ್ದವು. ಯಕ್ಷಗಾನದ ಹಾಡುಗಳನ್ನು ಎಷ್ಟೆಷ್ಟು ರಾಗಗಳಲ್ಲಿ ಹಾಡಬಹುದೆಂಬ ಕುತೂಹಲ ಭಾಗವತರಿಗೆ ಹೆಚ್ಚಾಗತೊಡಗಿತು. ಯಕ್ಷಗಾನದ ಹಾಡುಗಾರಿಕೆಯಲ್ಲಿ ಸಂಗೀತದ ಸಮರ್ಥ ಬಳಕೆಯಾದರೆ ರಸಪೋಷಣೆಗೆ ಹಾಗೂ ಪಾತ್ರ ಪೋಷಣೆಗೆ ಅನುಕೂಲವಾಗಹುದೆಂದು ಮನಗಂಡರು. ಆ ದಿಶೆಯಲ್ಲಿ ಅವರು ಚಿಂತನೆ ಮಾಡತೊಡಗಿದರು.

ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ ಎಕ್ಸಿಬಿಷನ್ ಹಾಲ್‌ನಲ್ಲಿ ಒಂದು ತಾಳಮದ್ದಲೆ ಸಂಘಟಿತವಾಗಿತ್ತು. ಕಾರ್ಯಕ್ರಮ ಮುಗಿದ ಮೇಲೆ ಎಲ್ಲರೂ ಭಾಗವತರನ್ನು ಮುತ್ತಿ ಪ್ರಶಂಸೆಯ ಸುರಿಮಳೆಗೈದರು. ಭಾಗವತರು ಹೊರಟು ಬರುವಾಗ ವಯಸ್ಸಾದ ವ್ಯಕ್ತಿಯೊಬ್ಬರು ಭಾಗವತರಲ್ಲಿ 'ಇಲ್ಲೇ ಆಲದ ಮರದ ಬುಡದಲ್ಲಿ ನಿಂತಿರಿ, ನಾನು ಏನೋ ತಂದು ಕೊಡುತ್ತೇನೆ' ಎಂದು ಹೋದರು. ಸ್ವಲ್ಪ ಸಮಯದ ನಂತರ ಒಂದು ಪುಸ್ತಕವನ್ನು ಇವರಿಗೆ ಕೊಟ್ಟು ಹೋದರು. ಆ ಪುಸ್ತಕವೇ 'ರಾಗಕೋಶ'. ಭಾಗವತರು ಈ ಹಿಂದೆ ಹುಬ್ಬಳ್ಳಿ ಪುಸ್ತಕ ಡಿಪೋದಲ್ಲಿ ಇದೇ ಗ್ರಂಥ ನೋಡಿದ್ದರೂ ಸಹ ಖರೀದಿಸಲಾಗಿರಲಿಲ್ಲ. ಈಗ ಉಡುಗೊರೆಯಾಗಿ ಬಂದ ರಾಗಕೋಶದ ಮೇಲೆ ಅವರಿಗೆ ವಿಶೇಷ ಪ್ರೀತಿವುಂಟಾಯಿತು.

ಈ ರಾಗಕೋಶದಲ್ಲಿ ಒಟ್ಟೂ ಹನ್ನೆರಡು ಚಕ್ರಗಳಿದ್ದವು. ಒಂದೊಂದು ಚಕ್ರದಲ್ಲಿ ಸುಮಾರು ಮುನ್ನೂರು ರಾಗಗಳು. ಒಟ್ಟೂ ಸುಮಾರು ಮೂರು ಸಾವಿರದ ಆರುನೂರು ರಾಗಗಳು ಅದರಲ್ಲಿದ್ದವು. ಭಾಗವತರು ಈ ರಾಗಕೋಶವನ್ನು ವಿಶೇಷವಾಗಿ ಅಧ್ಯಯನ ಮಾಡಿದರು. ಅದರಲ್ಲಿನ ಹಲವು ರಾಗಗಳನ್ನು ಗುರುತಿಸಿ ಅದನ್ನು ವಿವಿಧ ಯಕ್ಷಗಾನ ಪದ್ಯಗಳಿಗೆ ಅಳವಡಿಸಿದರು. ಒಂದೇ ಪದ್ಯದಲ್ಲಿ ವಿವಿಧ ಭಾವಗಳಿಗೆ ಸಂಬಂಧಿಸಿದ ಸಾಲುಗಳು ಬಂದಾಗ ಅದಕ್ಕೆ ಬೇರೆ ಬೇರೆ ರಾಗಗಳನ್ನೇ ಅಳವಡಿಸುವ ಪ್ರಯತ್ನ ಮಾಡಿದರು.

ಅಲ್ಲಿಯ ತನಕ ಲಭ್ಯವಿದ್ದ ಪಠ್ಯ ಪ್ರಸಂಗವೇ ಅಂತಿಮ ಸತ್ಯವಾಗಿತ್ತು. ಈ ಪಠ್ಯದಲ್ಲಿ ಒಂದು ಪದ್ಯಕ್ಕೆ ಒಂದು ರಾಗದ ಹೆಸರು ಹಾಕಿರುತ್ತಿದ್ದರು. ಇಡೀ ಪದ್ಯ ಒಂದೇ ತಾಳದಲ್ಲಿರುತ್ತಿತ್ತು. ಕೆಲವು ಸಂದರ್ಭದಲ್ಲಿ ಇದು ಮುದ್ರಣದೋಷದಿಂದಲೂ ಆಗಿರುತ್ತಿತ್ತು. ಭಾಗವತರು ಈ ನ್ಯೂನತೆಯನ್ನೂ ಗುರುತಿಸಿ ಸರಿಪಡಿಸುವ ಎಷ್ಟೋ ಪ್ರಯತ್ನ ಮಾಡಿದ್ದಾರೆ. ಹಾಗಾಗಿಯೇ ಬಾಳೆಹದ್ದ ಭಾಗವತರ ಹಾಡುಗಾರಿಕೆಗೆ ವಿಶಿಷ್ಟ ಶೈಲಿ ಬಂತು. ಸಾಹಿತ್ಯದ ಅಸ್ಪಷ್ಟತೆಯೊಡನೆ



ಕೂಗಿ ಹಾಡುವುದೇ ಭಾಗವತಿಕೆ ಎಂದು ನಂಬಿದ್ದ ಅನೇಕರು ಈ ಬಾಳೆಹದ್ದ ಭಾಗವತರ ಶೈಲಿಯನ್ನು ಪ್ರಾರಂಭದಲ್ಲಿ ಗೇಲಿ ಮಾಡಿ ನಕ್ಕಿದ್ದೂ ಉಂಟು. ಆದರೆ ಪ್ರಸಿದ್ಧ ಕಲಾವಿದರೆಲ್ಲ ಬಾಳೆಹದ್ದ ಶೈಲಿಯನ್ನು ಗೌರವಿಸತೊಡಗಿದಾಗ ಭಾಗವತರಿಗೆ ವಿಶೇಷ ಮಹತ್ವ ಬಂತು. ಅದು ಇಂದಿಗೂ ಜೀವಂತವಾಗಿದೆ.

ಕೃಷ್ಣ ಭಾಗವತರು ರಾಗಕೋಶದಿಂದ ಸುಮಾರು ನೂರಕ್ಕೂ ಹೆಚ್ಚು ರಾಗಗಳನ್ನು ಆಯ್ದು ಅದನ್ನು ಪಥ್ಯ ಪ್ರಸಂಗದ ಪದ್ಯಗಳಿಗೆ ಅಳವಡಿಸಿದ್ದಾರೆ. ರಾಗ ಲಕ್ಷಣ, ಹಾಡುವ ಕಾಲ, ಆರೋಹ - ಅವರೋಹ ಮುಂತಾದ ವಿವರಗಳೊಂದಿಗೆ ಸವಿಸ್ತಾರವಾಗಿ ದಾಖಲಿಸಿದ್ದಾರೆ. ನಿಜಕ್ಕೂ ಇದು ಅಧ್ಯಯನ ಯೋಗ್ಯವಾದ ಕೆಲಸ. ಅವರು ಸಂಶೋಧಿಸಿ ಅಳವಡಿಸಿದ ಕೆಲವು ರಾಗಗಳನ್ನು ಪರಿಚಯಕ್ಕಾಗಿ ಇದೇ ಅಭಿನಂದನಾ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಯಾರಾದರೂ ಆಸಕ್ತರು 'ಕೃಷ್ಣ ಭಾಗವತರ' ಬಗ್ಗೆಯೇ ಸಂಶೋಧನೆ ಮಾಡುವಷ್ಟು ರಾಗಜ್ಞಾನ, ತಿಳುವಳಿಕೆ, ಪರಿಶ್ರಮ ಅವರಲ್ಲಿದೆ.

## ಹಾಡುಗಾರಿಕೆಯೇ ಒಂದು ಅಭಿನಯ ......

ಸಾಹಿತ್ಯದ ಸ್ಪಷ್ಟತೆ, ಶ್ರುತಿ, ರಾಗ, ಲಯ ಶುದ್ಧತೆ ಹಾಡಿನ ಪ್ರಧಾನ ಅಂಗವಾಗಿರಬೇಕೆಂದು ನಂಬಿದವರು ಭಾಗವತರು. ಹಾಡುಗಾರರಿಗೆ ತಾಳದ ಜೊತೆಗೆ ಮೃದಂಗ ಹಾಗೂ ಚಂಡೆಯ ಸಂಪೂರ್ಣ ಜ್ಞಾನವಿರಬೇಕೆನ್ನುತ್ತಾರೆ. ಹಾಡಿನ ಒಂದು ಸಾಲನ್ನು ಹೇಳಿದರೆ ಅದೇ ಸನ್ನಿವೇಶ ಕಟ್ಟಿಕೊಡಬೇಕು. ಹಾಡುಗಾರಿಕೆ ಅರ್ಥದಾರಿಗಳಿಗೆ ಸವಾಲಾಗಬೇಕು. ಆಗ ಮಾತ್ರ ಕಲಾವಿದನ ಸಂಪೂರ್ಣ ಸಾಮರ್ಥ್ಯ ಬೆಳಕಿಗೆ ಬರುತ್ತದೆ ಎನ್ನುತ್ತಾರೆ. ಭಾಗವತಿಕೆ ಕಲಿಸುವಾಗಲೂ ಕೂಡಾ ಮೊದಲು ಸ್ವರ ಹಾಗೂ ರಾಗದ ತಿಳುವಳಿಕೆ ನೀಡಬೇಕು. ಅದರಲ್ಲಿ ಪರಿಪೂರ್ಣ ಆದ ಮೇಲೆ ಕೈಯಲ್ಲಿ ತಾಳ ಕೊಡಬೇಕು., ಆದರೆ ಈಗ ಹಾಗಿಲ್ಲ ಕಲಿಯಲು ಶುರುವಾದಾಗಲೇ ತಾಳವನ್ನು ಖರೀದಿಸಿ ತಂದಿರುತ್ತಾರೆ ಎಂದು ತಮಾಷೆಯಾಗಿ ಹೇಳುತ್ತಾರೆ. ಸ್ವಂತಿಕೆಯಿಲ್ಲದೇ ಹಾಡುಗಾರಿಕೆ ಅನುಕರಣೀಯ ಮಟ್ಟದಲ್ಲಿ ಮಾತ್ರ ನಿಂತಾಗ ಭಾಗವತ ಬೆಳೆಯಲು ಸಾಧ್ಯವಿಲ್ಲ. ಆಗ ರಂಜನೆಗಾಗಿಯೇ ಹಲವು ಗಿಮಿಕ್ಸ್ ಬಳಸಬೇಕಾಗುತ್ತದೆ. ಅದರಿಂದ ಯಾವುದೇ ಕಲೆ ತನ್ನ ಶಾಸ್ತ್ರೀಯ ಸ್ಥಾನಮಾನ ಉಳಿಸಿಕೊಳ್ಳಲಾರದು ಎನ್ನುತ್ತಾರೆ. ಈ ರೀತಿ ಅಧ್ಯಯನ ಇಲ್ಲದಿರುವುದೂ ಕೂಡಾ ಯಕ್ಷಗಾನ ಶಾಸ್ತ್ರೀಯ ಕಲೆಯೇ ಅಥವಾ ಜಾನಪದ ಕಲೆಯೇ ಎಂಬ ಸದಾ ಸಂದಿಗ್ಧಕ್ಕೆ ಕಾರಣವಾಗಿದೆ ಎಂದು ವಾದಿಸುತ್ತಾರೆ.

ಹಾಡುಗಾರಿಕೆಯಲ್ಲಿ ಭಾಗವತರು ಅನೇಕ ಸ್ವತಂತ್ರವಾದ ಧೈರ್ಯವಾದ ಪ್ರಯತ್ನ ಮಾಡಿ ಯಶಸ್ಸು ಸಾಧಿಸಿದ್ದಾರೆ. ಯಕ್ಷಗಾನದ 'ದಾನವಾಂತಕ......' ಹಾಡಿಗೆ ಮೊದಲು



ಕೇದಾರ ರಾಗವನ್ನು ಅಳವಡಿಸಿದವರು ಕೃಷ್ಣ ಭಾಗವತರು. ಈ ಹಾಡನ್ನು ಕೇಳಿ ಜನ ಕುಣಿದು ಕುಪ್ಪಳಿಸುತ್ತಿದ್ದರು. ಸಿದ್ದಾಪುರ ತಾಲೂಕಿನ ಹಾಲ್ಕಣಿ ಕಾನ್ಸೂರು ಮುಂತಾದ ಭಾಗಗಳಲ್ಲಿ ಇಂದಿಗೂ ಕೃಷ್ಣ ಭಾಗವತರಿಗೆ ದಾನವಾಂತಕ ಭಾಗವತರು ಎಂದೇ ಕರೆಯುತ್ತಾರೆ.

ಪ್ರಾಯದ ಕಾಲದಲ್ಲಿ ಕೃಷ್ಣ ಭಾಗವತರು ಹಾಡಲು ಕುಳಿತರೆ ಅದೊಂದು ದೈತ್ಯ ಪ್ರತಿಭೆ. ಬರಿ ಹಾಡಿನಲ್ಲಿಯೇ ಆಯಾ ಸನ್ನಿವೇಶ ಹಾಗೂ ಪಾತ್ರದ ಅಭಿನಯ ಸಾಧ್ಯತೆಯನ್ನು ಧ್ವನಿಸಿಬಿಡುವ ತಾಕತ್ತು ಅವರಲ್ಲಿತ್ತು. ಸಂಗೀತದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿದ್ದರಿಂದಲೇ ಅವರಿಗೆ ಈ ಸಾಧನೆ ಸಾಧ್ಯವಾಯಿತು. ಇಂದಿನ ಈ ಇಳಿ ವಯಸ್ಸಿನಲ್ಲಿಯೂ ಕೂಡಾ ಅವರು ಬೆಳಗ್ಗೆ ವಾಯಲಿನ್ ಬಾರಿಸಿಯೇ ಹಾಸಿಗೆಯಿಂದ ಏಳುತ್ತಾರೆ.

## ಕೃಷ್ಣ ರಾಧೆಯರ ಸುಖ ದಾಂಪತ್ಯ ......

ಬಾಳೆಹದ್ದ ಕೃಷ್ಣ ಭಾಗವತರ ಜೊತೆಯಲ್ಲೇ ನಮಗೆ ಕಣ್ಣಿಗೆ ಬರುವ ಮತ್ತೊಂದು ಚಿತ್ರಣ ಅವರ ಪತ್ನಿ 'ರಾಧಾ'. ಭಾಗವತರ ಔದಾರ್ಯತೆಯ ಹಿಂದೆ ರಾಧಾಳ ತಾಳ್ಮೆ ಪರಿಶ್ರಮ ಅಪಾರವಿದೆ. ರಾಧಾಳ ತಾಯಿಯ ಮನೆ ಕೊಪ್ಪಲುತೋಟ. ಕೊಪ್ಪಲುತೋಟದ ಗಣಪತಿ ಜೋಷಿಯವರ ಮಗಳು ರಾಧಾ ಕೃಷ್ಣನ ಕೈ ಹಿಡಿಯಬೇಕಾದರೆ ಆಕೆಗೆ ಕೇವಲ 13 ವರ್ಷ ಪ್ರಾಯ. ಈಕೆ ಜನರನ್ನು ಸತ್ಕರಿಸಲು ಪತಿಗಿಂತಲೂ ಒಂದು ಕೈ ಮೇಲು. ಕೃಷ್ಣ ಭಾಗವತರ ಮನೆಗೆ ಮೊದಲಿನಿಂದಲೂ ಜನ ಸಂಪರ್ಕ ಹೆಚ್ಚು. ಪ್ರತಿನಿತ್ಯ ನಾಲ್ಕಾರು ಜನರು ಮನೆಯಲ್ಲಿ ಊಟಕ್ಕಿದ್ದೇ ಇರುತ್ತಿದ್ದರು. ಶಿರಸಿ- ಯಲ್ಲಾಪುರದ ಆಸುಪಾಸು, ಎಲ್ಲೇ ಯಕ್ಷಗಾನವಿರಲಿ ಕಲಾವಿದರ ದಂಡು ಭಾಗವತರ ಆತಿಥ್ಯಕ್ಕೇ ಹಾಜರ್. ಅದರಲ್ಲೂ ಕೆರೆಮನೆ ಮೇಳದವರು ಆ ಕಡೆ ಎಲ್ಲೆ ಬಂದರೂ ಬಾಳೆಹದ್ದಕ್ಕೆ ಬಂದು ಊಟ ಮಾಡಿಯೇ ಹೋಗುತ್ತಿದ್ದರು. ಉಪ್ಪೂರು ಭಾಗವತರೂ ಇವರ ಮನೆಗೆ ಹೆಚ್ಚಿನ ಭೇಟಿ ನೀಡುತ್ತಿದ್ದರು. ಅವರ ಮೂಲಕ ಕಾಳಿಂಗ ನಾವುಡರೂ ಈ ಕುಟುಂಬಕ್ಕೆ ಆತ್ಮೀಯರಾದರು. 'ಭಾಗವತಿಕೆಯಲ್ಲಿ ಹೆಚ್ಚಿನ ಜ್ಞಾನವನ್ನು ಸಂಪಾದಿಸಲು ನೀನು ಬಾಳೆಹದ್ದ ಭಾಗವತರಲ್ಲಿ ಹೋಗುತ್ತಿರು' ಎಂದು ಉಪ್ಪೂರರು ಸೂಚಿಸುತ್ತಿದ್ದದ್ದನ್ನು ಸ್ವತಃ ನಾವುಡರೇ ಹೇಳುತ್ತಿದ್ದರಂತೆ.

ಹೊಸ್ತೋಟ ಮಂಜುನಾಥ ಭಾಗವತರು ತಮ್ಮ ಸಾಮರ್ಥ್ಯವನ್ನು ಅರಳಿಸಿಕೊಂಡದ್ದೇ ಬಾಳೆಹದ್ದ ಭಾಗವತರ ಸಾಂಗತ್ಯದಲ್ಲಿ. ಸುಮಾರು ಹತ್ತು ವರ್ಷಗಳ ಕಾಲ ಮಂಜುನಾಥ ಭಾಗವತರು ಬಾಳೆಹದ್ದದಲ್ಲೇ ವಾಸ್ತವ್ಯ ಮಾಡಿದ್ದರು. ಐನ್‌ಬೈಲ್ ಪರಮ, ಬರಬಳ್ಳಿ ಗಣೇಶ, ಶೇಡಿಜಡ್ಡಿ ಸುಬ್ರಾಯ, ದ್ಯಾವರಗದ್ದೆ ನಾರಾಯಣ ಮುಂತಾಗಿ ಅನೇಕ ಕೃಷ್ಣ ಭಾಗವತರ ಶಿಷ್ಯರು ಇಂದು ಯಕ್ಷಗಾನ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರೆಲ್ಲ ಬಾಳೆಹದ್ದದಲ್ಲಿ ವಾಸ್ತವ್ಯ



ಮಾಡಿ ಕಲಿತವರೇ.

ಹೀಗೆ ಬಾಳೆಹದ್ದ ಯಕ್ಷ ಪ್ರಪಂಚದ ಗುರುಕುಲ ಮಾತ್ರವಲ್ಲ ವಾಸ್ತವ್ಯದ ಧರ್ಮಛತ್ರವೂ ಆಗಿತ್ತು. ಈ ಪರಂಪರೆ ಇಂದಿಗೂ ಮುಂದುವರಿದು ಬಂದಿದ್ದನ್ನು ನಾವು ಕಾಣಬಹುದು.

ಇದು ಸಾಧ್ಯವಾದದ್ದು ಆ ಮನೆಯ ಔದಾರ್ಯದ ವಾತಾವರಣದಿಂದ. ಆ ವಾತಾವರಣಕ್ಕೆ ಕಾರಣರಾದವರು ಕೃಷ್ಣ ಭಾಗವತ ಹಾಗೂ ಸಾಧ್ವಿ ರಾಧಾ. ಇಂದಿಗೂ ಕೂಡಾ ರಾಧಾ ಪ್ರತಿಯೊಬ್ಬರನ್ನೂ ತನ್ನ ಒಡಹುಟ್ಟಿದವರೇ ಎಂಬಷ್ಟು ಅಕ್ಕರೆಯಿಂದ ಸ್ವಾಗತಿಸುತ್ತಾಳೆ. ಒಡಲಲ್ಲಿ ನೋವುಗಳೇ ಇಲ್ಲವೇನೋ ಎಂಬಷ್ಟು ನಗುಮುಖ ರಾಧಾಳದ್ದು. ಹಾಗಾಗಿ ಯಕ್ಷಲೋಕ ಕೃಷ್ಣ ಭಾಗವತರನ್ನು ಉಲ್ಲೇಖಿಸುವಾಗ ಮೊದಲು ಗುರುತಿಸಬೇಕಾದ್ದು ರಾಧಾಳನ್ನು. ಅಂತಹ ಅನ್ಯೋನ್ಯ ದಾಂಪತ್ಯ ಅವರದ್ದು.

### ಬದುಕಿನ ಮಹತ್ವದ ಕ್ಷಣಗಳು.........

ಕೃಷ್ಣ ಭಾಗವತರು ಎಂಥ ನಿಗರ್ವಿ ಎಂದರೆ 'ವಿಷಯದ ಕುರಿತು ಬೇಕಾದಷ್ಟು ಕೇಳಿ ನನ್ನ ವೈಯಕ್ತಿಕ ವಿವರ ಬೇಡ' ಎನ್ನುತ್ತಾರೆ. ಹಾಗಾಗಿ ಅವರ ಬದುಕಿನ ಹಲವು ಸಿಹಿ ಕಹಿ ಘಟನೆಗಳನ್ನು ಅವರ ಬಾಯಿಂದ ಕೇಳುವುದು ಸಾಧ್ಯವಾಗುವುದೇ ಇಲ್ಲ. ಅವರ ಕುರಿತು ಇತರ ಹಿರಿಯರಿಂದಲೇ ಕೇಳಿ ತಿಳಿಯಬೇಕಾಗುತ್ತದೆ.

ಭಾಗವತರಿಗೆ ಕೆಟ್ಟದಾಗಿ ಹಾಡುವವರನ್ನು ಕಂಡರೆ ಮೊದಲಿನಿಂದಲೂ ಆಗುತ್ತಿರಲಿಲ್ಲ. ಅದರಲ್ಲೂ ಕೆಲವು ಕಲಾವಿದರು ರಂಗದ ಮೇಲೆ ಭಾಗವತರಿಗೆ ಸಂವಾದಿಯಾಗಿ ಕೆಟ್ಟದಾಗಿ ಹಾಡುವುದನ್ನು ಅವರು ಸಹಿಸುತ್ತಿರಲಿಲ್ಲ. ಒಮ್ಮೆ ಯಲ್ಲಾಪುರ ಸಾರ್ವಜನಿಕ ಗಣೇಶೋತ್ಸವದಲ್ಲಿ 'ಭೀಷ್ಮಾರ್ಜುನ' ಪ್ರಸಂಗ ನಡೆಯುತ್ತಿತ್ತು. ಮುಖ್ಯ ಕಲಾವಿದ ಭಾಗವತರ ಪದ್ಯಕ್ಕೆ ತಾನೂ ಸ್ವರ ಕೂಡಿಸಲು ಪ್ರಯತ್ನಿಸಿದ. ಇವರು ತಡಮಾಡಲಿಲ್ಲ. ಮೈಕಿನಲ್ಲೇ 'ಬ್ರಾಹ್ಮಣ ಮಧ್ಯ ಬಾಯಿ ಹಾಕಬೇಡ' ಎಂದುಬಿಟ್ಟರು. ಹಲವು ಸಂದರ್ಭದಲ್ಲಿ ಅವರು ಅಷ್ಟೇ ಕಠೋರರೂ ಆಗಿರುತ್ತಿದ್ದರು.

ಕುಂದರಗಿಯಲ್ಲಿ ಒಂದು ಬೈಠಕ್ ನಡೆದಿತ್ತು. ಅದಕ್ಕೆ ಡಾ. ಶಿವರಾಮ ಕಾರಂತರು ಬಂದಿದ್ದರು. ಕೃಷ್ಣ ಭಾಗವತರು ಅದನ್ನು ಲಕ್ಷಿಸದೇ ಅದ್ಭುತವಾಗಿ ಹಾಡಿದರು. ಕಾರಂತರು ಮಧ್ಯದಲ್ಲೇ ಎದ್ದುನಿಂತು 'ಭೇಷ್' ಎಂದು ಉದ್ಘರಿಸಿದ್ದರು. ನಂತರ ಉಡುಪಿ ಯಕ್ಷಗಾನ ಗೋಷ್ಠಿಯಲ್ಲಿ ಬಾಳೆಹದ್ದ ಭಾಗವತರನ್ನು ಆಹ್ವಾನಿಸಿ ಸನ್ಮಾನಿಸಿದರು.

ಕೆರೆಮನೆ ಶಿವರಾಮ ಹೆಗಡೆಯವರು ಮುಂದೆ ಕುಳಿತಿದ್ದಾರೆ. ಪಟ್ಟಾಭಿಷೇಕ ಪ್ರಸಂಗ. ದಶರಥ ಕೈಕೆಯರ ಸನ್ನಿವೇಶ. ದುಃಖ ರಸದ ಪದ್ಯವೊಂದನ್ನು ಹಾಡಿದಾಗ ಶಿವರಾಮ



ಹೆಗಡೆಯವರು ಎದ್ದು ಬಂದು ಭಾಗವತರನ್ನು ತಬ್ಬಿ ಹಿಡಿದಿದ್ದನ್ನು ಹಿರಿಯರು ಈಗಲೂ ನೆನೆಯುತ್ತಾರೆ.

ಹಾಸಣಗಿ ಗಣಪತಿ ಭಟ್ಟರು ಬಾಳೆಹದ್ದ ಭಾಗವತರನ್ನು ತುಂಬಾ ಗೌರವಿಸುತ್ತಿದ್ದರು. ಭಾಗವತರು 'ಕರ್ಣಪರ್ವ', 'ಭೀಷ್ಮಾರ್ಜುನ' ಮುಂತಾದ ಪ್ರಸಂಗಗಳಲ್ಲಿ ಹಾಡುವಾಗ ಗಣಪತಿ ಭಟ್ಟರು ಕಣ್ಣೀರು ಹಾಕುತ್ತಿದ್ದರಂತೆ. ಹಾಸಣಗಿಯಲ್ಲಿ ನಡೆದ ಕೃಷ್ಣಸಂಧಾನ ಪ್ರಸಂಗದಲ್ಲಿ ಭಾಗವತರು 'ದೃಢದಿ ಬಾರೆನ್ನೊಳು ಸಲಹುವೆ ನಿನ್ನನು.....' ಹಾಡಿದಾಗ ಗಣಪತಿ ಭಟ್ಟರು ಗಳಗಳನೆ ಅತ್ತು ಪ್ರೇಕ್ಷಕರಿಗೆ ತಜಬಿಜಿಯಾದದ್ದು ಇಂದಿಗೂ ದಂತಕತೆ.

ಮಹಾಬಲ ಕಾರಂತರು ತಮ್ಮ ನಿರ್ದೇಶನದ 'ಕರ್ಣಪರ್ವ'ದಲ್ಲಿ ಕೃಷ್ಣ ಭಾಗವತರು ಹಾಡಿದ್ದು ಕೇಳಿ ಮೂಕವಿಸ್ಮಿತರಾಗಿದ್ದರಂತೆ. ಕೆಲವು ಹಳ್ಳಿಗಳಲ್ಲಿ ಭಾಗವತರ ಪದ್ಯಕ್ಕೆ ಮನಸೋತು ಬಹುಮಾನ ನೀಡಿದ ಸಂದರ್ಭ ಅನೇಕ ಇವೆ.

ಕುರವಣಿಗೆ ಗಣಪಜ್ಜ ಒಂದು ಗಂಟೆ ರಾತ್ರಿಯಲ್ಲಿ ದೊಂದಿ ಹಚ್ಚಿಸಿಕೊಂಡು ಬಾಳೆಹದ್ದಕ್ಕೆ ಬಂದು ಬಿಡುತ್ತಿದ್ದನಂತೆ. ಭಾಗವತರನ್ನು ಎಬ್ಬಿಸಿ ಮೈ ಪರಚಿ ಪ್ರೀತಿ ಮಾಡಿ ನಾಲ್ಕು ಪದ್ಯ ಹೇಳಿಸಿ ಕೇಳಿ ಹಾಗೇ ರಾತ್ರಿಯೇ ವಾಪಸ್ ಮನೆಗೆ ಹೋದ ಎಷ್ಟೋ ಸಂದರ್ಭಗಳಿವೆಯಂತೆ.

ತ್ಯಾಗಲಿಯಲ್ಲಿ ನಡೆದ ಯಕ್ಷಗಾನ ಸಮ್ಮೇಳನದಲ್ಲಿ ಹದಿನೈದು ಪ್ರಸಿದ್ಧ ಭಾಗವತರಿಗೆ ಆಹ್ವಾನ ನೀಡಿದ್ದರು. 'ಕೃಷ್ಣ ಸಂಧಾನ' ಪ್ರಸಂಗ. ಎಲ್ಲ ಭಾಗವತರೂ ಪದ್ಯ ಹೇಳಬೇಕು. ಹುಲಿಮನೆ ಪರಮೇಶ್ವರ ಶಾಸ್ತ್ರಿಯವರ ಕೃಷ್ಣ ಹಾಗೂ ಮುತ್ಮುರ್ಡು ಸುಬ್ರಾಯ ಹೆಗಡೆಯವರ ಕೌರವ. ಆ ಕಲಾವಿದರಿಗೆ ಖುಷಿಯಾಗಿ ಅವರ ಒತ್ತಡದಿಂದ ಬೆಳತನಕ ಪದ್ಯ ಹೇಳುವ ಪರಿಸ್ಥಿತಿ ಬಂದದ್ದನ್ನು ಕೃಷ್ಣ ಭಾಗವತರು ಹೆಮ್ಮೆಯಿಂದ ನೆನೆಯುತ್ತಾರೆ.

ಶಿರಸಿ ಮಾರಿಗುಡಿಯಲ್ಲಿ ಒಂದು ಬೃಹತ್ ರಾಜ್ಯಮಟ್ಟದ ಕಲಾ ಸಮ್ಮೇಳನ ನಡೆದಿತ್ತು. ಅದಕ್ಕೆ ಕಲಾಪ್ರಿಯ ಸಂಡೂರು ಮಹಾರಾಜರೂ ಬಂದಿದ್ದರು. ಅವರ ಪಕ್ಕದ ರೂಮಿನಲ್ಲೇ ಬಾಳೆಹದ್ದ ಭಾಗವತರ ತಂಡದ ವಾಸ್ತವ್ಯ ಆಗಿತ್ತು. ಇವರನ್ನು ನೋಡಿ ಸಂಡೂರು ಮಹಾರಾಜರು ತಮ್ಮ ಸಹಪಾಠಿಯಲ್ಲಿ ಹಿಂದಿಯಲ್ಲಿ ಕೇಳಿದರಂತೆ - 'ಈ ಕಲಾವಿದರು ಯಾರು?' ಎಂದು. 'ಯಕ್ಷಗಾನದವರು' ಎಂದಾಗ ಮಹಾರಾಜರು ಮೂಗು ಮುರಿದು ನಕ್ಕರಂತೆ. ಬಾಳೆಹದ್ದ ಭಾಗವತರಿಗೆ ಹಿಂದಿ ಅರ್ಥವಾಗುತ್ತಿದ್ದರಿಂದ ಅವಮಾನವಾಯಿತು. ಮಹಾರಾಜರ ಸಹಪಾಠಿಗಳಲ್ಲಿ 'ಅವರು ಹಾಗೇಕೆ ತಿರಸ್ಕಾರ ಮಾಡಿದರು?' ಎಂದು ಕೇಳಿದರಂತೆ. ಆಗೊಂದು ಸ್ವಾರಸ್ಯಕರ ಘಟನೆ ಹೊರಬಂತು. ಯಕ್ಷಗಾನದ ಕುರಿತು ಕೇಳಿದ್ದ ಮಹಾರಾಜರು ಯಾವುದೋ ಯಕ್ಷಗಾನ ತಂಡವನ್ನು ತಮ್ಮ ಊರಿಗೆ ಆಮಂತ್ರಿಸಿದ್ದರಂತೆ. ಅಲ್ಲಿನ ಹಾಡುಗಾರಿಕೆ ಕೇಳಿ ಅವರಿಗೆ



ಯಕ್ಷಗಾನವೇ ಸಾಕು ಎನ್ನಿಸಿತಂತೆ. ಅದಕ್ಕಾಗೇ ಯಕ್ಷಗಾನದವರು ಎಂದಾಕ್ಷಣ ಮೂಗು ಮುರಿದರು. ಭಾಗವತರು ಇದನ್ನೇ ಸವಾಲಾಗಿ ಸ್ವೀಕರಿಸಿದರು. ಮಾರನೇ ದಿನ ಯಕ್ಷಗಾನ, ರೂಮಿನಲ್ಲೇ ಹಾಡುಗಾರಿಕೆಯ ತಾಲೀಮು ಮಾಡಲು ನಿರ್ಧರಿಸಿದರು. ತುದಿಮನೆ ಸುಬ್ಬಣ್ಣನನ್ನು ಮದ್ದಲೆಗೆ ಕೂಡ್ರಿಸಿಕೊಂಡು ಹಾಡುಗಾರಿಕೆ ಪ್ರಾರಂಭಿಸಿಯೇ ಬಿಟ್ಟರು. ಸ್ವಲ್ಪ ಸಮಯದ ನಂತರ ಮಹಾರಾಜರು ತಮ್ಮ ಸಹಪಾಠಿಯ ಜೊತೆಗೆ ಎದುರು ಬಂದು ನಿಂತು ಆಲಿಸಲು ಪ್ರಾರಂಭಿಸಿದರು. ಭಾಗವತರು ಮುಗಿಸಿದಾಕ್ಷಣ ಮಹಾರಾಜರು 'ಭೇಷ್! ಅದ್ಭುತ! ಇದ್ರಾಗೇನ್ ರಾಗಿಲ್ಲೊ? ತಾಳಿಲ್ಲೊ? ಯಾವುದು ಇಲ್ಲಪಾ? ಪಕ್ಕಾ ಸಂಗೀತ ನೋಡು' ಎಂದು ಪ್ರಶಂಸೆ ಮಾಡಿದ್ದಲ್ಲದೇ ಮಾರನೇ ದಿನ ಕಾರ್ಯಕ್ರಮವನ್ನೂ ನೋಡಿ ಮೆಚ್ಚಿದರು.

ಆಗಿನ ಕಾಲದಲ್ಲಿ ಆಕಾಶವಾಣಿಯಲ್ಲಿ ಯಕ್ಷಗಾನ ಪ್ರಸಂಗಕ್ಕೇ ಕೇವಲ ಹದಿನೈದು ನಿಮಿಷ ಕೊಡುತ್ತಿದ್ದರು. ಯಾವ ಕಲಾವಿದರೂ ಅದನ್ನು ಪ್ರಶ್ನೆ ಮಾಡದೆ ಅದಕ್ಕೆ ತಕ್ಕಹಾಗೆ ನಡೆಸಿಕೊಡುತ್ತಿದ್ದರು. ಭಾಗವತರು ಮೊಟ್ಟ ಮೊದಲು ಆಕಾಶವಾಣಿ ಕಾರ್ಯಕ್ರಮಕ್ಕೆ ಹೋದಾಗ ಇದನ್ನ ಪ್ರಶ್ನೆ ಮಾಡಿದರು. ಯಕ್ಷಗಾನ ಸಂಪ್ರದಾಯದಂತೆ ನಡೆಸಬೇಕಾದರೆ ಈ ಹದಿನೈದು ನಿಮಿಷ ಏಕೂ ಸಾಲದು. ಇದರಿಂದ ಒಂದು ಕಲೆಯ ಪರಿಪೂರ್ಣತೆ ತೋರಿಸಲು ಸಾಧ್ಯವಿಲ್ಲ ಎಂದು ವಾದಿಸಿದರು. ನಂತರ ಮೂವತ್ತು ನಿಮಿಷ ನೀಡತೊಡಗಿದರು. ಒಂದು ವರ್ಷದಲ್ಲೇ ಅದು ಒಂದು ಗಂಟೆಯ ಅವಧಿಗೂ ವಿಸ್ತಾರವಾಯಿತು. ಭಾಗವತರ ಈ ಪ್ರಯತ್ನಕ್ಕೆ ಇತಿಹಾಸದ ದಾಖಲೆ ಇದೆಯೇ? ಇದನ್ನೇ ನಾವು ಕೃಷ್ಣ ಭಾಗವತರ ಸಜ್ಜನಿಕೆ ಎಂದು ಕರೆಯುವುದು.

## ರಾಗ ತಪಸ್ವಿಯ ಕಲಾ ಕುಟುಂಬ.....

ಬಾಳೆಹದ್ದ ಭಾಗವತ ಸುಖೀ ದಂಪತಿಗಳಿಗೆ ಒಬ್ಬ ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು. ಎಲ್ಲರಿಗೂ ಮದುವೆಯಾಗಿದೆ. ಮೊಮ್ಮಕ್ಕಳನ್ನೂ ಭಾಗವತರು ಕಂಡಿದ್ದಾರೆ. ಮಕ್ಕಳು, ಅಳಿಯಂದಿರು ಎಲ್ಲರೂ ಕಲಾಸಕ್ತರೇ. ನಾಗವೇಣಿ, ಮಾದೇವಿ ನಂತರ ಕಿರಿಯವ ತಿಮ್ಮಪ್ಪ. ಹಿರಿ ಅಳಿಯ ಶ್ರೀಪಾದ ಹೆಗಡೆ, ಕಂಪ್ಲಿ ಹಾಗೂ ಎರಡನೆ ಅಳಿಯ ಜಾಲಿಮನೆ ವೆಂಕಣ್ಣ.

## ಬಾಳೆಹದ್ದ ತಿಮ್ಮಪ್ಪ ಭಾಗವತ

ಬಾಳೆಹದ್ದ ತಿಮ್ಮಪ್ಪ ಭಾಗವತರಿಗೆ ಯಕ್ಷಗಾನದ ಹಾಡುಗಾರಿಕಾ ಪ್ರತಿಭೆ ಅನುವಂಶೀಯವಾಗಿ ಬಂದದ್ದು. ಸಮಕಾಲೀನ ಯುವಭಾಗವತರಲ್ಲಿ ಇವರು ತುಂಬಾ ಹೆಸರು ಮಾಡಿದ್ದಾರೆ. ಹಾಡುಗಾರಿಕೆಯನ್ನು ತಂದೆಯವರಲ್ಲೇ ಅಭ್ಯಾಸ ಮಾಡಿದ ಇವರು, ಹೊಸ್ತೋಟ ಮಂಜುನಾಥ ಭಾಗವತರ ಒಡನಾಟದಿಂದ ರಂಗತಂತ್ರವನ್ನು ಅಭ್ಯಾಸ ಮಾಡಿದರು.



ತಿಮ್ಮಪ್ಪ ಆರನೆಯ ವರ್ಗದಲ್ಲಿ ಓದುತ್ತಿದ್ದಾಗ ಮಾರಿಗುಡಿಯಲ್ಲಿ 'ಕರ್ಣಪರ್ವ' ಮಕ್ಕಳ ಪ್ರಸಂಗ ನಡೆದಿತ್ತು. ಪ್ರಥಮವಾಗಿ ಅಪ್ಪನ ಮಡಿಲಲ್ಲಿ ಕುಳಿತು 'ಏನಯ್ಯಾ ಶಲ್ಯಭೂಪಾ...' ಮುಂತಾಗಿ ನಾಲ್ಕು ಪದ್ಯಗಳನ್ನು ಹೇಳಿ ಭೇಷ್ ಅನಿಸಿಕೊಂಡರು. ದುರ್ಗಪ್ಪ ಗುಡಿಗಾರ ಮೃದಂಗವಾದಕರಾಗಿದ್ದರು. ನಂತರ ಶಾಲೆಯಲ್ಲಿ ಪ್ರಸಂಗ ಶುರುಮಾಡಿದರು. ಸೋಂದಾ ಮೇಳ, ಶಿರಸಿ ಸಮಯ ಸಮೂಹ, ಕೋಳಿಗಾರ ಮೇಳ ಮುಂತಾದ ಕಡೆಗಳಲ್ಲಿ ಭಾಗವತರಾಗಿ ಗಮನ ಸೆಳೆದಿದ್ದಾರೆ. ಮೈಸೂರಿನಲ್ಲಿ ಯಕ್ಷಗಾನದ ಕ್ಲಾಸ್ ನಡೆಸಿದ್ದಾರೆ. ಇವರ ಭಾಗವತಿಕೆಯಲ್ಲಿ ನಡೆದ 'ನಿಸರ್ಗ ಸಂಧಾನ' ಆಟ ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲೂ ಪ್ರದರ್ಶನ ಕಂಡಿದೆ. ಸಾಂಸ್ಕೃತಿಕ ಇಲಾಖೆಯ ವತಿಯಿಂದಲೂ ಹಲವಾರು ಕಾರ್ಯಕ್ರಮ ನೀಡಿದ್ದಾರೆ.

ವರ್ಷಕ್ಕೆ ಸುಮಾರು 125 ರಿಂದ 150 ಪ್ರಸಂಗಗಳಲ್ಲಿ ಭಾಗವಹಿಸುತ್ತಾರೆ. ಸಾಮಾನ್ಯವಾಗಿ ಯಕ್ಷಗಾನದ ಎಲ್ಲ ಪ್ರಸಿದ್ಧ ಕಲಾವಿದರ ಜೊತೆಗೆ ಹಾಡಿ ಪ್ರಶಂಸೆ ಪಡೆದಿದ್ದಾರೆ. ತಿಮ್ಮಪ್ಪ ಭಾಗವತರ ಸಾಹಿತ್ಯ ಸ್ಪಷ್ಟತೆ ಹಾಗೂ ರಾಗ ಲಯ ಶುದ್ಧತೆಯ ಬಗ್ಗೆ ಇಂದಿಗೂ ಹೆಸರಿದೆ. ಹಿರಿಯ ಕಲಾವಿದರೊಬ್ಬರು ಹೇಳಿದಂತೆ 'ತಿಮ್ಮಪ್ಪ ಭಾಗವತರ ಸಾಹಿತ್ಯ ಸ್ಪಷ್ಟತೆಯ ಕಾರಣದಿಂದ ಒಮ್ಮೊಮ್ಮೆ ಅರ್ಥಧಾರಿಗಳಿಗೆ ಹೆಚ್ಚಿನ ಜವಾಬ್ದಾರಿ ಬಂದುಬಿಡುತ್ತದೆ' ಎಂಬ ಮಾತಿನಲ್ಲಿ ಸತ್ಯಾಂಶ ಕೂಡಾ ಇದೆ.

ಆಕಾಶವಾಣಿ ಹಾಗೂ ದೂರದರ್ಶನದಲ್ಲೂ ಕೂಡಾ ತಿಮ್ಮಪ್ಪ ಭಾಗವತರ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಅನೇಕ ಆಧುನಿಕ ನಾಟಕಗಳಿಗೆ ಸಂಗೀತ ಸಂಯೋಜನೆ ಮಾಡಿ, ಹಾಡಿ ರಂಗಭೂಮಿಯಲ್ಲೂ ಗಮನ ಸೆಳೆದಿದ್ದಾರೆ. ಓ ನನ್ನ ಬೆಳಕೆ, ಸರಸಮ್ಮನ ಸಮಾಧಿ ಧಾರಾವಾಹಿಗಳಲ್ಲಿ ಹಾಡಿದ್ದಾರೆ. ಇತ್ತೀಚೆಗೆ ಆಕಾಶವಾಣಿಯಲ್ಲಿ ನಡೆಸಿಕೊಟ್ಟ 'ಯಕ್ಷಗಾಯನ ಮತ್ತು ಮದ್ದಲೆ' ಕಾರ್ಯಕ್ರಮಕ್ಕೆ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದೆ. ಇವರ ಜೊತೆಗೆ ಶಂಕರ ಭಾಗವತ, ಯಲ್ಲಾಪುರ ಭಾಗವಹಿಸಿದ್ದರು. ಈ ಯುವ ಭಾಗವತರಿಗೆ ಹಲವಾರು ಕಡೆ ಸನ್ಮಾನ ನಡೆದಿವೆ. ಒಟ್ಟಿನಲ್ಲಿ ಬಾಳೆಹದ್ದ ಶೈಲಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಎಲ್ಲ ಪ್ರಯತ್ನಗಳೇ ಇವರಿಂದ ಆಗುತ್ತಿವೆ.

ಹೆಂಡತಿ ಶಾರದಾ. ಮೂಲತಃ ಯಲ್ಲಾಪುರದವಳು. ಮಗಳು ರಾಧಿಕಾ, ಎಂಟನೇ ವರ್ಗದಲ್ಲಿ ಓದುತ್ತಿದ್ದಾಳೆ. ಅಪ್ಪನ ಹತ್ತಿರ ಸಂಗೀತ ಕಲಿಯುತ್ತಿದ್ದಾಳೆ. ಮಗ ಗೋಪಾಲಕೃಷ್ಣ. 6ನೆ ವರ್ಗದಲ್ಲಿದ್ದಾನೆ. ಆತನೂ ಹಾಡುತ್ತಾನೆ.

## ಕಂಪ್ಲಿ ಶ್ರೀಪಾದ ಹೆಗಡೆ ಮತ್ತು ನಾಗವೇಣಿ

ಕಂಪ್ಲಿ ವಿಶ್ವೇಶ್ವರ ಹೆಗಡೆ ಮತ್ತು ಭಾಗೀರಥಿ ದಂಪತಿಗಳ ಮಗ, ಧಾರವಾಡ



ಆಕಾಶವಾಣಿಯ ನಿಲಯ ಕಲಾವಿದರಾದ ಶ್ರೀಪಾದ ಹೆಗಡೆ, ಕಂಪ್ಲಿ ನಾಡಿನ ಖ್ಯಾತ ಸಂಗೀತಗಾರರಲ್ಲಿ ಒಬ್ಬರು. ಅವರು ಪ್ರಾರಂಭದಲ್ಲಿ ಪಂ. ಗಣಪತಿ ಭಟ್ ಹಾಸಣಗಿಯವರಲ್ಲಿ ಸಂಗೀತ ಅಭ್ಯಾಸ ಮಾಡಿ ನಂತರ ಡಾ. ಬಸವರಾಜ ರಾಜಗುರುಗಳವರಲ್ಲಿ ಮುಂದಿನ ಶಿಕ್ಷಣ ಪಡೆದರು. ಕರ್ನಾಟಕದ ಹಿಂದೂಸ್ಥಾನಿ ಸಂಗೀತ ಕ್ಷೇತ್ರದಲ್ಲಿ ಶ್ರೀಪಾದ ಹೆಗಡೆಯವರು ಈಗಾಗಲೇ ತಮ್ಮ ಛಾಪು ಮೂಡಿಸಿಕೊಂಡಿದ್ದಾರೆ. ಈಗಾಗಲೇ ಇವರ ಸಂಗೀತ ನಿರ್ದೇಶನದಲ್ಲಿ ಆಡಿಯೋ ಕೆಸೆಟ್, ಇವರೇ ಹಾಡಿರುವ ಶಾಸ್ತ್ರೀಯ ಸಂಗೀತದ ಕೆಸೆಟ್ ಹಾಗೂ ಸಿ. ಡಿ. ಬಿಡುಗಡೆಗೊಂಡಿವೆ. ಇವರು ಮೊದಲಿನಿಂದಲೂ ಕೃಷ್ಣಭಾಗವತರ ಮನೆಗೆ ಬಂದು ಸಂಗೀತದ ಕುರಿತು ಚರ್ಚೆ ನಡೆಸುತ್ತಿದ್ದರು . ಸುದೈವದಿಂದ ಭಾಗವತರ ಮಗಳು ನಾಗವೇಣಿಯನ್ನೇ ಮದುವೆಯಾದರು. ನಾಗವೇಣಿ ಚಿಕ್ಕಂದಿನಿಂದಲೇ ತಂದೆಯಿಂದ ವಾಯಲಿನ್ ಹಾಗೂ ತಬಲಾ ಶಿಕ್ಷಣ ಪಡೆದಿದ್ದಳು. ನಂತರ ಪಂ. ವಸಂತ ಕನಕಾಪುರರವರಲ್ಲಿ ಹಾರ್ಮೋನಿಯಂ ಶಿಕ್ಷಣ ಪಡೆದು, ಈಗ ಹೆಚ್ಚಿನ ಕಾರ್ಯಕ್ರಮಗಳಲ್ಲಿ ಶ್ರೀ ಶ್ರೀಪಾದ ಹೆಗಡೆಯವರಿಗೆ ಅವಳೇ ಹಾರ್ಮೋನಿಯಂ ಸಾಥಿ. ಹಾಡುಗಾರಿಕೆಯ ಬಗ್ಗೂ ಇವಳಿಗೆ ಒಲವಿದೆ. ಶ್ರೀಪಾದ ಹೆಗಡೆಯವರಲ್ಲಿ ಪಾಠಕ್ಕೆ ಬರುವ ವಿದ್ಯಾರ್ಥಿಗಳಿಗೆ ನಾಗವೇಣಿಯೇ ಪ್ರಾರಂಭಿಕ ಪಾಠ ನಡೆಸುತ್ತಾಳೆ.

ಇಬ್ಬರು ಗಂಡು ಮಕ್ಕಳು, ಹರ್ಷ ಮತ್ತು ವಿಶಾಲ್. ಹರ್ಷ ಬಿ. ಇ. ಮುಗಿಸಿ ಈಗಾಗಲೇ ನೌಕರಿಯಲ್ಲಿದ್ದಾನೆ. ವಿಶಾಲ್ ಬಿ. ಇ. ಓದುತ್ತಿದ್ದಾನೆ. ಇಬ್ಬರಿಗೂ ಸಂಗೀತದ ಒಲವಿದ್ದರೂ ವಿಶಾಲ್ ಅಪ್ಪನ ಗರಡಿಯಲ್ಲೇ ತಯಾರಾಗುತ್ತಿದ್ದಾನೆ.

## ಯಂಕಣ್ಣ ಮತ್ತು ಮಾದೇವಿ....

ಹಿತ್ಲಳ್ಳಿಯ ಗಜಾನನ ಹೆಗಡೆ ಮತ್ತು ಭಾಗೀರಥಿ ದಂಪತಿಗಳ ಮಗನಾದ ಯಂಕಣ್ಣನ ಹೆಸರು ಜಿಲ್ಲೆಯಲ್ಲಿ ಪರಿಚಿತ. ಧಾರುಶಿಲ್ಪದ ಸಂಗ್ರಹ ಮಾಡಿ, 'ಸ್ವಸ್ತಿಕ್ ಆರ್ಟ ಗ್ಯಾಲರಿ' ಎಂಬ ರಜಿಸ್ಟರ್ ಸಂಸ್ಥೆ ಮಾಡಿದ್ದಾರೆ. ಕಸದಿಂದ ರಸ ತೆಗೆಯುವುದು ಇವರ ಹವ್ಯಾಸ. ಇವರು ಅಶ್ವತ್ಥ ಎಲೆಗಳ ಮೇಲೆ ನಾಡಿನ ಎರಡು ಸಾವಿರ ಕಲಾವಿದರುಗಳ, ರಾಜಕಾರಣಿಗಳ ಭಾವಚಿತ್ರ ಬಿಡಿಸಿ ಪ್ರದರ್ಶನ ನಡೆಸಿದ್ದಾರೆ. ಕೀ ಬಂಚ್, ಜಡೆ ಕ್ಲಿಪ್, ಗ್ರೀಟಿಂಗ್ಸ್ ಮುಂತಾದವುಗಳನ್ನು ಮಾಡುತ್ತಾರೆ. ಇವುಗಳ ತಯಾರಿಕೆಯ ಕುರಿತು ಶಾಸ್ತ್ರೀಯ ತರಬೇತಿಗಾಗಿ 'ಅಂಕುರ' ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಭಾಗವತರ ಎರಡನೆ ಮಗಳು ಮಾದೇವಿ ಇವರ ಹೆಂಡತಿ. ಮಾದೇವಿ ಹಳ್ಳಿ ಹಾಡುಗಳನ್ನು ಚೆನ್ನಾಗಿ ಹಾಡುತ್ತಾಳೆ. ಹಾರ್ಮೋನಿಯಮ್ ನುಡಿಸುತ್ತಾಳೆ. ಗಂಡನ ಸ್ವಸ್ತಿಕ್ ಆರ್ಟ್ ಗ್ಯಾಲರಿಯಲ್ಲಿ ಸಕ್ರೀಯಳಾಗಿದ್ದಾಳೆ. ಮಗ ಅಕ್ಷಯ ಕಲಾ ಶಾಲೆಯಲ್ಲಿ ಓದುತ್ತಿದ್ದಾನೆ. ಮಗಳು ಅಂಜನಾ ಹೈಸ್ಕೂಲ್ ವಿದ್ಯಾರ್ಥಿನಿ. ಸಂಗೀತ ಕಲಿಯುತ್ತಿದ್ದಾಳೆ.



## ಯಾರೀ ಕಾಳು ಮಾವ?

ಈಗ ನಾವು ಬಾಳೆಹದ್ದಕ್ಕೆ ಹೋದರೆ ಅಲ್ಲೊಬ್ಬ 84 ವರ್ಷ ವಯಸ್ಸಿನ ಲವಲವಿಕೆಯ ತರುಣ ಬ್ರಹ್ಮಚಾರಿ ಕಾಣುತ್ತಾನೆ? ಬಹಳ ಜನ ಇವನನ್ನು ಕೃಷ್ಣ ಭಾಗವತರ ಅಣ್ಣನೋ ತಮ್ಮನೋ ಎಂದು ಊಹಿಸುತ್ತಾರೆ. ಈತನೆ ಕಾಳಿಂಗ ಹೆಗಡೆ. ಈತ ಭಾಗವತರ ಅರ್ಧ ಜೀವ!

ಎಳೆ ವಯಸ್ಸಿನಲ್ಲೇ ಭಾಗವತರ ತಂದೆ ತೀರಿಕೊಂಡಿದ್ದರಿಂದ ಮನೆ ಪರಿಸ್ಥಿತಿ ಡೋಲಾಯಮಾನವಾಯಿತು. ದಾಯಾದಿಗಳ ಕಾಟವೂ ಹೆಚ್ಚಾಯಿತು. ಆದ್ದರಿಂದ ಮನೆ ಉಸ್ತುವಾರಿ ನೋಡಲು ಜನ ಬೇಕಾಗಿತ್ತು. ಹಾಗಾಗಿ ಕಾನ್ಸೂರು ಬಣಗಿಯಿಂದ ಗಣಪತಿ ಹೆಗಡೆ ಎಂಬವರನ್ನು ಕರೆತಂದು ಅವರಿಗೆ ಒಂದು ಎಕರೆ ತೋಟ ಹಾಗೂ ಎರಡು ಎಕರೆ ಗದ್ದೆ ನೀಡಿ ಉಳಿಸಿಕೊಳ್ಳಲಾಯಿತು. ಈ ಗಣಪತಿ ಹೆಗಡೆ ಭಾಗವತರ ಮನೆಯ ಉಸ್ತುವಾರಿ ನೋಡುತ್ತಿದ್ದ. ನಂತರ ಭಾಗವತರ ತಾಯಿಯ ತಂಗಿ ಮಗಳನ್ನೇ ಗಣಪತಿಗೆ ಮದುವೆ ಮಾಡಿಸಲಾಯಿತು. ಭಾಗವತರ ಒಡನಾಟದಿಂದ ಗಣಪತಿ ಮದ್ದಳೆ ವಾದಕನಾಗಿಬಿಟ್ಟ. ಆತನಿಗೂ ಸಂಗೀತದ ಒಲವು ಹಿಡಿಯಿತು. ಈ ಗಣಪತಿಯ ಮಕ್ಕಳಲ್ಲಿ ನಾಗಭೂಷಣ ಇಂದು ಪ್ರಸಿದ್ಧ ಹಿಂದೂಸ್ಥಾನಿ ತರುಣ ಗಾಯಕ. ರೇಖಾ ಹೆಗಡೆ ಕೂಡ ಚೆನ್ನಾಗಿ ಹಾಡುತ್ತಾಳೆ. ಹಿರಿಯ ಮಗ ನಾರಾಯಣ ಒಳ್ಳೆಯ ಭಾಗವತ.

ಈ ಗಣಪತಿಯ ಸಹೋದರನೇ ಕಾಳಿಂಗ ಹೆಗಡೆ. ಕಾಳುಮಾವ. ತನ್ನ 10 ನೇ ವರ್ಷದಲ್ಲಿಯೇ ಭಾಗವತರ ಮನೆಯಲ್ಲಿಯೇ ಬಂದು ಉಳಿದ. ತನ್ನದೇ ಮನೆಯೆಂಬ ಸದ್ಭಾವದಿಂದ ಇಲ್ಲಿಯವರೆಗೆ ಸೇವೆ ಸಲ್ಲಿಸುತ್ತ ಬಂದಿದ್ದಾನೆ. ಈತ ಭಾಗವತರ ಬಲಗೈ. ಈತ ಮೊದಲು ವೇಷ ಕೂಡಾ ಮಾಡುತ್ತಿದ್ದ. ಭಾಗವತರ ಮನೆಯ ಕೃಷಿ ಜವಾಬ್ದಾರಿಯೆಲ್ಲ ಈತನದೆ. ಭಾಗವತರ ಮನೆ ಸುವ್ಯವಸ್ಥಿತವಾಗಿ ಉಳಿಯಲು ಕಾಳು ಮಾವನ ತ್ಯಾಗವೂ ಇದೆ. ಹಾಗಾಗಿ ಬಾಳೆಹದ್ದ ಎಂದಾಕ್ಷಣ ಕಾಳುಮಾವ ಎದುರಾಗುತ್ತಾನೆ.

ಹೀಗೆ ಬಾಳೆಹದ್ದ ಕೃಷ್ಣ ಭಾಗವತರದ್ದು ಸಾರ್ಥಕ ಜೀವನ. ಯಾವುದೇ ಪ್ರಚಾರ, ಫಲಾಪೇಕ್ಷೆ ಬಯಸದೇ ನಿಸ್ಪೃಹವಾಗಿ ಸೇವೆ ಸಲ್ಲಿಸಿದವರು. ಆ ಕಾರಣಕ್ಕಾಗೇ ಅವರು ಅನುಕರಣೀಯರೂ ಕೂಡಾ.

**ಭಾಗವತರು 75 ವರ್ಷಗಳ ವಯಸ್ಸನ್ನು ಪೂರ್ತಿಗೊಳಿಸುತ್ತಿರುವ ಈ ಶುಭ ಸಂದರ್ಭದಲ್ಲಿ ಅವರು ಶತಮಾನೋತ್ಸವವನ್ನು ಆಚರಿಸುವಂತಾಗಲಿ ಎಂಬ ಆಶಯದಿಂದ ಭರತನಹಳ್ಳಿ ಸೀಮಾ ವೈದಿಕರು ಅವರ ಪುರೋಹಿತರೊಡಗೂಡಿ ಭೀಮರಥ ಶಾಂತಿಯ ಕಾರ್ಯಕ್ರಮವನ್ನು ಸಂಮಾನ ಕಾರ್ಯಕ್ರಮದ ದಿನ ಮಾಡುತ್ತಿದ್ದಾರೆ.**

ಪುಟ ಪ್ರಾಯೋಜಕರು : **ಶ್ರೀ ಗೋಪಾಲಕೃಷ್ಣ ವೆಂಕಟ್ರಮಣ ಹೆಗಡೆ, ಕುಂಬ್ರಿ, ನಂದೊಳ್ಳಿ**



ಶ್ರೀ ಕೃಷ್ಣ ಭಾಗವತರು ಪರಿಶೋಧಿಸಿದ ಕೆಲವು

# ಯಕ್ಷಗಾನ ರಾಗಗಳು

ತಿಮ್ಮಪ್ಪ ಭಾಗವತ

ನಿರ್ವಹಣೆ : - ಜಿ. ಟಿ. ಭಟ್ಟ

*'ಅಬ್ಧಿಗಡಿಮಿತಿ ಉಂಟು ಬುದ್ಧಿಗಡಿಮಿತಿ ಇಲ್ಲ।*
*ಬುದ್ಧಿವಂತರು ನೋಡಿ ತಿದ್ದಿಕೊಂಬುದು ಕೂಡಿ।*
*ವಿದ್ಯೆ ಕಲಿತಾ ಪ್ರಾಜ್ಞ ವಿದ್ವಾಂಸರುಗಳ ಪಾದಪದ್ಮಗಳಿಗಭಿನಮಿಸುವೆ॥*
*ಶುದ್ಧ ಸ್ವರ ಸಂಗೀತ ಲಯ ತಾಳ ಗತಿ ವೃತ್ತ।*
*ಪದ್ಧತಿಯ ಪದ ಪ್ರಾಸ ರಾಗಭೇದಗಳೆಂಬ।*
*ಶಬ್ದವೆಂಬುದನರಿಯೆ ಶ್ರದ್ಧೆಯೊಳ್ ಹರಿಕಥಾ ಪದ್ಯಮಂ ವಿಸ್ತರಿಸುವೇ॥'*

ಈ ಒಂದು ವಾರ್ಧಿಕ ಷಟ್ಪದಿ (ಬರೆದ ಕವಿ ಭೀಮೇಶ) ಯಕ್ಷಗಾನದಲ್ಲಿ ಬಳಸುವ ಪದ್ಯಗಳ ರಸಾಭಿವ್ಯಕ್ತಿಗಾಗಿ, ಸ್ವರ, ರಾಗ, ಲಯ, ತಾಳ, ಗತಿ, ವೃತ್ತಗಳ ಮಹತ್ವವನ್ನು ಸೂಚ್ಯವಾಗಿ ತಿಳಿಸುತ್ತದೆ. 'ಯಕ್ಷಗಾನದಲ್ಲಿಯ ಭಾಗವತ' ಮೊದಲನೇ ವೇಷವೆಂದೇ ಇಂದಿಗೂ ಪರಿಗಣಿಸಲ್ಪಡುತ್ತಾನೆ. ಉತ್ತರ ಕನ್ನಡ ತಿಟ್ಟಿನಲ್ಲಿ ಭಾಗವತನೇ ಸೂತ್ರಧಾರನಾಗಿದ್ದ ಕಾಲ ಹಿಂದಿತ್ತು. ನವರಸಗಳನ್ನು ಅಭಿವ್ಯಕ್ತಗೊಳಿಸಲು ಆಧಾರವಾದ ಶ್ಲೋಕವು ಅವರಿಗೆ ಕಂಠಸ್ಥವಾಗಿತ್ತು.

*''ಸಾ', 'ರಿ' ವೀರೇಧ್ಭುತೇ ರೌದ್ರೆ,*
*'ಧ' ಭೀಬತ್ಸ ಭಯಾನಕೆ*
*ಕಾರ್ಯೆ 'ಗ' 'ನಿ' ತು ಕರುಣಾ*
*ಹಾಸ್ಯ ಶೃಂಗಾರಯೋ 'ಮ'ಪೌ॥'* ಇದುವೇ ಆ ಶ್ಲೋಕ.

ಸೃಷ್ಟಿಯ ಆದಿಯಲ್ಲಿ ಇದ್ದಿದ್ದು 'ಓಂ' (ಪ್ರಣವ) ಎಂಬ ನಾದ. ನಾದದಿಂದ ಸ್ವರಗಳ ಸೃಷ್ಟಿಯಾಯಿತು. ಸ್ವರಗಳ ವಿವಿಧ ವಿಕಲ್ಪ ಸಂಯೋಜನೆಗಳಿಂದ ರಾಗಗಳ ಸೃಷ್ಟಿಯಾದವು. ಯಕ್ಷಗಾನದ ಹಾಡುಗಳು, ಸಂಭಾಷಣಾ ರೂಪದಲ್ಲೂ, ಕಥೆಯನ್ನು ನಿರೂಪಿಸುವ ರೂಪದಲ್ಲಿ, ವಿವಿಧ ಭಾವಗಳನ್ನು, ಅಭಿವ್ಯಕ್ತಗೊಳಿಸುವ ರೂಪದಲ್ಲಿ, ಹೆಣೆಯಲ್ಪಟ್ಟಿವೆ. ಇಂಥ ಹಾಡುಗಳನ್ನು, ಹೇಗೆ ಹಾಡಬೇಕೆಂಬುದನ್ನು ನಿರ್ಧರಿಸುವ ಸಲುವಾಗಿ, ಪಾತ್ರಧಾರಿಯ ಆಳುತನ, ಸನ್ನಿವೇಶದ ಮಹತ್ವ, ನಟನ ಸಾಮರ್ಥ್ಯ ಅವನು ನಿರ್ವಹಿಸುವ ಪಾತ್ರಗಳ ಲಕ್ಷಣ, (ಪಾತ್ರವು ಋಷಿಯದ್ದೇ, ನಾರದನಂಥಹುದೇ, ಕೃಷ್ಣನೇ, ಸುಧನ್ವನಂಥ ವೀರ ಲಲಿತನೇ, ಅರ್ಜುನನಂಥ ಧೀರೋದಾತ್ತವೇ,



ಕರ್ಣನಂಥ ದುರಂತ ನಾಯಕನದೇ, ಧರ್ಮರಾಜನಂಥ ಸಾತ್ವಿಕವೇ, ಭೀಮ, ಜರಾಸಂಧರಂಥ ಧೀರೋದ್ಧತ್ತವೇ, ಕಂಸ, ಹಿಡಂಬರಂಥ ಧೀರವಿಕ್ರಮವೇ, ರಾವಣನಂಥ ಕ್ಲಿಷ್ಟವಾದ ಧಿರೋದ್ಧಾತ್ತವೇ, ಹಾಸ್ಯರಸ ಪ್ರಧಾನವಾದ, ಬ್ರಾಹ್ಮಣನದ್ದೆ, ಕಾವಲು ಭಟನದ್ದೇ, ಇತ್ಯಾದಿ) ಗಳನ್ನು ತಿಳಿದುಕೊಂಡು ನಿರ್ಧರಿಸಬೇಕಾಗಿದೆ.

ಶಾಸ್ತ್ರಕ್ಕೂ ವಿರುದ್ಧವಾಗದೇ, ರಸಾಭಿವ್ಯಕ್ತಿಗೂ ಅನುಕೂಲವಾಗುವಂತೆ ಭಾಗವತನು ಹಾಡಬೇಕಾದರೆ, ಮೇಲೆ ಉಲ್ಲೇಖಿಸಿದ ಶ್ಲೋಕವನ್ನು ಬಾಯಿಪಾಠ ಮಾಡಿ ಸ್ವರಸಾಧನೆ ಮಾಡುತ್ತ, ತಾಲೀಮು ನಡೆಸಬೇಕು.

ಬಾಳೆಹದ್ದ ಭಾಗವತರು ಯಕ್ಷಗಾನದಲ್ಲಿ ಹೆಸರಿಸಿದ ರಾಗಗಳ ಸರಿಗಮವನ್ನು ಕಂಡುಹಿಡಿಯಲು ಬಿಡಾರಂ ಕೃಷ್ಣಪ್ಪನವರ ಶಿಷ್ಯ ಆರ್. ಆರ್. ಕೇಶವಮೂರ್ತಿ ಬರೆದ ಪುಸ್ತಕ 'ರಾಗಕೋಶ' ವನ್ನು ಅಭ್ಯಾಸ ಮಾಡಿ, ಆ ರಾಗಗಳಲ್ಲಿ ಯಕ್ಷಗಾನದ ಹಾಡುಗಳನ್ನು ಹಾಡಿ, ಇಂಥಂಥ ರಾಗಗಳ ಸರಿಗಮ ಇಂಥವೇ ಎಂಬುದನ್ನು ನಿರ್ಧರಿಸಿದವರು. ಇವರಷ್ಟು ಸ್ಪಷ್ಟವಾಗಿ ಹಾಡುವವರನ್ನು ಬೇರೆಲ್ಲೂ ನಾವು ಕೇಳಿಯೇ ಇಲ್ಲ. ಈಗ ವಯಸ್ಸಿನಿಂದಾದ ಧ್ವನಿ ನಡುಗುತ್ತಿದ್ದರೂ ಯಾವುದೇ ಹಾಡಿನ ರೂಪ ಹೇಗಿದ್ದರೆ ಚೆನ್ನ ಎಂಬುದನ್ನು ತೋರಿಸಬಲ್ಲವರು. ಪ್ರಕೃತ ಮುಂದೆ ಕಾಣಿಸಿದ ರಾಗಗಳಾಗಲಿ, ಕೊಟ್ಟ ಉದಾಹರಣೆಗಳಾಗಲೀ, ಯಕ್ಷಗಾನದ ಭಾಗವತರು ಕಲಿಯುವ ಸಂಗತಿಗಳ ವ್ಯಾಪ್ತಿ, ವಿಸ್ತಾರ ಮತ್ತು ಆಳ ಎಷ್ಟಿದೆ ಎಂಬುದನ್ನು ತೋರಿಸುವ ಪ್ರಯತ್ನ ಮಾತ್ರ. ಈಗಾಗಲೇ ಭಾಗವತಿಕೆಯನ್ನು ಗಂಭೀರವಾಗಿ ತೆಗೆದುಕೊಂಡವರಿಗೆ, ಮಾರ್ಗದರ್ಶಿ ಯಾಗಬಲ್ಲದಾದರೂ, ಹೆಚ್ಚಿನ ಮಾಹಿತಿ ಸಂಗ್ರಹಣೆಗಾಗಿ ಭಾಗವತರಲ್ಲಿಗೇ ಬರುವುದು ಅನಿವಾರ್ಯವಾಗುತ್ತದೆ. ಆದರೆ, ಅಂಥ ಜಿಜ್ಞಾಸುಗಳನ್ನು ಕಂಡರೆ ಪ್ರೀತಿಯಿಂದ ಅವರನ್ನು ಬರಮಾಡಿ, ಮನೆಯಲ್ಲಿ ಊಟ ಹಾಕಿ, ಭಾಗವತರು ಅವರ ಕುತೂಹಲವನ್ನು ತಣಿಸುತ್ತಾರೆ ಎಂಬುದನ್ನು ಮಾತ್ರ ನಾವಿಲ್ಲಿ ಹೇಳಬಲ್ಲೆವು. (ಸ. ಪ. ಶುದ್ಧ ಸ್ವರಗಳು ಉಳಿದ ಸ್ವರಗಳು ಕರ್ನಾಟಕ ಪದ್ಧತಿಯಂತಿದ್ದರೂ ಪ್ರತಿಯೊಂದು ಸ್ವರದಲ್ಲಿ 4 ಭಾಗಗಳನ್ನು ಮಾಡಬೇಕಾಗುತ್ತದೆ ಎಂಬ ಅಭಿಪ್ರಾಯ ಭಾಗವತರದ್ದು.)

### 1) ಶ್ರೀರಾಗ

ಆರೋಹ : ಸ ರಿ$_2$ ಮ$_1$ ಪ ನಿ$_2$ ಸಾ

ಅವರೋಹ : ಸ ನಿ$_2$ ಪ ದ$_2$ ನಿ$_2$ ಪ ಮ$_1$ ರಿ$_2$ ಗ$_2$ ರಿ$_2$ ಸಾ

ಈ ರಾಗವನ್ನು ಭಕ್ತಿರಸಕ್ಕೆ ಬಳಸುವ ಕ್ರಮ ಇದೆ. ಉದಾ. : 'ಶ್ರೀ ಗಣಾಧಿಪತಯೇ ನಮಃ'. ಈ ರಾಗವನ್ನು ವಿಷಾದ ಸ್ಥಾಯಿ ಭಾವವಿರುವ ಆದರೆ ಶೃಂಗಾರ ಸಂಚಾರೀ ಭಾವದಲ್ಲಿರುವ ಪದ್ಯವನ್ನು ಹಾಡುವುದಕ್ಕೂ ಬಳಸಬಹುದು.

ಪುಟ ಪ್ರಾಯೋಜಕರು : **ಶ್ರೀ ವೆಂಕಟ್ರಮಣ ಶಿವರಾಮ ಭಟ್ಟ, ಮೊಟ್ಟೆಗದ್ದೆ**



ಉದಾ. : ತವರು ಮನೆಯಲ್ಲಿ ಅತ್ತಿಗೆ ರುಕ್ಮಿಣಿಯ ಕಟುಕ ನುಡಿಗಳನ್ನು ಕೇಳಿ ನೊಂದಿದ್ದ ಸುಭದ್ರೆ ಕೃಷ್ಣನ ಸಲುವಾಗಿ, ಕಾಮ್ಯಕಾವನಕ್ಕೆ ಬಂದು, ಅರ್ಜುನನಿಗೆ ಗಯ ಗಂಧರ್ವನನ್ನು ಇಟ್ಟುಕೊಂಡಿದ್ದು ತಪ್ಪೆಂದು ಹೇಳುತ್ತಾಳೆ. ಅದಕ್ಕೆ ಅವನು ತನ್ನ ಅನಿವಾರ್ಯತೆಯನ್ನು ನಿರೂಪಿಸಿದಾಗ ಉಂಡಮನೆಗೆ ಎರಡೆಣಿಸುವವರು ಇದ್ದರೆಷ್ಟು ಎಂದುಸುರಿ, ತನಗೆ ವಿಷವನ್ನು ಕೊಡಿ ಎಂದು ಹೇಳುತ್ತಾಳೆ. ಆಗ ಅರ್ಜುನ 'ನಿನಗೆ ವೈಧವ್ಯದ ದೀಕ್ಷೆ ಎಂಬ ವಿಷವನ್ನು ಕೊಡುತ್ತೇನೆಂದು' ಹೇಳಿ, ಕಠಾರಿಯಿಂದ ಇರಿದುಕೊಳ್ಳಲು ಉದ್ಯುಕ್ತನಾಗುತ್ತಾನೆ. ಭೀಮ ಅದನ್ನು ತಡೆದು, ರಣದಲ್ಲಿ ವಿಶ್ವಾಧಾರ ಮೂರ್ತಿಯ ಎದುರಿಸಿ, ಮುಕ್ತಿಪಡೆ ಎಂದು ಹೇಳುತ್ತಾನೆ. ಈ ಹಿನ್ನೆಲೆಯಲ್ಲಿ ಅರ್ಜುನನು ಸುಭದ್ರೆಯನ್ನು ಉದ್ದೇಶಿಸಿ ಹಾಡುವ ಪದ್ಯ ಇದೇ ರಾಗದ್ದು -

**'ಮಾನಿನಿ ಮಣಿಯೇ ಬಾರೆ ......'** - (ತ್ರಿವುಡೆ ತಾಳ) (ಕೃಷ್ಣಾರ್ಜುನ ಕಾಳಗ - ಹಳೆಮಕ್ಕಿ ರಾಮ)

2) **ಶಂಕರಾಭರಣ** (ಸಂಪೂರ್ಣವಾಗಿ)

ಆರೋಹ : ಸ ರಿ$_2$ ಗ$_3$ ಮ$_1$ ಪ ದ$_2$ ನಿ$_3$ ಸ

ಅವರೋಹ : ಸ ನಿ$_3$ ದ$_2$ ಪ ಮ$_1$ ಗ$_3$ ರಿ$_2$ ಸ

ಇದು ವ್ಯಕ್ತಪಡಿಸುವ ರಸಗಳು - ಶಾಂತ, ಕರುಣ (ಭಕ್ತಿ), ಶೃಂಗಾರ.

(ಟಿಪ್ಪಣಿ :- ಸಂಪೂರ್ಣ ರಾಗಗಳಲ್ಲಿ ಎಲ್ಲ ಸ್ವರಗಳೂ ಕೂಡಿರುವುದರಿಂದ, ಭಾಗವತನು ಒಂದೇ ರಾಗದ ಬೇರೆ ಬೇರೆ ಸ್ವರ - ಸಂಚಾರ ಕ್ರಮದಿಂದ ನವರಸಗಳನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಾಗುತ್ತದೆ. )

**1) ಶಾಂತ** ರಸದಲ್ಲಿ ಬಳಸುವ ಉದಾಹರಣೆ : ರಾಮ ಪಾದುಕೆಗಳನ್ನು ಭರತನಿಗೆ ಕೊಟ್ಟಾದ ನಂತರ ಪಂಚವಟಿ ಸಮೀಪದ ನೀರಿರುವ ಎಡೆಯಲ್ಲಿ ಪರ್ಣಕುಟಿರ ನಿರ್ಮಿಸಿದರು. ರಾಮ, ಲಕ್ಷ್ಮಣ, ಸೀತೆಯರು ಕಳೆಯಬೇಕಾದ ವನವಾಸದ ಅವಧಿ ಹದಿನಾಲ್ಕು ವರ್ಷ. ಅಷ್ಟೂ ವರ್ಷಗಳನ್ನು, ತಪಸ್ವಿಗಳ ಸಾನ್ನಿಧ್ಯದಲ್ಲಿ, ವನದ ಫಲಗಳ ಯಥೇಚ್ಛವಾದ ತಾಣದಲ್ಲಿ ಅವರುಗಳು ಕಳೆಯಬೇಕಿದೆ. ಭರತನು ರಾಮನ ಪ್ರತಿನಿಧಿಯಾಗಿ ರಾಜ್ಯಭಾರ ಮಾಡಲು ಒಪ್ಪಿ ಅಯೋಧ್ಯೆಗೆ ಮರಳಿಯಾಗಿದೆ. ಕೈಕೆಯಿಗೆ ತನ್ನ ತಪ್ಪಿನ ಅರಿವಾಗಿದೆ. ದೈವಸಂಕಲ್ಪವನ್ನು ಮೀರುವುದು ಯಾರಿಂದಲೂ ಸಾಧ್ಯವಿಲ್ಲವೆಂಬ ತೀರ್ಮಾನದಲ್ಲಿ ಪರಿಸ್ಥಿತಿಗಳನ್ನು ಒಪ್ಪಿ ಎಲ್ಲರೂ ಅನುಭವಿಸಲು ಸಿದ್ಧ ಮನಸ್ಕರಾಗಿದ್ದಾರೆ. ಕಾರಣ ಮನಸ್ಸಿನಲ್ಲಿರುವ ಭಾವ - ಶಾಂತತೆ. ಈ ಸಂದರ್ಭದಲ್ಲಿ ಹೇಳುವ ಹಾಡು -

**'ನೋಡಿ ನಿರ್ಮಲ ಜಲ ಸಮೀಪದಿ.......'** ( *ಪಂಚವಟಿ* - ಪ್ರಸಂಗಕರ್ತೃ ಪಾರ್ತಿಸುಬ್ಬ.

**2) ಭಕ್ತಿ** :- ಅಶ್ವಮೇಧದ ಕುದುರೆಯ ಬೆಂಗಾವಲಿಗೆ, ಪಾರ್ಥ ಕೃಷ್ಣರೇ ಹೋಗಿದ್ದರೂ,



ಕುದುರೆಯನ್ನು ಕಟ್ಟಿ ಸೌರಾಷ್ಟ್ರದ ಅಧಿಪತಿ ವೀರವರ್ಮನು ಪಾರ್ಥನನ್ನು ರಣದಲ್ಲಿ ಸೋಲಿಸುತ್ತಾನೆ. ಕೃಷ್ಣನೇ ಅವನೊಡನೆ ಯುದ್ಧಮಾಡಿ ಅವನ ಎದೆಗೆ ಒದ್ದಾಗ, ಆತನ ಜ್ಞಾನಚಕ್ಷು ತೆರೆಯುತ್ತದೆ. ಅಹಂಕಾರ ನಾಶವಾದ ಅವನ ಹಾಡು ಇಂತಿದೆ -

**'ಶ್ರೀ ಮನೋಹರ। ಜಗದ। ಸ್ವಾಮಿ ನೀನೆಲಾ॥'**

(ವೀರವರ್ಮ ವಿಜಯ -ಹೊಸ್ತೋಟ ಮಂಜುನಾಥ ಭಟ್ಟ)

**3) ಶೃಂಗಾರ :-** ಏಕಾದಶೀ ವ್ರತವನ್ನು ಚಾಚೂ ತಪ್ಪದೇ ಪಾಲಿಸುತ್ತಿರುವ ರಾಜ ರುಕ್ಮಾಂಗದನು ಬೇಟೆಗೆಂದು ಅರಣ್ಯಕ್ಕೆ ತೆರಳಿದಾಗ ಕೇಳಿದನೊಂದು ಗಾನವನ್ನು -

**'ಏನಿದು। ಗಾನ। ಏನಿದು॥'** - ರುಕ್ಮಾಂಗದ ಚರಿತ್ರೆ

(ದಿ. ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳಿಂದ ವಿರಚಿತ, ಆತ್ಮಾರಾಮ ಸಂಪಾದಿತ)

(ಸೂ. : ಇಂಥಿಂಥ ಸಂದರ್ಭಗಳನ್ನು ನೋಡಿ ಈ ರಾಗವನ್ನು ಬಳಸುವ ಬಗ್ಗೆ ಮೇಲ್ಕಂಡ ವಿವರಗಳನ್ನು ನೀಡಲಾಗಿದೆ.)

## 3) ನಾಟಿ

| | | |
|---|---|---|
| 1 ನೇ ಪಕ್ಷ ಆರೋಹ | : | ಸ ರಿ$_{3}$ ಗ$_{2}$ ಮ$_{1}$ ಪ ದ$_{2}$ ನಿ$_{3}$ ಸ |
| ಅವರೋಹ | : | ಸ ನಿ$_{3}$ ದ$_{2}$ ಪ ಮ$_{1}$ ಗ$_{2}$ ರಿ$_{3}$ ಸ |
| 2 ನೇ ಪಕ್ಷ ಆರೋಹ | : | ಸ ರಿ$_{3}$ ಮ$_{1}$ ಪ ನಿ$_{3}$ ಸ |
| ಅವರೋಹ | : | ಸ ನಿ$_{3}$ ದ$_{2}$ ಪ ಮ$_{1}$ ಗ$_{2}$ ರಿ$_{3}$ ಸ |

ಮೊದಲು ಯಕ್ಷಗಾನ ಬಯಲಾಟದ ಪ್ರಾರಂಭ ಕತ್ತಲಾವರಿಸಿದ ಕೂಡಲೆ ಆಗುತ್ತಿತ್ತು. ಹಾಗಾಗಿಯೇ 350-400 ಪದ್ಯಗಳು ಹೆಚ್ಚಿನ ಪ್ರಸಂಗಗಳಲ್ಲಿರುತ್ತಿದ್ದವು. ಇಂಥ ಸಂದರ್ಭದಲ್ಲಿ ಭಾಗವತರು ರಂಗಸ್ಥಳಕ್ಕೆ ಬಂದಾಗ ಹಾಡುವ ಪದ್ಯ ಭಕ್ತಿ ಭಾವದ್ದು. ಗಣಪತಿಯ ಸ್ತುತಿ :-

**'ಮುದದಿಂದ ನಿನ್ನ ಕೊಂ। ಡಾಡುವೆನು ಅನವರತ।** (ಝಂಪೆತಾಳ)

ಈ ನಾಟಿ ರಾಗವು ವೀರ ರಸವನ್ನೂ ಪ್ರತಿಪಾದಿಸುತ್ತದೆ.

ಭಾರತ ಯುದ್ಧವನ್ನು ನಿರ್ಣಯಿಸಿದ ನಂತರ ರಾತ್ರಿಯ ವೇಳೆಯಲ್ಲಿ ಕೌರವನು ಭೀಷ್ಮನನ್ನು ಸೇನಾಧಿಪತಿ ಪಟ್ಟಕ್ಕೆ ಒಪ್ಪಿಸಲು ಭೆಟ್ಟಿಯಾಗುತ್ತಾನೆ. ಅಲ್ಲಿ ಭೀಷ್ಮನು ಪಾಂಡವರೊಡನೆ ಸಂಧಿ ಮಾಡಿಕೊಳ್ಳೆಂದು ಬಹುವಾಗಿ ಹೇಳಿ ನೋಡುತ್ತಾನೆ. ಪಾಂಡವರ ಧರ್ಮಭೀರುತ್ವ ಹಾಗೂ ಅವರ ಶೌರ್ಯವನ್ನು ಹೊಗಳಿ, ತಾನಿರುವಾಗ ಹೀಗೆ ಹೋರಾಡುವುದು ಸರಿಯಲ್ಲ ಎಂದ ಭೀಷ್ಮನ ಮಾತಿಗೆ ಕೌರವನು ಸಿಡಿದು ಹೇಳುತ್ತಾನೆ -

***ಬಿಡದೆ ಖಾಡಾ ಖಾಡಿ ಹಳಚುವೆನು ರುಣವಿರಲು। ಪೊಡವಿ ಕೊಂಬರು ಪಾಂಡು ಸುತರು।***

(ಭೀಷ್ಮಾರ್ಜುನ ಕಾಳಗ - ದಿ. ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ)



**4) ಸೌರಾಷ್ಟ್ರ**

ಈ ರಾಗವನ್ನು ಕರುಣ (ದುಃಖ, ಭಕ್ತಿ) ಹಾಗೂ ಶಾಂತ ರಸಗಳ ಸನ್ನಿವೇಶದಲ್ಲಿ ಬಳಸುತ್ತಾರೆ. ಚೌಕಿಮನೆಯಲ್ಲಿ ಹಾಡುವ **'ಗಜಮುಖದವಗೆ ಗಣಪಂಗೆ ।**

**ದುಃಖ** : ಕಾರವ ಪಾಂಡವ ಸೇನೆಗಳು ಕುರುಕ್ಷೇತ್ರಕ್ಕೆ ಬಂದ ಸಮಯ. ಧರ್ಮರಾಜ, ವೈರಿ ಪಾಳಯದಲ್ಲಿರುವ ಭೀಷ್ಮನ ಆಶೀರ್ವಾದ ಪಡೆಯಲು ಹೋದಾಗಿನ ಸಂದರ್ಭದ ಪದ್ಯ-

**'ನೀವು ನಮ್ಮಲಿ ಮುಳಿದುನಿಂತರೆ । ನಾವು ಬದುಕುವುದೆಂತು ।**

(ಭೀಷ್ಮಪರ್ವ, ಪ್ರಸಂಗ ಕರ್ತೃ - ದೇವಿದಾಸ)

**5) ಕಾಂಭೋಧಿ**: ಈ ರಾಗ ಪ್ರತಿಪಾದಿಸುವ ರಸ ಭಕ್ತಿ, ಶಾಂತ, ಶೃಂಗಾರ.

ಆರೋಹ : ಸ ರಿ$_2$ ಗ$_3$ ಮ$_1$ ಪ ದ$_2$ ಸಾ

ಅವರೋಹ : ಸ ನಿ$_2$ ದ$_3$ ಪ ಮ$_1$ ಗ$_3$ ರಿ$_2$ ಸ

**ಭಕ್ತಿ**:- ಸಭಾ ಲಕ್ಷಣದ ಪದ್ಯ - **ಆದೌ ದೇವಕಿದೇವಿಗರ್ಭಜನನಾ ।**

8 ದಿನಗಳ ಕಾಲ ಮಹಾಭಾರತ ಯುದ್ಧ ಮಾಡಿದ ಭೀಷ್ಮನಿಗೆ 9 ನೆಯ ದಿನ ರಥಾರೂಡ ಕೃಷ್ಣ ಅರ್ಜುನರ ದರ್ಶನವಾಗುತ್ತದೆ. ಆಗ - **'ಚಿನುಮಯನೆ ಲಾಲಿಪುದು । ಪುಣ್ಯವಂತಗೆ ....'**

(ಭೀಷ್ಮಾರ್ಜುನ - ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ)

**ಶಾಂತ :-** ಬಲಿ ಚಕ್ರವರ್ತಿ ದಾನ ಮಾಡುವ ಸಂದರ್ಭದಲ್ಲಿ ಶುಕ್ರಾಚಾರ್ಯರು ತಡೆಯುತ್ತಾರೆ. ಆಗ ಅವನು ತನ್ನ ಸತಿ ವಿಂಧ್ಯಾವಳಿಯನ್ನು ಪ್ರಶ್ನಿಸುತ್ತಾನೆ. ಈ ಹಂತದಲ್ಲಿ ಅವನ ನಿರ್ಧಾರ ಅಚಲ. ಹಾಗಾಗಿಯೇ ಅವನ ಮನಸ್ಸು ಗಾಳಿಯಲ್ಲಿ ಅಲ್ಲಾಡದ ದೀಪ.

ಪದ್ಯ - **'........ ವರಮನೋಹರೆ ನಿನ್ನ ಮತಗಳೇನಹುದು'** (ವಾಮನ ಚರಿತ್ರೆ)

**ಶೃಂಗಾರ :-** ದೇವತೆಗಳೆಲ್ಲ ಕೂಡಿ, ರುಕ್ಮಾಂಗದನು ಆಚರಿಸುವ ಏಕಾದಶೀ ವ್ರತದಲ್ಲಿನ ನಿಷ್ಠೆಯನ್ನು ಪರೀಕ್ಷಿಸಲೆಂದೇ ಕಳಿಸಿದ ಮೋಹಿನಿ ಕಾರ್ತಿಕ ಏಕಾದಶಿಯಂದು ಅವನ ವ್ರತದಲ್ಲಿಯ ನಿಷ್ಠೆಯನ್ನು ಪರೀಕ್ಷಿಸಲು ಸಜ್ಜಾಗುತ್ತಾಳೆ. ಇಲ್ಲಿನ ಶೃಂಗಾರ ಅವಳ ಕೃತಿಯಲ್ಲಿದೆ ವಿನಃ ಸಂಭಾಷಣೆಯಲ್ಲಿಲ್ಲ.

'ಧರಿಸಿ ಸರ್ವಾಭರಣ ಪೀತಾಂ । ಬರವನಿರಿವಿಡಿದುಟ್ಟು..... '( ರುಕ್ಮಾಂಗದ ಚರಿತ್ರೆ)

**6) ಕೇದಾರಗೌಳ** - ಈ ರಾಗ ಪ್ರತಿಪಾದಿಸುವ ರಸ ಶೃಂಗಾರ, ಶಾಂತ, ವೀರ.

ಆರೋಹ : ಸ ರೆ$_2$ ಮ$_1$ ಪ ನಿ$_3$ ಸ

ಸ ನಿ$_2$ ದ$_2$ ಪ ಮ$_1$ ಗ$_3$ ರಿ$_2$ ಸ

**ಶೃಂಗಾರ :-** ಕೀಚಕನು ಅಕ್ಕನ ಸಭೆಗೆ ಬಂದಾಗ ಸೈರಂಧ್ರಿಯನ್ನು ಕಂಡು, ತಾನೇ ತಾನಾಗಿ ಉದ್ಗರಿಸಿದ ಭಾವನೆಗೆ ತಕ್ಕುದಾದ ಶೃಂಗಾರ. **'ಇವಳ್ಯಾವ ಲೋಕದ ಸತಿಯೋ !'**(ಕೀಚಕ ವಧೆ)

ಪುಟ ಪ್ರಾಯೋಜಕರು : **ಶ್ರೀ ಎಂ. ಆರ್. ಹೆಗಡೆ, ತಾರೆಹಳ್ಳಿ**



**ವೀರ :** ಸುಧನ್ವ ಯುದ್ಧದ ವೇಷದಲ್ಲಿಯೇ ತನ್ನ ಮಡದಿಯನ್ನು ಭೇಟಿ ಮಾಡಿದಾಗ ಅವಳು ತಡೆದು ತನ್ನನ್ನು ಕೂಡು ಎಂದು ಕೇಳುತ್ತಾಳೆ. ಆಗ ಸುಧನ್ವಹೇಳುವ ಪದ್ಯ -

**'ನಿನ್ನೊಡನೆ ದಿನಕಳೆಯಲು ।'** (ಸುಧನ್ವಾರ್ಜುನ)

**ಶಾಂತ :** ರಭಸವಿಲ್ಲದೆ ಶಾಂತವಾಗಿ ಹರಿಯುವ ನದಿಯಂತೆ ಕೆಲವರ ಜೀವನ ಇರುತ್ತದೆ. ಇನ್ನು ಕೆಲವರು ಕೆಲವು ಸಂದರ್ಭಗಳಲ್ಲಿ ಹಾಗಿರುತ್ತಾರೆ. ಪಂಚವಟಿಯ ಎಲೆಮನೆಯಲ್ಲಿ ರಾಮ ಸೀತೆಯರಿದ್ದಾಗಿನ ಲಕ್ಷ್ಮಣನ ಬದುಕು ಹಾಗೆ. ಆ ಸಂದರ್ಭದ ಪದ್ಯ -

**'ವನದ ಫಲಗಳ ಕೊಯ್ದು ಲಕ್ಷ್ಮಣ ।** (ಪಂಚವಟಿ - ಪಾರ್ತಿ ಸುಬ್ಬ)

## 7) ತೋಡಿ

ಪ್ರತಿಪಾದನೆ ಮಾಡುವ ರಸಗಳು ಕರುಣ , ವೀರ, ಅದ್ಭುತ.

ಆರೋಹ : ಸ ರಿ$_1$ ಗ$_2$ ಮ$_1$ ಪ ದ$_1$ ನಿ$_2$ ಸ

ಸ ನಿ$_2$ ದ$_1$ ಪ ಮ$_1$ ಗ$_2$ ರಿ$_1$ ಸ

**ಕರುಣ :** ಶೂರ್ಪನಖಿಯ ಘೋರ ಸ್ವರವನ್ನು ಕೇಳಿ ಸೀತೆ ಹೆದರಿ, ರಾಘವನೊಡನೆ ತಾವು ಮಾಡಿದ ತಪ್ಪನ್ನು ಹಳಿದುಕೊಳ್ಳುತ್ತಾ ಹೇಳುವ ಪದ್ಯ -

**'ವ್ಯರ್ಥವಾಗಿ ಬಂದೆವು । ಮುನಿಪೋತ್ತಮರ ಮಾತ ಮೀರಿ ।'** (ಪಂಚವಟಿ- ಪಾರ್ತಿಸುಬ್ಬ)

**ಭಕ್ತಿ :-** ಹೊರಗಿನವರು ಯಾರೋ ಬಂದರೆಂಬುದನ್ನು ನೋಡಿಕೊಂಡು ಬರಲು ಹನುಮಂತನನ್ನು ಸುಗ್ರೀವ ಕಳಿಸುತ್ತಾನೆ. ಹನುಮಂತನು ರಾಮ, ಲಕ್ಷ್ಮಣರನ್ನು ಕರೆದುಕೊಂಡು ಬಂದು ಅವರನ್ನು ಪರಿಚಯಿಸಿದಾಗ ಸುಗ್ರೀವ ಹೇಳುವ ಹಾಡು -

**'ರಾಮ ಹರೇ ರಾಮ । '** (ವಾಲಿಸುಗ್ರೀವಕಾಳಗ -ಪಾರ್ತಿ ಸುಬ್ಬ )

**ವೀರರಸ :** ವೃಷಕೇತು, ಅನುಸಾಲ್ವರನ್ನೆಲ್ಲ ಕದನದಲ್ಲಿ ಸದೆಬಡಿದ ಸುಧನ್ವನ ಬಳಿಗೆ, 'ಯಾರಿಗಂಜುವನಲ್ಲ'ವೆಂದು ಅರ್ಜುನನೇ ರಥವೇರಿ ನಡೆದು ತಂದಾಗ, 'ನೀನು ಅರ್ಜುನನೇ ಆಗಿದ್ದರೆ ಬಿಟ್ಟು ಹೋಗುವೆಯೋ ಅಥವಾ ಬಿಡಿಸುವೆನೆಂಬ ಬಿಂಕವೋ' ಎಂದು ಸುಧನ್ವ ಅರ್ಜುನನ್ನು ಛೇಡಿಸುತ್ತಾನೆ. ಆಗ ಅರ್ಜುನನು ಹೇಳುವ ಹಾಡು -

**' ಹುಡುಗ ನೀನು ನಿನ್ನ ಬೆಡಗಿನ ನುಡಿಯ ಕಟ್ಟಿಡು ...... '** (ಸುಧನ್ವಾರ್ಜುನ ಕಾಳಗ )

## 8) ಮಾಯಾಮಾಳವ ಗೌಳ

ಆರೋಹ : ಸ ರಿ$_1$ ಗ$_3$ ಮ$_1$ ಪ ದ$_1$ ನಿ$_3$ ಸ

ಅವರೋಹ : ಸ ನಿ$_3$ ದ$_1$ ಪ ಮ$_1$ ಗ$_3$ ರಿ$_1$ ಸ

**ಕರುಣ :** ಭೀಷ್ಮರು ಹಸ್ತಿನಾವತಿಯ ದೊರೆಯ ಅನ್ನವನ್ನು ತಿಂದ ಕಾರಣಕ್ಕಾಗಿ ಸೇನಾಧಿಪತ್ಯವನ್ನು ವಹಿಸಿಕೊಂಡು ಯುದ್ಧ ಮಾಡುತ್ತಿದ್ದರೂ ಪಾಂಡವರ ಮೇಲಿನ ಮಮತೆ



ಕಡಿಮೆಯಾಗಿರಲಿಲ್ಲ. ಆದರೆ, ಅವರೀರ್ವರ ಜಗಳವನ್ನು ನಂದಿಸಲು ಸಾಧ್ಯವಾಗಲಿಲ್ಲ ಎಂಬ ಕೊರಗು ಅವನನ್ನು ಸದಾ ಸುಡುತ್ತಿತ್ತು. ಈ ಮಾನಸಿಕ ಕ್ಷೋಭೆಯಿಂದ ಬಳಲುತ್ತಿದ್ದ ಅವನು ಸಾರಥಿ ಕೃಷ್ಣನಿಗೆ ಅಸಿರತ್ನ ಶರದಿಂದ ಹೊಡೆದು ಗಾಯ ಮಾಡಿದಾಗ, ಕೃಷ್ಣ ಚಕ್ರವನ್ನು ಹಿಡಿದು ಅವರನ್ನು ತರಿಯಲು ಬಂದಾಗ ಹೇಳಿದ ಪದ್ಯ

- **'ಇಂದಿರೇಶನೇ ನಾನು ಇವರ ಜಗಳವನ್ನು।** (ಭೀಷ್ಮಪರ್ವ)

ಅಂತರ್ಯದಲ್ಲಿ ಕುರುರಾಯನಿಗೆ ಅನ್ಯಾಯವೆಸಗಿದಂತಾಯ್ತು ಎಂಬುದು ಗೊತ್ತಿದ್ದರೂ, ಬಹಿರಂಗದಲ್ಲಿ ತೊಟ್ಟಂಬ ತೊಡೆನೆಂದು ಮಾತೆಗೆ ಭಾಷೆಯನಿತ್ತುದರಿಂದ ಸರ್ಪಾಸ್ತ್ರದಿಂದ ಅರ್ಜುನನ ಕಿರೀಟ ಮಾತ್ರ ಹಾರಿದಾಗ ಪುನಃ ಬಾಣವನ್ನು ತೊಡೆನೆಂದು ಶಲ್ಯನಿಗೆ, ಬಾಣವನ್ನು ಮರಳಿ ತೊಡದಿರುವ ಕಾರಣವನ್ನು ಕರ್ಣ ಹೇಳುವ ಪದ್ಯ-

**'ಮಾತೆಗಿತ್ತೆನು ಭಾಷೆಯನು ......'** (ಕರ್ಣಪರ್ವ-ಶ್ರೀ ವೆಂಕಟಾಚಲ ಭಟ್ಟ ಸಂಪಾದಿತ)

## 9) ಮಲಹರಿ

ಸ ರಿ$_1$ ಮ$_1$ ಪ ದ$_1$ ಸಾ

ಸಾ ದ$_1$ ಪ ಮ$_1$ ಗ$_3$ ರಿ$_1$ ಸಾ.

ಈ ರಾಗ ಪ್ರಧಾನವಾಗಿ ಕರುಣಾರಸ (ಭಕ್ತಿ ಮತ್ತು ದುಃಖ) ವನ್ನು ವ್ಯಕ್ತಗೊಳಿಸುತ್ತದೆ.

ಜೀವಿಯ ಜನ್ಮದ ಸಾರ್ಥಕ್ಯ ಮೋಕ್ಷ ಪಡೆಯುವುದರಲ್ಲಿ. ತನ್ನ ಬಲದಲ್ಲಿ ಅತೀವ ವಿಶ್ವಾಸವಿದ್ದ ವಾಲಿಗೆ ಸುಗ್ರೀವನೊಡನೆ ಯುದ್ಧ ಮಾಡುತ್ತಿರುವಾಗ ರಾಮನ ಬಾಣ ತಾಗಿದ ಮೇಲೆ ಜ್ಞಾನೋದಯವಾಯಿತು. ತನ್ನ ತಪ್ಪನ್ನು ಒಪ್ಪಿಕೊಂಡ ವಾಲಿಗೆ ಜೀವದಾನ ಕೊಡಲು ಸಿದ್ಧನಾದ ರಾಮನನ್ನು ಕುರಿತು ಭಕ್ತಿಯಿಂದ ಹೇಳುವ ಹಾಡು -

**'ರಾಮ ನಿನ್ನ ಬಾಣ ತಾಗಿದ ಮೇಲೆ......'** (ವಾಲಿ ಸುಗ್ರೀವ ಕಾಳಗ - ಪಾರ್ತಿಸುಬ್ಬ)

**ಕರುಣ :** ಪಾಂಡವರು ತನ್ನ ತಮ್ಮಂದಿರೆಂದು ಗೊತ್ತಾದ ಮೇಲೂ ಕುರುರಾಯನ ಋಣವನ್ನು ತೀರಿಸಲು ತನ್ನ ಮಗ ವೃಷಸೇನನನ್ನು ಬಲಿಗೊಟ್ಟ ಕರ್ಣ. ಶಲ್ಯ ಸಾರಥಿಯಾದಾಗ ತಾಯಿಗೆ ಕೊಟ್ಟ ಮಾತನ್ನು ಉಳಿಸಲು ಸರ್ಪಬಾಣವನ್ನು ಮರಳಿ ತೊಡದೇ ಉಳಿದ. ಸಾರಥ್ಯವನ್ನು ಶಲ್ಯ ಬಿಟ್ಟು ಹೋದನಂತರ ರಥವೂ ಭೂಮಿಯಲ್ಲಿ ಹೂತುಹೋಗಿ ಎಲ್ಲ ರೀತಿಯಿಂದಲೂ ಕರ್ಣ ಸೋತು ಹೋದಾಗ ಈ ಹಾಡು ಬರುತ್ತದೆ-

**'ಕುರುರಾಯನೈಶ್ವರ್ಯ ತೊಲಗಿತೇ ಶಿವಶಿವಾ....'** (ಕರ್ಣಪರ್ವ)

## 10) ಸಾವೇರಿ - ಈ ರಾಗ ಪ್ರತಿಪಾದಿಸುವ ರಸ ಕರುಣ (ಭಕ್ತಿ).

ಆರೋಹ : ಸ ರಿ$_1$ ಮ$_1$ ಪ ದ$_1$ ಸಾ

ಸಾ ನಿ$_3$ ದ$_1$ ಪ ಮ$_1$ ಗ$_3$ ರಿ$_1$ ಸ



**ಭಕ್ತಿ :** ಭಾರತ ಯುದ್ಧದ ಒಂಬತ್ತನೆಯ ದಿನ ಧನಂಜಯನನ್ನು ಗೆಲ್ಲುತ್ತೇನೆ ಹಾಗೂ ಚಕ್ರವನ್ನು ಹಿಡಿಯೆನೆಂದು ಹೇಳಿದ ಕೃಷ್ಣನು ಚಕ್ರ ಧರಿಸುವಂತೆ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದ ಭೀಷ್ಮ. ಅಸಿರತ್ನ ಶರವನ್ನು ಸಾರಥಿಯ (ಶ್ರೀಕೃಷ್ಣನ) ಹಣೆಗೆ ಹೊಡೆದಾಗ ಕೃಷ್ಣ ಚಕ್ರ ಧರಿಸಿ, ಭೀಷ್ಮನನ್ನು ಕೊಲ್ಲುತ್ತೇನೆಂದು ಕಡು ಮಹೋಗ್ರದಿ ರಥವನ್ನು ಇಳಿಯುತ್ತಾನೆ. ಆಗ ಭೀಷ್ಮನ ಬಾಯಿಂದ ಕೃಷ್ಣನ ಪರವಾದ ಸ್ತುತಿ ಬರುತ್ತದೆ.

**'ಅಕ್ಷಯಾತ್ಮನೆ ಕೇಶವ । ಸುರನರ ಭುಜಗ । ಪಕ್ಷಿ ವಂದಿತ ಮಾಧವ ॥'** (ಭೀಷ್ಮಾರ್ಜುನ ಕಾಳಗ - ದಿ. ನರಸಿಂಹ ಶಾಸ್ತ್ರಿ)

**ಕರುಣ :** ಕರ್ಣನು ಅಸಹಾಯಕ ಸ್ಥಿತಿಯಲ್ಲಿದ್ದಾನೆ. ಪರಶುರಾಮನ ಶಾಪ, ಸಾರತಿಯ ನಿರ್ಗಮನ, ಕುಂತಿಯ ತಂತ್ರ, ಭೂಮಿಯಲ್ಲಿ ಹೂತುಹೋದ ರಥ ಇವುಗಳನ್ನೆಲ್ಲ ನೆನೆದು ತಾನು ಹೇಗೆ ಕೌರವನನ್ನು ಕಾಪಾಡಲಾರದೇ ಹೋದೆ ಎಂಬುದನ್ನು ಚಿಂತಿಸುವ ಸಂದರ್ಭದ ಪದ್ಯ-

**'ಎನ್ನ ಕುಲವ ಕೃಷ್ಣನು । ಎಚ್ಚರಿಸುತ್ತ । ಎನ್ನೊಡೆಯನ ಕೊಂದನು ॥ '**
(ಕರ್ಣಪರ್ವ -ದಿ. ವೆಂಕಟಾಚಲ ಭಟ್ಟ ಸಂಪಾದಿತ)

## 11 ) ಶುದ್ಧ ಸಾವೇರಿ

ಆರೋಹ : ಸ ರಿ$_2$ ಮ$_1$ ಪ ದ$_3$ ಸಾ

ಸಾ ದ$_2$ ಪ ಮ$_1$ ರಿ$_2$ ಸಾ

ಈ ರಾಗ ಶೃಂಗಾರ ಹಾಗೂ ಭಕ್ತಿ ರಸಗಳವನ್ನು ವಿಶೇಷವಾಗಿ ಪ್ರತಿಪಾದಿಸುತ್ತದೆ.

**ಶೃಂಗಾರ ರಸ :** 'ಭಕ್ತ ವಿಜಯ' ಮೂಲ ಭಾರತ ಕಥೆಯಲ್ಲಿ ಇಲ್ಲವಾದರೂ ಹಳೆಯ ಪ್ರಸಂಗಗಳಲ್ಲಿ ಒಂದು. ದೇವೇಂದ್ರನ ಆಸ್ಥಾನದಲ್ಲಿ ಊರ್ವಶಿ ರಂಭಾದಿ ಅಪ್ಸರೆಯು ನಾಟ್ಯವನ್ನು ಆಡುವ ದೃಶ್ಯ. ದೂರ್ವಾಸರು ವೀಕ್ಷಿಸುತ್ತಾರೆ ಇದನ್ನು . ನಾಟ್ಯಕ್ಕಾಗಿ ಹಾಡುವ ಪದ-

**'ಆಡಿದರ್ ನಾಟ್ಯವನು । ಸುದತಿಯರ್ ಆಡಿದರ್....'** (ಭಕ್ತ ವಿಜಯ)

**ಭಕ್ತಿ:** ರಣರಂಗದಲ್ಲಿ ಕೃಷ್ಣನು ಅರ್ಜುನನ ಸಾರಥಿಯಾದುದನ್ನು ನೋಡಿ ಭೀಷ್ಮನು ಶರಣರನ್ನು ಪೊರೆಯುವ ಅವನ ಗುಣಗಳನ್ನು ಜಿಜ್ಞಾಸಿಸುತ್ತ ಹೊಗಳುವ ಪದ್ಯಗಳಲ್ಲೊಂದು-

**'ಧರಿಸಿದೆಯ ಮತ್ಸ್ಯಾದಿ ರೂಪುಗಳ ನೋಡೀಗ ।'** (ಭೀಷ್ಮಾರ್ಜುನ)

## 12 ) ಭೂಪಾಳಿ

ಆರೋಹ : ಸ ರಿ$_1$ ಗ$_2$ ಪ ದ$_1$ ಸಾ

ಸ ದ$_1$ ಪ ಗ$_2$ ರಿ$_1$ ಸಾ

ಪ್ರತಿಪಾದಿಸುವ ರಸಗಳು ಕರುಣ (ಭಕ್ತಿ, ದುಃಖ.)

**ಭಕ್ತಿ:** ವಾಲಿ ಸುಗ್ರೀವರು ಆರನೇ ಬಾರಿ ಪರಸ್ಪರ ಎದುರಾಗುತ್ತಾರೆ. ಸುಗ್ರೀವ ಸಖನಾದ



ರಾಮ, ಶರಣಂಗೆ ಮರಣ ಕಾಲ ಬಂದಿದೆ ಎಂದು ಮರೆಯಲ್ಲಿ ನಿಂತು ಬಾಣ ಹೊಡೆದಾಗ ವಾಲಿ ಅವನನ್ನು ಜರೆಯುತ್ತಾನೆ. ರಾಮ ತನ್ನ ಕೃತಿಯನ್ನು ಸಮರ್ಥಿಸಿಕೊಂಡು 'ಕಾಯದಾಸೆ ಇದ್ದರೆ ಹೇಳು, ಮರುಜೀವ ನೀಡುತ್ತೇನೆ' ಎಂದು ಹೇಳುತ್ತಾನೆ. ಆಗ ವಾಲಿಗೆ ಈತ ಸಾಕ್ಷಾತ್ ಶ್ರೀಮನ್ನಾರಾಯಣನೆಂಬುದು ಗೊತ್ತಾಗುತ್ತದೆ. ಆ ಸಂದರ್ಭದಲ್ಲಿನ ಒಂದು ಹಾಡು-

**'ಕೇಳು ಮುರರಿಪು । ಕಮಲಲೋಚನ । '** (ವಾಲಿ ಸುಗ್ರೀವ ಕಾಳಗ - ಪಾರ್ತಿಸುಬ್ಬ)

**ದುಃಖ** : ಕರ್ಣನನ್ನು ಶಲ್ಯ ಬಿಟ್ಟುಹೋದ ಸಂದರ್ಭ. ರಕ್ತದ ಧಾರೆಯಿಂದ ಭೂಮಿ ಕೆಸರಾದಾಗ ರಥದ ಗಾಲಿ ಹುಗಿದು ಹೋಯಿತು. ಇದನ್ನು ವರ್ಣಿಸುವ ಹಾಡು-

**'ರುದಿರತೋಯದಿ ಭೂಮಿ ಕೆಸರಾಯ್ತು....'**. (ಕರ್ಣಪರ್ವ - ಸಂ. ವೆಂಕಟಾಚಲ ಭಟ್ಟ)

## 13) ರೇಗುಪ್ತಿ

ಆರೋಹ : ಸ ರಿ$_1$ ಗ$_3$ ಪ ದ$_1$ ಸಾ

ಅವರೋಹ : ಸ ದ$_1$ ಪ ಗ$_3$ ರಿ$_1$ ಸಾ

ಪ್ರತಿಪಾದಿಸುವ ರಸಗಳು ಪ್ರಧಾನವಾಗಿ ಕರುಣ. (ಭಕ್ತಿ, ದುಃಖ.)

**ಭಕ್ತಿ** : ಕಾರ್ತಿಕ ಏಕಾದಶಿಯಂದು ಭಕ್ತಿಬಾವದಿಂದ ದೃಢವೃತಿ ರುಕ್ಮಾಂಗದನು ದೇವರನ್ನು ಸ್ತುತಿಸುತ್ತಾನೆ. ಆ ಸಂದರ್ಭದಲ್ಲಿ **'ಅಖಿಲಾಂಡ ಕೋಟಿ ನಾಯಕನೆ .....'**(ರುಕ್ಮಾಂಗದ ಚರಿತ್ರೆ) ಎಂಬ ಹಾಡನ್ನು ಭಾಗವತನು ಹೇಳುತ್ತಾನೆ.

**ಕರುಣ** (ದುಃಖ) : ಕೃಷ್ಣ ಕೌರವನಿಂದ ಸಂಗ್ರಾಮದ ವೀಳ್ಯವನ್ನು ತೆಗೆದುಕೊಳ್ಳುತ್ತಾನೆ. ನಂತರ ಕರ್ಣನನ್ನು ಏಕಾಂತದಲ್ಲಿ ಕರೆದು, ಆತನ ಹುಟ್ಟನ್ನು ತಿಳಿಸಿ, ನಿನ್ನ ತಾಯಿ ಕುಂತಿ ನಿನ್ನನ್ನು ಭೇಟಿಯಾಗುತ್ತಾಳೆ ಎಂದೂ ಸೂಚಿಸುತ್ತಾನೆ. ಹಾಗಾಗಿ ಒಂದು ರವಿವಾರ ದಿನ ಗಂಗಾ ತೀರದಲ್ಲಿ ತಾಯಿಗಾಗಿ ಕಾಯುತ್ತ ನಿಂತ ಕರ್ಣನನ್ನು ಕುಂತಿ ನೋಡುತ್ತಾಳೆ. ದುಃಖ ಉಮ್ಮಳಿಸಿ ಬರುತ್ತದೆ-

**'ನೋಡಿದಳು ಬಾಲಕನ ಗುಣಗಳ । '** (ಕೃಷ್ಣ ಸಂಧಾನ - ದೇವಿದಾಸ)

## 14) ಮೋಹನ

ಆರೋಹ : ಸ ರಿ$_2$ ಗ$_3$ ಪ ದ$_2$ ಸಾ

ಅವರೋಹ : ಸ ದ$_2$ ಪ ಗ$_3$ ರಿ$_2$ ಸಾ

ಔಡವ ವರ್ಗದ ಈ ರಾಗಕ್ಕೆ ಇದಕ್ಕಿರುವ ಸಾಮರ್ಥ್ಯದಿಂದಾಗಿ ಅತ್ಯಂತ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಚೆನ್ನಾಗಿ ಸಾಧನೆ ಮಾಡಿದ ಭಾಗವತ ಇದನ್ನು ಎಲ್ಲ ರಸಗಳ ಅಭಿವ್ಯಕ್ತಿಗೂ ಬಳಸಿಕೊಳ್ಳಬಲ್ಲ. ಅದಕ್ಕಾಗಿಯೇ ಎಲ್ಲೆಂದರಲ್ಲಿ ಈ ರಾಗವನ್ನು ಬಳಸಿಕೊಳ್ಳುತ್ತಾರೆ. ಆದರೆ ಸ್ವರ ಸಂಚಾರದ ವೇಳೆಯಲ್ಲಿ ಭಾಗವತನಾದವನು ಪ್ರಸ್ತಾವನೆಯಲ್ಲಿ ಸೂಚಿಸಿದ **'ಸಾ ರಿ ವೀರಾದ್ಭುತೇ... '** ಶ್ಲೋಕವನ್ನು ಚೆನ್ನಾಗಿ ಮನನ ಮಾಡಿಕೊಳ್ಳಬೇಕು. ಈ



ರಾಗದಲ್ಲಿ **'ಸ'** ಮತ್ತು **'ರಿ'** ಸ್ವರಗಳಿರುವುದರಿಂದ ಇವುಗಳನ್ನು ಯೋಗ್ಯವಾಗಿ ಬಳಸಿ, ವೀರ ಅದ್ಭುತ ಹಾಗೂ ರೌದ್ರ ರಸಗಳನ್ನು ಅಭಿವ್ಯಕ್ತಗೊಳಿಸಬಹುದು. **'ದ'** ಸ್ವರ ಇದ್ದುದರಿಂದ ಭೀಭತ್ಸ ಹಾಗೂ ಭಯಾನಕ ರಸಗಳನ್ನು ಪ್ರಕಟಪಡಿಸಬಹುದು. **'ಗ'** ಸ್ವರದ ಸಹಾಯದಿಂದ ಕರುಣಾ ರಸವನ್ನು ಅಭಿವ್ಯಕ್ತಗೊಳಿಸುವ ಸಾಧ್ಯತೆ ಇದ್ದರೆ, **'ಪ'** ಇದ್ದುದರಿಂದ ಶೃಂಗಾರ ಹಾಗೂ ಹಾಸ್ಯ ರಸಗಳನ್ನು ಪ್ರತಿಪಾದಿಸಬಹುದು. ಶಾಂತರಸವೆಂದರೆ ಒಂದು ಭಾವದಲ್ಲಿ ಇನ್ನೇನೂ ಬೇಡ ಎಂಬ ಸಂತೃಪ್ತಭಾವದ ಸ್ಥಿತಿ. ಇದನ್ನು ಈ ರಾಗ ಹಾಡುವುದರಿಂದ ಚೆನ್ನಾಗಿ ಪ್ರಕಟಿಸಬಹುದು.

## 15) ವಲಜಿ

ಆರೋಹ : ಸ ಗ$_3$ ಪ ದ$_2$ ನಿ$_2$ ಸಾ

ಸಾ ನಿ$_2$ ದ$_2$ ಪ ಗ$_3$ ಸಾ

ಮುಖ್ಯವಾಗಿ ಪ್ರತಿಪಾದಿಸುವ ರಸಗಳು ಶೃಂಗಾರ ಮತ್ತು ಶಾಂತ.

ಧರ್ಮರಾಯ ಕೃಷ್ಣನೊಡನೆ ಕುರುರಾಯನಲ್ಲಿಗೆ ತೆರಳಿ ಸಂಧಿಗೈದು ಬಾ ಎಂದರೂ, ಭೀಮ ದ್ರೌಪದಿಯರ ಮತ ಬೇರೆ ಆದಾಗ ತಾನೇನು ಮಾಡಬೇಕೀಗ ಎಂದು ಪುನಃ ಧರ್ಮರಾಜನನ್ನು ಪ್ರಶ್ನಿಸುತ್ತಾನೆ. ಆಗ ಆತನು ಒಂದು ನಿರ್ಣಯವನ್ನು ಹೇಳಲೇಬೇಕು. ಅದು ಯಾರಿಗೂ ಬೇಸರಕ್ಕೆ ಕಾರಣವಾಗಬಾರದು. ಧರ್ಮರಾಜ ಇದುವರೆಗೆ ನಂಬಿ ಬಾಳಿದ ತತ್ವಸಾರವನ್ನು ಹೇಳುವ ಸಂದರ್ಭ. ತಾವು ಕಷ್ಟಪಟ್ಟಿದ್ದು, ಯುದ್ಧಮಾಡುವುದು ಸರಿಯೆ ಎಂಬ ಶಂಕೆ ಮೂಡಿದ್ದೆಲ್ಲ ಯಾಕಾಗಿ ಎಂಬುದಕ್ಕೆ ಆತನು ನಂಬಿದ ತತ್ವವೇ ಆಧಾರ. ಈ ಹಿನ್ನೆಲೆಯಲ್ಲಿನ ಹಾಡು ***'ದೊರೆತನ ಸುಡಲಿನ್ನು ಬಡತನವೆಮಗಕ್ಕು......'*** (ಕೃಷ್ಣಸಂಧಾನ - ದೇವಿದಾಸ)

**ಶೃಂಗಾರ :** ಮನುಷ್ಯರ ವಾಸನೆ ಬಡಿದ ಶೂರ್ಪನಖಿ ಆ ವಾಸನೆಯ ಜಾಡನ್ನು ಹಿಡಿದು ಅವರನ್ನು ತಿನ್ನಲು ಬಂದಾಗ ಕಂಡಿದ್ದು ರಾಮನನ್ನು. ಆಗ ಅವಳ ಯೋಚನೆಯ ದಿಕ್ಕು ಬದಲಾಯಿತು. ತಾನು ಅವನನ್ನು ಗಂಡನನ್ನಾಗಿ ಮಾಡಿಕೊಳ್ಳುವೆನೆಂದು ಬಗೆಯುತ್ತಾಳೆ. ಆದರೆ ಅದಕ್ಕೆ ತಕ್ಕುದಾದ ಆಕಾರ, ವೇಷ, ರಾಕ್ಷಸಿಯದಲ್ಲ ಎಂಬ ಅರಿವೂ ಅವಳಿಗಿದೆ. ಅಂತೆಯೇ ಕಾಮರೂಪಿಯಾದ ಅವಳು ವೇಷವನ್ನು ಬದಲಾಯಿಸಿಕೊಂಡು ರಾಮನನ್ನು ಕಾಣಲು ಬರುತ್ತಾಳೆ. ಚಂದದಿಂದ ಬರುತ್ತಾಳೆ. ಆಗ ಈ ಹಾಡನ್ನು ಹಾಡುವ ಸಂದರ್ಭ ಒದಗುತ್ತದೆ.

***'ಪೂಗೋಲನುರು ಪಟ್ಟದಾನೆಯಂದದಲಿ.....'*** (ಪಂಚವಟಿ - ಪಾರ್ತಿಸುಬ್ಬ)

## 16) ಹಂಸಾನಂದಿ

ಇದು ಬ್ರಹ್ಮಚಕ್ರದ 53 ನೇ ಗಮಕಶ್ರಮ ಮೇಳಕರ್ತ. ಷಾಡವ ವರ್ಗದ ರಾಗ. ಹಿಂದೂಸ್ಥಾನಿ ಸೋಹನಿ ರಾಗಕ್ಕೆ ತತ್ಸಮವಾಗಿದೆ. ಶೃಂಗಾರ, ವೀರ, ಅದ್ಭುತಗಳನ್ನು ಸೂಚಿಸುತ್ತದೆ.



ಜಾರು ಗಮಕ ಪ್ರಯೋಗಗಳು ಹಾಸ್ಯರಸವನ್ನು ಪುಷ್ಟೀಕರಿಸುತ್ತದೆ. ಭಕ್ತಿರಸದಲ್ಲಿಯೂ ಹಾಡಬಹುದು.

ಆರೋಹ : ಸ ರಿ$_1$ ಗ$_3$ ಮ$_2$ ದ$_2$ ನಿ$_3$ ಸ

ಅವರೋಹ : ಸ ನಿ$_3$ ದ$_2$ ಮ$_2$ ಗ$_3$ ರಿ$_1$ ಸ

**'ಇಂದಿರಾ ಧವ ನೀನು........'** ವಾಲಿಗೆ ರಾಮ ಯಾರೆಂಬುದನ್ನು ತಿಳಿದ ಸಂದರ್ಭದಲ್ಲಿ ಹಾಡಬೇಕಾದ ಪದ್ಯ.

ಕೆಲವೊಮ್ಮೆ ದುಃಖ ತೀರ ತಾರಕಕ್ಕೆ ಹೋಗಿರುವುದಿಲ್ಲ. ಆ ಭಾವದ ಸಂಗಡ ಮುಂದೇನಾಗಬಹುದೋ ಎಂಬ ಆತಂಕ. ಸಂಧಿಗೆಂದು ಬಂದ ಕೃಷ್ಣ ವರಗದ್ದುಗೆಯ ಮೇಲೆ ಕುಳಿತ ಕೌರವನನ್ನು ನೆಲಕ್ಕೆ ಬೀಳಿಸಿದಾಗ ಅದರಿಂದ ಅವನ ಮೇಲೆ ಖತಿಗೊಂಡ ಕೌರವನು ಅವನನ್ನು ಹಾಗೂ ಕೃಷ್ಣನೊಡನೆ ಬಂದ ವಿದುರನನ್ನೂ ಬಯ್ಯುತ್ತಾನೆ. ವಿದುರನ ಶಸ್ತ್ರ ಸಂನ್ಯಾಸವಾದ ಮೇಲೆ, ಧರಣಿಯನ್ನು ಸಾಮದಿಂದ ಕೊಡೆಂದು ಕೃಷ್ಣ ಕೌರವನನ್ನು ಕೇಳುತ್ತಾನೆ. ಆಗ ಕೌರವ, ಕೃಷ್ಣನನ್ನು ಕಟ್ಟುವ ಪ್ರಯತ್ನ ಮಾಡಿ ವಿಫಲನಾಗುತ್ತಾನೆ. ಅವನನ್ನು ಬಿಟ್ಟು ಉಳಿದವರಿಗೆಲ್ಲ ಕೃಷ್ಣನ ವಿಶ್ವರೂಪ ದರ್ಶನವಾಗುತ್ತದೆ. ಆ ಸಂದರ್ಭದಲ್ಲಿ ಧೃತರಾಷ್ಟ್ರ ಗಾಂಧಾರಿಯರು ಕೃಷ್ಣ ದರ್ಶನ ಪಡೆಯುತ್ತಾರೆ. ಭಾನುಮತಿ ಕೃಷ್ಣನನ್ನು ಉದ್ದೇಶಿಸಿ ಹೇಳುವ ಹಾಡು **'ಪುರುಷ ರತ್ನವೇ ಲಾಲಿಸು /'** (ಕೃಷ್ಣ ಸಂಧಾನ.)

## 17) ಭೈರವಿ

***ಭೈರವೀ ರಾಗ ಸಂಪೂರ್ಣಸ್ಸಾಯಂಕಾಲೇ ಪ್ರದೀಯತೇ / ಪಂಚಶ್ರುತಿ ಧೈವತಂಚ ಕ್ವಚಿತ್ ಸ್ಥಾನೇ ಪ್ರಯುಜ್ಯತೇ//*** ವೇದ ಚಕ್ರ 20 ನೇ ಮೇಳಕರ್ತರಾಗ. ನಟಭೈರವಿಯಲ್ಲಿ ಭಾಷಾಂಗ ಜನ್ಯ ಸಂಪೂರ್ಣರಾಗ. ಸಾಯಂಕಾಲಿಕ ರಕ್ತರಾಗ ಅದ್ಭುತ ರಸ ಪ್ರಧಾನವಾದ ತ್ರಿಸ್ಥಾಯಿ ರಾಗ ಅನ್ಯ ರಸಗಳಿಗೂ ಆಸ್ಪದವುಂಟು. ರಿ ಗ ಮ ನಿ ಗಳು ಜೀವನ್ಯಾಸ ಸ್ವರಗಳು. ಸಕಲ ಗಮಕಗಳಿಗೂ ಆಸ್ಪದವುಂಟು. ದೀರ್ಘಸ್ವರ ಮತ್ತು ದಾಟು ಸ್ವರಗಳ ಸಂದರ್ಭಗಳು ಈ ರಾಗದಲ್ಲಿ ಬಹುರಮಣೀಯ. ಗೇಯ - ನಾಟಕ, ನೃತ್ಯ ನಾಟಕಗಳಿಗೆ ಎತ್ತಿದ ರಾಗ.

ಆರೋಹ : ಸ ರಿ$_2$ ಗ$_2$ ಮ$_1$ ಪ ದ$_2$ ನಿ$_2$ ಸ

ಸ ನಿ$_2$ ದ$_1$ ಪ ಮ$_1$ ಗ$_2$ ರಿ$_2$ ಸ

ಭೀಷ್ಮನು ತನ್ನ ಪ್ರತಿಜ್ಞೆಯಂತೆ ಕೃಷ್ಣನ ಹಣೆಗೆ ಬಾಣವನ್ನು ಹೊಡೆಯುವ ಮೂಲಕ ಕೃಷ್ಣನು ಚಕ್ರ ಧರಿಸುವಂತೆ ಮಾಡುತ್ತಾನೆ. ಚಕ್ರ ಧರಿಸಿದ ಶ್ರೀ ಕೃಷ್ಣನನ್ನು ರಥದಿಂದ ಇಳಿದು ಬಂದು ಕೈ ಮುಗಿದು ಪ್ರಾರ್ಥಿಸುತ್ತಾನೆ. ಆಗ ಹಾಡುವ ಪದ್ಯ ಇದು. **'ದುರಿತವನ ದಾವಾಗ್ನಿ ಲಕ್ಷ್ಮೀವರ ಮುಕುಂದ/ '**( ಭೀಷ್ಮ ಪರ್ವ - ದೇವೀದಾಸ) ಇದು ಸಂಪೂರ್ಣ ಶರಣಾಗತಿಯ



ಭಾವವನ್ನು ಸೂಚಿಸುತ್ತದೆ.

ಎಲ್ಲ ಕಡೆ ಸಂತೋಷ, ಆದರಿಂದುಂಟಾದ ಶಾಂತ ಮನಸ್ಸಿನ ಸ್ಥಿತಿ ; ಶ್ರೀರಾಮಚಂದ್ರನಿಗೆ ಪಟ್ಟಗಟ್ಟಲು ಸಕಲ ಸಿದ್ಧತೆಗಳಾದಾಗ ಉಂಟಾಗಿರುತ್ತದೆ. ಈ ಹೊತ್ತಿನಲ್ಲಿ ರಾಮನಿಗೆ ಸ್ನಾನ ಮಾಡಿಸುವಾಗಿನ ಸಂದರ್ಭದ ಹಾಡು- ***'ಪನ್ನೀರ ರಾಮನಿಗೆ ಪಂಕಜಾಕ್ಷಿಯರೆರೆದು /'*** (ಪಾದುಕಾ ಪಟ್ಟಾಭಿಷೇಕ - ಪಾರ್ತಿಸುಬ್ಬ)

## 18) ಅಠಾಣಾ

ಈ ರಾಗವು ಧೀರ ಶಂಕರಾಭರಣ ಮೇಳದಲ್ಲಿ ಜನ್ಯ . ಇದು ಸರ್ವಕಾಲಿಕವೆಂದು ಹೇಳಿದ್ದರೂ ಸಾಯಂಕಾಲದಲ್ಲಿ ರಂಜನೀಯ ಭಾಷಾಂಗರಾಗ. ಆರೋಹಣ ಅವರೋಹಣಗಳಲ್ಲಿ ಸಂಪೂರ್ಣತೆಯ ವಿಧವಿಧವಾದ ಸಂಚಾರಗಳ ಮೂಲಕ ಸೂಚಿತವಾಗುತ್ತದೆ. ದೇಶೀಯ ರಕ್ತಿರಾಗ ಈ ರಾಗ. ವೀರ, ಶೃಂಗಾರ ಮತ್ತು ಭಕ್ತಿ ರಸಗಳನ್ನು ಪ್ರತಿಪಾದಿಸುತ್ತದೆ.

ಆರೋಹ : ಸ ರಿ$_2$ ಗ$_3$ ಮ$_1$ ಪ ದ$_2$ ನಿ$_2$ ಸ

ಸ ನಿ$_3$ ದ$_2$ ಪ ಮ$_1$ ಗ$_3$ ರಿ$_2$ ಸ

**ಶೃಂಗಾರ :** ***'ಬಂದಳು ನಸುನಗೆಯಿಂದಲೋಲಾಡಿ.....'*** (ರುಕ್ಮಾಂಗದ ಚರಿತ್ರೆ) ರುಕ್ಮಾಂಗದನ ವ್ರತನಿಷ್ಠೆಯನ್ನು ಪರೀಕ್ಷಿಸಲೋಸುಗ ದೇವತೆಗಳಿಂದ ನಿಯುಕ್ತಳಾದ ಮೋಹಿನಿ, ಬೇಟೆಗೆಂದು ವನಕ್ಕೆ ಬಂದ ಅವನನ್ನು ಅರಸುತ್ತಾ ಬರುವ ಸಂದರ್ಭದ ಪದ್ಯವಿದು.

**ಭಕ್ತಿ :** ಭೀಷ್ಮನಿಗೆ ಸಾಕಾಗಿ ಹೋಗಿದೆ. ಆತನು ಜೀವಂತ ಇರಲು ಬಯಸುವುದಿಲ್ಲ. ಆದರೆ ಸಾಯುವುದಕ್ಕೂ ಸಾಧ್ಯವೇ ಇಲ್ಲ. ಆತ ಹಾಗಾಗಿಯೇ ಚಕ್ರ ಹಿಡಿದ ಕೃಷ್ಣನಿಗೆ ತನ್ನ ಕೊರಳನ್ನು ಕತ್ತರಿಸು ಎಂದು ಪಂಥವೊಡ್ಡುತ್ತಾನೆ. ***'ಎನ್ನಯ ಕಂಠವನಿರಿಯಲು ಚಕ್ರವ/'*** (ಭೀಷ್ಮಪರ್ವ)

## 19) ಪೂರ್ವಿ : *ಪೂರ್ವಿರಾಗ ಸಂಪೂರ್ಣಸ್ವಗ್ರಹಸ್ಸಾರ್ವಕಾಲಿಕ*

ಆರೋಹ : ಸ ರಿ$_1$ ಗ$_3$ ಮ$_2$ ಪ ದ$_1$ ನಿ$_3$ ಸ

ಸ ನಿ$_3$ ದ$_1$ ಪ ಮ$_2$ ಗ$_3$ ರಿ$_1$ ಸ

ಈ ರಾಗವು ಮಾಯಾಮಾಳವಗೌಳ ರಾಗದಲ್ಲಿ ಭಾಷಾಂಗಜನ್ಯ. ಚ್ಯುತ ಪಂಚಮ ಮತ್ತು ಪ್ರತಿ ಮಧ್ಯಮ ಛಾಯೆಯು ಬರಬಹುದು. ದೇಶೀಯ ರಕ್ತಿರಾಗ. ಸಂಪೂರ್ಣಾ ಸಂಪೂರ್ಣ. ಇದೊಂದು ಸಾರ್ವಕಾಲಿಕ ರಾಗ. ಶೋಕರಸ ಪ್ರಧಾನವಾದರೂ , ಭಕ್ತಿ, ಶಾಂತ ರಸಗಳಿಗೂ ಬಳಸುತ್ತಾರೆ. ಮಂದ್ರ ನಿಷಾಧದಿಂದ ಕೆಳಗೂ, ತಾರ ಋಷಭದಿಂದ ಮೇಲುಗಡೆಗೂ ಇದರ ಸಂಚಾರ ಕಂಡುಬರುವುದಿಲ್ಲ.

ಮ ಗ ಮ ಪ ದ ಮ / ಗಾ ಪ ಮ ಗಾ ಸಾ / ಗ ಮ ಪ ನಿ ದ ಪ ಇತ್ಯಾದಿ ಸಂಚಾರಗಳು ರಂಜನೀಯವೆಂದು ತಿಳಿಯತಕ್ಕದ್ದು. ಯಕ್ಷಗಾನದಲ್ಲಿ ಉಲ್ಲೇಖವಾದ ಪದ್ಯಗಳು-



ರೂಪಕ ತಾಳ -

**'ರಾಮ ರಾಮ ರಾಮ ಸೀತಾ । ರಾಮ ಎನ್ನಿರೋ ॥**

**ಪ್ರೇಮದಿಂದ ಭಜಿಸಿದವರ । ಕಾಮಿತಂಗಳ ಕೊಡುವ ನಾಮ ॥'**

(ಯಕ್ಷಗಾನ ಕೈಪಿಡಿ - ಕೃಷ್ಣ ಭಂಡಾರಿ, ಸೋಂದಾ)

**'ಒಂದೇ ಮನಸಲ್ಲ ರಾಘವನಿಗೆ ...'** ಲವಕುಶ ಕಾಳಗ

ಕೃಷ್ಣನ ಪ್ರವೇಶ ಪದ್ಯ - **'ಕೊಳಲನೂದುತ್ತ ಬಂದ । ಗೋಪಿಯ ಬಾಲ ।'** ಕಂಸವಧೆಯಲ್ಲಿ ಕೃಷ್ಣನ ಪ್ರವೇಶ. ಗೋಪ- ಗೋಪಿಕೆಯರು ಕೃಷ್ಣನ ಪ್ರವೇಶವನ್ನು ವರ್ಣಿಸುತ್ತಾರೆ. ನಂತರ ಕೃಷ್ಣನ ಪ್ರವೇಶವಾಗುತ್ತದೆ. ಗೋಪ - ಗೋಪಿಕೆಯರು ವರ್ಣಿಸುವ ಸಮಯದಲ್ಲಿ ಈ ಹಾಡನ್ನು ಹಾಡಲಾಗುತ್ತದೆ.

ಜ್ಞಾನಿಯಾದ ಭಕ್ತರಲ್ಲಿ ಭೀಷ್ಮನು ಮೊದಲ ಸಾಲಿನಲ್ಲಿ ಬರುತ್ತಾನೆ. ಹಾಗಾಗಿ ಆತ ಸಮಚಿತ್ತವನ್ನು ಹೊಂದಿರುತ್ತಾನೆ. ಕೃಷ್ಣ - ಅರ್ಜುನರು ಭೀಷ್ಮನ ರಥದ ಮುಂದೆ ಬಂದಾಗ ಅವರನ್ನು ನೋಡಿ ಭಕ್ತರ ಬಗ್ಗೆ ದೇವರಿಗಿರುವ ಮಮತೆ ಬಗ್ಗೆ ಭಕ್ತಿ ಭಾವದಿಂದ ಭೀಷ್ಮನು ಆಲೋಚಿಸುವ ಬಗೆಯನ್ನು ಭಾಗವತರು ಹಾಡುತ್ತಾರೆ. **'ಮುರಹರನನು ನೋಡಿ ನಗುತ ಗಾಂಗೇಯನು'** (ಭೀಷ್ಮಾರ್ಜುನ - ನರಸಿಂಹ ಶಾಸ್ತ್ರಿಗಳು)

## 20) ಹಿಂದೋಳ

ಶ್ಲೋಕ - *ಹಿಂದೋಳಸ್ಸ್ಯಾಡವೋ ರಾಗ । ಪಂಚಮರಿಷಭವರ್ಜಿತಃ ।*

*ಷಡ್ಜಗ್ರಹೇಣ ಸಂಯುಕ್ತೋ । ಗಾತವ್ಯಸ್ಸರ್ವದಾ ಬುಧೈಃ'*

ಈ ರಾಗವು ನಟಭೈರವಿ ಮೇಳ ರಾಗದ ಉಪಾಂಗ ಜನ್ಯ . ಈ ರಾಗದಲ್ಲಿ 4 ಜೋಡಿ ವಾದಿ ಸಂವಾದಿ ಸ್ವರ ಸಂದರ್ಭಗಳಿರುವುದರಿಂದ ಬಹು ಸ್ವಾರಸ್ಯವಾದ ರಕ್ತಿ ಮತ್ತು ತ್ರಿಸ್ಥಾಯಿ ರಾಗವಾಗುತ್ತದೆ. ಸಾಯಂಕಾಲದಲ್ಲಿ ಈ ರಾಗ ಬಹುರಂಜನೆ. ಕಂಪಿತ ಗಮಕಗಳನ್ನು ಪ್ರಯೋಗಿಸಿದರೆ ಶಾಂತ, ದೀನ, ಕರುಣಾರಸಗಳೂ ದೊರೆಯುತ್ತವೆ. ವರೆಯಿಕು, ಜಂಟಿ ಮತ್ತು ದಾಟು ಪ್ರಯೋಗಗಳನ್ನು ನಡೆಸಿದರೆ ವೀರ ಮತ್ತು ಅದ್ಭುತ ರಸಗಳೂ ನಿಷ್ಪತ್ತಿಯಾಗುತ್ತವೆ.

1 ನೇ ಪಕ್ಷ ಆರೋಹ : ಸ ಗ$_2$ ಮ$_1$ ದ$_1$ ನಿ$_2$ ಸಾ

ಸಾ ನಿ$_2$ ದ$_1$ ಮ$_1$ ಗ$_2$ ಸ

2 ನೇ ಪಕ್ಷ : ಸ ಮ$_1$ ಗ$_2$ ಮ$_1$ ದ$_1$ ನಿ$_2$ ಸ

ಸಾ ನಿ$_2$ ದ$_1$ ಮ$_1$ ಗ$_2$ ಸ

ಯಕ್ಷಗಾನದಲ್ಲಿಯ ಉದಾಹರಣೆ : **'ಕಂಡನು । ಸೌಂದರ್ಯ ನಿಧಿಯನು ಕೃಷ್ಣ । ಕಂಡನು ॥ ಕಂಡನು ಸುರುಚಿರಾಂಗಿಯಳಾ । ಮೋಹ । ಗೊಂಡನು ಮರೆತು ಕಾರ್ಯಗಳಾ ॥ ಪುಂಡರೀಕಾಕ್ಷಿ**



***ಕಲ್ಯಾಣಿ ಪನ್ನಗವೇಣ । ದುಂಡು ಕುಚಂಗಳನಲುಗಿಸಿ ಬಹಳನು ।’*** (ನೃಪತುಂಗ ವಿಜಯ)

ಭಕ್ತಿಗೆ ಉದಾಹರಣೆ : ಕೃಷ್ಣ ಸಂಧಾನದಲ್ಲಿ ದ್ವಾರಕೆಯಲ್ಲಿ ಕೃಷ್ಣನನ್ನು ಅರ್ಜುನ ಬೆಟ್ಟಿ ಮಾಡಿ, ತನ್ನ ಸಾರಥ್ಯವನ್ನು ಮಾಡಬೇಕೆಂದು ಕೇಳಿಕೊಂಡಾಗ ಕೃಷ್ಣನು ಯಾದವೀ ಸೈನ್ಯವನ್ನು ಬಿಟ್ಟು ತನ್ನನ್ನೇಕೆ ಆರಿಸಿಕೊಂಡೆ ಎಂದು ಹಂಗಿಸುತ್ತಾನೆ. ಆಗ ಅರ್ಜುನ ಶ್ರೀಕೃಷ್ಣನಲ್ಲಿ ಕೇಳಿಕೊಳ್ಳುವ ಹಾಡು- ***‘ದೇವರ ದೇವ ನೀನಹುದೋ ಮೂರ್ಜಗದಿ’*** (ಕೃಷ್ಣ ಸಂಧಾನ).

ಶೃಂಗಾರಕ್ಕೂ ಇದನ್ನು ಬಳಸುತ್ತಾರೆ. ಉದಾ : ಅರಮನೆಯ ಉದ್ಯಾನವನದಲ್ಲಿ ಮಲಗಿದ ಚಂದ್ರಹಾಸನನ್ನು ನೋಡಿ ಮನಸೋತ ವಿಷಯೆ ಅವನ ಮೇಲಿನ ತನ್ನ ಆಸಕ್ತಿ ಹಾಗೂ ಜನರೇನೆಂದಾರೆಂಬ ಭೀತಿ ಇವುಗಳ ಸಂಘರ್ಷದಲ್ಲಿ ಒಮ್ಮೆ ಅವನನ್ನು ಮುಟ್ಟುವುದು, ಇನ್ನೊಮ್ಮೆ ಯಾರಾದರೂ ಕಂಡಾರೆಂದು ಬೆದರುವುದು ಈ ರೀತಿಯ ಭಾವದಲ್ಲಿರುತ್ತಾಳೆ.

ಆ ಸಂದರ್ಭದ ಹಾಡು : ***‘ಹೂಗೋಲನುರುಬಾಧೆಗೆ । ಬೆಚ್ಚುತಲಂದು । ಪೋಗಲಾತನ ಬಳಿಗೆ॥*** *(ಚಂದ್ರಹಾಸ ಚರಿತ್ರೆ)*

**ಗಂಭೀರ ಹಾಸ್ಯ :** ಪಾರ್ಥನ ಸಾರಥಿ ಕೃಷ್ಣನಾದರೆ, ಕರ್ಣನ ಸಾರಥಿ ಶಲ್ಯ. ಕೃಷ್ಣ - ಶಲ್ಯರ ಸಂವಾದದಲ್ಲಿ ಶಲ್ಯ ಹೇಳುವ ಹಾಡಿದು - ***‘ ಹರಿ ನಿನ್ನ ಮಹಿಮೆಯನು ।’*** (ಕರ್ಣಪರ್ವ - ವೆಂಕಟಾಚಲ ಭಟ್ಟ ಸಂ.)

## 21) ಮಧ್ಯಮಾವತಿ

***‘ಮಧ್ಯಮಾದಿಸ್ಸುರಾಗೋಯಂ । ಮಧ್ಯಮ ಗ್ರಹಸಂಮುತಂ । ಗ ಧ ಲೋಪಾದೌಡವಸ್ಯಾತ್ಸಾಯಂಕಾಲೇ ಪ್ರಗೀಯತೇ ॥’***

ಆರೋಹ : ಸ ರಿ$_2$ ಮ$_1$ ಪ ನಿ$_2$ ಸಾ

ಸ ನಿ$_2$ ಪ ಮ$_1$ ರಿ$_2$ ಸಾ

ಈ ರಾಗವು ಖರಹರಿಪ್ರಿಯದಲ್ಲಿ ಔಢವ ಔಢವ ಭೇದವಾಗಿ ಉಪಾಂಗ ಜನ್ಯ. ಗ ದ ವರ್ಜ್ಯ **‘ಮ’** **‘ನಿ’** ಗಳು ವಾದಿ ಸಂವಾದಿಗಳು ಮಧ್ಯಮ ಗ್ರಹ. ಇದನ್ನು ಪೂರ್ವಿಕರು ಮಧ್ಯಮಾದಿ ಎಂದು ಕರೆಯುತ್ತಿದ್ದರು. ಇದನ್ನು ಹಾಡುವ ಕಾಲ ಮಧ್ಯಾಹ್ನ ಕಾಲ. ಆದರೂ ರಾಗಗಳನ್ನು ನಿಯತ ಕಾಲದಲ್ಲಿ ಹಾಡದ ದೋಷದ ಪರಿಹಾರಾರ್ಥವಾಗಿ ಈ ಸುರಾಗವನ್ನು ಗಾಯನದ ಅಂತ್ಯದಲ್ಲಿ ಹಾಡುವುದರಿಂದ ಸಕಲ ಸನ್ಮಂಗಳ ಸುಖ ಪ್ರಾಪ್ತಿಯಾಗುತ್ತದೆಂದು ದಾಕ್ಷಿಣಾತ್ಯ ಗಾಯಕರು ನಂಬುತ್ತಾರೆ. ಋಷಭ ಮತ್ತು ನಿಷಾಧಗಳು ಅಲ್ಪ ತೀವ್ರ ಛಾಯೆಯನ್ನು ಹೊಂದುವುದೇ ಲಕ್ಷ್ಯ. ಶೃಂಗಾರ, ಭಕ್ತಿ, ಶಾಂತ ರಸಗಳನ್ನು ಅಭಿವ್ಯಕ್ತಿಗೊಳಿಸಲು ಸಹಾಯಕವಾದ ರಾಗ.

ಮೋಹಿನಿ ಸಕಲಾಭರಣಗಳನ್ನು ತೊಟ್ಟು ರುಕ್ಮಾಂಗದನಲ್ಲಿ ತನ್ನಾಸೆಯನ್ನು



ತೋಡಿಕೊಳ್ಳುತ್ತಾಳೆ. ಆಗ ಅವಳು **'ವರ ಮನೋಹರ ಲಾಲಿಸು।'** (ರುಕ್ಮಾಂಗದ ಚರಿತ್ರೆ) ಎಂದು ಹಾಡುತ್ತಾಳೆ.

ಈಶ್ವರ ತನ್ನ ಮೇಲೆ ದಕ್ಷನಿಗೆ ಕೋಪವುಂಟಾದ ಕಾರಣವನ್ನು ಪಾರ್ವತಿಗೆ ವಿವರಿಸುತ್ತಾನೆ. **'ಒಂದು ದಿವಸ ನಾನು ಕುಳಿತಿರ್ಪ ಸಭೆಗೆ।'** (ದಕ್ಷಯಜ್ಞ)

**'ಭಾವಗಳ್ ನೆಂಟಗೆ ಮರ್ಯಾದೆಯನ್ನು। ಠೀವಿಯಿಂ ಮಾಡಿದಿರಲ್ಲ ಮತ್ತಿನ್ನು॥'** - (ಕೃಷ್ಣ ಸಂಧಾನ) ಕೌರವ ಕೃಷ್ಣನ ಪದತಲದಲ್ಲಿ ಬಿದ್ದಾಗ ಅವನನ್ನು ಕೃಷ್ಣ ಲೇವಡಿ ಮಾಡುವ ಹಾಡು ಇದು.

**'ಅಂಬಾ ಶಾರದೆ ಜಗದಂಬ ಮಾಂಪಾಹಿ .....'** (ಯಕ್ಷಗಾನ ಕೈಪಿಡಿ)

**'ಕಪಟ ನಾಟಕ ಕೇಳು ಕೌರವ। ನೃಪನ ಬಲಕಾನಂದದಿಂದಲಿ।**
**ವಿಪುಲ ಬಲ ಕೂಡುತ್ತ ನಾನ್ಯೆದಪೆನು ಎನುತಾ॥'** ( ಕೃಷ್ಣಸಂಧಾನ ) ಯಕ್ಷಗಾನದ ಹಾಡುಗಳು.

## 22) ಝುಂಝೋಟಿ

ಆರೋಹ : ಪ ದ$_2$ ಸ ರಿ$_2$ ಗ$_3$ ಮ$_1$ ಪ ದ$_2$
ನಿ$_2$ ದ$_2$ ಪ ಮ$_1$ ಗ$_3$ ರಿ$_2$ ಸ ನಿ$_2$ ದ$_2$ ಪ.ದ$_2$ ಸಾ

ಇದು ದೇಶೀಯ ರಾಗ. 19 ನೆಯ ಶತಮಾನದಲ್ಲಿ ರೂಢಿಗೆ ಬಂದಿದೆ. ಈ ರಾಗವು ಮಂದ್ರಸ್ಥಾಯಿ ಮತ್ತು ಮಧ್ಯಸ್ಥಾಯಿಗಳಲ್ಲಿಯೇ ವ್ಯಾಪ್ತಿಯನ್ನು ಹೊಂದಿದೆ.

ತಾರ ಸ್ಥಾಯಿಗಳಲ್ಲಿ ಸಂಚಾರವಿಲ್ಲ. ಗಾಂಧಾರ ಮತ್ತು ಕಾಕಲಿ ನಿಷಾಧಗಳು ಸಂದರ್ಭಾನುಸಾರ ಬರುತ್ತದೆ. ಭಾಷಾಂಗ ರಾಗವೆನ್ನಿಸುವಷ್ಟು ರೂಢಿತವಾಗಿದೆ ಈ ಕಾಲದಲ್ಲಿ. ಕರುಣಾರಸ ಪ್ರಧಾನವಾದ ಸಾರ್ವಕಾಲಿಕ ರಾಗ. ಗಾಂಧಾರ ಧೈವತಗಳು ಪರಸ್ಪರ ವಾದಿ ಸಂವಾದಿಗಳು. ಈ ರಾಗದಲ್ಲಿ ಸಕಲ ಸ್ವರಗಳೂ ಜೀವವೇ.

ರೂಪಕ ಹಾಗೂ ಏಕತಾಳಗಳಲ್ಲಿ ಅಭಿನಯಿಸಲು ಯೋಗ್ಯವಾದ ಪದ್ಯಗಳನ್ನು ಈ ರಾಗದಲ್ಲಿ ಹಾಡುವ ಪರಿಪಾಠವಿದೆ.

ಶಾಂತರಸ, ಹಾಸ್ಯವು ಲಾಸ್ಯವಾಗುವಾಗ ಈ ರಾಗವನ್ನು ಬಳಸುತ್ತಾರೆ.

ಉದಾ. : **'ಲೇಸು ಮಗನೆ ರಾಮ ವನಕೆ ಪೋಪನಾದೊಡೆ।** (ಪಾದುಕಾ ಪಟ್ಟಾಭಿಷೇಕ') (ಪಾರ್ತಿಸುಬ್ಬ) ಸುಮಿತ್ರೆ ಎಲ್ಲವನ್ನು ತೂಗಿ ನೋಡುವವಳು. ರಾಮನೆಲ್ಲಿಯೋ ಅಲ್ಲಿ ಲಕ್ಷ್ಮಣನಿರಬೇಕೆಂಬುದು ಅವಳ ನಿರ್ಣಯ. ತನ್ನೆರಡು ಮಕ್ಕಳನ್ನೂ, ರಾಮ ಹಾಗೂ ಭರತನ ಸೇವೆಗಾಗಿಯೇ ಮುಡಿಪಿಟ್ಟವಳು ಅವಳು. ಆದ್ದರಿಂದಲೇ ಲಕ್ಷ್ಮಣ ತಾನೂ ಅಣ್ಣನೊಡನೆ ಕಾಡಿಗೆ ತೆರಳುತ್ತೇನೆಂದು ತಾಯೊಡನುಸುರಿದಾಗ ಈ ಹಾಡನ್ನು ಹಾಡುವ ಅವಕಾಶ ಭಾಗವತರಿಗೆ.

'ಭೀಷ್ಮ ಪರ್ವ' ದಲ್ಲಿ ಅರ್ಜುನ ಭೀಷ್ಮ ಪರಸ್ಪರ ಎದುರಾದಾಗ, ಅರ್ಜುನ ಭೀಷ್ಮನನ್ನು



ತಂದೆಯ ನಂತರ ನೀವೇ ತಂದೆಯಾಗಿ ಸಲಹಿ ಈಗ ಗೋಣು ಕೊಯ್ಯಲು ಮುಂದಾದಿರೆಂದು ಕಟಕಿಯಾಡಿದಾಗ ಭೀಷ್ಮನು ಹೇಳುತ್ತಾನೆ. ಇದು ಹಾಸ್ಯ - ಲಾಸ್ಯ. ಮೊಮ್ಮಗನ ಭಾವ ಅರ್ಥವಾಗುತ್ತದೆ. ಆದರೆ, ಅರ್ಜುನನಿಗೂ ತಾರತಮ್ಯ ಜ್ಞಾನವಿಲ್ಲವಲ್ಲ ಎಂಬ ಬೇಸರವೂ ಇದೆ. ಅದಕ್ಕಾಗಿಯೇ ಭೀಷ್ಮನು **'ಏನಲು ಪೇಳ್ದ ಬಾಲ ಭಾಷೆ ಆಡಬೇಡವೋ '** (ಭೀಷ್ಮಪರ್ವ) ಎಂದು ಹೇಳುತ್ತಾನೆ.

ಈ ರಾಗ ಉಲ್ಲೇಖವಾದ ಯಕ್ಷಗಾನದ ಪದ್ಯಗಳು -

**'ಸುರಸತಿಯರು ಮನುಜರಿಗೇ । ದೊರ । ಕಿರುವರೆ ಭೂಲೋಕದೊಳಗೇ ॥ ಭರಿತ ಪುಣ್ಯದಿ ಪರದೊಳು ಲಭ್ಯವಲ್ಲದೇ । ದೊರಕಲರಿಯರು ಭುವನ ಪಾಲನೆ ॥ ಬರಿದೆ ಮನದೊಳು ಏನನರಿತಿಹೆ'** (ರುಕ್ಮಾಂಗದ ಚರಿತ್ರೆ)

**'ಭಳಿರೆ ನಾ ಮೆಚ್ಚಿದೆ ಮುನಿಯೇ । ನಿಮ್ಮ ಸಾಹಸಕೆ । ಇಳೆಯ ಮೇಲಿನ್ನಾರು ಸರಿಯೆ ॥'** (ಕಾರ್ತವೀರ್ಯಾರ್ಜುನ ಕಾಳಗ - ಬಿ. ರಾಮರಾವ್)

## 23) ನವರೋಜು

ಆರೋಹ. : ಪ ದ$_2$ ನಿ$_3$ ಸಾ ರಿ$_2$ ಗ$_3$ ಮ$_1$ ಪ

ಪ ಮ$_1$ ಗ$_3$ ರಿ$_2$ ಸ ನಿ$_3$ ದ$_2$ ಪ

**'ಪೂರ್ಣರಾಗ ಷಡ್ಜಗ್ರಹ ಸಮನ್ವಿತಃ ।**

**ಪ ಪ ಯೋರಂತರೇ ಬುಧ್ಯಾ ಗಾತವ್ಯಾ ಲಕ್ಷ್ಯಕೋವಿದೈಃ '**

ಈ ರಾಗವು ಧೀರಶಂಕರಾಭರಣ ಮೇಳದಲ್ಲಿ ಭಾಷಾಂಗಜನ್ಯ. ಷಡ್ಜಗ್ರಹ - ರಕ್ತಿರಾಗ. 400 ವರ್ಷಗಳ ಪೂರ್ವದಲ್ಲಿ ಜಾತ್ತರೇಯರಿಂದ ಸಂಗ್ರಹಿಸಿದ ರಾಗವೆಂದು ಅಭಿಪ್ರಾಯ ಪಡುತ್ತಾರೆ. ಈ ರಾಗವು ಮಧ್ಯಸ್ಥಾಯಿ ರಾಗ. ತಾರಸ್ಥಾಯಿಯಲ್ಲಿ ಸಂಚಾರವಿಲ್ಲ. ಜಾರುಗಮಕ ಪ್ರಯೋಗವೇ ಮುಖ್ಯ.

ಮಧುರ ಭಾವವನ್ನು ಸೂಚಿಸುತ್ತದೆ. ದೈವತ ಗಾಂಧಾರಗಳು ಪರಸ್ಪರ ವಾದಿ - ಸಂವಾದಿಗಳು. ಋಷಭ - ದೈವತಗಳು ಅಲ್ಪ - ತೀವ್ರ ಛಾಯೆಯನ್ನು ಮತ್ತು ಮಧ್ಯಮವು ಅಲ್ಪ ಮೃದುತ್ವವನ್ನೂ ಹೊಂದುತ್ತವೆ. ಆನಂದಾತಿಶಯವಾದ ಭಕ್ತಿ ಮತ್ತು ದೀನರಸಪ್ರಧಾನ ಬಹುರಂಜಕವಾದ ರಾಗ ಇದು.

ಯಕ್ಷಗಾನದಲ್ಲಿ ಉಲ್ಲೇಖವಾದ ಸಂದರ್ಭಗಳು.

(ಅದಿತಾಳ) **'ಬಂದನು ದೇವರ ದೇವ । ಬಹು । ಚಂದದಿ ಭಕ್ತರ ಕಾವ ।'** (ಸಭಾ ಲಕ್ಷಣ)

**'ಮೆಚ್ಚಿದೆನ್ನೆ ಸಾಹಸಕೆ । ಬಹ । ಳಚ್ಚರಿಯಾಯಿತು ಮನಕೆ । '** (ರುಕ್ಮಾಂಗದ ಚರಿತ್ರೆ, ) ಇದೂ ಆದಿತಾಳ .



**'ಸುರನದಿ ನಂದನ ಕೇಳು । ನೀ । ನರಿತಿಹೆ ತಾತಕೃಪಾಳು ॥'** (ಭೀಷ್ಮಾರ್ಜುನ)

**ಕರುಣಾರಸ :** ಕರ್ಣ ಸಂಪೂರ್ಣ ಕೈಚೆಲ್ಲಿ ಕುಳಿತು ತಾನು ಕೌರವನ ಆಶೆ - ಆಕಾಂಕ್ಷೆಗಳನ್ನು ತೀರ್ಚಲಿಲ್ಲವಲ್ಲಾ ಎಂದು ಕೊರಗುತ್ತ ಇದ್ದಾಗ ಹಾಡಬೇಕಾದ ಪದ್ಯ-

**'ಶಿವ ಶಿವಾ ಸಮರದೊಳು । ಕೈ ಸೋತೆನಲ್ಲೋ । ಭುವನೇಶ ಮಮತೆಯೊಳು ॥'** (ಕರ್ಣಪರ್ವ- ಸಂ. ವೆಂಕಟಾಚಲ ಭಟ್ಟ)

## 24) ನಾದನಾಮ ಕ್ರಿಯೆ

**'ನಾದನಾಮ ಕ್ರಿಯಾ ಪೂರ್ಣ । ಸಾಂಯಗೇಯಾ ಹಿ ಸಗ್ರಹ ।'** ಈ ರಾಗವು ಮಾಯಾ ಮಾಳವಗೌಳದಲ್ಲಿ ಉಪಾಂಗ ಜನ್ಯ. ಸಂಪೂರ್ಣ ಆರೋಹಣ - ಅವರೋಹಣ ಷಡ್ಜಗ್ರಹ. ಸಾಯಂಕಾಲದಲ್ಲಿ ಹಾಡಬೇಕು. ನಿ ರಿ ಮ ಗಳು ರಾಗ ಛಾಯಾ ಸ್ವರಗಳು. (ದ ನಿ ದ ಪ) ಪ್ರಯೋಗಗಳಲ್ಲಿ ಕಿಂಚಿತ್ ಕೈಶಿಕಿ ನಿಷಾದ ಪ್ರಯೋಗವೂ ಬರುತ್ತದೆ. ಪ್ರಾಚೀನ ರಿಕ್ತರಾಗ.

ಆರೋಹ : ಸ $ರಿ_2$ $ಗ_3$ $ಮ_1$ ಪ $ದ_2$ $ನಿ_3$ ಸ

ಅವರೋಹ : ಸ $ನಿ_3$ $ದ_2$ ಪ $ಮ_1$ $ಗ_3$ $ರಿ_2$ ಸ

ಉದಾ. : ಇದು (ದೀನ) ಕರುಣಾ ರಸ ಪ್ರಧಾನವಾದದ್ದು.

ಉದಾ. : **'ಮಕರಾಕ್ಷಮಡಿದ ವಾರ್ತೆಯ ಕೇಳಿ । ದಶ । ಮುಖ ಧೈರ್ಯಗುಂದಿ ಕ್ಲೇಶ ತಾಳಿ॥ ಕಳವಳಿಸುತ ಮಂಚದೊಳೊರಗಿದ । ದಿಟ್ಟ । ಕಲಹಗಾರಿಗನಂತೆ ಮರುಗಿದ ॥** (ಇಂದ್ರಜಿತು ಕಾಳಗ)

**ಬಿಸಜಾಕ್ಷ ಸಖ ಧನಂಜಯಗೆ । ಚೆಲ್ವ । ಬಿಸಜ ಗಂಧಿನಿಯರಾರತಿ ಎತ್ತಿರೆ ॥ ವೃಷಕೇತುವಿಗೆ ಸತ್ಯಭಾಮೆ ರುಕ್ಮಿಣಿಯರು । ಅಸಮ ಮೋಹದಲಿ ಆರತಿ ಎತ್ತಿರೆ ।** '(ಬಬ್ರುವಾಹನ ಕಾಳಗ)

**'ಯಾದವರ ಪಡೆಯು ಗಯನ । ಮೋದದಿಂದರಸುವ ಪರಿಯ । ಕೇಳಯ್ಯ । ಸೊಗಸ । ಹೇಳಯ್ಯ ।'** ( ಕೃಷ್ಣಾರ್ಜುನ ಕಾಳಗ - 10 ನೆ ಅಚ್ಚು )

**ಧಿರುರೆ ರಕ್ಕಸವರ್ಯ ಸ್ವರ್ಗವ । ನೇರಿ । ಭರದೊಳೆಮ್ಮಯಸುರ ವರ್ಗವ ॥ ಧುರದೊಳು ಗೆಲಿದಿಹಹಮ್ಮನು । ಈಗ ತರಿಯವೆ ಕೆಣಕದಿರೆಮ್ಮನು ॥'** (ಕುಮಾರ ವಿಜಯ)

## 25) ಆನಂದ ಭೈರವಿ

**'ಆರೋಹೇ ವೃಷಭಂ ತ್ಯಕ್ವಾ 'ಧ' ವಕ್ರಂಚ ಸಮಾಚರೇತ್ ।**

**ಸಂಪೂರ್ಣ ಸಗ್ರಹೋಪೇತ ಭವೇದಾನಂದ ಭೈರವಿ'** ಈ ರಾಗವು ನಟಭೈರವೀ ಜನ್ಯ. ಆರೋಹದಲ್ಲಿ ವಕ್ರ ಸಂಪೂರ್ಣ ಅವರೋಹಣದಲ್ಲಿ ಕ್ರಮ ಸಂಪೂರ್ಣ. (ವಿಶೇಷ ಪ್ರಯೋಗದಲ್ಲಿ ಶುದ್ಧ ಧೈವತವು ಬರುತ್ತದೆ. ಈ ರೂಢಿ 300 ವರ್ಷಗಳ ಈಚೆಗೆ ಕಂಡುಬರುತ್ತದೆ.) ಭಕ್ತಿ, ರಕ್ತಿ, ವೀರ, ಶೃಂಗಾರ, ಕರುಣಾ ರಸಗಳ ನಿಷ್ಪತ್ತಿಯಾಗುತ್ತದೆ.



ಆರೋಹ : ಸ ಗ$_2$ ಗ$_2$ ಮ$_1$ ಪ ದ$_1$ ಪ ಸ ನಿ$_2$ ಸ

ಅವರೋಹ : ಸ ನಿ$_2$ ದ$_1$ ಪ ಮಾ$_1$ ಗ$_2$ ಗ$_2$ ರಿ$_2$ ಸ

ಯಕ್ಷಗಾನದಲ್ಲಿಯ ಉಲ್ಲೇಖ : ***'ಯಾಕೆ ಮಲಗಿದೆ ಎಲ್ಲರಂದದಿ ಲೋಕ ನಾಯಕನೆ....*** (ಭಕ್ತಿ) - ತುಂಡುಪದ್ಯ

***'ಆಯುವಂತ ಪಾರ್ಥಗೆನ್ನ। ನೀಯದಿರಲು ಕಾಯವನ್ನು। ಕಳೆವೆನೋ। ಕೀರ್ತಿ। ಮೆರೆವೆನೊ॥'*** (ರಕ್ತಿ) (ಸುಭದ್ರಾ ಕಲ್ಯಾಣ)

***'ಚದುರೆ ಚಂಪಕಮಾಲೆ ಸುನಾಸೆ। ಮದಿರ ನಯನೆ ಮಂದಹಾಸೆ। ಒದಗಿನೋಳ್ ಮೂರ್ಬಲದ ಕೂಡೆ। ಕದನಕಾಗಿ ಪೋಪೆ ಪ್ರೌಢೆ'*** (ಶೃಂಗಾರ) ( ಕುಮಾರ ವಿಜಯ)

***'ಕಾಂತ ನಿನ್ನ ಅಗಲಿ ನಾನು। ಎಂತು ಜಗದೊಳಿರ್ಪೆನಕಟಾ ಎಂದಳು। ಬಲು। ನೊಂದಳು।'*** (ಕರುಣಾ) (ಕುಂಭಾಸುರ ಕಾಳಗ)

***'ಸಂಧಿಯೇ ಕಲಿಭೀಮ ನಿನಗಾನಂದವೇ ಕುರಭೂಪನೊಳು..'*** (ಕರುಣ) (ಕೃಷ್ಣಸಂಧಾನ)

***'ಮಾವಿನ ಮರಗಳಿರಾಽಽ। ಅಲ್ಲಿರುವಂಥ। ಮೋಹದ ಗಿಣಿಗಳಿರಾ'*** (ಭಕ್ತಿ) ತುಂಡು ಪದ್ಯ.

## 26) ಆರಭಿ ಶಾಂತ- ಭಕ್ತಿ

***'ಆರಭಿಸ್ಸರ್ವದಾ ಗೆಯೋ ಆರೋಹೇ ಗ ನಿ ವರ್ಜಿತ।***

***ಕ್ವಚಿದಾರೋಹ ಸಂಯುಕ್ತ ನಿಷಾದೋ ನಿಗ್ರಹೋ ಭವೇತ್ ॥'***

ಈ ರಾಗವು ಧೀರಶಂಕರಾಭರಣದಲ್ಲಿ ಜನ್ಯ ; ಆರೋಹಣದಲ್ಲಿ ಗಾಂಧಾರ, ನಿಷಾದಗಳು ವರ್ಜ್ಯ, ಅವರೋಹಣದಲ್ಲಿ ಕ್ರಮ ಸಂಪೂರ್ಣ. ನಿಷಾಧ ಗ್ರಹ, ಮಧ್ಯಮ ಕಾಲನದಿಯುಳ್ಳದ್ದು. ರಿ ಮ ದ ಗಳು ಜೀವ ಸ್ವರಗಳು. ನಿಷಾದ ಗಾಂಧಾರಗಳು ನ್ಯಾಸವಲ್ಲ. ಅವರೋಹಣದಲ್ಲಿ ಖಂಡಿಸುವ ಗಮಕಯುಕ್ತವಾಗಿ ದುರ್ಬಲಗೊಳ್ಳುತ್ತದೆ.

ನಿಷಾದ ಗ್ರಹವೆಂದು ಶ್ಲೋಕದಲ್ಲಿ ಹೇಳಿದ್ದರೂ ಸಾರ್ಥಕವಾಗಿ ಕಂಡುಬರುವುದಿಲ್ಲ. ಜಂಟಿ ಮತ್ತು ದಾಟು ಪ್ರಯೋಗಗಳು ದುರಿತ ಕಾಲದಲ್ಲಿ ಪ್ರಯುಕ್ತವಾಗುವುದರಿಂದ ಶೃಂಗಾರ, ವೀರ, ಅದ್ಭುತ ರಸಗಳು ನಿಷ್ಪತ್ತಿಯಾಗುತ್ತದೆ.

ಋಷಭ ದೈವತಗಳು ವಾದಿ ಸಂವಾದಿಗಳು.

ಆರೋಹ : ಸ ರಿ$_2$ ಮ$_1$ ಪ ದ$_2$ ಸ

ಅವರೋಹ : ಸ ನಿ$_3$ ದ$_2$ ಪ ಮ$_1$ ಗ$_3$ ರಿ$_2$ ಸ

ಯಕ್ಷಗಾನ ಪ್ರಸಂಗಗಳಲ್ಲಿ ಇದರ ಉಲ್ಲೇಖ-

***'ಅಗಲಿ ಪೋದ ನೀರೆ। ಆ ಸುಗುಣನ। ಬಗೆಯ ತಿಳಿದು ಬಾರೆ॥ ಬಗೆ ಬಗೆಯಿಂದಲಿ। ಸುಗುಣನ ಬಳಿ ಪೋಗಿ। ಬುಗುರಿ ಕುಚದ ಮೇಲ್ ಚ। ಳ್ಳುಗುರು ನಾಟೀತೆಂದು॥*** (ವಿಪ್ರಲಂಬ



ಶೃಂಗಾರ - ಯಕ್ಷಗಾನ ಕೈಪಿಡಿ )

**'ರಮಣೀ । ಮನ್ಮಾನಪ । ಜಲರುಹದ್ಯುಮಣೀ ॥ ಕಮನೀಯ ಗಾತ್ರ, ಕೃಷ್ಣ । ಭ್ರಮರ ಕುಂತಳೆಕರಿ । ಗಮನೆ ಪನ್ನಗವೇಣಿ ವಿಮಲೆ ಮಂಜುಳ ವಾಣಿ ॥'** (ಸಂಯೋಗ ಶೃಂಗಾರ - ಕುಮಾರ ವಿಜಯ)

## 27) ಉದಯರವಿ ಚಂದ್ರಿಕೆ

**'ರಿ ಧ ತ್ಯಕ್ತೋ ಉದಯ ರವಿ ಚಂದ್ರಿಕಾ ಔಡವೀ ಮತಾ ॥ '**

ಈ ರಾಗವನ್ನು 9 ನೇ ಮೇಳ (ನೇತ್ರ ಚಕ್ರ - ಧೇನುಕ ಮೇಳ) ದಲ್ಲಿ ವೆಂಕಟಮುಖಿಗಳು ಉಪಾಂಗ ಜನ್ಯ ಮಾಡಿದ್ದಾರೆ. ಆದರೆ 20 ನೇ ಶತಮಾನದಲ್ಲಿ ಕೈಶಿಕೀನಿಷಾದ ಪ್ರಯೋಗವೇ ಬರುವುದರಿಂದ ಇದನ್ನು ನಟಭೈರವೀ ಮೇಳದಲ್ಲಿ ಜನ್ಯ ಮಾಡಬೇಕು. ಔಡವ - ಔಡವ ರಾಗ. ಗಾಂಧಾರ - ನಿಷಾಧಗಳೂ ಮತ್ತು ಮಧ್ಯಮ - ನಿಷಾಧಗಳೂ ಪರಸ್ಪರ ವಾದಿ ಸಂವಾದಿಗಳು. ನಿಷಾಧ ಗಾಂಧಾರಗಳಿಗೆ ಜಾರುಗಮಕ ಪ್ರಯೋಗವು ಬಹುರಂಜಕ. ಅದೇ ಜೀವ ಮತ್ತು ನ್ಯಾಸ ಸ್ವರಗಳು. ದೀನ ಮತ್ತು ಕರುಣಾರಸಯುತವಾದ ಈ ರಾಗವು ಸಾರ್ವಕಾಲಿಕ.

ಆರೋಹ : ಸ ಗ$_2$ ಮ$_1$ ಪ ನಿ$_2$ ಸ

ಸ ನಿ$_2$ ಪ ಮ$_1$ ಗ$_2$ ಸ

**'ವಂದಿಸುವೆನು ವಾರಣಾಸ್ಯನೇ । ನೀ ಸಲಹು ದಯದಿ । ಚಂದನಾಂಗ ತನು ವಿರಾಜನೇ ॥ '**

ರೂಪಕ ತಾಳ - ತುಂಡು ಪದ್ಯ.

**'ಮಾತ ಲಾಲಿಸಯ್ಯ ಮೌನಿ । ನಾಥ ನಾನೆಂಬುದ ನೀ । ಪ್ರೀತಿಯೊಳ್ ವಿಚಾರಿಸೆಲ್ಲ । ನೂತನವಾದುದನೆಲ್ಲ ॥'** (ರಾವಣವಧೆ) (ಇದು ಯಕ್ಷಗಾನದಲ್ಲಿ ಉಲ್ಲೇಖವಾದದ್ದು.)

## 28) ಎರಕಲ ಕಾಂಬೋಜಿ

**'ಆರೋಹೇ ಗನಿವರ್ಜಸ್ಯಾತ್ಸಗ್ರಹಸ್ಸಾರ್ವಕಾಲಿಕಃ ।**
**ಸ್ಯಾದ್ದೆರಕಲ ಕಾಂಭೋಜೀರಾಗ ಇತ್ಯುಚ್ಯತೀ ಬುಧೈಃ ॥'**

ಈ ರಾಗವು ಹರಿಕಾಂಭೋಜೀ ಮೇಳದಲ್ಲಿ ಜನ್ಯ. ಆರೋಹಣದಲ್ಲಿ ಗಾಂಧಾರ , ನಿಷಾಧಗಳು ವರ್ಜ್ಯ. ಅವರೋಹಣದಲ್ಲಿ ಸಂಪೂರ್ಣ. ಔಡವ ಸಂಪೂರ್ಣ ಭೇದ. ಆಂಧ್ರಪ್ರದೇಶದ 'ಯರಕಲು' ಎಂಬ ಜಾತಿಯ ಜನರು ಜನಪದ ಗೀತೆಗಳನ್ನು ಈ ರಾಗದಲ್ಲಿ ಹಾಡುತ್ತಿರುವುದರಿಂದ ಈ ರಾಗಕ್ಕೆ ಈ ಹೆಸರು ಬಂದಿದೆ ಎಂದು ಕೆಲವರ ಅಭಿಮತ. ಈ ರಾಗವನ್ನು 'ಯದುಕುಲ ಕಾಂಬೋಜಿ' ಎಂದೂ ಕರೆಯುತ್ತಾರೆ. ಋಷಭ, ಗಾಂಧಾರ, ಮಧ್ಯಮ ಮತ್ತು ಧೈವತಗಳು ಈ ರಾಗವನ್ನು ಸ್ಫೂರ್ತಿ ಮಾಡುವ ಜೀವ ಮತ್ತು ನ್ಯಾಸ ಸ್ವರಗಳು. ಋಷಭ ಮತ್ತು ಧೈವತಗಳು ಕೆಲವು ಗಮಕ ಪ್ರಯೋಗಗಳಲ್ಲಿ ತೀವ್ರ ಛಾಯೆಯನ್ನು ಸೂಚಿಸುತ್ತವೆ.



ರಾಗದ ನಡೆಗಳು ಬಹು ವಿಳಂಬ. ಜಾರು ಗಮಕವು ಅಧಿಕವಾಗಿ ಪ್ರಯೋಗ. ವಿಪ್ರಲಂಬ ಶೃಂಗಾರವು ಪರಿಪೋಷಕವಾಗಿ ಹೃದಯವನ್ನು ತೋಡಿಕೊಳ್ಳುವಂತಿರುತ್ತದೆ. ಸ ನಿ$_3$ ಸ ಮತ್ತು ಸ ನಿ$_3$ ಪ ದ ಸಾ ಈ ಸಂಚಾರಗಳಲ್ಲಿ ಕಾಕಲಿ ನಿಷಾಧ ಬರುತ್ತದೆ. ಸಾರ್ವಕಾಲಿಕ ಶಕ್ತಿ ರಾಗ. ರಾಗವನ್ನು ಲಕ್ಷ್ಯಜ್ಞರಿಂದ ತಿಳಿಯುವುದು ಸೂಕ್ತ.

ಆರೋಹ : ಸ ರಿ$_2$ ಮ$_1$ ಪ ದ$_2$ ನಿ$_2$ ದ$_2$ ಪ ದ$_2$ ಸ

ಸ ನಿ$_2$ ದ$_1$ ಪ ಮ$_1$ ಗ$_3$ ರಿ$_2$ ಸ

ಯಕ್ಷಗಾನದ ಉಲ್ಲೇಖಗಳು :-

1) ***'ಆರು ಕೃಷ್ಣನಿಗೆ । ನಾವೆಮಗವ । ನ್ಯಾರು ವ್ಯಥೆಸುಮ್ಮಗೆ ॥ ಸೇರೆ ಸಾಮ್ರಾಜ್ಯವು । ವೈರಿಗಳೆಲ್ಲ। ತೀರೆ ಬಲು ಸುಖವು ॥ ನೀರಜ ನಯನಗಿನ್ನಾರ ಹಂಗೆಮ್ಮ ಸಂ। ಸಾರವೀ ಚಿಂತೆಯಿಂದ ಬರುದೊರೆ ಸಿದ್ಧ ॥ '*** (ಯಾದವಾಭ್ಯುದಯ)

2) ***'ಭಳಿರೆ ಮೆಚ್ಚಿದೆ ಕೇಳು ಖಳಕುಲ ಮಣಿಯೇ । ಇಳೆಯ ಮಿಕ್ಕಿನ ಧೊರೆಗಳು ನಿನಗೆಣೆಯೆ॥'*** (ಕುಮಾರ ವಿಜಯ)

## 29) ಖಮಾಚ

ಈ ರಾಗವು ಹರಿಕಾಂಬೋಜಿಗೆ ಸರಿಸಮಾನವಾದ ಉತ್ತರ ದೇಶದ ರಾಗ. ದಾಕ್ಷಿಣಾತ್ಯ ಗಾನ ಪದ್ಧತಿಯು ಸುಮಾರು ಎರಡು ಶತಮಾನಗಳಿಂದ ಈ ರಾಗವನ್ನು ಹರಿಕಾಂಬೋಜಿ ಮೇಳದ ಭಾಷಾಂಗ ರಾಗವಾಗಿ ಪರಿಗ್ರಹಿಸಿ ರೂಢಿಸಿದೆ. ಪ್ರಾಚೀನ ರಾಗವಲ್ಲ. ಬಹು ಸುಂದರವಾದ ಸಾರ್ವಕಾಲಿಕ ರಾಗ. ಆರೋಹಣದಲ್ಲಿ ಋಷಭವು ವರ್ಜ್ಯ. ಅವರೋಹಣದಲ್ಲಿ ಸಂಪೂರ್ಣ. ಆದ ಕಾರಣ ಷಾಡವ ಸಂಪೂರ್ಣ ಭೇದ.

ಮಧ್ಯಮ ನಿಷಾಧಗಳು ಪರಸ್ಪರ ವಾದಿ - ಸಂವಾದಿಗಳು. ಮಧ್ಯಮ ಧೈವತ ನಿಷಾಧಗಳು ಬಹು ರಂಜಕವಾದ ಜೀವ ಸ್ವರಗಳು. ತಾರಸ್ಥಾಯಿಯ ಸ ರಿ ಗ್ಾ$_2$ ರಿ ಸ$_1$ ಸ ರಿ ಗ ರಿ$_2$ ಸ ಪ್ರಯೋಗಗಳಲ್ಲಿ ಸಾಧಾರಣ ಗಾಂಧಾರವು ಬರುತ್ತದೆಯೆಂದು ಶ್ರೀ ಸುಬ್ಬರಾಮ ದೀಕ್ಷಿತರು ಉಲ್ಲೇಖಿಸಿದ್ದಾರೆ. ಆದರೆ ಈ ಕಾಲದಲ್ಲಿ ಆ ಪ್ರಕಾರವಿಲ್ಲ. ಆರೋಹಣದಲ್ಲಿ ಕಾಕಲಿ ನಿಷಾಧವೂ ಅವರೋಹಣದಲ್ಲಿ ಕೈಶಿಕಿ ನಿಷಾಧವೂ ಬರುತ್ತದೆ. ಶೃಂಗಾರ ರಸ ಪ್ರಧಾನ. ಕೆಲವೊಮ್ಮೆ ಕೆಲವು ಸಂಚಾರಗಳಲ್ಲಿ ಹಾಸ್ಯರಸವೂ ಸೂಚಿತವಾಗುತ್ತದೆ. ದಾಟು ಸ್ವರಗಳಲ್ಲಿ ಬರುವ ಜಾರು ಗಮಕವು ಬಹು ಸ್ವಾರಸ್ಯವಾಗಿರುತ್ತದೆ. ಮಂದ್ರ ನಿಷಾಧದಿಂದ ಕೆಳಗಡೆ ಸಂಚಾರವು ಕಂಡುಬಂದಿಲ್ಲ.

ಆರೋಹ : ಸ ಮ$_1$ ಗ$_3$ ಮ$_1$ ಪ ದ$_2$ ನಿ$_3$ ಸ

ಅವರೋಹ : ಸ ನಿ$_2$ ದ$_2$ ಪ ಮ$_1$ ಗ$_3$ ರಿ$_2$ ಸ



ಈ ರಾಗದ ಯಕ್ಷಗಾನದಲ್ಲಿಯ ಉಲ್ಲೇಖಗಳು :-

**'ಶ್ರೀ ಕರ ಶತಮುಖನುತ ತ್ರಿದಶ । ಮ ಗ ಮ ನಿ ದ ನಿ ಪ ದ ಪ ರಿ ॥**
**ಶೋಕ ದುರಿತಹರ ರೀ ಸನಿ ಸ ಸ ಸಾ ಸ । ಪಾಕಶಾಸನ ದಿವಾಕರ ಶೋಭಿತ ॥'**
(ಕುಮಾರ ವಿಜಯ)

**ಶೃಂಗಾರ: 'ಯಾರಿವಳೀ ಸತಿಯು । ಕಾನನದೊಳ । ಗಾರಿವಳೀ ಸತಿಯು ॥**
**ಮಾರಾರಿ ಸತಿಯ ಸೌಂದರ್ಯವ ಸೋಲಿಪ । ಕೀರಭಾಷಿಣಿ ವರ ನೀರಜಲೋಚನೆ'**
(ದೇವಯಾನಿ ಕಲ್ಯಾಣ - ತಿಮ್ಮಣ್ಣ ಗಾಂವ್ಕರ, ಮಾಸ್ಕೇರಿ)

ರಾಮನನ್ನು ನೋಡಿದ ಶೂರ್ಪನಖಿಗೆ ಅವನನ್ನು ಕೂಡಬೇಕೆಂಬಾಸೆಯಾಗಿ ಸುಂದರ ರೂಪವನ್ನು ಧರಿಸಿಕೊಂಡು ರಾಮನಲ್ಲಿಗೆ ಬಂದು ಸುಸಂಸ್ಕೃತವಾದ ಮಾತುಗಳನ್ನಾಡುತ್ತಾಳೆ. ಆಗ ಹೇಳುವ ಪದ್ಯ **'ರಾಘವನರಪತೆ ಶ್ರುಣುಮವ ವಚನಂ । ನೀ ಗುಣ ನಿಧಿಯೆಂದು ನಿನ್ನ ಸೇರಿದೆ ಬಂದು॥'** (ಪಂಚವಟಿ - ಪಾರ್ತಿಸುಬ್ಬ)

**ಭಕ್ತಿ: 'ಬಾ ಬಾ ಬಾ ಬಾರೋಽ ಮನೆಗೆ । ರಂಗಯ್ಯ ಓಡಿ । ಬಾ ಬಾ ಬಾ ಬಾರೋ ಮನೆಗೆ ॥'** ತುಂಡು ಪದ್ಯ

## 30) ಘಂಟಾರವ -

**'ಘಂಟಾರವಸ್ತು ಸಂಪೂರ್ಣೋ ಸಾಯಂ ಗೇಯಶ್ಚ ಧ ಗ್ರಹಃ'**

ಈ ರಾಗವು ನಟಭೈರವಿ ಮೇಳದಲ್ಲಿ ಭಾಷಾಂಗ ಜನ್ಯ. ಆರೋಹಣದಲ್ಲಿ ವಕ್ರ ಸಂಪೂರ್ಣ. ಅವರೋಹಣದಲ್ಲಿ ಕ್ರಮ ಸಂಪೂರ್ಣ. ಧೈವತ ಗ್ರಹ. ಸಾಯಂಕಾಲಿಕ ರಕ್ತಿರಾಗ ಶೋಕರಸ ಪ್ರಧಾನ. ಗ ರಿ ಗ ಮ ಪ ದ ನಿ ಸ ಈ ಪ್ರಯೋಗಗಳು ಮುಖ್ಯ ರಂಜನಾಸ್ಪದ ಯೋಜನೆಗಳು.

ಗಾಮಾ / ನೀದಾಪಾ/ ಗಾರೀಸಾ ಈ ದೀರ್ಘ ಸ್ವರಗಳೇ ಜೀವ ಮತ್ತು ನ್ಯಾಸ ಸ್ವರಗಳು. ಕೆಲವು ಸಂದರ್ಭಗಳಲ್ಲಿ ಭೈರವಿಯಂತೆ ಭಾಸವಾಗುತ್ತದೆ. ವೆಂಕಟಮುಖಿಗಳ ಕಾಲಕ್ಕೇ ಚತುಃಶ್ರುತಿ ರಿಷಭ ಧೈವತಗಳು ಪ್ರಯೋಗದಲ್ಲಿದ್ದುದರಿಂದ ಇದು ತೋಡಿ ಜನ್ಯವಲ್ಲ.

ಆರೋಹ : ಸ ಗ$_2$ ರಿ$_3$ ಗ$_2$ ಮ$_1$ ಪ ದ$_1$ ಪ ನಿ$_2$ ದ$_1$ ನಿ$_2$ ಸಾ

ಅವರೋಹ : ಸ ನಿ$_2$ ದ$_1$ ಪ ಮ$_1$ ಗ$_2$ ರಿ$_2$ ಸ

ಇದು ವ್ಯಕ್ತಪಡಿಸುವ ರಸಗಳು, ಶೃಂಗಾರ, ರೌದ್ರ, ವೀರ, ಭಕ್ತಿ.

ಯಕ್ಷಗಾನದಲ್ಲಿಯ ಉಲ್ಲೇಖಗಳು :-

**'ಕೇಳಯ್ಯಾ ನಮ್ಮ ತನು ಬಡವಾದುದ । ಪೇಳಲೇನದ ಹಿಂದೆ ಶರಧಿಗೆ ನೀಲ ಸೇತುವೆ ಕಟ್ಟಲೂ ॥'** (ದೀನ) (ಸುಭದ್ರಾ ಕಲ್ಯಾಣ)



***'ಷಂಡರಂದದಿ ಕುಳಿತಿಹುದೇತಕೆ । ಗಂಡುಗಲಿಯಾದವರು ಸಮರ ಪ್ರಚಂಡ ತನವನು ತೋರಿಸಿ ॥'*** (ವೀರ) (ಭೀಷ್ಮ ವಿಜಯ)

***'ಮಾರನಸ್ತ್ರ ತಾಗಿ ಬಿಗು । ವೇರಿತಲ್ಲೆ ಬಾಲೆ ॥ ನಾರಿ ಎನ್ನ ಮೇಲೆ ದಯವ । ತೋರೆ ನೀ ದಮ್ಮಯ್ಯ ॥'*** (ಶೃಂಗಾರ) (ಲಂಕಾದಹನ)

***'ಬರದೊಳೀಕ್ಷಣ ಭೀಷ್ಮನ ಕೊರಳನ್ನು । ಗರಗರನೆ ತರಿದೀಗ ಕೆಡೆಹುವೆ ಕರುಣವೇ ನೀಗಿವನೊಳು॥'*** (ರೌದ್ರ) (ಭೀಷ್ಮಾರ್ಜುನ)

ಭೀಷ್ಮ ಅಸಿರತ್ನ ಶರವನ್ನು ತನ್ನ ಹಣೆಗೆ ಹೊಡೆದಿದ್ದ ತಿಳಿದ ಶ್ರೀಕೃಷ್ಣನು ಉಗ್ರನಾಗಿ ರಥದಿಂದಿಳಿದು ಭೀಷ್ಮನ ಕೊರಳನ್ನು ಗರಗರನೆ ಕೊಯ್ಯುವೆನೆಂಬ ಹಾಡು ರೌದ್ರ ರಸಕ್ಕೊಂದು ಒಳ್ಳೆಯ ಉದಾಹರಣೆ. ಸಾತ್ವಿಕ ರೌದ್ರ, ಇಲ್ಲಿ ಪ್ರಕಟವಾಗುವಂತೆ ಪದ್ಯವನ್ನು ಹೇಳಬೇಕಾಗುತ್ತದೆ.

***'ಭಳಿರೇ ಭೀಷ್ಮನು ಭೀಷ್ಮನಲ್ಲದೆ ಮಿಕ್ಕ ಇಳೆಯ ಪಾಲರು ಷಂಡರಾದಿರೆ ಕುಲದಿ ಕ್ಷತ್ರಿಯರಲ್ಲವೇ'*** (ವೀರ)( ಭೀಷ್ಮ ವಿಜಯ)

ಭೀಷ್ಮ, ಸ್ವಯಂವರ ಮಂಟಪಕ್ಕೆ ಬಂದಾಗ ಉಳಿದೆಲ್ಲ ಇಳೆಯ ಪಾಲರು ಅವನ ಜಗದೇಕ ವೀರತ್ವವನ್ನು ಒಪ್ಪಿಕೊಂಡು, ಅವನು, ಅಂಬೆ - ಅಂಬಾಲಿಕೆಯರಿಗೆ ರಥವನ್ನೇರಲು ಹೇಳಿದಾಗ ಯಾರೂ ಪ್ರತಿಭಟಿಸಲಿಲ್ಲ. ಆದರೆ ಸಾಲ್ವ ಭೂಪತಿಗೆ ಇದನ್ನು ಸಹಿಸಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯನ್ನು ಅರ್ಥೈಸಿಕೊಂಡು ***'ಭಳಿರೇ.......'*** ಹಾಡನ್ನು ಹಾಡಬೇಕು.

## 31) ಕಲ್ಯಾಣಿ

***'ಶಾಂತ ಕಲ್ಯಾಣ ರಾಗಶ್ಚ ಸರ್ವಕಾಲೇ ಪ್ರದೀಯತೇ ॥'***

ಇದು ರಾಗಾಂಗರಾಗ, ಸಂಪೂರ್ಣ ರಾಗ, ಷಡ್ಜಗ್ರಹ. ರಿ ಗ ನಿ ಗಳು ಜೀವ, ನ್ಯಾಸ ಸ್ವರಗಳು. ರಿ-ದ, ಗ-ದ, ಗ-ನಿ, ಮ-ನಿ ಗಳು ವಾದಿ ಸಂವಾದಿ ಸ್ವರಗಳು. ಸರ್ವಸ್ವರಿ ಗಮಕ ಸಂಯುಕ್ತ. ತ್ರಿಸ್ಥಾಯಿ ಸಾಯಂಕಾಲಿಕ ಅತ್ಯದ್ಭುತ ರಾಗ. ದೀರ್ಘ ಜಂಟಿ, ದಾಟು ಸ್ವರಗಳು. ಈ ರಾಗದಲ್ಲಿ ರಂಜಕಗಳು (ಉತ್ತರಾದಿ ಸಂಗೀತದಲ್ಲಿ ಇದನ್ನು ಯಮನ್ ಎಂದು ಕರೆಯುತ್ತಾರೆ) ಮಧ್ಯಮ ವರ್ಜ್ಯ ಮಾಡಿಯೂ ಹಾಡುವುದುಂಟು. ಶೃಂಗಾರ, ವೀರ, ಅದ್ಭುತ, ರಸಗಳಿಗೆ ಪೋಷಕ.

ಆರೋಹ : ಸ ರಿ$_2$ ಗ$_3$ ಮ$_2$ ಪ ದ$_2$ ನಿ$_3$ ಸ

ಅವರೋಹ : ಸ ನಿ$_3$ ದ$_2$ ಪ ಮ$_2$ ಗ$_3$ ರಿ$_2$ ಸ

ಯಕ್ಷಗಾನದಲ್ಲಿಯ ಉಲ್ಲೇಖಗಳು :-

***'ಕುಂದರದನೆ ಪೂರ್ಣೇಂದು ವದನೆ ತಾ । ಬಂದಳೆ ಗುಣ ಸದನೆ ॥ ಸುಂದರಾಂಗಿ ಸುಮಗಂಧಿ ಮಂದ ಗತಿಯಿಂದ ಮುಂದೆ ಕಾಲಂದುಗೆ ಖಣಲೆನೆ ॥'*** (ಶೃಂಗಾರ- ಕುಮಾರ ವಿಜಯ)

***'ಧರೆಯೊಳಗೆ ಎನ್ನಂಥ ಧನ್ಯರಿಲ್ಲ । ಕರುಣ ನಿಧಿ ವಿಷ್ಣು ನೀನಹುದು ಸಟೆಯಲ್ಲ ॥ ಪ ॥***



***ಯಾರಿಗಿಹುದೀ ತೇಜ ಭಾನುವಿಗೆ ಶತ ಮಿಗಿಲು । ಚಾರು ಭುಜಗಳು ದಿವ್ಯ ಪಾದ ಹಸ್ತಗಳು । ತೋರುತಿದೆ ವರ ಶಂಖ ಚಕ್ರ ಗದೆ ಪದ್ಮಗಳು । ಹೀರ ರೇಖೆಯ ಚರಣ ಪೀತ ವಸನಗಳು ।*** (ಚಂದ್ರಾವಳೀ ವಿಲಾಸ)

ಅಂಬೆ , ಅಂಬಿಕೆ, ಅಂಬಾಲಿಕೆಯರು ವನ ವಿಹಾರಕ್ಕಾಗಿ ಹೋಗುತ್ತಾರೆ. ಮೊದಲು ನೀರಾಟವಾಡಲು ತೊಡಗುತ್ತಾರೆ. ಆ ಸಂದರ್ಭದ ಪದ್ಯ (ಶೃಂಗಾರ) ***'ಆಡಿದರ್ ತರುಣಿಯರು । ಜಲ ಕೇಳಿಯ । ಆಡಿದರ್ ತರುಣಿಯರು ॥'*** (ಭೀಷ್ಮ ವಿಜಯ)

ಭೀಮನ ಮೂದಲಿಕೆಯ ಮಾತುಗಳಿಂದ ವೈಷಂಪಾಯನ ಸರೋವರದೊಳಗೆ ಮುಳುಗಿದ ಕೌರವನು ತಡಿಗಡರಿ, ಯುದ್ಧಕ್ಕೆ ಉದ್ಯುಕ್ತನಾಗುತ್ತಾನೆ. ಬೇಕಾದ ಒಬ್ಬನನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಬಿಟ್ಟಾಗ ಅವನು ತನ್ನ ಸರಿಸಮ ಹಾಗೂ ತನ್ನ ಸತಿಗೆ ಇತ್ತ ಭಾಷೆಯನ್ನು ಪೂರ್ತಿ ಮಾಡಲು ಅವಕಾಶ ಕೊಡುವ ಸಲುವಾಗಿ ಭೀಮನನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಆಗ ಭೀಮನ ಪದ್ಯ -

***'ಜಲದೊಳಡಗಿಹನಧಟ ಪರಿಕಿಸುವದೇನೆನ್ನ । ಬಲುಹು ಕಾಂಬುದು ಸುಭಟರೀಗ ॥'*** (ವೀರರಸ) (ಗದಾಪರ್ವ)

***'ಅಮಮಾ ಏನ್ ಬೆಡಗುಗಾತಿಯೋ....*** (ಅದ್ಭುತ ರಸ )(ರತ್ನಾವತಿ ಕಲ್ಯಾಣ -ಮುದ್ದಣ ಕವಿ)

## 32) ಕಾನಡಾ

ಇದು ಖರಹರ ಪ್ರಿಯದಲ್ಲಿ ಭಾಷಾಂಗ ಜನ್ಯ ; ಉಪಾಂಗ ಜನ್ಯ. ಪ್ರಾಚೀನ ಬಹು ಸುಂದರ ರಾಗ, ಉತ್ತರದ ಪ್ರಸಿದ್ಧರಾಗ. ಎರಡು ಶತಮಾನದ ಈಚೆಗೆ ಭಾಷಾಂಗ ಜನ್ಯವೆಂದು ಕರೆಸಿಕೊಳ್ಳುವಷ್ಟು ಪ್ರಸಿದ್ಧಿಗೆ ಬಂದಿದೆ. ಸಾಧಾರಣ ಮತ್ತು ಅಂತರ ಗಾಂಧಾರಗಳೂ ಶುದ್ಧ ಮತ್ತು ಚತುಃಶ್ರುತಿ ದೈವತಗಳೂ ಕೈಶಿಕೀ ಮತ್ತು ಕೌಕಲಿ ನಿಷಾಧಗಳೂ ಪ್ರಯೋಗಿಸಲ್ಪಡುತ್ತವೆ. ರಿ ಮ ಗಳು ಜೀವ ಸ್ವರಗಳು. 'ಗಾ ಮ ರಿ ಸಾ' ಎಂಬಲ್ಲಿ ಸಾಧಾರಣ ಅಂತರ ಗಾಂಧಾರಗಳೂ ಅವುಗಳ ನಡುವೆ ಇರುವ ಶ್ರುತಿಯೂ ಭಾಸವಾಗುತ್ತವೆ.

ದಾನಿಪಾದಲ್ಲಿಯೂ 2 ದೈವತಗಳೂ ನಡುವಿನ ಶ್ರುತಿಯೂ ಸಾ ನಿ ದ ನೀ ದ ನಿ ಎಂಬಲ್ಲಿ ಕೈಶಿಕೀ ಕಾಕಲಿ ನಿಷಾದಗಳೂ ನಡುವಿನ ಸ್ವರವೂ ಭಾಸವಾಗುತ್ತದೆ. ಭಕ್ತಿ , ಶೃಂಗಾರ ರಸ ಪ್ರಧಾನವಾಗಿದ್ದರೂ ಸಂಚಾರ ವೈವಿಧ್ಯದಿಂದ ವಿವಿಧ ರಸ ನಿಷ್ಪತ್ತಿಯಾಗುತ್ತವೆ.

ಆರೋಹ: ಸ ರಿ$_2$ ಗ$_2$ ಮ$_1$ ಪ ಮ$_1$ ದಾ$_2$ ನಿ$_2$ ಸಾ

ಸ ನಿ$_2$ ಪ ಮ$_1$ ಪ ದ$_2$ ನಿ$_2$ ದ$_2$ ಪ ಮ$_1$ ಗಾ$_2$ ಮ$_1$ ರಿ$_2$ ಸ



ಯಕ್ಷಗಾನದಲ್ಲಿ ಇದರ ಉಲ್ಲೇಖವಾಗಿದೆ :-

**'ನೋಡಿ ಬರುವ ಕೃಷ್ಣ ಪೋಗಿಯರ್ಜುನನಾ । ರೂಥಿಯೊಳಗೆ ಯಾವ ದೇಶದೊಳಿಹನೆಂದು'**॥ಪ॥ (ಬಬ್ರುವಾಹನ ಕಾಳಗ)

**'ನರನು ನೋಡುತಾ । ಹರಿಯ ಪಾಡುತ । ಶಿರವ ಬಾಗಿಸಿ । ಕರವ ಜೋಡಿಸಿ ।** (ಭಕ್ತಿ) (ಭೀಷ್ಮಾರ್ಜುನ)

ಬಂಧುಗಳನ್ನು ಕೊಲ್ಲಲಾರದೆ ತಳಮಳಿಸಿದ ಅರ್ಜುನನಿಗೆ ಶ್ರೀಕೃಷ್ಣ ಗೀತೋಪದೇಶವನ್ನು ಮಾಡಿದ. ತನ್ನ ವಿಶ್ವರೂಪವನ್ನು ಈತನಿಗೆ ತೋರಿಸಿದ. ಆಗ ನರನು ಹೇಳುವ ಪದ್ಯ, ದುಃಖ, ಹತಾಶೆಗಳು ಸೇರಿದ ಕರುಣ ರಸಕ್ಕೆ ಉತ್ತಮ ಉದಾಹರಣೆ.

ವಾಲಿ, ಸುಗ್ರೀವರ ಯುದ್ಧದಲ್ಲಿ ವಾಲಿಯು ಸುಗ್ರೀವನ ಉದರಕ್ಕೆ ಒದ್ದು ಹಿಂತಿರುಗಿದಾಗ ಸುಗ್ರೀವನಿಗೆ ನೋವು ಹಲವು ವಿಧದಲ್ಲಿ. ರಾಮನ ಪರಾಕ್ರಮವನ್ನು ನಂಬಿದ್ದಕ್ಕೆ ತನ್ನ ಮೇಲೆ ನೋವು, ರಾಮನು ತನ್ನನ್ನು ಯುದ್ಧಕ್ಕೆ ಹೋಗೆಂದು ಕಳುಹಿಸಿ ವಾಲಿಯ ವಧೆಯನ್ನು ಮಾಡದಿದ್ದುದಕ್ಕೆ ನೋವು, ದೇಹಕ್ಕಾದ ನೋವಂತೂ ಸರಿ. ಕಾರಣ ಅವನು ರಾಮನನ್ನು ಕಂಡಕೂಡಲೇ ಹೇಳುತ್ತಾನೆ -

**'ವಿಶ್ವ ನಾಯಕಾ । ನಿನ್ನ ವಾಕ್ಯವ । ವಿಶ್ವಾಸವೆಂದು । ನಂಬಿದೆನಿಂದು ॥'** (ವಾಲಿ ಸುಗ್ರೀವ ಕಾಳಗ)

**ಶೃಂಗಾರ** :- ವನವನ್ನು ಚರಿಸುವಾಗ ಭಾಸವತಿ ವಿಮಲಧ್ವಜನನ್ನು ಕಂಡು ಈ ಪದ್ಯವನ್ನು ನುಡಿಯುತ್ತಾಳೆ. **'ಕಣ್ಣ ಪಾಪ ತೊಳೆದುದಿವನರೂಪು ನೋಡುತಾ । ಪುಣ್ಯ ಫಲದಿ ಬಂದೆನಿಲ್ಲಿ ವನವಚರಿಸುತ '**(ಭಾಸವತಿ) ( ರಚನೆ - ಮಂಜುನಾಥ ಭಟ್ಟ, ಹೊಸ್ತೋಟ)

## 33) ತುಝಾವಂತು

ಈ ರಾಗವು ಯಕ್ಷಗಾನದಲ್ಲಿ ತುಂಬಾ ಪ್ರಚಲಿತವಿದೆ. ಈ ರಾಗವನ್ನು ಬಳಸದೇ ಇರುವ ಕವಿಗಳೇ ಇಲ್ಲವೆಂದರೂ ತಪ್ಪಲ್ಲ. ಹೃದಯವನ್ನು ತೋಡಿಕೊಳ್ಳುವಾಗ, ಅಂತರಂಗದ ತುಮುಲವನ್ನು ಕಾಣಿಸುವಾಗ ಕರುಣೆಯಿಂದ ಹರಸುವಾಗ ಇಂಥ ನಾನಾ ಸಂದರ್ಭಗಳಲ್ಲಿ ರಕ್ತಿ, ಭಕ್ತಿ, ಕರುಣೆ ಇವುಗಳೇ ಪ್ರಧಾನ ರಸವಾಗಿ ಪ್ರಚಾರದಲ್ಲಿರುವ ಈ ರಾಗಕ್ಕೆ ಬೇರೆ ಸಂಗೀತ ಶಾಸ್ತ್ರದ ಆಧಾರವಿಲ್ಲದಿದ್ದರೂ ತನ್ನದೇ ಆದ ಪರಂಪರೆಯಿದೆ. ಸಾಮಾನ್ಯವಾಗಿ ಇದು ದ್ವಿಪದಿಯ ನಡೆಯನ್ನು ಪ್ರತಿನಿಧಿಸುತ್ತದೆ. ರಾಗಕೋಶದ ತ್ರಿಯಂಬಿನಿ ರಾಗವನ್ನು ಹೋಲುತ್ತದೆ.

ಆರೋಹ : ಸ ಗ$_3$ ಮ$_1$ ದ$_1$ ನಿ$_3$ ಸಾ

ಅವರೋಹ : ಸಾ ನಿ$_3$ ದ$_1$ ಪ ಮ$_1$ ಗ$_3$ ರಿ$_1$ ಗ$_3$ ಸ



ಯಕ್ಷಗಾನದಲ್ಲಿ ಇದರ ಉಲ್ಲೇಖ :-

**'ಕೇಳಯ್ಯ ಖಳರಾಯ ಪೂರ್ವದಲಿ ನಾನು। ಪೇಳಿದಂದದಿ ನಿನ್ನ ಬಯಸಿ ಬಂದಿಹೆನು ॥ ಕೋಳುಗೊಂಡುದು ಮನವು ವರಿಸೆನ್ನ ನೀನು। ಬಾಳಿಕೊಂಡಿರ್ಪೆ ನಿನ್ನಾಧೀನದಲಿ ನಾನು'** - ಭೀಷ್ಮವಿಜಯದಲ್ಲಿ ಅಂಬೆ.

**'ಪೊರಟರಾಗ ಭಟರು ಶೌರ್ಯದೀ ॥ ಕರದೊಳಸ್ತ್ರ ಶಸ್ತ್ರ ತತಿಯ। ಧರಿಸಿ ಹೂಂಕರಿಸುತ ವೀರ। ವರರು ಭಾನುಕಾದಿ ಯೋಧ। ರುರು ಪರಾಕ್ರಮದೊಳು ಖಳರ। ತರಿವೆನೆನುತ ಮುಂದೆ ನಡೆಯುತ। ರಕ್ಕಸರನೆಲ್ಲ। ಕರದ ಸಾಯಕದೊಳು ಬಡಿಯುತ। ವೈರಿಗಳ ಶಿರವ। ಸರಳಿನಿಂದ ಭರದಿ ಕಡಿಯುತ ॥'** ( ಕುಮಾರ ವಿಜಯ)

ಲಂಕೆಗೆ ಲಂಘಿಸಿದ ಹನುಮಂತನು ಸೀತೆಯೆಲ್ಲಿದ್ದಾಳೆ ಎಂದು ಎಲ್ಲರ ಮನೆಗಳನ್ನು ಹುಡುಕುತ್ತ ಹೊರಟಾಗ ದಶಕಂಠನ ಮಲಗಿದ ಮಂಚದಲ್ಲಿಯೇ ಮಲಗಿದ್ದ ಸತಿಯನ್ನು ನೋಡಿ ಉದ್ಗರಿಸಿದ. ಅವನ ಎಣಿಕೆಯಂತೆ ಅವಳು ಸೀತೆಯೇ ಸರಿ. ಹಾಗಾಗಿಯೇ ಆತ **'ಬಲುದೋಷಕೊಳಗಾದ ಪಾಪಿದಶಕಂಠ ಮಲಗಿರ್ಪ ಸತಿಯಿವಳು ವೈದೇಹಿಯಹುದು'** (ಲಂಕಾದಹನ- ಪಾರ್ತಿಸುಬ್ಬ) ಎಂದು ದುಃಖದಿಂದ ಹೇಳುವ ಪದ್ಯವಿದು.

## 34) ದೀಪಕ

ಈ ರಾಗವು ಬ್ರಹ್ಮಚಕ್ರದ 51 ನೇ ಮೇಳಕರ್ತರಾಗ. ಕಾಮವರ್ಧಿನಿಯಲ್ಲಿ ಉಪಾಂಗಜನ್ಯ. ಆರೋಹಣದಲ್ಲಿ ಋಷಭ ಮತ್ತು ನಿಷಾದಗಳು ವರ್ಜ್ಯ. ಅವರೋಹಣದಲ್ಲಿ ವಕ್ರ ಸಂಪೂರ್ಣ. ಗಾಂಧಾರ ಮಧ್ಯಮ ನಿಷಾದಗಳು ರಾಗ ಛಾಯಾ ಸ್ವರಗಳು. ಇದು ಬಹು ಸ್ವಾರಸ್ಯಕರವಾದ ಭಕ್ತಿರಸ ಪ್ರಧಾನ ಸಾಯಂಕಾಲಿಕ ರಾಗ. ರಾಗವನ್ನು ವಿಸ್ತರಿಸುವುದು ದುಸ್ತರ. 'ಸ ನಿ ದ ಪ ನಿ ಪ' ಎಂಬ ಪ್ರಯೋಗವೇ ಅತಿ ಮುಖ್ಯ.

ಆರೋಹ : ಸ ಗ$_3$ ಮ$_2$ ಪ ದ$_1$ ಪ ಸಾ

ಸ ನಿ$_3$ ದ$_1$ ನಿ$_3$ ಪ ಮ$_2$ ಗ$_3$ ರಿ$_1$ ಸ

ಸಾಯಂಕಾಲವಾಗುತ್ತಿದೆ. ಇಂದೇ ಸತ್ಯವಾನ ಸಾಯುವವನಿದ್ದಾನೆಂದು ಸಾವಿತ್ರಿಗೆ ಗೊತ್ತಾಗಿದೆ. ಮುಂದೆ ಬರುವ ಅನಿಷ್ಟವನ್ನು ಸೂಚಿಸಲೋ ಎಂಬಂತೆ ಸಂಜೆ ಬರುವ ವರ್ಣನೆ ಮುಂದಿನ ಪದ್ಯದಲ್ಲಿದೆ -

**'ಸಂಜೆಯ ಸೂತಕ ಸಂಜನಿತ ಸಂಜನಿತ ಸಂಜನಿತ। ಹೊಸ ಜವ್ವನೆಯ ನಸುಗಪ್ಪಿರುವ ಅಸವಳಿಯದ ದುಕೂಲವನುಟ್ಟು..'** (ಸತ್ಯವಾನ ಸಾವಿತ್ರಿ ಅಥವಾ ಸತೀಶಕ್ತಿ)

ಯಕ್ಷಗಾನದಲ್ಲಿ ಇದರ ಉಲ್ಲೇಖ :-

**'ಜಲಕ್ರೀಡೆಯಾಡಿದರುಲ್ಲಾಸದಿ। ಜಲಕ್ರೀಡೆಯಾಡಿದರುಲ್ಲಾಸದಿ ॥ಪ॥ ಬಲಾಬಲಿಕೆಯೊಳು।**

***ಜಲಕ್ರೀಡೆಯಾಡಲು ವಿಲಾಸ ನಾಟ್ಯದಿ ಕಲಾವಿನೋದದಿ ॥ ಅಪ॥ ಪುರಾರಿ ಸತಿಸಹ ಪರಾಗ ಮುಸುರೆಹ ಸರೋಜದೆಡೆಯೊಳು ವಿರಾಜಿಸುತಬಲು'*** (ಭಸ್ಮಾಸುರ ಮೋಹಿನಿ)

### 35) ಧನ್ಯಾಸಿ

***'ಧನ್ಯಾಸಿ ರಾಗ ಸಂಪೂರ್ಣ ಆರೋಹೇ ರಿ ಧ ವರ್ಜಿತ ।***

***ಪ್ರಾತಃಕಾಲೇ ಪ್ರರೀಯಂತೇ ಗಾನ ತತ್ವಾರ್ಥವೇದ್ದಿಭಿಃ ।'***

ಈ ರಾಗವು ನೇತ್ರ ಚಕ್ರದ 8 ನೆಯ ಮೇಳವಾದ ಹನುಮ ತೋಡಿಯಲ್ಲಿ ಉಪಾಂಗಜನ್ಯ. ಆರೋಹಣದಲ್ಲಿ ಋಷಭ ಧೈವತಗಳು ವರ್ಜ್ಯ. ಆದ ಕಾರಣ ಔಡವ ಭೇದ. ಅವರೋಹಣದಲ್ಲಿ ಸಂಪೂರ್ಣ. ಗಾಂಧಾರ ನಿಷಾಧಗಳೂ ಮಧ್ಯಮ - ನಿಷಾಧಗಳೂ ಪರಸ್ಪರ ವಾದಿ ಸಂವಾದಿಗಳು. ಅವುಗಳೇ ಜೀವ ಮತ್ತು ನ್ಯಾಸ ಸ್ವರಗಳು. ಜಾರುಗಮಕ ಯುಕ್ತವಾಗಿಯೇ ಈ ಸ್ವರಗಳು ಬರುತ್ತವೆ. ಈ ರಾಗದ ದೀನ ಮತ್ತು ಕರುಣಾರಸಗಳಿಗೆ ಗಾಢತೆಯು ಜಾರು ಧೈವತ ಪ್ರಯೋಗದಿಂದಲೇ ಸಾಧ್ಯ. ಶ್ರುತಿ ಭೇದ ಕ್ರಮದಂತೆ ಗಾಂಧಾರ ಷಡ್ಜಗಳನ್ನು ಆಧಾರ ಷಡ್ಜ ಮಾಡಿದರೆ ಕಾಂಭೋಜಿ ಮತ್ತು ಸಾಳಗಬೈರವಿ ರಾಗಗಳು ಕ್ರಮವಾಗಿ ಲಭಿಸುತ್ತವೆ. ಪ್ರಾಚೀನ ರಾಗ, ಪ್ರಾತಃ ಕಾಲದಲ್ಲಿ. ಈ ರಾಗವು ರಂಜನೆ. ತ್ರಿಸ್ಥಾಯಿ ರಕ್ತಿ ರಾಗ. ಲಕ್ಷ್ಯದಲ್ಲಿ ಗಾಂಧಾರ ನಿಷಾಧಗಳೂ ಸೂಕ್ಷ್ಮವಾಗಿ ತೀವ್ರ ಛಾಯೆಯನ್ನು ಹೊಂದುವುದು ಕಂಡುಬರುತ್ತದೆ. ಈ ರಾಗವನ್ನು ಅಖಂಡವಾಗಿ ಬೆಳೆಸಬಹುದು.

ಆರೋಹ : ಸ ಗ$_2$ ಮ$_1$ ಪ ನಿ$_2$ ಸ

ಅವರೋಹ : ಸ ನಿ$_2$ ದ$_1$ ಪ ಮ$_1$ ಗ$_2$ ರಿ$_1$ ಸ

ಯಕ್ಷಗಾನದಲ್ಲಿ ಉಲ್ಲೇಖ :-

***'ಕಾಗೆ ಕಾಕಾ ಎನಲಿ । ಹಕ್ಕಿ ಚಿಲಿಪಿಲಿ ಎನಲಿ । ಕೋಗಿಲೆ ಸ್ವರ ಗೈಯಲಿ । ಕೃಷ್ಣಾ ನಾಗ ಸಂಪಿಗೆ ಅರಳು । ರಾಮ । ಏಳು ನಾರಾಯಣನೇ । ಏಳು ಲಕ್ಷ್ಮೀರಮಣ । ಏಳಯ್ಯ ಕಮಲಾಕ್ಷ ಕಮಲನಾಭಾ । ಏಳಯ್ಯ ಬೆಳಗಾಯಿತು ।'*** (ಉದಯರಾಗ)

**ಭಕ್ತಿರಸ** : - ದೇವಕಿ 8 ನೇ ಗರ್ಭವನ್ನು ಧರಿಸಿದ್ದಾಳೆ. ಶ್ರೀಕೃಷ್ಣ ನಾರಾಯಣ ರೂಪದಲ್ಲಿ ದರ್ಶನವನ್ನು ವಸುದೇವ ದೇವಕಿಯರಿಗೆ ನೀಡುತ್ತಾನೆ. ಆಗ ವಸುದೇವನ ಪದ್ಯ-

***'ಕರುಣಿಸೋ ಕಂಜದಳನೇತ್ರ, । ಕೋಮಲಗಾತ್ರ, ....'*** (ಕಂಸವಧೆ )

**ಕರುಣಾ** :- ದ್ರೌಪದಿಯು ***'ರಣವ ಗಂಟಿಕ್ಕುವನು ಮುರರಿಪು'*** ಎಂದು ಭೀಮನೆಡೆಗೆ ಬಂದರೆ, ಸಂಧಿಯ ಮಾತನ್ನು ಭೀಮ ಹೇಳಿದ್ದಲ್ಲದೆ ತಾವೆಲ್ಲ ಒಪ್ಪಿದ್ದೇವೆಂದು ಹೇಳುತ್ತಾನೆ. ಆಗ ದ್ರೌಪದಿಗೆ ದುಃಖವುಕ್ಕಿ ಬಂದು ಕೇಳುತ್ತಾಳೆ -

***'ಏನಯ್ಯ ಪವನಜನೆ । ಕೌರವನಿಗೆ । ನಾನೇ ದುರ್ಜನಳಾದೆನೇ॥'***



**ವೀರರಸ :-** ಸುಧನ್ವನು ಯುದ್ಧಕ್ಕೆ ಹೊರಡುವ ವೇಷದಲ್ಲಿ ಬಂದಿದ್ದಾನೆ ತಾಯ ಅಪ್ಪಣೆ ಪಡೆಯಲೆಂದು. ಆಗ ಕೃಷ್ಣ ದರ್ಶನಕ್ಕಾಗಿ ತಾವು ಹಯವನ್ನು ಕಟ್ಟುತ್ತೇವೆಂದಾಗ ಅದು ಹೇಗೆ ಎಂದು ಸುಗರ್ಭೆ ಕೇಳುತ್ತಾಳೆ. ಆಗ ಸುಧನ್ವನು ವಿವರಿಸುತ್ತಾನೆ -

**'ತಾಯೆ ಕೇಳ್ ಶ್ರೀಕೃಷ್ಣ ರಾಯನ ಬರಿಸಲು । ಪಾಯವುಂಟದ ಬಲ್ಲೆನು । ಬೀಯಗ ಪಾರ್ಥನ ನೋಯಿಸಲಾಕ್ಷಣ । ಆ ಯದುವರ ಬಹನು '** (ಸುಧನ್ವಾರ್ಜುನ ಕಾಳಗ)

## 36) ಪುನ್ನಾಗ ವರಾಳಿ

**'ಮಂದ್ರ ನಿಷಾದೋರ್ಧ್ವ ಧೈವತಾಂಶ ಪ್ರಮಾಣಕಂ**
**ಸ್ಯಾತ್ಪುನ್ನಾಗ ವರಾಳೇಸ್ತು ಸಗ್ರಹಾ ಸರ್ವಕಾಲಿಕ ॥'**

ಈ ರಾಗವು ಹನುಮ ತೋಡಿಯಲ್ಲಿ ಭಾಷಾಂಗ ಜನ್ಯ. ಮಂದ್ರ ಸ್ಥಾಯಿ ನಿಷಾಧದಿಂದ ಮಧ್ಯಸ್ಥಾಯಿ ನಿಷಾಧದವರೆಗೂ ಸಂಚಾರವುಂಟು. ಸಂಪೂರ್ಣ ಆರೋಹಣ - ಅವರೋಹಣ ಪ್ರಾಚೀನ ರಕ್ತಿ ರಾಗ. ಅರ್ಧ ರಾತ್ರಿಯಲ್ಲಿ ಈ ರಾಗವು ಬಹಳ ಸ್ಫೂರ್ತಿ. ಹಾವಾಡಿಗರು ಪುಂಗಿಯಲ್ಲಿ ಬಾರಿಸುವ ರಾಗವು ಈ ಪುನ್ನಾಗವರಾಳಿಯನ್ನು ಹೋಲುತ್ತದೆ. ರಿಷಭ ಮಧ್ಯಮಗಳು ಜೀವ ಮತ್ತು ನ್ಯಾಸ ಸ್ವರಗಳು. ಶೋಕ ರಸ ನಿಷ್ಪತ್ತಿಯಾಗುತ್ತದೆ. ಜಾರು ಗಮಕಗಳು ಅಧಿಕ. ದುರಿತ ಪ್ರಯೋಗ ರಂಜಕವಲ್ಲ. ಲಕ್ಷ್ಯ ನಿರ್ಣಯವಿಲ್ಲದಿದ್ದಲ್ಲಿ ತೋಡಿ ದೇಶೀ ತೋಡಿ ರಾಗದಂತಾದೀತು.

1 ನೇ ಪಕ್ಷ ಆರೋಹ : ನಿ$_2$ ಸ ರಿ$_1$ ಗ$_2$ ಮ$_1$ ಪ ದ$_1$
ಅವರೋಹ : ನಿ$_2$ ದ$_1$ ಪ ಮ$_1$ ಗ$_2$ ರಿ ಸ$_1$ ನಿ$_2$
2 ನೇ ಪಕ್ಷ ಆರೋಹ : ಸ ರಿ$_1$ ಗ$_2$ ಮ$_1$ ಪ ದ$_1$ ನಿ$_2$
ನಿ$_2$ ದ$_1$ ಪ ಮ$_1$ ಗ$_2$ ರಿ$_1$ ಸ ನಿ$_2$

ಯಕ್ಷಗಾನದಲ್ಲಿ ಉಲ್ಲೇಖವಾದ ಪದ್ಯ. **'ಫುಲ್ಲನಯನ ನೀನೇನೆಂಬರೂ ವಿಭ್ರಮ ಕೊಳದೇ। ನಿಲ್ಲದೆನ್ನ ಮನವು ಸ್ಥಿರದೊಳೂ ॥'** ಇದು ಪ್ರತಿಪಾದಿಸುವ ರಸ ಹಾಸ್ಯ, ಶೃಂಗಾರ, ವೀರ.

ಕೌರವನು ಎಲ್ಲಿ ಅಡಗಿ ಕುಳಿತನೆಂಬುದು ಯಾರಿಗೂ ಗೊತ್ತಿಲ್ಲ. ಅವನ ಇರವನ್ನು ಹುಡುಕಲೆಂದು ಹೋದ ಭೀಮನ ಬೇಹಿನ ಚರರು ಬಂದು ಭೀಮನಲ್ಲಿಗೆ ತಾವು ಕೌರವನನ್ನು ಕಂಡು ಪರಿಯನ್ನು ಭಿನ್ನವಿಸಿಕೊಳ್ಳುತ್ತಾರೆ.

**'ಭರದಿಂ ನೇಮ್ವೆವು ಸ್ವಾಮಿ ನನ್ನೊಡೆಯ । ಪರಾಕು ಜೀಯಾ ॥ '** (ಹಾಸ್ಯ)

**ಶೃಂಗಾರ :** ಸಾಲ್ವನಿಂದ ಪರಿತ್ಯಕ್ತಳಾದ ಅಂಬೆ ಭೀಷ್ಮನಲ್ಲಿಗೆ ಹೊದಾಗ ಅವನೂ ತಿರಸ್ಕರಿಸಲು ಅಡವಿಯಲ್ಲಿ ಓರ್ವಳೇ ಹೋಗುತ್ತಿದ್ದಾಳೆ. ಆಗ ನಿಷಧರಾಜ ಏಕಲವ್ಯ ಅವಳನ್ನು ಕಾಣುತ್ತಾನೆ. ಅವಳನ್ನು ಸೇರುವ ಬಯಕೆ ಮೂಡುತ್ತದೆ. ಆ ಸಂದರ್ಭದಲ್ಲಿ ಹೇಳುವ ಹಾಡು-



***'ಯಾರ್ಮ್ಯಾ ಪೋರಿ ವಿಪಿನದೊಳಗೆ ಓರ್ವಳೆಲ್ಲಿ ಪೋಗ್ತೀ ...'*** (ಭೀಷ್ಮ ವಿಜಯ)

**ವೀರ** :- ಅರ್ಜುನ ಈಶ್ವರನನ್ನು ಕುರಿತು ಕಠಿಣವಾದ ತಪಸ್ಸನ್ನು ಮಾಡುತ್ತಿದ್ದಾನೆ. ಇಂದ್ರಕೀಲ ಪ್ರದೇಶದಲ್ಲಿ ಅವನಿಗೆ ದರ್ಶನ ಕೊಟ್ಟು ಅನುಗ್ರಹ ಮಾಡಬೇಕಾಗಿದೆ ಪರಶಿವನಿಗೆ. ಅದಕ್ಕಾಗಿ ಕಿರಾತ ವೇಷವನ್ನು ತೊಟ್ಟು ಹಂದಿಯ ಬೇಟೆಯಾಡುತ್ತಾನೆ. ಆ ಹಂದಿ ಮೂಕನೆಂಬ ದಾನವ. ಶಿವನು ಬಾಣ ಬಿಟ್ಟ ವೇಳೆಯಲ್ಲಿಯೇ ನರನ ಬಾಣವೂ ಆ ಹಂದಿಗೆ ತಾಗಿ ಅದು ಸತ್ತು ಬಿದ್ದಿದೆ. ಹಂದಿಯನ್ನು ಹುಡುಕುತ್ತ ಬಂದ ಬೇಡನಿಗೆ ಅರ್ಜುನ ಕಾಣುತ್ತಾನೆ. ಅದಕ್ಕಾಗಿ ಕೇಳುತ್ತಾನೆ. ***'ಏನೇನೆಂಬುತ್ತಾ ನುಡಿವುತ್ತಿದ್ದಿ ಮ್ಯಾಂ ಎಲೆ ಹಾರುವಯ್ಯಾ ....'*** (ಇಂದ್ರಕೀಲ)

## 37) ಪೀಲು

ಆರೋಹ : ಮ$_1$ ಪ ದ$_1$ ನಿ$_2$ ಸ ರಿ$_2$ ಗ$_2$ ರಿ$_2$

ಅವರೋಹ : ಸ ರಿ$_2$ ಸ ನಿ$_2$ ದ$_1$ ಪ ಮ$_1$

ಯಕ್ಷಗಾನದ ಉಲ್ಲೇಖ :-

***'ಯಾಚಿಸಬೇಡ ವ್ಯರ್ಥ । ಇದು ಯಾವ ಸ್ವಾರ್ಥ । ಪ್ರಾಚೀನ ಫಲದರ್ಥ ॥ ಯಾಚಿಸಿ ಹೊಟ್ಟೆಯ ತುಂಬಿಸುತಿಹ ಬಡ । ನಾಚಿಕೆಗೆಡುಕನ ವದನವ ನೋಡುವದೇನು? ಬಿಡು ನಾನು । ಇದು ತಾನು । ಮನದೊಳು ವಡಬಡೆನು ॥'*** (ಬ್ರಹ್ಮ ಕಪಾಲ)

***'ನಾನೊಲ್ಲೆ ನಾನೊಲ್ಲೆ ನಾನೊಲ್ಲೆ ನಲ್ಲೆ...'*** (ಭಸ್ಮಾಸುರ ಮೋಹಿನಿ)

ಅಶ್ವಮೇಧ ಯಾಗಕ್ಕೆಂದು ಬಂದ ಅರ್ಜುನನಲ್ಲಿ ಬಬ್ರುವಾಹನನು ಬಿನ್ನವಿಸಿಕೊಳ್ಳುವ ಪದ್ಯ-

***'ವೀರ ಗಂಭೀರ ವಿಚಾರವ ಕೇಳು । ಕಾರುಣ್ಯದಿಂದಲಿ ಗ್ರಹಿಸು ಕೃಪಾಳು ।'*** ( ಬಬ್ರುವಾಹನ ಕಾಳಗ) (ರಚನೆ - ಹೊಸ್ತೋಟ ಮಂಜುನಾಥ ಭಾಗವತ)

ಶೃಂಗಾರವಿದ್ದರೂ ಶಾಂತ ಭಾವದಿಂದಲೇ ಹೇಳುವಂಥ ಅನೇಕ ಸಂಗತಿಗಳಿರುತ್ತವೆ. ಮಡದಿ ಸತ್ಯಭಾಮೆಯ ಸಂಗಡ ಲತ್ತವನಾಡುವಾಗ ನಕ್ಕ ಕೃಷ್ಣನೊಡನೆ ಆ ನಗೆಯ ಕಾರಣವನ್ನು ಕೇಳಿದಾಗ ಕೃಷ್ಣ (ಯಕ್ಷಗಾನದಲ್ಲಿ ಇಂಥ ವ್ಯಕ್ತಿತ್ವ ಇನ್ನೊಬ್ಬನದಿಲ್ಲ) ಹೇಳುತ್ತಾನೆ -

***'ತರುಣಿ ಕೇಳೆಲೆ ನಮ್ಮ ನಗರದ ಹೊರಗೆ । ಪರಿಶೋಭಿಸುತ್ತಿಹ ನಂದನದೊಳಗೆ ।'*** (ಸುಭದ್ರಾ ಕಲ್ಯಾಣ)

## 38) ಬಿಲಹರಿ

***'ಆರೋಹೇ ಮಧ್ಯಮೋ ಉಕ್ತಿ ಕ್ವಚಿದ್ಯೋಗೋ ನಿಷಾದಿಕಃ ।***

***ಬಿಲಹರಿ ರಾಗಗತ್ಯಾ ಸರ್ವಕಾಲೇಷು ಗೀಯತೆ ॥'***

ಈ ರಾಗವು ಧೀರಶಂಕರಾಭರಣದಲ್ಲಿ ಭಾಷಾಂಗ ಜನ್ಯ. ಏಕಸ್ವರ ಭಾಷಾಂಗ ರಾಗ. ಆರೋಹಣದಲ್ಲಿ ಮಧ್ಯಮ ನಿಷಾಧಗಳು ವರ್ಜ್ಯ. ಅವರೋಹಣದಲ್ಲಿ ಕ್ರಮ ಸಂಪೂರ್ಣ.



ಎಂದರೆ ಔಡವ - ಸಂಪೂರ್ಣ ಭೇದ. ಷಡ್ಜ ಸ್ವರವು ಗ್ರಹ. ಋಷಭ, ಗಾಂಧಾರ, ಧೈವತ ಮತ್ತು ನಿಷಾಧಗಳು ರಾಗಛಾಯಾ ಸ್ವರಗಳು. ಋಷಭ , ಧೈವತಗಳು ಪರಸ್ಪರ ವಾದಿ ಸಂವಾದಿಗಳು. ಋಷಭ , ಪಂಚಮ ಮತ್ತು ಧೈವತಗಳು ನ್ಯಾಸ ಸ್ವರ. ಮಧ್ಯಮ ನಿಷಾಧಗಳು ನ್ಯಾಸವಲ್ಲ. ಜಂಟಿ ಮತ್ತು ದಾಟು ಪ್ರಯೋಗಗಳೂ ಜಾರು ಮತ್ತು ಕಂಪಿತ ಗಮಕಗಳೂ ಬರುತ್ತವೆ. ಏಕದೇಶವಾಗಿ ಆರೋಹಣದಲ್ಲಿ ಕಾಕಲಿ ನಿಷಾದವೂ ಅವರೋಹಣದ ದನೀದಪಾ, ಮತ್ತು ಪದನಿಗಳ ಪ್ರಯೋಗಗಳಲ್ಲಿ ಕೈಶಿಕೀ ನಿಷಾದವೂ ಬರುತ್ತವೆ. ಇದು ಸಾರ್ವಕಾಲಿಕವೆಂದು ಉಕ್ತವಾಗಿದ್ದರೂ ಪ್ರಾತಃಕಾಲವೆಂಬುದು ಸರ್ವವಿದಿತ. ಇದು ಪ್ರತಿಪಾದಿಸುವ ರಸ - ವೀರ, ಶೃಂಗಾರ, ಹಾಸ್ಯ. ದೇಶಾಕ್ಷಿ ರಾಗಕ್ಕೂ ಈ ರಾಗಕ್ಕೂ ಸಮಾನ ಗುಣಧರ್ಮಗಳುಂಟು.

ಆರೋಹ : ಸ ರಿ$_2$ ಗ$_3$ ಪ ದ$_2$ ಸ

ಅವರೋಹ : ಸ ನಿ$_3$ ದ$_2$ ಪ ಮ$_1$ ಗ$_3$ ರಿ$_2$ ಸ

ಉದಾ. :

**ಶೃಂಗಾರ** :- ರುಕ್ಮಾಂಗದನು ಬೇಟೆಗೆಂದು ಹೋಗುತ್ತಾನೆ. ಆಗ ***'ಕೇಳಿಸಿತು ಸುಸ್ವರವು ಖೇಚರ ಬಾಲೆಯರ ಸಂಗೀತದಂದದಿ .......'*** (ರುಕ್ಮಾಂಗದ ಚರಿತ್ರೆ)

**ಭಕ್ತಿ**:- ಏಕಾದಶಿಯ ದಿನ ರುಕ್ಮಾಂಗದ ಪೂಜೆಗೆಂದು ಅಣಿಯಾಗುತ್ತಿದ್ದಾನೆ. ಆ ಸಂದರ್ಭದ ಹಾಡು - ***'ಡಿಂಬ ದೇವಾಲಯ ದೊಳಗೆ । ಹಂಸ । ನಂಬ ನಿನ್ನನು ಭಕ್ತಿಯೊಳಗೆ ।'*** (ರುಕ್ಮಾಂಗದ ಚರಿತ್ರೆ)

ಯಕ್ಷಗಾನದಲ್ಲಿಯ ಕೆಲವು ಉಲ್ಲೇಖಗಳು :-

***'ಲೇಸನಾಡಿದೆಯವ್ವ ಈ ಸ್ವಲ್ಪ ಕೆಲಸಕೆ । ಈಸು ಚಿಂತೆಗಳೇಕೆ ಹೇ ಸುಗುಣಾಢ್ಯೆ । ಏಸುದಿನ ಅರಣ್ಯವಾಸದೊಳಿರಬೇಕು । ಆ ಸುದ್ದಿಯೆನಗೀಯೆ । ಹೇ ಶಶಿವದನೆ ॥'*** (ಪಾದುಕಾ ಪಟ್ಟಾಭಿಷೇಕ)

***'ದಶರಥ ಭೂಪಗೆ ಕೌಸಲ್ಯಾ ದೇವಿಯು । ಶಿಶುವ ಕೈಯೊಳ್ಳಗಿತ್ತಳತಿ ಮುದದಿಂಪ॥ ಎಸೆವ ಸಂತಸದಿಂದಾಘ್ರಾಣಿಸಿ ರಾಮನ । ಕುಶಲ ಮೂರ್ತಿಯನೆತ್ತಿ ಸತಿಗಿತ್ತನಾಗ॥'*** (ಪುತ್ರಕಾಮೇಷ್ಟಿ)

***'ಈಕ್ಷಿಸುತ ಭಸ್ಮಾಸುರನು ಬಗೆಯ । ಗೌರಿಯಲಿ ಮೋಹವಪೇಕ್ಷಿಸುತ ಬರುತಿರಲು ಹಿಂಬದಿಯ॥ ಪಕ್ಷಿವಾಹನ ಮಿತ್ರನವನ ಪ । ರೀಕ್ಷಿಸುತ ಬೆನ್ನಟ್ಟಿನೂಕಲು । ರಾಕ್ಷಸನು ತಾ ಕನಲಿ ಮನದಲಿ ॥'*** (ಭಸ್ಮಾಸುರ ಮೋಹಿನಿ )

## 39) ಬೇಗಡೆ

**'ರಿವಚ್ಯಾರ್ಗರೋಹ ಸಂಪೂರ್ಣ ಬೇಗಡಾ ಸರ್ವಕಾಲಿಕಾ '**

ಈ ರಾಗವು ಧೀರಶಂಕರಾಭರಣದಲ್ಲಿ ಭಾಷಾಂಗ ಜನ್ಯ. ಆರೋಹದಲ್ಲಿ ಅವರೋಹಣದಲ್ಲಿ ಕ್ರಮ ಸಂಪೂರ್ಣ. ಈ ರಾಗಕ್ಕೆ ಮ, ನಿ ಗಳು ಜೀವ ಸ್ವರಗಳು. ಮಾ ಪ ಗ ಎಂಬ



ಸಂಚಾರದಲ್ಲಿ ಶುದ್ಧ ಮಧ್ಯಮ ಪ್ರತಿ ಮಧ್ಯಮಗಳ ಮಧ್ಯವರ್ತಿ. ಶ್ರುತಿ ಸ್ಥಾನ ತಗಲಿ ಬೇಗಡೆ ಮಧ್ಯಮವೆಂದು ಅನಿಸಿಕೊಳ್ಳುತ್ತದೆ. (ಗ ರಿ ಗ ಮ ಪ ದ ನಿ, ಸ ದ ಪ ದ ನೀ ಪ ದ ಪ) ಈ ಪ್ರಯೋಗಗಳಲ್ಲಿ ಕೈಶಿಕೀ ಕಾಕಲಿ ನಿಷಾದಗಳೆರಡೂ ಬರುವುದುಂಟು. ದೃತ ನಡಿಗೆಯ ಈ ರಾಗಕ್ಕೆ ರಮಣೀಯ - ಹಾಸ್ಯ, ವೀರ, ಶೃಂಗಾರ, ಅದ್ಭುತ ರಸಗಳೂ ಪ್ರಯೋಗ ಸಾಧ್ಯತೆಯಿಂದ ಕರುಣಾ ರಸವೂ ಆವಿರ್ಭವಿಸುತ್ತದೆ.

ಆರೋಹ : ಸ ಗ$_3$ ರಿ$_2$ ಗ$_3$ ಮ$_1$ ಪ ದ$_2$ ಪ ಸ ನಿ$_3$ ಸಾ

ಸ ನಿ$_3$ ದ$_2$ ಪ ಮ$_1$ ಗ$_3$ ರಿ$_2$ ಸ

ಯಕ್ಷಗಾನದಲ್ಲಿಯ ಉಲ್ಲೇಖಗಳು :-

***'ವಂದಿಸುವೆ ಗುಣವೃಂದ ಮುನಿತಿಲಕಾ । ಕ್ಷಮಿಸುವದು ತಪ್ಪುಗ । ಳೊಂದನೆಣಿಸದೆ ಚಂದದಿಂ ಬಳಿಕಾ ॥ ಎಂದರೇನರ ಬಿಂದ ಶರದುರಿ । ಯಿಂದ ಬಳಲುತ ನೊಂದು ಮನದಲಿ । ಮುಂದುಗಾಣದೆ ನಿಂದಿರಲು ನಡೆತಂದೆ ನೀ ನಾನಂದದಿಂದಲಿ ॥'*** (ಕುಮಾರ ವಿಜಯ)

***'ಉಂಡು ದಣಿದರು ಸರ್ವರಾಕ್ಷಣದಿ । ಕಂಡಾಗ ನೃಪನೂ । ಮಂಡೆಯನು ತೂಗುತ್ತ ಸಂತಸದಿ । ಚಂಡ ಮಹಿಪನೆ ನಿನ್ನ ಮಹಿಮೆಯು । ಖಂಡ ಪರಶುಗೆ ಪೋಲು ತಿರ್ಪುದು । ಕಂಡು ಕಾಣದ ತೆರದಿ ಶಾಖವು । ದಿಂಡೆ ರಾಶಿಯ ಭಕ್ಷ್ಯವಾದದು ॥'*** (ಅದ್ಭುತ) ॥(ಕೌಶಿಕ ಚರಿತ್ರೆ)

***'ಹರಸಿ ಮುನಿದರು ಬಿಡೆನು ಧರೆಯನ್ನು । ಸುದರ್ಶನಂಗೀ । ಪರಿಯ ಮೇಲಣ ಆಶೆ ಬೇಡಿನ್ನು । ತೆರಳಿ ಪರರಾ ಆಶೆ ಬೇಡುತಾ । ತಿರಿದು ಭಿಕ್ಷವ ನುಣ್ಣಲೀತನು । ದೊರೆಯು ತಾನಾಗಿರ್ಪನೆಂಬುವ ಪರಮಕಾಂಕ್ಷೆಯು ಬೇಡವಾತಗೆ ॥'*** (ವೀರರಸ) (ಶಶಿಕಲಾ ಸ್ವಯಂವರ)

***'ಇಳಿದು ಮೇನಕೆ ಬಂದಳಿಳೆಗೆ ಸೊಂಪಿನಲೀ । ಲಲಿತಾ ವಯ ವದನಿರ್ಮಲದ ಕಂಪಿನಲೀ । ಕಲಶ ಕುಚಂಗಳ ಬಲುಹಿನಿಂಪಿನಲೀ॥ ಬಲವೇರಿ ಮುಖ್ಯರ ಬೆಂಬಲದ ನೆಂಪಿನಲೀ॥ ಲಲನೆಯಂಗವು ಹೊಳೆವು ತಂಗಜನೊಲವೊ ಮೇನಕೆಯೋಲವೋ ಭಾವಿಸಿ ತಿಳಿಯಧವಿನೆ । ಮುನಿಪ ನಿರ್ದಾವನವ ಸೇರಿದಳು । ತತ್ತಾಪಸನ ಲೋ । ಚನದ ಬಳಿಗಾ ವನಿತೆ ಸಾರಿದಳು ॥'*** (ಶೃಂಗಾರ) (ವಿಶ್ವಾಮಿತ್ರ ಮೇನಕೆ )

## 40) ಮಧುಮಾಧವಿ

ಈ ಮಧುಮಾಧವೀ ರಾಗವು ಸಂಗೀತ ಶಾಸ್ತ್ರದಲ್ಲಿ ಕಾಣಬರುವುದಿಲ್ಲ. ಆದರೆ ಯಕ್ಷಗಾನದಲ್ಲಿ ತೀರ ಪ್ರಚಲಿತವಿದ್ದು ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ. ಹಳಬರಿಂದ ಹೇಳಿಸಿ, ಕೇಳಿ, ಸ್ವರ ಸ್ಥಾನ ಗುರುತಿಸಿ ಸರಿಗಮ ಕೊಡಲಾಗಿದೆ. ಸಂಶೋಧನೆಗೆ ತುಂಬ ಅವಕಾಶವಿದೆ. ಖರಹರಪ್ರಿಯ ಮೇಳದಂತೆ ಭಾಸವಾಗುತ್ತದೆ.

ಆರೋಹ : ಪ ನಿ$_2$ ಸ ರಿ$_2$ ಗ$_1$

ಅವರೋಹ : ಮ$_1$ ಗ$_1$ ರಿ$_2$ ಸ ನೀ$_2$

ಯಕ್ಷಗಾನದಲ್ಲಿ ಉಲ್ಲೇಖವಾದದ್ದು:-

***'ಹಂಸಕೇತನಾದಿಗಳೆಲ್ಲ ಕೇಳಿ । ವಂಶಪರಾಧಿಗುಪಾಯವ ಪೇಳಿ ॥ ಕಂದರೆನಗೆ ಇಲ್ಲ ಕಾಂತೆ ಸೌಭದ್ರೆಯೊಳು । ನಂದನನಭಿಮನ್ಯು ಓರ್ವಾತ ಪುಟ್ಟ ॥'*** ಮುಂದುವರೆದು ***'ರಣದಿ ಮೆರೆದು ರಾಯರನೆಲ್ಲ। ಸಂದನು ಸುರಪುರಕೆ ಇಂದು ಕುಲಾಧಿಪ ॥ '*** (ಬಬ್ರುವಾಹನ ಕಾಳಗ)

***'ಕುರುಕುಲಾನ್ವಯ ತಿಲಕ ಬಾ ಬಾ । ತರಳಬಾರೀನಿಶಿತ ಕಾಲದಿ । ತೆರಳಿಬಂದಿಹೆ ಯೇತಕೋರ್ವನೆ । ಪೇಳು ಪೇಳೈ ॥'*** ( ಭೀಷ್ಮಾರ್ಜುನ)

***'ಪರದೇಶಿಗಳಿಗ್ಯಾಕೆ ಭವರ ಭೂಪರೊಳು '*** ( ಕೃಷ್ಣಸಂಧಾನ)

ಲಾಸ್ಯ : ಶೃಂಗಾರ :- ***'ಮದನನೆಂಬ ದುರಾತ್ಮ ಹೃದಯವನು ಸುಡುತಿಹನು ಚದುರೆ ನಿನ್ನಂಗ...'*** (ವಿದ್ಯುನ್ಮತಿ ಕಲ್ಯಾಣ )

ವನ ವಿಹಾರದಲ್ಲಿ ವಿದ್ಯುನ್ಮತಿಯನ್ನು ಕಂಡು ಮೋಹಗೊಂಡ ಇಂದ್ರನ ಪುತ್ರ ಜಯಂತ ಅವಳೊಡನೆ ತನ್ನ ಮನದಭಿಷ್ಟವನ್ನು ತೋಡಿಕೊಳ್ಳುವ ಪದ್ಯವಿದು.

## 41) ಮಾರವಿ

ಮಾರವಿ ಎಂಬ ರಾಗ ಸಂಗೀತ ಶಾಸ್ತ್ರದ ಪಟ್ಟಿಯಲ್ಲಿ ಇಲ್ಲ. ಆದರೆ ಭೈರವನ ಮಡದಿಯರಾದ ಭೈರವಿ, ತೋಡಿ, ಮಾಳವಿ ಈ ರಾಗಿಣಿಯರ ಪಟ್ಟಿಯಲ್ಲಿ ಮಾರಪಿ ಕಂಡುಬರುತ್ತದೆ. ಭೈರವಿ ರಾಗಕ್ಕೆ ರಿ ಮತ್ತು ದೈವತ ವರ್ಜ್ಯ ಮಾಡಿದರೆ ಮಾರವಿ ರಾಗವಾಗುತ್ತದೆ.

ಆರೋಹ : ಸ ಗ$_3$ ಮ$_1$ ಪ ನಿ$_2$ ಸಾ

ಸಾ ನಿ$_2$ ಪ ಮ$_1$ ಗ$_3$ ಸಾ

ಯಕ್ಷಗಾನದಲ್ಲಿ ಉಲ್ಲೇಖ : -

***'ಆರ ವಾಜಿ ನೋಡಿರಯ್ಯ । ಧೀರ ಮಂತ್ರೀಶ । ಗಾರು ಆಗಬೇಡಿ ಕಂಡು । ಭೂರಿ ಮಾರ್ಬಲದ ದಂಡು ॥'*** (ಬಬ್ರುವಾಹನ ಕಾಳಗ )

***'ಚರರೆಂದುದ ಕೇಳಿ ನಂದನ। ಪಾಲ ಕೋಪವ ತಾಳುತಾ ॥ ನಾರಿ ರಾಧೆಯು ಎಲ್ಲಿ ಕರೆ ಕರೆ। ಎಂದು ದೂತರಿಗರುಹುತಾ ॥'*** ( ಚಂದ್ರಾವಳಿ ಪ್ರಸಂಗ )

***'ಏನನುಸುರಿದೆಯೋ । ಎಲೋ ಭಾವ । ಎನನುಸುರಿದೆಯೋ ॥ ಏನನುಸುರಿದೆ ಇನ್ನೊಮ್ಮೆ ನುಡಿಯದ ನಾನು ಕೇಳುವೆನೆಂದಳು । ಕ್ರೋಧದೊಳು ॥'*** ( ಚಂದ್ರಾವಳಿ ವಿಲಾಸ )

ವೀರ ರಸ, ಶಾಂತ ರಸಗಳ ಪ್ರತಿಪಾದನೆ ಈ ರಾಗದಿಂದ ಆಗುತ್ತದೆ.

ಉದಾ. : ವೀರ : ***'ಆಗ ಸುಧನ್ವನು ಬೇಗದಿ ರಣಕನುವಾಗುತ ಮುದದಿಂದ । ಬಾಗುತ***



***ಜನನಿಗೊಂದಿಸುತಲೆ ವಿನಮಿತನಾಗುತಲಿಂತೆಂದ '*** (ಸುಧನ್ವಾರ್ಜುನ)

ಶಾಂತರಸ : (ಲಾಸ್ಯ ಮಿಶ್ರಿತ) ಭೀಷ್ಮ, ಕೃಷ್ಣನನ್ನು ಕಂಡು ಅವನ ಭಕ್ತರ ಮೇಲಿನ ಪ್ರೀತಿಯನ್ನು ವರ್ಣಿಸಿದಾಗ ಕೇಳಿದ ಕೃಷ್ಣ ಹೇಳುತ್ತಾನೆ - ***'ಗರುಡಧ್ವಜನದ ಕೇಳುತ ಗಂಗಾ ತರಳನ ನುಡಿಗಳನು । ದುರಿತಗಳೊದಗದ ತೆರದೊಳು ಭಕ್ತರ ಪೊರೆವುದು ಬಿರುದೆಮ್ಮ ॥'*** (ಭೀಷ್ಮಾರ್ಜುನ)

## 42) ಮುಖಾರಿ

***'ಮುಖಾರಾಭ್ಯಸ್ಮಿ ರಾಗಸ್ಯ ಆರೋಹೇ ಗ ನಿ ವರ್ಜಿತಃ ।***
***ಸಂಪೂರ್ಣೋ ಸಗ್ರಹೋಪೇತಸ್ಸರ್ವಕಾಲೇಷು ಗೀಯತೇ ॥ '***

ಈ ರಾಗವು ನಟಭೈರವೀ ಮೇಳದಲ್ಲಿ ಭಾಷಾಂಗ ಜನ್ಯ. ಆರೋಹದಲ್ಲಿ ಗಾಂಧಾರ - ನಿಷಾಧಗಳು ವರ್ಜ್ಯ. ಅವರೋಹಣದಲ್ಲಿ ಸಂಪೂರ್ಣ. ಆರೋಹದಲ್ಲಿ ಚತುಃಶ್ರುತಿ ದೈವತ. ಅವರೋಹಣದಲ್ಲಿ ಶುದ್ಧ ದೈವತ, ಷಡ್ಜಗ್ರಹ, ರಿ ಮ ನಿ ಗಳು ಜೀವನ್ಯಾಸ ಸ್ವರಗಳು. ನಿ ದ ಪಾ ಪ ನಿ ದ ಸಾ ಎಂಬಲ್ಲಿ ದೈವತವು ಚತುಃಶ್ರುತಿಯೇ ಸರ್ವಕಾಲಿಕ ರಾಗ.

ಆರೋಹ : ಸ ರಿ$_2$ ಮ$_1$ ಪ ದ$_2$ ಸಾ

ಅವರೋಹ : ಸ ನಿ$_2$ ದ$_1$ ಪ ಮ$_1$ ಗ$_2$ ರಿ$_2$ ಸ

ಯಕ್ಷಗಾನದಲ್ಲಿ ಉಲ್ಲೇಖ :-

***'ತರಳಾ ಸಚಿವ ಪುತ್ರ' ತಾನು । ವರ ಚಿತ್ರಧ್ವಜನು । ಧುರದೊಳ್ ಕೆಡಹಿದ ವೀರರನ್ನು ॥ ಕರಿತುರಗವ ಸಂಹರಿಸುತದಳವನು । ತರಣಿಸುತನ ಪುರವರ ಕಟ್ಟಿದ ಮೇಣ್ । ಮೆರೆದನು ಶಕ್ರನ ತರಳನ ಸುತನೋ । ಉರು ವಿಕ್ರಮನಿದ । ನೊರೆಯಲಲೆಂತೈ ॥ '*** (ರತ್ನಾವತೀ ಕಲ್ಯಾಣ - ಮುದ್ದಣ)

ರಾಜನಿಗೆ ಮುಂದೇನಾದರೂ ಕ್ರಮ ಕೈಕೊಳ್ಳುವಂತೆ ಸೂಚಿಸಲು, ತಮ್ಮ ಅಸಹಾಯಕತೆಯನ್ನು ಹಾಸ್ಯಗಾರರು (ದೂತರು) ತೋಡಿಕೊಳ್ಳುವುದುಂಟು. ಉದಾಹರಣೆಗೆ : ಅರ್ಜುನ ಸಂನ್ಯಾಸಿಯನ್ನು ಮಾತನಾಡಿಸಲು ಪ್ರಯತ್ನಿಸಿದ ವನಪಾಲಕರಿಗೆ ಫಲ ಸಿಗಲಿಲ್ಲ. ಈ ಸಂಗತಿಯನ್ನು ಬಲರಾಮ ಪ್ರಭುಗಳಿಗೆ ತಿಳಿಸುವುದೇ ಸೂಕ್ತವೆಂದು ತಿಳಿದು ಅವನಲ್ಲಿಗೆ ಬಂದು ಹೇಳುತ್ತಾನೆ ***'ಲಾಲಿಸಬೇಕು ಜೀಯ । ಬಲಭದ್ರರಾಯ ।'*** (ಸುಭದ್ರಾ ಕಲ್ಯಾಣ )

## 43) ಮೋಹನ ಕಲ್ಯಾಣಿ

ಆರೋಹ : ಸ ರಿ$_2$ ಗ$_3$ ಪ ದ$_2$ ಸಾ

ಸ ನಿ$_3$ ದ$_2$ ಪ ಮ$_2$ ಗ$_3$ ರಿ$_2$ ಸ

ಇದು ಶಾಂತವಾದ ಲಾಸ್ಯವನ್ನು ವಿಶೇಷತಃ ಪ್ರತಿಪಾದಿಸುತ್ತಿದೆ. ಉದಾ. : ***'ಶಶಿವಂಶದಭ್ಯುದಯಗಳೂ । ನಿಮ್ಮ । ದೆಸೆಯಿಂದಲಪ್ಪುದು ನಿಶ್ಚಯವೂ ....'*** (ಭೀಷ್ಮ ವಿಜಯ )



(ಕಾಶಿಯಿಂದ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಕರೆತಂದ ಭೀಷ್ಮ ತನ್ನ ಇಚ್ಛೆಯನ್ನು ಹೇಳಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ. ಹಾಗೆ ಒಂದು ದಿನ ತನ್ನ ಅಭಿಷ್ಟವನ್ನು ಅವರೊಡನೆ ಹೇಳಲುದ್ಯುಕ್ತನಾಗುತ್ತಾನೆ. ಆಗ ಭಾಗವತರು ಈ ಹಾಡನ್ನು ಹೇಳಬೇಕಾಗುತ್ತದೆ.)

## 44) ಸುರುಟಿ

ಇದು ಉತ್ಸಾಹವನ್ನು ನೀಡುವ ರಾಗ

***'ಸುರೂಚಸ್ತು ಆರೋಹೇ ಗ ಧಾ ತ್ವಸ್ವಾ ಪ್ರಗೀಯತೇ '*** ಈ ರಾಗವು ಹರಿಕಾಂಬೋಜಿ ಮೇಳದಲ್ಲಿ ಜನ್ಯ. ಆರೋಹಣದಲ್ಲಿ ಗಾಂಧಾರ ದೈವತಗಳು ವರ್ಜ್ಯ. ಅವರೋಹಣದಲ್ಲಿ ಸಂಪೂರ್ಣ. ಇದು ದೇಶೀಯ ರಾಗ. ಸ್ವಚ್ಛರೂಪವು ಅಭಿವ್ಯಕ್ತವಾಗುವ ಅತ್ಯಂತ ಹೃದಯಂಗಮವಾದ ರಸಾವೇಶ ವೈವಿಧ್ಯಪೂರಿತವಾದ ರಾಗ. ಋಷಭ, ಮಧ್ಯಮ ಮತ್ತು ನಿಷಾಧಗಳು ದೀರ್ಘವಾಗಿರುವುದರಿಂದ ಇವೇ ರಾಗದ ಛಾಯಾ ಮತ್ತು ಜೀವ ಸ್ವರಗಳು. ಅವುಗಳ ನಿಯತ ಸ್ಥಾನಗಳಿಗಿಂತ ತೀವ್ರ ಛಾಯೆಯು ಭಾಸವಾಗುತ್ತದೆ. ಕಾಕಲಿ ನಿಷಾಧವೂ ಮತ್ತು ಅಪರೂಪ ಸಂಚಾರದಲ್ಲಿ ಸಾಧಾರಣ ಗಾಂಧಾರವೂ ಪ್ರಯುಕ್ತವಾಗಿದೆ. ಋಷಭಕ್ಕೆ ಮಧ್ಯಮ ಸ್ವರದಿಂದ ,. ನಿಷಾಧಕ್ಕೆ ಪಂಚಮ ಸ್ವರದಿಂದ ಜಾರು ಗಮಕವನ್ನು ಪ್ರಯೋಗಿಸಿದರೆ ಬಹು ಸ್ವಾರಸ್ಯವಾಗುತ್ತದೆ. ಮಂದ್ರಸ್ಥಾಯಿಯ ನಿಷಾಧದಿಂದ ಕೆಳಗೆ ಸಂಚಾರವಿಲ್ಲ.

ರಾತ್ರಿಕಾಲಿಕ ರಾಗ :

ಆರೋಹ : ನಿ$_2$ ಸ ರಿ$_2$ ಮ$_1$ ಪ ನೀ$_2$ ಸಾ

ಅವರೋಹ : ಸ ನೀ$_2$ ದ$_2$ ಪ ಮಾ$_1$ ಗ$_3$ ರಿ$_2$ ಸ

ಯಕ್ಷಗಾನದಲ್ಲಿ ಉಲ್ಲೇಖವಾದವುಗಳು :-

***'ಕೋಮಲಾಂಗಿ ಕೇಳೆ । ಮದಗಜ ಗಾಮಿನಿ ಪಾಂಚಾಲೆ ॥ ಕಾಮುಕ ಕುರುಭೂಕಾಂತನ ನಿಳಯಕೆ। ಸ್ವಾಮಿಯ ಸಂಧಿಗೆ ಧರ್ಮಜ ಕಳುಹುವ ॥*** ( ಕೃಷ್ಣಸಂಧಾನ)

***''ಪಡ ಪಡ ರಜನೀಚರ ಕೇಳ್ । ಬಿಡು ಬಿಡು ಸಮರವನು । ಪಡೆಯೋಡಿದು ಉಳಿದೋರ್ವನೆ। ಮಡಿಯದಿರ್ರೈ ನೀನು ॥'*** (ವೃತ್ರಾಸುರ ಕಾಳಗ)

***'ಬಾರೋ ತಮ್ಮ ದುಃಶ್ಯಾಸ ನೀನೀಗ। ತೋರಿಸು ನಿನ್ನ ಕೈಗುಣವನು ಬೇಗ ॥*** (ಕರ್ಣಾರ್ಜುನ ಕಾಳಗ)

ಲಕ್ಷ್ಮಣನನ್ನು ರಾಮ ಬಾಗಿಲ ಕಾಯಲು ಬರ ಹೇಳುವನು. ಯಾಕೆಂದರೆ, ಅವನಿಗೆ ತನ್ನ ತಮ್ಮನ ಮೇಲೆ ಅತೀವ ವಿಶ್ವಾಸ. ಗೌಪ್ಯ ರಕ್ಷಣೆ ಮಹತ್ವವಿಲ್ಲಿ. ಎಂಥ ಸಂದರ್ಭದಲ್ಲಿಯೂ ಯಾರನ್ನೂ ಒಳಗೆ ಬಿಡಬಾರದೆಂಬುದು ಕಾಲ ಪುರುಷನ ಇಚ್ಛೆ. ಆದ ಕಾರಣ ತನ್ನನ್ನು ಬಿಟ್ಟರೆ ಅಷ್ಟು ಸಮರ್ಥರು ಯಾರೆಂದರೆ ಲಕ್ಷ್ಮಣನೇ . ಕಾರಣ ರಾಮನು ಲಕ್ಷ್ಮಣನನ್ನು ಕರೆಯುತ್ತಾನೆ.



ಈ ಸಂದರ್ಭದಲ್ಲಿ ಭಾಗವತರು ಹೇಳುತ್ತಾರೆ **'ಲಕ್ಷ್ಮಣ ನೀ ಬೇಗ । ಗೌಷ್ಪದ । ರಕ್ಷಣೆಗೇಳೀಗ॥'** (ರಾಮ ನಿರ್ಯಾಣ - ಹೊಸ್ತೋಟ ಮಂಜುನಾಥ ಭಾಗವತ)

## 45) ಹಂಸಧ್ವನಿ

ಈ ರಾಗವು ಧೀರಶಂಕರಾಭರಣದಲ್ಲಿ ಜನ್ಯ. ದಿ॥ ರಾಮಸ್ವಾಮಿ ದೀಕ್ಷಿತರು ಸೃಷ್ಟಿಸಿದ ರಾಗವಿದು. ಆರೋಹಣ ಅವರೋಹಣದಲ್ಲಿ ಮಧ್ಯಮ -ಧೈವತಗಳು ವರ್ಜ್ಯ. ಆದ ಕಾರಣ ಔಡವ ಔಡವ ಭೇದ. ಗಾಂಧಾರ - ನಿಷಾದಗಳು ಪರಸ್ಪರ ವಾದಿ ಸಂವಾದಿಗಳು. ಈ ರಾಗದ ಎಲ್ಲಾಸ್ವರಗಳೂ ಜೀವ ಮತ್ತು ನ್ಯಾಸ ಸ್ವರಗಳಾಗುತ್ತವೆ. ದಾಟು ಮತ್ತು ಜಂಟಿ ಪ್ರಯೋಗಗಳು ಬಹು ಸ್ವಾರಸ್ಯವಾಗಿರುತ್ತವೆ. ತೀವ್ರ ಸ್ವರ ಸ್ಥಾನಗಳಿರುವುದರಿಂದ ಹಾಡುಗಾರಿಕೆಯ ಪ್ರಾರಂಭದಲ್ಲಿ ಬಹು ವಿಜ್ರಂಭಣೆಯಾಗಿರುತ್ತದೆ. ಕೇಳುವಾಗ ಹುರುಪನ್ನುಂಟು ಮಾಡುತ್ತವೆ. ದ್ರುತನಡಿಗೆಯುಳ್ಳ ಸಾಯಂಕಾಲಿಕ ತ್ರಿಸ್ಥಾಯಿ - ವಿಸ್ತಾರ ಮಾಡಲು ಅವಕಾಶವನ್ನು ಹೊಂದಿರುವ ಸುಂದರವಾದ ರಾಗ. ವೀರ ಅದ್ಭುತ ರಸಗಳುಂಟಾಗುತ್ತವೆ.

ಆರೋಹ : ಸ ರಿ$_2$ ಗ$_3$ ಪ ನಿ$_3$ ಸ

ಅವರೋಹ : ಸ ನಿ$_3$ ಪ ಗ$_3$ ರಿ$_2$ ಸ

ಯಕ್ಷಗಾನದಲ್ಲಿ ಉಕ್ತವಾದದ್ದು:

**'ಏಸುಜನ್ಮ ಸುಕ್ರತ ಫಲದೊಳು । ಅನುಗಾಲವೆಲ್ಲ । ವಾಸಿಸುತ್ತಲಿಹವು ಖಗಗಳು ॥ ದಾಸರೊಡೆಯುಗೊಂದಿಸುವವೋಲಾಸೆಯಿಂದ ಬಾಗಿ ಶಿರವ । ನೋಸರಿಸುತ ಮೆಲ್ಲು ತಿಹವು ತೋಷದಿಂದಲಮಿತ ಫಲವ ॥** (ಕನಕಮಾಲಿನಿ ಪರಿಣಯ)

ವೀರ : **'ಪೂತುರೆ ಸುಧನ್ವ ಸತ್ವಾತಿ ಶಯದಿಂದ ವಿಖ್ಯಾತನಹೆ ಮದ್ರಥವ ...'**(ಸುಧನ್ವಾರ್ಜುನ)

ಹಾಸ್ಯ : **'ತಿರುಕನೀನಾರು ಪೇಳು। ತಿರುಗದಿರಲ್ಲೇ ನಿಲ್ಲು ।'** (ದ್ರೋಣ ಪ್ರತಿಜ್ಞೆ- ಹೊಸ್ತೋಟ ಮಂಜುನಾಥ ಭಾಗವತ)

ಶಾಂತ : **'ಕಾಡೊಳಗೇನೀ ನಾದ ವೆನುತಾ ತಾ । ನೋಡಿದನಾ ಕಡೆಗೆ '** (ಚಂಡ - ಮಹಾಸೇನ - ಹೊಸ್ತೋಟ ಮಂಜುನಾಥ ಭಾಗವತ)

ಭಕ್ತಿ :- **'ಗಜಮುಖ ನಾ ನಿನ್ನ ಪಾದವ ನೆನೆವೆ। ನಿಜವಾಗಿ ಕರುಣಿಸು ವರಗಳ ಪ್ರಭುವೆ ।'**

## 46) ಹುಸೇನಿ

**'ಹುಶಾನಿ ರಾಗಸ್ಸಂಪೂರ್ಣಸ್ಸಗ್ರಹ ಸಾರ್ವಕಾಲಿಕಃ '**

ಈ ರಾಗವು 37 ನೇ ಮೇಳವಾದ ಖರಹರ ಪ್ರಿಯ ಮೇಳದಲ್ಲಿ ಭಾಷಾಂಗ ಜನ್ಯ. ಭಾಷಾಂಗ ಸ್ವರವು ಶುದ್ಧ ಧೈವತ. ದೇಶೀಯ ರಕ್ತಿ ರಾಗ . ಸಂಪೂರ್ಣ ಆರೋಹಣ - ಅವರೋಹಣ ಋಷಭ ಮಧ್ಯಮ ನಿಷಾಧಗಳು ಜೀವ ಮತ್ತು ನ್ಯಾಸ ಸ್ವರಗಳು, ಶೃಂಗಾರ , ಹಾಸ್ಯ



ಮತ್ತು ದೀನ ರಸಗಳು ಪ್ರಧಾನವಾದ ಸಾರ್ವಕಾಲಿಕ ರಾಗ. ಈ ರಾಗದಲ್ಲಿ ಕ್ಷೇತ್ರಜ್ಞ ಪಾದಗಳೇನಕವಿದೆ. ಮಾದಪಮಾಗರಿಸ ಪದಮಾ, ಪದಾಪಮಾ, ಸನೀದಪ, ಪದನಿಪದಪ, ಮಾನೀದಾಪ , ಪದನಿದಪ, ಈ ಪ್ರಯೋಗಗಳಲ್ಲಿ ಶುದ್ಧ ದೈವತವು ಬರುತ್ತದೆ. ಮಂದ್ರ ದೈವತದಿಂದ ಕೆಳಗಡೆ ಸಂಚಾರಗಳು ಕಂಡುಬರುವುದಿಲ್ಲ. ಸಂಚಾರಗಳು ಬಲು ಸ್ಫೂರ್ತಿದಾಯಕ.

ಆರೋಹಣ : ಸ ರಿ$_2$ ಗ$_2$ ಮಾ$_1$ ಪ ದ$_2$ ನಿ$_2$ ಸ

ಅವರೋಹಣ : ಸ ನಿ$_2$ ದ$_2$ ಪ ಮಾ$_1$ ಗ$_2$ ರಿ$_2$ ಸ

ಶೃಂಗಾರ : **'ವಹವ್ವಾರೆ ನೋಡಿರಿ ಈ ಕಡೆಯಾ । ಬಹ । ನಾರಿ ಯಾರಿವಳೆಂದು ಪೇಳಿರಯ್ಯ॥ ಉಡುಗಣಮಧ್ಯದ ಶಶಿಯಂತೆ । ಬಹು । ಬೆಡಗಿನೊಳ್ಬಹಳಿವಳ್ಯಾವ ಕಾಂತೇ ।'** (ಚಂದ್ರಾವಳಿ ವಿಲಾಸ)

ಹಾಸ್ಯ : **'ಹೊರಬಾಗಿಲಿನೊಳ್ ಮೋಜಿನ ಹುಡುಗಿ ಮಿರಿ ಮಿರಿ ಮಿಂಚುತ ನಿಂದವ್ಳೆ ।'** (ಭೀಷ್ಮ ವಿಜಯ)

## 47) ಅಸಾವೇರಿ

**'ಅಸಾವೇರಾಖ್ಯ ರಾಗಶ್ಚ ಆರೋಹೇ ಗ ನಿ ವರ್ಜಿತ**

**ಸಂಪೂರ್ಣಸ್ಸಗ್ರಹೋಪೇತ ಸರ್ವಕಾಲೇಷು ಗೀಯತೇ॥'**

ಈ ರಾಗವು ಪ್ರಾಚೀನರಾಗ. ಹನುಮ ತೋಡಿಯಲ್ಲಿ ಭಾಷಾಂಗಜನ್ಯ . ಆರೋಹಣದಲ್ಲಿ ಗಾಂಧಾರ ನಿಷಾಧಗಳು ವರ್ಜ್ಯ. ಆದ ಕಾರಣ ಔಡವ. ರಿಷಭ - ದೈವತಗಳೂ ಮತ್ತು ಗಾಂಧಾರ ನಿಷಾಧಗಳೂ ಪರಸ್ಪರ ವಾದಿ ಸಂವಾದಿಗಳು. ರಕ್ತಿ ಮತ್ತು ಪ್ರಾತಃಕಾಲಿಕ ರಾಗ. ಕರುಣಾ ಮತ್ತು ಭೀಭತ್ಸ ರಸಗಳುಂಟಾಗುತ್ತವೆ. ಆರೋಹಣದ ರಿಷಭವು ಪ್ರಾಯಕವಾಗಿಯೂ ಚತಃ ಶ್ರುತಿಕವಾಗಿಯೂ ಅವರೋಹಣ ಗಾಂಧಾರವು ಶುದ್ಧ ಗಾಂಧಾರವಾಗಿಯೂ ಬರುವುದೇ ಸಂಪ್ರದಾಯ. ಶುದ್ಧ ನಿಷಾಧವೂ ಬರುತ್ತದೆ.

ರಿ ಷು ಪ ದಾ ಪ, ರೀ ಮ ಪಾ ಮ ಇಲ್ಲಿ ಚತುಃಶ್ರುತಿ ರಿಷಭವೂ, ಪ ಮ ಗಾ ರಿ ಸ, ಪ ಮ ರಿ ಗಾ ರಿ ಸ ಇಲ್ಲಿ ಶುದ್ಧ ಗಾಂಧಾರವೂ, ಪಾ ದ ನೀ ದ ಪ ಇಲ್ಲಿ ಶುದ್ಧ ನಿಷಾಧವೂ ಪ್ರಾಯೋಜಿತವಾಗಿರುತ್ತದೆ.

ಆರೋಹ : ಸ ರಿ$_1$ ಮ$_1$ ಪ ದ$_1$ ಸಾ

ಸ ನೀ$_2$ ಸ ಪ ದ$_1$ ಮ$_1$ ಪ ಮ$_1$ ರಿ$_1$ ಗಾ$_1$ ರಿ$_1$ ಸ

ಯಕ್ಷಗಾನದಲ್ಲಿಯ ಉಲ್ಲೇಖ :-

**'ಅಗಲಬೇಡ ರಮಣಾ । ನೀಯ । ನ್ನಗಲಬೇಡ ರಮಣಾ ॥ ಅಗಲ ಬೇಡ ನೀ ರಂಗ ಸರ್ವಥಾ। ಸೊಗಸುಗಾರ್ತಿ ನಿನ್ನ। ಬೇಗ ಬಿಡಲೋ ಪ್ರಿಯಾ ॥'**



## 48) ನೀಲಾಂಬರಿ

***'ನೀಲಾಂಬರಾಖ್ಯ ರಾಗಸ್ತು ಸಂಪೂರ್ಣೋ ವಕ್ರಧೈವತಃ***
***ಅವರೋಹೇರಿ ವಕ್ರಸ್ಸ್ಯಾದ್ಗೀಯತೇ ಲಕ್ಷ್ಯವೇದಿಭಿಃ'***

ಈ ರಾಗವು ಧೀರಶಂಕರಾಭರಣದಲ್ಲಿ ಭಾಷಾಂಗ ಜನ್ಯ. ಆರೋಹಣ ಅವರೋಹಣದಲ್ಲಿ ವಕ್ರಧೈವತ ಮತ್ತು ವಕ್ರ ಋಷಭವನ್ನು ಹೊಂದಿ ಸಂಪೂರ್ಣವಾಗಿದೆ. ಷಡ್ಜಸ್ವರವು ಗ್ರಹ. ಋಷಭ, ಮಧ್ಯಮ, ನಿಷಾಧಗಳು ರಾಗ ಛಾಯಾ ಸ್ವರಗಳು. ಮಧ್ಯಮ ಮತ್ತು ಪಂಚಮ ನ್ಯಾಸ ಸ್ವರ, ಋಷಭ ಮತ್ತು ಮಧ್ಯಮಗಳಿಗೆ ಜಾರು ಮತ್ತು ಕಂಪಿತ ಗಮಕಗಳು ವಾಡಿಕೆಯಾಗಿ ಬರುತ್ತವೆ. ಕರುಣ, ಭಕ್ತಿ, ವಾತ್ಸಲ್ಯ ಭಾವಗಳನ್ನು ಸೂಚಿಸುತ್ತದೆ. ಸುಮಾರು ಸಾವಿರ ವರ್ಷಗಳ ಪ್ರಾಚೀನ ಗ್ರಂಥಗಳಲ್ಲಿಯೂ ಈ ರಾಗದ ಉಲ್ಲೇಖವಿದೆ. ಬಹು ವಿಲಂಬಿತ ನಡಿಗೆಯುಳ್ಳ ರಕ್ತಿ. ಈ ರಾಗಕ್ಕೆ ನಿದ್ರಾರೂಪದ ಶಾಂತಿಯನ್ನು ಕೊಡುವ ಶಕ್ತಿ ಇದೆ. ಈ ರಾಗದಲ್ಲಿ ಗಾಂಧಾರ, ಮಧ್ಯಮಗಳು ಅಲ್ಪ ತೀವ್ರವಾಗಿಯೂ ನಿಷಾಧವು ಅಲ್ಪ ಮೃದುವಾಗಿಯೂ ಬರುತ್ತದೆ.

ಆರೋಹ : ಸಾ ರಿ$_2$ ಗ$_3$ ಮ$_1$ ಮಾ$_1$ ಪ ದ$_2$ ಪ ನಿ$_3$ ನಿ$_3$ ಸಾ ನಿ$_3$ ದ$_2$ ನಿ$_3$ ಸ
ಅವರೋಹ : ಸ ನಿ$_3$ ಪ ಮಾ$_2$ ಗ$_3$ ರಿ$_2$ ಗ$_3$ ಸಾ

ಯಕ್ಷಗಾನದಲ್ಲಿಯ ಉಲ್ಲೇಖ :-

***'ಏನಯ್ಯಾ ಪವನಜನೇ । ಕೌರವನಿಗೆ । ನಾನೇ ದುರ್ಜನಳಾದೆನೆ। ಹೀನ ವೃತ್ತಿಯ ತಾಳ್ದಿರಿ। ನೀ ವೈವರೆನ್ನ। ಪ್ರಾಣಕ್ಕೆ ಪಗೆಯಾದಿರಿ ॥'*** (ಕೃಷ್ಣ ಸಂಧಾನ)

**'ಶಿವ ಶಿವ ಎನ್ನಯ ಕಾಂತಗೆ। ಬವಣೆಯು ಬಂದಿತೆ ಹೀಗೆ। ಬವರದಿ ನಿನಗೆಣೆ ಯಾವನು। ಭುವಿಯೊಳಗಿದುವರೆಗೆ ॥ '** (ರಾಜಸೂಯ)

***'ಹರಹರೆನ್ನಯ ಕಾಂತನು । ಬರಹೇಳು ತನ್ನೊ । ಒರೆದನೇಕಿಂಥ ಮಾತನು । ತರಳನ ಕರೆದು ನಾಮು । ಕೊಡುವದೆಂತು । ಗರಳವನವಗಿನ್ನು ॥ '*** (ಪ್ರಹ್ಲಾದ ಚರಿತ್ರೆ)

## 49 ) ಘರಜು

***'ಘರಜು ರಾಗಸ್ಸಂಪೂರ್ಣಸ್ಸಗ್ರಹ ಸಾರ್ವಕಾಲಿಕಃ***

ಘರಜು ರಾಗವು ಉತ್ತರ ದೇಶದ ರಕ್ತಿರಾಗ. ಮಾಯಾಮಾಳವಗೌಳ ಮೇಳ ರಾಗದಲ್ಲಿ ಭಾಷಾಂಜಗಜನ್ಯ . ಸಂಪೂರ್ಣಾ - ಸಂಪೂರ್ಣ. ಗಾಂಧಾರವು ಜೀವ ಮತ್ತು ನ್ಯಾಸ ಸ್ವರ ಗಾಂಧಾರ ನಿಷಾಧಗಳು ತೀವ್ರ ಛಾಯೆಯನ್ನು ದೈವತವು ಮೃದು ಛಾಯೆಯನ್ನು ಹೊಂದುತ್ತವೆ. ಮಂದ್ರಸ್ಥಾಯಿ ನಿಷಾದದಿಂದ ಕೆಳಗೂ ತಾರಸ್ಥಾಯಿ ಗಾಂಧಾರದಿಂದ ಮೇಲೂ ಸಂಚಾರವಿಲ್ಲ. ಜಾರುಗಮಕ ಮತ್ತು ದಾಟು ಸ್ವರ ಪ್ರಯೋಗವೇ ಈ ರಾಗದ ಮುಖ್ಯಾಂಶ. ಗಾಂಧಾರ ನಿಷಾಧಗಳು ಪರಸ್ಪರ ವಾದಿ ಸಂವಾದಿಗಳು. ಮಧ್ಯಮ ವರ್ಜ್ಯ ಮಾಡಿಯೂ ಈ ರಾಗವನ್ನು



ಹಾಡುವುದುಂಟು. ಶೃಂಗಾರ ಮತ್ತು ಹಾಸ್ಯರಸ ಪ್ರಧಾನ.

ಆರೋಹ : ಸ ರಿ$_1$ ಗ$_3$ ಮ$_1$ ಪ ದ$_1$ ನಿ$_3$ ಸ

ಅವರೋಹ : ಸ ನಿ$_3$ ದ$_1$ ಪ ಮ$_1$ ಗ$_3$ ರಿ$_1$ ಸ

ಯಕ್ಷಗಾನದಲ್ಲಿಯ ಉಲ್ಲೇಖ : -

**'ಭರದಿಂ ಣೇಮ್ತೆವು ಸ್ವಾಮಿ ನಿಮ್ಮೆಡೆಯ । ಸಲಾಮು ಒಡೆಯ । ಈಟೀಟ್ಟಂದಿ ಕೂಡಿ ನಾವು। ಓಟೋಟಾಗಿ ಹೊಲಕಯ್ದೇವು.। ಗೂಟ ಹಾಕಿ ಬಲೆಯ ಬೀಸಿದೆವು । ಮಿಗ ಮೊಲಾನ ಹಿಂಡ । ಕಾಟ ಕಾಡ್ಗೋಣಗಳ ತುಡುಕಿದೆವು ॥'** (ಗದಾಪರ್ವ)

## 50) ಭೌಳಿ

**'ಮ ಗ್ರಹೋ ಭೌಳಿ ರಾಗಸ್ತು ಶ್ರೀದೋಮಧ್ಯವರ್ಜಿತಃ ।**

**ತುರೀಯ ಯ್ಯಾಮೇಗೇಯಾಸ್ಸಾರೋಹೇತು ನಿವರ್ಜಿತಃ॥'**

ಈ ರಾಗವು ಮಾಯಾಮಾಳವಗೌಳ ರಾಗದಲ್ಲಿ ಔಡವ - ಷಾಡವ ಉಪಾಂಗ ಜನ್ಯ. ಮಧ್ಯಮ ವರ್ಜ್ಯ. ಮಧ್ಯಮ ಗ್ರಹ. ಆದರೂ ಜಾರು ಗಮಕದಲ್ಲಿ ಮಧ್ಯಮವು ಅತ್ಯಂತ ಸೂಕ್ಷ್ಮವಾಗಿ ಬರುತ್ತಿರುತ್ತದೆ. ಈ ರಾಗದಲ್ಲಿ ಜಾರು ಗಮಕವೇ ಅತ್ಯಂತ ರಂಜಕ. ಆದ್ದರಿಂದ ಚೌಕರೂಪ ಬರುತ್ತದೆ. ಘನರಾಗ. ಅಲ್ಪ ನಿಷಾಧ ಪ್ರಯೋಗ ಬೆಳಗಿನ ಝಾವದಲ್ಲಿ ಹಾಡತಕ್ಕದ್ದು. ಹಾಸ್ಯ ರಸ ಪ್ರಧಾನ. ಮಂಗಳರಾಗ.

ಆರೋಹ : ಸ ರಿ$_1$ ಗ$_3$ ಪ ದ$_1$ ಸ

ಅವರೋಹ : ಸ ನಿ$_3$ ದ$_1$ ಪ ಗ$_3$ ರಿ$_1$ ಸ

ಯಕ್ಷಗಾನದ ಉಲ್ಲೇಖ : **'ಕಾಮ ಸನ್ನಿಭ ಮಾತ ಕೇಳು । ಪೇಳಿ । ರಾಮ ಕಳುಹಿದನು ಇಂದಿನೊಳು । ನಾ ಮನವಿಟ್ಟು ಕೃಪಾಳು । ನಿನ್ನ । ಕಾಮಿಸಿ ಬಂದೆ ಮೋಹದೊಳು । ಇನ್ನು । ತಾಮಸ ಗೊಳದಿರು ನಾನಿಲಲರಿಯೆನು ಪ್ರೇಮದಿಂದಲಿ ಕೂಡು । ಸರಸ ಮಾತಾಡು ॥ '** (ಪಂಚವಟಿ - ಕೈ ಬರೆಹ )

## 51) ಆರ್ಯ (ಲಾವಣಿ)

ಆರೋಹ : ಸ ಗ$_2$ ಮ$_1$ ಪ ದ$_2$ ಸ

ಅವರೋಹ : ಸ ನಿ$_2$ ದ$_2$ ಪ ಮ$_1$ ಗ$_2$ ರಿ$_2$ ಸ

ಚಾರಕರ ಬಗ್ಗೆ ಬಳಸುತ್ತಾರೆ. ಉದಾ. : **'ಸಲಾಮು ಸಲಾಮು ಜೀಯ । ರುಕ್ಮಾಂಗದ ರಾಯ।'** (ರುಕ್ಮಾಂಗದ ಚರಿತ್ರೆ )



## 52) ಆಹೇರಿ

ಆರೋಹ : ಸ ರಿ$_1$ ಸ ಗಾ$_2$ ಮ$_1$ ಪ ದಾ$_1$ ನಿ$_2$ ಸಾ

ಸ ನಿ$_2$ ದಾ$_1$ ಪಾ$_2$ ಮ$_1$ ಗಾ$_2$ ರಿ$_1$ ಸ

ವೀರ ರಸ ಪ್ರಧಾನ .

***'ಎದ್ದಳಾ ಹವಕಾ ಪ್ರಮೀಳೆ । ಉಭಯ ಯುದ್ಧದೊಳು ಅರ್ಜುನನ ಗೆಲುವರೆ ಸುಶೀಲೆ ।'*** (ಬಬ್ರುವಾಹನ ಕಾಳಗ)

## 53) ಉಮಾಭರಣ

ಆರೋಹ : ಸ ರಿ$_2$ ಮ$_1$ ಪ ಮ$_1$ ದ$_2$ ಸ

ಸ ದ$_2$ ಪ ಮ$_1$ ರಿ$_2$ ಮ$_1$ ಸ

***'ಎಂತಾದರು ಮಾಡಯ್ಯ । ಬೊಮ್ಮಯ್ಯ । ಎಂತಾದರು ಮಾಡಯ್ಯ । ಎಂತಾದರು ಮಾಡು ಇಂಥ ಆಪತ್ತಿನೊಳ್ । ಅಂತ್ಯಕಾಲವೆನಗೆಂತ ತಾಳಲಿ ನಾ ।'*** (ಬೈದ್ಯರ್ಕಳ ಪ್ರತಾಪ - ಶ್ರೀ ವೆಂಕಟರಾಯರು ಸಂದುಬೆಟ್ಟು)

## 54) ಕಾಫಿ

1 ನೇ ಪಕ್ಷ ಆರೋಹ : ಸ ರಿ$_2$ ಮ$_1$ ಪ ನಿ ಸ

ಅವರೋಹ : ಸ ನಿ$_2$ ದ$_2$ ನಿ$_2$ ಪ ಮ$_1$ ಗ$_2$ ರಿ$_2$ ಸ ನಿ$_3$ ಸ$_1$

2 ನೇ ಪಕ್ಷ : ಸ ರಿ$_2$ ಗ$_2$ ಮ$_1$ ಪ ದ$_2$ ನಿ$_2$ ಸ

ಸ ನಿ$_2$ ದ$_2$ ಪ ಮ$_1$ ಗ$_2$ ರಿ$_2$ ಸ

ಶೃಂಗಾರ ಮತ್ತು ಕರುಣಾರಸ ಪ್ರಧಾನವಾದದ್ದು.

ಉದಾ. : ***'ಕುರುರಾಯಾ ಕೇಳೆನ್ನ ಮಾತ । ನಿನ್ನ । ಸಿರಿಯು ವೈಭವಕಾರು ಸರಿಯಿಲ್ಲ ಖ್ಯಾತಾ ।।'*** (ಕರ್ಣಾರ್ಜುನ ಕಾಳಗ)

## 55) ಕಾಮವರ್ಧಿನಿ

ಆರೋಹ : ಸ ಗ$_3$ ರಿ$_1$ ಗ$_3$ ಮ$_2$ ಪ ದ$_1$ ನಿ$_3$ ಸ

ಅವರೋಹ: ಸ ನಿ$_3$ ದ$_1$ ಪ ಮ$_2$ ಗ$_3$ ರಿ$_1$ ಸ

ಉದಾ. : ***'ಬಿಳಿಯೊಂದು ಕಪ್ಪೊಂದು ಬಣ್ಣದ ಕಿವಿಗಳ । ಥಳಥಳಿಸುವ ಬಿಳ್ಪ - ಮೈಯಾ '*** (ವಾಜೀಗ್ರಹಣ ಬಡಕ್ಕಿಲ ವೆಂಕಟ್ರಮಣ ಭಟ್ಟ)

## 56) ಗುಂಡಕ್ರಿಯೆ

ಆರೋಹ : ಸ ರಿ$_1$ ಗ$_3$ ಮ$_1$ ಪ ದ$_1$ ನಿ$_3$ ಸ

ಅವರೋಹ : ಸಾ ನಿ$_3$ ಪ ಮ$_1$ ಗ$_3$ ಮ$_1$ ದ$_1$ ಪ ಮ$_1$ ಗ$_3$ರಿ$_1$ ಸ

**'ಜಯ ಜಯ ಜಾನಕೀಶ । ಶ್ರೀರಾಮಚಂದ್ರ, ॥ ಜಯ ಭಾನುಕುಲೇಂದ್ರ, । ರವಿಕೋಟಿ ಸಾಂದ್ರ, ನಿನ್ನ ಕೂಡೆ ಸೆಣಸಿ ।'**(ಪುತ್ರಕಾಮೇಷ್ಟಿ)

57) **ಗುರ್ಜರಿ**

ಆರೋಹ : ಸ ರಿ$_1$ ಗ$_3$ ಮ$_1$ ಪ ದ$_1$ ನಿ$_3$ ಸ

ಸ ನಿ$_3$ ದ$_1$ ಪ ಮ$_1$ ಗ$_3$ ರಿ$_1$ ಸ

ಉದಾ. : **'ಚಿತ್ರಕೂಟದಲ್ಲಿ ನೀವು ಜಲಕ್ರೀಡೆಯಾಡುವಾಗ । ಎತ್ತಿ ಮುಂಗೈಯಲ್ಲಿ ನಿಮ್ಮ ಬೀಸಾಡಲು । ಅತ್ತಿದ್ದು ಸರಿಯೇನಮ್ಮ ॥'** (ಲಂಕಾದಹನ)

58) **ಗೌಳ** - ಅದ್ಭುತ ರಸ ಪ್ರತಿಪಾದಕ ರಾಗ

ಆರೋಹ : ಸ ರಿ$_1$ ಮ$_1$ ಪ ನಿ$_3$ ಸ

ಅವರೋಹ : ಸಾ ನಿ$_3$ ಪ ಮ$_1$ ಗ$_3$ ಮ$_1$ ರಿ$_3$ ಗ ಮ$_1$ ರಿ$_1$ ಸ

ಉದಾ. : **'ಎತ್ತಗಮನವಿದು ಬಿತ್ತರಿಸೈ ಮುನಿ । ಪೋತ್ತಮ ಗುಣಸಾರ । ಸುವಿಚಾರ । ದಯದೋರಿ । ಕೀರ್ತಿ ವಿಸ್ತಾರ ॥'** (ದ್ರೌಪದಿ ಪ್ರತಾಪ)

59) **ಗೌಳಪಂತು**

ಆರೋಹ : ಸ ರಿ$_1$ ಮ$_1$ ಪ ನಿ$_3$ ಸ

ಅವರೋಹ : ಸ ನಿ$_3$ ದ$_1$ ಪ ಮ$_1$ ದ$_1$ ಮ$_1$ ಗ$_3$ ರಿ$_1$ ಸ

**'ಸಾಕು ಹರಟೆ ಗುಟ್ಟ ಬೇಡಿರೆ । ಸುಮ್ಮನೆಲ್ಲರು । ಸಾಕು ಹರಟೆ ಗುಟ್ಟಬೇಡಿ । ಕಾಕುತನದ ಮಾತನು ವಿ । ವೇಕವಿಲ್ಲದಾಡು ತಿರುವಿ । ರೇಕೆ ಪೋಗಿ ಮನೆಗೆ ಬರಿದೆ ॥'** (ಶ್ರೀಕೃಷ್ಣಬಾಲಲೀಲೆ)

60) **ವರಿತೆ** (ಚರಿತೆ)

ಆರೋಹ : ಸ ಗ$_1$ ಪ ದ$_2$ ನಿ$_2$ ಸ

ಅವರೋಹ : ಸ ನಿ$_2$ ದ$_2$ ಪ ಗ$_1$ ಸ

**'ಎಲೆಗೆ ಸೌಭದ್ರೆ, ನೀ ಮರುಳಾದೆಯೇನವ್ವ । ಫಲುಗುಣನಲ್ಲದೆ ಬೇರೇ । ವುಳಿದವರರಸರಾದಪರೆಯ ಯೋಚನೆ । ಗೊಳದಿರು ಕೇಳು ಪೇಳುವೆನು ॥'**(ಸೌಭದ್ರಾ ಕಲ್ಯಾಣ - ಕೈ ಬರೆಹದ ಪ್ರತಿ - ಗಣಪತಿ ಮಾಬ್ಲ ಹೆಗಡೆ)

61) **ಚಿತ್ತರಂಜನಿ** - ಶಾಂತಿರಸ ಪ್ರತಿಪಾದಕ ರಾಗ.

ಆರೋಹ : ಸ ರಿ$_2$ ಗ$_2$ ಮ$_1$ ಪ ದ$_2$ ನಿ$_2$

ಅವರೋಹ : ನಿ$_2$ ದ$_2$ ಪ ಮ$_1$ಗ$_2$ರಿ$_2$ ಸಾ



62) **ಜಂಗಲಾ** (ಜಂಗಲ್ )

ಆರೋಹ : ನಿ ದ ನಿ ಸ ರಿ ಗ ಮ ಪ ದ ನಿ

ಅವರೋಹ : ದ ಪ ಮ ಗ ರಿ ಸ ನಿ ದ ನಿ ಸ

ಉದಾ. : **'ಎಂದಾಕಾಶದ ನುಡಿಯಂತಾದ್ವಿಜ । ನಂದು ತುರಗ ಸಹಿತ । ಬಂದನು ವರ ಚಿತ್ರಾವತಿ ಪುರ । ಕಾನಂದದಿ ನಸುನಗುತ ॥ '** (ಮದಾಲಸಾ ಕಲ್ಯಾಣ )

63) **ದರವು**

ಆರೋಹ : ಸ ರಿ$_2$ ಗ$_3$ ಮ ದ$_2$ ನಿ$_2$ ಸ

ಅವರೋಹ : ಸ ನಿ$_2$ ದ$_2$ ಪ ಗ$_3$ ರಿ$_2$ ಸ

**'ಕಾಮ್ಯಕಾವನದಿಂದ ಬಂದೆ । ಕೃಷ್ಣ ಕೃಷ್ಣ ॥ ಮಾತ । ಲಾಲಿಸು ನೀ ಎನ್ನ ತಂದೆ ಕೃಷ್ಣ ಕೃಷ್ಣ।'** (ಕೃಷ್ಣಾರ್ಜುನ ಕಾಳಗ ) (ಕೈ ಬರಹ ಪ್ರತಿ - ಮಳಿಗೆಮನೆ ರಾಮಕೃಷ್ಣ ಹೆಗಡೆ )

64) **ದ್ವಿಜಾವಂತಿ** - ವಿಸ್ಮಯ ವ್ಯಂಗ್ಯ

ಆರೋಹ : ಸ ರಿ$_2$ ಗ$_3$ ಮ$_1$ ಪ ಮ$_1$ ದ$_2$ ಪ ನಿ$_2$ ದ$_2$ ನಿ$_2$ ಸಾ

ಅವರೋಹ : ಸ ನಿ$_2$ ದ$_2$ ಪ ದ$_2$ ನಿ$_2$ ದ$_2$ ಪ ಮ$_1$ ಗ$_3$ ರಿ$_2$ ಗ$_3$ ಮ$_1$ ಗ$_3$ ಸ

ಉದಾ.: **'ಮಾತಲಿಯೆ ನಾನೆಂಬ ಮಾತ ನೀ ಕೇಳು । ಯಾತುಧಾನನೊಳು ಕೈ ಸೋತು ದಿಂದಿನೊಳು ॥ '** (ರಾವಣ ವಧೆ )

65) **ದೇವಗಾಂಧಾರಿ** - ಕರುಣಾರಸ ಪ್ರತಿಪಾದಕ.

ಆರೋಹ : ಸಾ ರಿ$_2$ ಮ$_1$ ಪ ದ$_2$ ದಾ$_2$ ಸಾ

ಅವರೋಹ : ಸಾ ನಿ$_3$ ದ$_2$ ಪ ಮ$_1$ ಗ$_3$ ರೀ$_2$ ಸ ರಿ$_2$ ಗ$_3$ ರೀ$_2$ ಸಾ

**'ದಾರುಕ್ಕ ಕೇಳೋ ಕೇಳಯ್ಯ । ಬಲು ಭೂರಿ ಸಂತಸವ ನೀತಾಳಯ್ಯ । ವಾರಣಪುರದೊಳು ಧೀರ ಧರ್ಮಜನಿಂಗೆ ಘೋರ ಪಾತಕ ಬಂದ ಕಾರಣ ಸ್ತುತಿಸಿದ ।'** (ಏಕಾದಶಿ ಮಹಾತ್ಮೆ )

66) **ದೇವಡಿ** (ದೇಹಳಿ )

ಆರೋಹ : ಸ ರಿ$_1$ ಪ ದ$_2$ ನಿ$_2$ ಸ

ಸ ನಿ$_2$ ಪ ದ$_2$ ರಿ$_1$ ಸ

**'ಪುಂಡರೀಕಾಕ್ಷನೇ ಕೇಳು। ಚಂಡ ಭೀಷ್ಮನು ದಿನಕೆ। ಖಂಡಿಸಿದನು ದಶಸ। ಹಸ್ರ ಭೂಮಿಪರ'** (ಭೀಷ್ಮಾರ್ಜುನ )

67) **ದೇಶಿ** - ಕರುಣಾ ರಸ .

ಆರೋಹ : ಸ ರಿ$_2$ ಮ$_1$ ಪ ನಿ$_2$ ಸ



ಅವರೋಹ : ಸ ನಿ$_2$ ದ$_2$ ಪ ಮ$_1$ ಗ$_3$ ರಿ$_2$ ಸ

ಉದಾ. : **'ಕೇಳಯ್ಯಾ । ಮಂತ್ರಿ । ಕೇಳಯ್ಯಾ । ಕೇಳಯ್ಯ ಮಂತ್ರಿ, ನಾ ಪೇಳುವ ನುಡಿಯಾ । ಜಾಲವಲ್ಲಿದು ವಿಪ್ರರಾಡುವ ನುಡಿಯಾ।'** (ರತ್ನಾವತಿ ಕಲ್ಯಾಣ )

ಕರುಣಾರಸ : **'ಹರಹರ ಎನಗಿಂಥ ಭವಣೆಯು ಬಂತೇ ಒರೆಯಲಿನ್ಯಾರಿಗೀವಿಧಿಯು ॥ ಧುರಪರಾಕ್ರಮಿ ರಾವಣನೆಂದು । ಹೆಸ। ರಿರದೆ ಕೆಟ್ಟಿತು ಸೀತೆಗಾಗಿಂದು ॥'** (ರಾವಣ ವಧೆ )

**'ಏನೆಂದೆ । ನಂದಿ । ಏನೆಂದೇ ॥ಪ॥ ಆನೆ ಮೊಗದ ಗಣನಾಥಗೆ ಎನ್ನಾ । ಮಾನಿನಿ ಮಣಿ ಸುಕುಮಾರಿಯಮುನ್ನಾ ॥ ಏನ ಪೇಳ್ದರು ನಾನು ಕೊಡುವವನಲ್ಲಾ । ನೀನು ಪೇಳಿದರೊಪ್ಪೆ ಪೋಗಿ ಪೇಳೆಲ್ಲಾ ॥** (ವೀರರಸ - ಯೋಗಿನಿ ಕಲ್ಯಾಣ )

68) **ದೇಶಾಕ್ಷಿ** - ಭಕ್ತಿರಸ ಪ್ರತಿಪಾದಕ.

ಆರೋಹ : ಸ ರಿ$_2$ ಗ$_3$ ಪ ದ$_2$ ಸ

ಅವರೋಹ : ಸ ನಿ$_2$ ದ$_2$ ಪ ಮ$_1$ ಗ$_3$ ರಿ$_2$ ಸ

**'ವಿಶ್ವಾಮಿತ್ರ, ತಾಪಸೇಂದ್ರ, ಸದ್ಗುಣ ಸಾಂದ್ರ, । ಇಂದು ಎನ್ನ ಮನೆಗೆ ಬಂದ । ಕಾರಣದಿಂದಾ॥ ನಂದವಾಯಿತಯ್ಯ ಎನಗೆ । ವಂದಿಸುವೆನು ನಿನಗೆ ॥'** (ಪುತ್ರಕಾಮೇಷ್ಟಿ)

69) **ಧನಶ್ರೀ**

ಆರೋಹ : ಸ ಗ$_2$ ಮ$_1$ ಪ ನಿ$_2$ ಸ

ಅವರೋಹ : ಸ ನಿ ದ ಪ ಮ ಗ ರಿ ಸ

ಉದಾ. : **'ಯಾರ್ಮ್ಯಾ । ಹೇ ಬ್ರಹ್ಮ ಗುಪಿತ ವೇನ್ಮ್ಯಾ । ಇದು ಯಾವ ಧರ್ಮ । ಯಾರ್ಮ್ಯಾ। ಹೇ ಬ್ರಹ್ಮಗುಪಿತ ವೇನ್ಮ್ಯ ॥** (ಬ್ರಹ್ಮ ಕಪಾಲ)

70) **ನಾಟಿ ಕುರಂಜಿ** - ಶೃಂಗಾರ ರಸ ಪ್ರಧಾನ.

| | |
|---|---|
| 1 ನೇ ಪಕ್ಷ ಆರೋಹ | : ಸಾ ರಿ$_2$ ಗ$_3$ ಮ$_1$ ಪ ದ$_2$ ನಿ$_2$ ಸ |
| ಅವರೋಹ | : ಸ ನಿ$_2$ ದ$_2$ ಮ$_1$ ಗ$_3$ ಸ |
| 2 ನೇ ಪಕ್ಷ ಆರೋಹ | : ಸ ರಿ$_2$ ಗ$_3$ ಮ$_1$ ದ$_2$ ನಿ$_2$ ಸ |
| ಅವರೋಹ | : ಸ ನಿ$_2$ ದ$_2$ ಪ ದ$_2$ ನಿ$_2$ ದ$_2$ ಮ$_1$ ಗ$_3$ ರಿ$_2$ ಗ$_3$ ಮ$_1$ ಪ ಗ$_3$ ರಿ$_2$ ಸ |
| 3 ನೇ ಪಕ್ಷ ಆರೋಹ | : ಸ ರಿ$_2$ ಗ$_3$ ಮ$_1$ ದ$_2$ ನಿ$_2$ ಪ ದ$_2$ ನಿ$_2$ ಸಾ ಸ ನಿ$_2$ ದ$_2$ ಮ$_1$ ಗ$_3$ ರಿ$_2$ ಸ |

**'ಹಿತವಲ್ಲಿದು ಮನುಮಥನರಗಿಣಿ ಕೇಳು । ಪೇಳುವ ಮಾತುಗಳು । ಪ್ರತಿ ಸ್ಮೃತಿಯಂತರ್ಗತದಿ**



**ವಿಚಾರಿಸಲು ॥ ಕ್ಷಿತಿಯೊಳಗನ್ಯರ । ಸತಿಯನು ಕಾಮಿಸು । ವತಿ ಪಾಪಕೆ ಉಪ । ಕೃತಿಯಿಲ್ಲೆಂಬರು ॥'**
(ಕನಕ ಮಾಲಿನಿ ಪರಿಣಯ - ಮುಪ್ಪಾರು ಕಿಬ್ಬಣ್ಣ ಭಾಗವತ )

### 71) ಪುನ್ನಾಗ

ಆರೋಹ : ಸ ಮ$_1$ ಗ$_3$ ಮ$_1$ ಪ ದ$_2$ ನಿ$_2$ ಸ

ಅವರೋಹ : ಸ ನಿ$_2$ ಪ ಮ$_1$ ಗ$_3$ ಮ$_1$ ಗ$_3$ ರಿ$_2$ ಸ

ಉದಾ. : **'ಪರಿಕಿಸು ಸಹಜನೆ ನೀ ಉಪವನ ಸಿರಿಯ । ತರುಗಳ ಮಧ್ಯದ ಝೋಂಪಿನ ಲತೆಯ।'** (ವೀರಮಣಿ ಕಾಳಗ - ನರಸಿಂಹ ಶಾಸ್ತ್ರಿ)

### 72) ಪುನ್ನಾಗ ತೋಡಿ

ಆರೋಹ : ನಿ$_2$ ದ$_1$ ನಿ$_2$ ಸ ರಿ$_1$ ಗ$_2$ ಮ$_1$ ಪ ದ$_1$ ನಿ$_2$

ಅವರೋಹ : ನಿ$_2$ ದ$_1$ ಮ$_1$ ಗ$_2$ ರಿ$_1$ ಸ ನಿ$_2$ ಸ

**'ಯಾಕಿನಿತೆಂಬೆ ಬೇಡೆಲೋ ಚೈದ್ಯ । ಪಿ । ನಾಕಿ ಸಖನು ಕೃಷ್ಣ ಸುರವಂದ್ಯ ॥ ಕಾಕನಾಡುವರೆ ಮಾಧವನಿಗೆ । ಭಕ್ತನೀತ ರಕ್ಷಕ ಬ್ರಹ್ಮ ಜನಕಗೆ ॥ '** (ರಾಜಸೂಯ ಯಾಗ)

### 73) ಪಂಚಮ

ಆರೋಹ : ಸ ರಿ$_2$ ಗ$_2$ ಪ ನಿ$_2$ ಸ

ಅವರೋಹ : ಸ ನಿ$_2$ ದ$_2$ ಪ ಮ$_1$ ಗ$_2$ ರಿ$_2$ ಸ

**'ಏನಿದಾಶ್ಚರ್ಯ ವೀ । ಹೀನಶಿಶುವ ಏಳು ಬಾರಿ । ತಾನೆ ಕೊಲಲು ಮತ್ತೆ ಬಹನು ಸಾನುರಾಗದಿ ॥'** ( ಧ್ರುವ ಚರಿತ್ರೆ - ಕೈಬರೆಹದ ಪ್ರತಿ - ಕಾಶೀಮಠದ ಸುಬ್ಬಾ ಭಟ್ಟರು )

### 74) ಪಂಚಾಗತಿ

ಆರೋಹ : ಸ ರಿ$_1$ ಗ$_3$ ಮ$_1$ ಪ ದ$_1$

ಅವರೋಹ: ದ$_1$ ಪ ಮ$_1$ ಗ$_3$ ರಿ$_1$ ಸ

**'ನಾರಿ ಮಣಿಯೆ ಬೆದರಬೇಡ । ವೀರರಿದಕೊ ಬಂದೆವೀಗ। ಚೋರ ನಿಲ್ಲೆನುತ್ತಖತಿಯೊ । ಳಾರುಭಟಿಸುತ ॥ ಏನಿರಯ್ಯ । ಭೀಮಾರ್ಜುನರಿದೇನಿರಯ್ಯ ॥ '**

**'ಏನಿರಯ್ಯ ಬಲು । ಮಾನವಂತರಿಗವ । ಮಾನವ ಮಾಡಿದ । ಹೀನಗುಣಂಗಳಿ । ದೇನಿರಯ್ಯ।'** (ಚಿತ್ರಸೇನ ಕಾಳಗ)

### 75) ಪಂತುವರಾಳಿ

ಆರೋಹ : ಸ ರಿ$_1$ ಗ$_3$ ಮ$_2$ ಪ ದ$_1$ ನಿ$_3$ ಸ



ಅವರೋಹ : ಸ ನಿ$_3$ ದ$_1$ ಪ ಮ$_2$ ಗ$_3$ ರಿ$_1$ ಸ

***'ಹರುಷವಾಯ್ತು ನಿನ್ನ ವಚನವೂ । ಕೇಳುತೆನ್ನ ಮನಸಿಗೀಗ ಹರುಷವಾಯ್ತು ನಿನ್ನವಚನವೂ॥'*** (ರುಕ್ಮಾಂಗದ ಚರಿತ್ರೆ)

***'ಕೇಳಯ್ಯ ರಂಗ । ನೀಲ ನಿಭಾಂಗ ॥ ಬಾಲೆಗೋಸ್ಕರ ಬಂದು ಸುಮ್ಮನೆ । ವೇಳೆ ಕಳೆವುದು ನೀತಿಯೆ ॥'*** (ರುಕ್ಮಿಣಿ ಸ್ವಯಂವರ )

76) **ಬೇಹಾಗ** ಶೃಂಗಾರ ರಸ ಪ್ರಧಾನ.

ಆರೋಹ : ಸ ಮ$_1$ ಗ$_3$ ಪ ನಿ$_3$ ದ$_2$ ನಿ$_3$ ಸ

ಸ ನಿ$_3$ ದ$_2$ ಪ ಮ$_2$ ಗ$_3$ ಮ$_1$ ಗ$_3$ ರಿ$_2$ ಸ

***'ಸುಲಲಿತಾಂಗಿ ಸಲಿಲಜಾಕ್ಷಿ । ಛಲವಿದೇನೆ ಮೋಹನೆ । ತುಂಬಿಗುರುಳೆ ರಂಭೆ ಶಾತ ಕುಂಬಕುಂಬ ನಿಭಕುಚೆ ॥ ಹಂಬಲಿಸದಿರಮಮ ಭಯವ । ದೆಂಬರೇನೆ ಭಾಮಿನಿ ।'*** (ಕುಮಾರ ವಿಜಯ)

***'ಯೆನುತ ಪಾದಕೇ ಮಣಿದು ಬೇಡುವ । ವನಜ ಗಂಧಿಯಳನು ನಿರೀಕ್ಷಿಸಿ ॥ ಜನಪ ಕುಲಜರು ದಾಸಿಯಾದವ । ಳನು ವಿವಾಹಕೆ ಬಯಸಲಾಪುದೆ ॥'*** (ಕನಕ ಮಾಲಿನಿ ಪರಿಣಯ)

| ***ರಾಗಗಳು*** | ***ಯಕ್ಷಗಾನದ ಉಲ್ಲೇಖ*** |
|---|---|
| 77) ಮಾಧವಿ - 'ಕೇಳಿದೆಯ ಕರ್ಣ........' | -ದ್ರೌಪದಿ ಸ್ವಯಂವರ |
| 78) ಮಂಗಳ ಕೈಶಿಕಿ - ' ಎತ್ತಿದನಾರತಿಯಾ...' | - ಏಕಾದಶೀ ಮಹಾತ್ಮೆ |
| 79) ವರಾಳಿ - 'ಬಂದುದು ಲೇಸಾಯ್ತು..' | - ಪಾದುಕಾ ಪಟ್ಟಾಭಿಷೇಕ |
| 80) ವಸಂತ - 'ಅತ್ತ ರುಕ್ಮಾಂಗದ ಭೂಪನು..' | - ರುಕ್ಮಾಂಗದ ಚರಿತ್ರೆ |
| 81) ವಿಲಾಸ - 'ನೃಪತಿ ಮಹಾರಾಜ ದಶರಥ ..' | - ಪುತ್ರಕಾಮೇಷ್ಟಿ |
| 82) ವೃಂದಾವನ ಸಾರಂಗ- 'ಏತಕೆ ಮರುಳಾದಿರಿ...' | - ಸುಭದ್ರಾ ಕಲ್ಯಾಣ |
| 83) ವೃಂದಾವನ - 'ಸ್ವಾಮಿ ಸಲಾಮು ಜೀಯ..' | - ವಿಶ್ವಾಮಿತ್ರ ಪ್ರತಾಪ |
| 84) ಶ್ಯಾಮಕಲ್ಯಾಣಿ- 'ವಾರಣ ವದನ...' | - ಯಕ್ಷಗಾನ ಕೈಪಿಡಿ |
| 85) ಶೋಕ ವರಾಳಿ - 'ನೋಡಿದೆನಯ್ಯೋ ಹನುಮಾ .. | - ಇಂದ್ರಜೀತು ಕಾಳಗ |
| 86) ಶೋಭಾವತಿ- 'ಹರಿಯರ್ಧಾಂಗಿ...' | - ಏಕಾದಶಿ ಮಹಾತ್ಮೆ |
| 87) ಸಮದ್ಯುತಿ (ಮಧುಮತಿ) | - ಚಿತ್ರಾಂಗದೆ |
| 88) ಶಂಕರಿ -'ಹೆಚ್ಚು ಕಡಿಮೆಗಳನು...' | - ಕೃಷ್ಣಾರ್ಜುನ - ಕೈಬರೆಹ ಪ್ರತಿ - ರಾಮಕೃಷ್ಣ ಹೆಗಡೆ |



89) ಶೃಂಗಾರಿ -'ಸ್ವಾರಿಯೇನಿದು ಪೇಳು..' - ವೃತ್ರಾಸುರ ಕಾಳಗ

90) ಶಹನ -'ಎನ್ನಿಂದಾಗದು .....' - ವೃತ್ರಾಸುರ ಕಾಳಗ

91) ಸಂವಾದ - 'ಬಂದೆಯಾ ಕುಳ್ಳಿರು ಕಮಲ' - ಐರಾವತ

92) ಹರಿಕಾಂಭೋಜಿ -'ಸ್ವಾಮಿ ನೀವು.....' - ಬೈದ್ಯರ್ಕಳ ಪ್ರತಾಪ

93) ಹಿಂದೂಸ್ಥಾನಿ ಕಾಪಿ -'ಸರಿಯಾರೀ ತರುಣಿ ಮಣಿಗೆ..'- ರತ್ನಾವತಿ ಕಲ್ಯಾಣ

94) ಸಾರಂಗ- 'ಮುರವೈರಿ ಲಾಲಿಸಯ್ಯ ....' - ರಾಜಸೂಯ

95) ರಾಮಕ್ರಿಯೆ - 'ಮಂತ್ರೀಶ ಕೇಳಯ್ಯ ...' - ಪಾದುಕಾ ಪಟ್ಟಾಭಿಷೇಕ

96) ಯಮನ ಕಲ್ಯಾಣ - 'ವಹವ್ವಾರೇ ನೋಡಿರೋ..' - ಚಂದ್ರಾವಳಿ ವಿಲಾಸ

97) ಪಹಡಿ- 'ಒಪ್ಪುವೆನಿದರ...' - ಕುಮಾರ ವಿಜಯ

98) ಸಾಮ ನಾರಾಯಣಿ - 'ಮಂಗಳ ಶ್ರೀಕಾಂತೆ...' - ರಾವಣವಧೆ

99) ನಾಮಕ್ರಿಯೆ - 'ರಘುಕುಲೇಂದ್ರ ರಾಮ ನಿನ್ನ..' - ಪಾದುಕಾ ಪಟ್ಟಾಭಿಷೇಕ

100) ಜೋಗುಳ - 'ಚಿನ್ನದ ಸರಪಣಿಗಳನು ...' - ಶ್ರೀಕೃಷ್ಣ ಬಾಲಲೀಲೆ

101) ಢವಳಾರ - ' ಮುತ್ತಿನ ಹಸೆಮಣೆಯೊಳು...' - ರುಕ್ಮಾವತೀ ಕಲ್ಯಾಣ



# ಬಾಳೆಹದ್ದ ಭಾಗವತರು

- ಮಂಜುನಾಥ ಭಾಗವತ್, ಹೊಸ್ತೋಟ

ಯಕ್ಷಗಾನವು ರಂಗಭೂಮಿಯೆಂಬುದರಿಂದ ಸಾಮಾಜಿಕ ವಲಯದಲ್ಲಿ ಅದಕ್ಕೆ ಸ್ಥಾನಮಾನವಿದೆ. ರಂಗದಲ್ಲಿ ಹೆಚ್ಚು ಕಾಣಿಸಿಕೊಂಡರೆ ಮಾತ್ರ ಕಲಾವಿದ ಜನಪ್ರಿಯತೆಯನ್ನೂ ಪ್ರಸಿದ್ಧಿಯನ್ನೂ ಗಳಿಸುತ್ತಾನೆ. ರಂಗದ ಒಡನಾಟದಿಂದಲೇ ಅನುಕರಣೆ ಆಕರ್ಷಣೆಗಳಿಂದಲೇ ಪ್ರದರ್ಶನದ ಹದಗಾರಿಕೆಯನ್ನು ಅರಿತು ವರ್ತಿಸುವ ಚಾತುರ್ಯವುಳ್ಳವ ತಾತ್ಕಾಲಿಕ ಪ್ರಭಾವದಿಂದ ರಂಗಕ್ಕೆ ಮೆರುಗಾಗಿ ಪ್ರೇಕ್ಷಕರನ್ನು ಬೆರಗುಗೊಳಿಸುತ್ತಾನೆ. ಕಲಾವಿದನಿಗೆ ಆ ಪ್ರತಿಭೆ ಇರಬೇಕು. ಜನರನ್ನು ಆಕರ್ಷಿಸುವುದೇ ಪ್ರದರ್ಶನಕಲೆಗಳ ಮುಖ್ಯ ಗುರಿ. ಇದು ಸರಿ, ಯಕ್ಷಗಾನ ಪ್ರಸಂಗಕೃತಿಗಳ ಪ್ರದರ್ಶನ ವೇದಿಕೆಯಾಗಿ ಬಹುಕಾಲದ ಹಿನ್ನೆಲೆ ಪಡೆದು ರಂಗಭೂಮಿಯಾಗಿ ಪರಂಪರೆಗೂ ಶೈಲಿಗೂ, ಮಟ್ಟು-ತಿಟ್ಟುಗಳಿಗೂ ಆಕಾರ ನೀಡಿದ ಯಕ್ಷಗಾನ ಬಯಲಾಟ ಮೇಳದಾಟವಾಗಿ ಆಟದ ಮೇಳವಾಗಿ ಅರ್ಧಸಹಸ್ರ ವರ್ಷಗಳನ್ನು ಸರಿಸಿದೆ. ಕಥೆಯನ್ನು ಕುಣಿದು ಕಾಣಿಸುವಲ್ಲಿ ಬಗೆ ಬಗೆಯ ವೇಷಗಳು ಬರಬೇಕು. ಅಭಿನಯಿಸಬೇಕು, ಸರಿಯಬೇಕು. ಸಾಮಾಜಿಕ ವಲಯಕ್ಕೆ ಆ ಸಾದೃಶ್ಯ ನೀಡುವಲ್ಲಿ ಸರಿಯಾದ ಹಿನ್ನೆಲೆ ಬೇಕು. ಹಾಗಾಗಿಯೇ ಯಕ್ಷಗಾನದಲ್ಲಿ ಹಿಮ್ಮೇಳ-ಮುಮ್ಮೇಳ ವಿಭಾಗ. ವೇಷಗಳು ಮುಮ್ಮೇಳ. ಕರೆಸಿ ಕಾಣಿಸಿ ಕಳುಹಿಸುವುದು ಹಿಮ್ಮೇಳ. ಹಿಮ್ಮೇಳದಲ್ಲಿ ಕಥಾ ಪ್ರಸಂಗವನ್ನು ಹಾಡಿ ಕೇಳಿಸುವ ಹೊಣೆ ಹೊತ್ತವ ಭಾಗವತ. ಭಾಗವತ ಮೇಳ- ಭಾಗವತರಾಟ- ದಶಾವತಾರ ಮೇಳ, ದಶಾವತಾರ ಆಟ ಮುಂತಾಗಿ ಹೆಸರು ಗಳಿಸಿ ಪದ್ಧತಿಗೆ ಹೆಜ್ಜೆ ಕಾಣಿಸಿದ ಈ ರಂಗಕ್ಕೆ ಹಾಡುಗಾರಿಕೆ ಮುಖ್ಯ ಅಂಗ. ಅಲ್ಲಿಂದಲೇ ಆರಂಭ ಕಥಾಪ್ರಸಂಗ. ಯಕ್ಷಗಾನ ಪ್ರಸಂಗದ ಹಾಡುಗಾರನಿಗೆ ಭಾಗವತನೆಂದು ಕರೆಯುವುದು ಹಿಂದಿನ ವಾಡಿಕೆ, ಇಂದಿನ ಬಳಕೆ. ಭಾಗವತಿಕೆಯ ಕುರಿತು ಸೂಚ್ಯವಾಗಿ ಪ್ರಸ್ತಾಪಿಸಿದ್ದು ಭಾಗವತರ ಬಗ್ಗೆ ಬರೆಯುವುದಕ್ಕೆ. ಅಕ್ಷರ ರೂಪದಲ್ಲಿರುವ ಪ್ರಸಂಗ ಪ್ರತಿಯ ಛಂದೋಬದ್ಧ ರಚನೆಯನ್ನು ರಾಗ-ತಾಳಗಳೊಂದಿಗೆ ಮಂಡಿಸಿ ರಂಗಕ್ಕೆ ಒದಗಿಸುವ ಕರ್ಣಾನಂದ ಕಾಯಕರಾದ ಭಾಗವತರ ಪರಿಚಯವನ್ನು ಸರಾಗವಾಗಿ ಬರೆದು ತಿಳಿಸುವ ಭರವಸೆ ನನಗಿಲ್ಲ. ಬಾಳೆಹದ್ದ ಭಾಗವತರ ನೆರವು ನನ್ನ ಬಾಳಿನುದ್ದಕ್ಕೂ ಸ್ಮರಿಸಲೇಬೇಕಾದ ಬುದ್ಧಿಯ ಬುತ್ತಿಯಾಗಿರುವುದರಿಂದ ಆ ಹಿರಿಯರಿಗೆ ನೀಡುವ ಗೌರವಾರ್ಪಣೆಯಲ್ಲಿ ಕೃತಜ್ಞತೆಯ ಕಿರುಕಾಣಿಕೆಯೆಂದು ಈ ಕೈಂಕರ್ಯ.

ಯಕ್ಷಗಾನದ ಹಾಡುಗಾರಿಕೆಗೆ ಸಂಗೀತದ ಅರಿವು ಬೇಕು. ಸರಿಗಮ ಜ್ಞಾನ ಬೇಕು. ಕೇವಲ



ಸಾಹಿತ್ಯ ಶಬ್ದಗಳ ಬಳಕೆ ಸಾಲುವುದಿಲ್ಲ ಎಂದು ನನಗೆ ಮನದಟ್ಟಾಗಿತ್ತು. ಲಯತಾಳಗಳ ಬಗೆಗೆ ಗಣಿತ ಗುಣಿತಗಳನ್ನು ಗುರುತಿಸುವ ನಿಲುವನ್ನು ಪಡೆದಿದ್ದೆ. ಪ್ರಸಂಗ ಸಾಹಿತ್ಯಗಳಲ್ಲಿ ಪದ್ಯಗಳ ಮೇಲುಗಡೆಗೆ ಬಳಸುವ ನಾಟಿ, ಶಂಕರಾಭರಣ, ಕೇದಾರಗೌಳ, ಕಾಂಬೋಧಿ, ಸೌರಾಷ್ಟ್ರ, ಕಲ್ಯಾಣಿ, ಮಧ್ಯಮಾವತಿ ಮುಂತಾದ ಶಿರೋನಾಮೆಗಳು ಕರ್ನಾಟಕೀ ಪದ್ಧತಿಯಲ್ಲಿ ಬಳಸಲ್ಪಡುವ ರೂಢನಾಮಗಳು ಎಂದು ಗೊತ್ತಾಗಿತ್ತು. ನಾನು ಬೆಳೆದ ಪರಿಸರದಲ್ಲಿ ಕೇಳಿದ್ದು ಹಿಂದೂಸ್ಥಾನೀ - ಉತ್ತರಾದೀ ಸಂಗೀತ ಪದ್ಧತಿಯ ರಾಗಾಲಾಪಗಳನ್ನು. ಆ ಬಗ್ಗೆ ಯಾರನ್ನಾದರೂ ಸಂಪರ್ಕಿಸಿ ತಿಳಿದುಕೊಳ್ಳುವ ತವಕ ನನಗೆ. ಬಾಳೆಹದ್ದ ಭಾಗವತರು ಕರ್ನಾಟಕೀ ರಾಗಗಳ ಖಚಿತ ಅರಿವುಳ್ಳವರು, ಆ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದಾರೆ ಎಂದು ನಿರ್ದಿಷ್ಟಪಡಿಸಿಕೊಂಡೆ. ಒಂದೆರಡು ತಾಳಮದ್ದಳೆ ಕೂಟದಲ್ಲಿ ಅವರ ಪದ್ಯಗಳನ್ನು ಕೇಳಿದೆ. ರಾಗದ ಬಳಕೆಯಲ್ಲಿ ಸ್ವತಃ ಅಧ್ಯಯನ ಮಾಡಿ ಹಾಡುತ್ತಾರೆ. ಇನ್ನೊಬ್ಬರ ಅನುಕರಣೆಯಲ್ಲ ಎಂದು ದೃಢವಾಯಿತು. ಗಣೇಶ ಚತುರ್ಥಿಯಂದು ಅರಳಿಮಕ್ಕಿಯಲ್ಲಿ ಭೀಷ್ಮಾರ್ಜುನ ಕಾಳಗ ಪ್ರಸಂಗದ ಪದ್ಯ ಕೇಳಿದೆ. ಆ ರಾತ್ರಿ ಅವರು ಹೇಳಿದ - *'ಭೇದವಿಲ್ಲೆನಗೆ ನಿಮ್ಮುಭಯರೊಳಲೆ ಕಂದ', 'ಅಂತರಂಗದಿ ನೋಡದೆ', 'ಮುರಹರನನು ನೋಡಿ ನಗುತ ಗಾಂಗೇಯನು... '* ಈ ಪದ್ಯಗಳು ನನ್ನ ಮನಸ್ಸಿಗೆ ಮಾದರಿಯ ಅಚ್ಚಾಗಿ ಕಂಡವು. ಧ್ವನಿ ಸೂಕ್ಷ್ಮಕ್ಕೆ ಸ್ವರಜ್ಞಾನವಿಲ್ಲದೆ ಸಾಧ್ಯವಿಲ್ಲ ಎಂದು ನಿರ್ಧರಿಸಿದೆ. ಯಲ್ಲಾಪುರ ತಾಲೂಕಿನ ಬಾಳೆಹದ್ದ ಎಲ್ಲಿದೆ? ಆ ಕೃಷ್ಣ ಭಾಗವತರು ಕೇಳಿದವರಿಗೆ ತಿಳಿಸಿ ಹೇಳುತ್ತಾರೆಯೇ? ಸಲುಗೆಯಿಲ್ಲದೆ ಸಂಪರ್ಕಿಸುವುದು ಹೇಗೆ? ನನ್ನ ಒರಟುತನ ಅವರಿಗೆ ಮುಜುಗರ ತರಲಾರದೆ? ಇತ್ಯಾದಿ ಪ್ರಶ್ನೆಗಳು ಕಾಡಿದವು. ಕೆಲವು ದಿನಗಳು ಹೀಗೆಯೇ ಕಳೆದವು. ನಾನು ತಾಳಮದ್ದಲೆಯಲ್ಲಿ ಪದ್ಯ ಹೇಳುತ್ತಿದ್ದೆ, ಅರ್ಥ ಹೇಳುತ್ತಿದ್ದೆ. ಹಾಗಾಗಿ ಶೀಗೇಮನೆ ನಾರಾಯಣ ಹೆಗಡೆಯವರ ಪರಿಚಯವಾಯಿತು. ಒತ್ತಾಯಕ್ಕಾಗಿ ಅವರ ಮನೆಗೆ ಹೋದೆ. ಬಾಳೆಹದ್ದದವರ ವೈಶಿಷ್ಟ್ಯದ ಬಗೆಗೆ ನಾನು ತಿಳಿಸಿದಾಗ, ಅವರನ್ನು ಭೇಟಿ ಮಾಡೋಣ- ಅವರ, ಮನೆಗೆ ಹೋಗೋಣ ಎಂದು ಶೀಗೇಮನೆಯಿಂದ ಕಾಲುದಾರಿಯಲ್ಲಿ ಬಾಳೆಹದ್ದಕ್ಕೆ ಕರೆದೊಯ್ದರು. ಸದ್ಗೃಹಸ್ಥರಾದ ಭಾಗವತರು ಸೌಹಾರ್ದ ಸ್ವಾಗತ ನೀಡಿದರು.

ಅದೇ ವೇಳೆಗೆ ಧಾರವಾಡ ಆಕಾಶವಾಣಿ ಕೇಂದ್ರದಿಂದ ಒಂದು ತಾಸಿನ ತಾಳಮದ್ದಳೆಗೆ ಕರೆ ಬಂದಿತ್ತು. ಹೊಸ ಆಖ್ಯಾನ ನೀಡಬೇಕೆಂದು ಅವರ ತವಕ. ಪದ್ಯ ರಚಿಸುವ ಹವ್ಯಾಸ ನನಗೂ ಇತ್ತು. ಯಾವ ಕತೆಯಾದೀತು ಎಂದು ಯೋಚಿಸಿ - ರಾಮಾವತಾರ ಪರಿಸಮಾಪ್ತಿಯ ದೂರ್ವಾಸ ಪ್ರಕರಣದ ಸಂದರ್ಭದೊಂದಿಗೆ ಕೆಲವು ಪದ್ಯಗಳನ್ನು ಬರೆಯುತ್ತೀರಾ! ಎಂದು ಕೇಳಿದರು. ಆಯಿತು ಎಂದು ಒಪ್ಪಿದೆ. ಬಾಳೆಹದ್ದದಲ್ಲಿಯೇ ನಾಲ್ಕು ದಿನ ಉಳಿದು 'ರಾಮ ನಿರ್ಯಾಣ' ಪ್ರಸಂಗ ಬರೆದೆ. ಜಯದೇವ ಕವಿ ರಾಧಾಕೃಷ್ಣರ ಮಧುರ ಮೈತ್ರಿಯ ನೆನಪಿನಲ್ಲಿ 'ಗೀತ



ಗೋವಿಂದ' ರಚಿಸಿದನಂತೆ. ನಾನು ರಾಧಾ-ಕೃಷ್ಣರ ಆತ್ಮೀಯ ಆದರೋಪಚಾರದಲ್ಲಿ ಬರೆದ ಆ ಚಿಕ್ಕ ಕೃತಿ ಬಾಳೆಹದ್ದ ಭಾಗವತರ ನನ್ನ ಮಧ್ಯೆ ವಿಶ್ವಾಸದ ಕೊಂಡಿಯಾಯಿತು. ಆ ಪದ್ಯಗಳನ್ನು ಓದಿ ಸಾಹಿತ್ಯಕ್ಕೆ ಸಂಬಂಧಿಸಿ ಯಾವ ರಾಗ ಹೊಂದಿಸಬೇಕೆಂಬ ಬಗ್ಗೆ ಅವರು ರಾಗಭಾವದ ಗುಂಗಿನಲ್ಲಿ ವಿಭಿನ್ನ ರಾಗಗಳ ಸಂಯೋಜನೆಯಲ್ಲಿ ಸಾಹಿತ್ಯವನ್ನು ಮೆಲುಕು ಹಾಕುವುದನ್ನು ನೋಡಿ ಕೇಳಿ ನನ್ನ ಯಕ್ಷಗಾನ ಚಿಂತನೆಗೆ ಹೊಸಬೆಳಕು ಹೊಮ್ಮಿತು. ಆಗಷ್ಟೇ ವಾಯಲಿನ್ ಅಭ್ಯಾಸ ಮಾಡುತ್ತಿದ್ದ ಅವರು ಪಿಟೀಲುನ ತಂತಿಯಲ್ಲಿ ಸಾಹಿತ್ಯ ಗುರುತಿಸುವ ಕ್ರಮ ನನಗೆ ಅರಿವಾಗದ ಕೊರತೆ ಎನಿಸಿದರೂ ಸಂಗೀತದ ಕುರಿತ ಕೊರತೆ ನನ್ನಲ್ಲಿದೆ ಎಂದು ಕೊರಗುವಂತಾಯಿತು. ನನ್ನ ಖಿನ್ನತೆಯ ಅರಿವು ಅವರಿಗೂ ಆಯಿತು. 'ನೀವು ಸಾಹಿತ್ಯದಲ್ಲಿಯೇ ಮುಳುಗಿ ಸಂಗೀತ ಮರೆತಿದ್ದೀರಿ. ಸ್ವರಜ್ಞಾನದ ಮೂಲಕ ನಿಮ್ಮ ಕವಿತ್ವಕ್ಕೆ ವಿಶೇಷ ಕಳೆ ಬರಲಿ. ನೀವು ಇಲ್ಲಿಯೇ ಉಳಿಯಿರಿ. ನನಗೂ ಬೇರೆ ಅಣ್ಣ ತಮ್ಮಂದಿರಿಲ್ಲ. ಇದು ನಿಮ್ಮದೇ ಮನೆ ಎಂದು ತಿಳಿಯಿರಿ' ಎಂದು ಅವರು ಹೇಳಿದಾಗ ಅವರ ಕಳಕಳಿಯ ಆ ಅಲೆಯಲ್ಲಿ ನನಗೆ ಒಳಗೊಳಗೇ ಅಳುವಂತಾಯಿತು. ಆಗಾಗ ಬರುತ್ತೇನೆ- ಸಂಗೀತದ ಸೊಗಸು ತಿಳಿಯುವುದಕ್ಕೆ- ಕಲಿಯುವುದಕ್ಕೆ ಎಂದು ಹೇಳಿ ಬೀಳ್ಕೊಂಡೆ. ಪ್ರಥಮ ಸಂದರ್ಶನವೇ ನನ್ನ ಅಂತರಂಗದ ಕಣ್ಣ ತೆರೆಸಿತು. ಭಾಗವತರ ಆದರದ ಆತಿಥ್ಯ ನನ್ನ ಅಧ್ಯಯನ ಆಸಕ್ತಿಯ ಬೇರಿಗೆ ನೀರಾಗಿ ತಂಪು ನೀಡಿತು. ಸಾಹಿತ್ಯ ಸಂಗೀತಗಳ ಬಗೆಗೆ ಸಾಧನೆ ಮಾಡುವ ಛಲ ಮೊಳೆಯಿತು. ಆದರೂ ಸಂಗೀತ ಸಾಧನೆ ನನ್ನ ಪಾಲಿಗೆ ತಿರುಕನ ಕನಸೇ ಆಯಿತು. ಭಾಗವತರ ಬಗೆಗೆ ಬರೆಯಲೂ ಅಳುಕುವ ಅಲೆಮಾರಿಯಾಗಿ ಗೀಚುತ್ತಿದ್ದೇನೆ, ಕ್ಷಮಿಸಿ.

ರಾಮಕೃಷ್ಣಾಶ್ರಮದಿಂದ ಬಂದವನು ನೇರವಾಗಿ ಬಾಳೆಹದ್ದಕ್ಕೆ ಹೋದೆ. ಆ ಸಲ ಸರಿಗಮದ ಅರಿವು ಪಡೆಯಲು ಅಲ್ಲಿಯೇ ಉಳಿಯಲು ನಿರ್ಧರಿಸಿದೆ. ಇನ್ನಾವ ಆಶ್ರಮವೂ ಬೇಡ, ಯಕ್ಷಗಾನವನ್ನೇ ಅಧ್ಯಯನ-ಅಧ್ಯಾಪನ ವೃತ್ತಿಯಾಗಿಸಿಕೊಳ್ಳಲು ನಿರ್ಧರಿಸಿದ್ದೆ. ಒಂದು ದಿನ ಭಾಗವತರೂ ನಾನೂ ಲಯ ಸಂಬಂಧದಲ್ಲಿ ಆಲೋಚಿಸುತ್ತ ಮಾತಾಡುತ್ತಿರುವಾಗ ಹಿಂದಿನವರು ಮಗ್ಗೀ ಹೇಳುವ ಕ್ರಮ ಅಂದಿನ ಬಾಯಿಪಾಠ ಪದ್ಧತಿಯ ಬಗ್ಗೆ, ಆ ನಿಯಮದಲ್ಲಿ ಎಂಟು ಘಾತ ಗುರುತಿಸಿ ಅದಕ್ಕೆ ಅಂಕಿಗಳನ್ನು ದ್ವಿಗುಣಗೊಳಿಸುತ್ತ ಲಯಾಭ್ಯಾಸ ಮಾಡಿಸಲು ಬಳಸಿದರೆ ಹೇಗೆ ಎಂಬ ವಿಚಾರ ಮಾಡಿದೆವು. ವಿಲಂಬ - ಮಧ್ಯ- ತ್ವರಿತ -ತೀವ್ರ ಕ್ರಮದಲ್ಲಿ ಅಂಕಿಗಳನ್ನು ಜೋಡಿಸಿ ಹೇಳಿದೆ. ಅದೇ ರೀತಿ ಅಂಕಿಗಳಿಗೆ ಘಾತ ಜೋಡಿಸಿ ಹೇಳಿದೆ. ಇಂತಹ ಪ್ರಯತ್ನದಲ್ಲಿ ಲೆಕ್ಕಾಚಾರದ ಘಾತಗಳಲ್ಲಿ ಏಕಾಗ್ರತೆ ಕೈಚಳಕ ಇದ್ದೀತಾದರೂ ಸ್ವರಗಳ ಪರಿಚಯ ಮಾತ್ರ ಆಗುತ್ತಿರಲಿಲ್ಲ. ಈ ಲಯ ಸೂತ್ರದ ಮೂಲಕ ಯಕ್ಷಗಾನ ಪದ್ಯಗಳ ಅಳತೆ ಆರಂಭಿಸಿದೆ. ಇದಕ್ಕೆ ಪ್ರೋತ್ಸಾಹ ಸ್ಫೂರ್ತಿ ಬಾಳೆಹದ್ದ ಭಾಗವತರೇ. ಇದನ್ನು ಆಗಲೂ ನಾನು ಹೇಳಿದ್ದೆ. ಈಗಲೂ ಹೇಳುತ್ತೇನೆ. ಇದನ್ನು ತಾಳ ಸೂತ್ರವೆಂದು ಪಾಠಕ್ರಮಕ್ಕೆ ಹೊಂದಿಸಿ ಬರೆದೆ. ಅದನ್ನು ಚಿಕ್ಕ



ಪುಸ್ತಿಕೆಯಾಗಿ ಬಿಡುಗಡೆಗೊಳಿಸಿದ್ದೂ ಆಯಿತು. ತಾಳ ಮಾತ್ರಾ ಗಣನೆಗೆ, ಪದ್ಯಗಳ ಸ್ವರೂಪದ ಖಚಿತ ಅರಿವಿಗೆ ಹೆಜ್ಜೆಯ ಗತ್ತು ಒತ್ತು ವಿನ್ಯಾಸಗಳಿಗೆ ಆ ಗಣಿತ ಕ್ರಮ ಅನುಕೂಲ ಎಂದು ಸಿದ್ದಾಪುರ, ಅಚವೆ ಮುಂತಾದ ಕಡೆ ವಿದ್ಯಾರ್ಥಿಗಳ ಮೇಲೆ ಪ್ರಯೋಗಿಸಿ ಫಲಿತಾಂಶ ಕಂಡುಕೊಂಡೆ. ಅದನ್ನು ಕಂಡು ಹಿಡಿಯುವಲ್ಲಿ ಅದಕ್ಕೆ ರೂಪು ಕೊಡುವಲ್ಲಿ ಬಾಳೆಹದ್ದ ಭಾಗವತರು ನೆರವಾಗಿದ್ದಾರೆ ಎಂಬುದನ್ನು ನಾನು ಆಗಾಗ ಹೇಳುತ್ತಲೇ ಬಂದಿದ್ದೇನೆ. ಗಣಿತ ಸೂತ್ರವನ್ನು ಹೊಸ್ತೋಟದವರ ಸೂತ್ರ ಎಂದು ಕರೆಯಬೇಡಿ, ಅದು ಯಕ್ಷಗಾನದ ಅರಿವಿಗೆ, ತಾಳದ ನಡೆಗೆ, ಪದ್ಯಗಳ ಸ್ವರೂಪಕ್ಕೆ ಸಂಬಂಧಿಸಿದ ಲಯಸೂತ್ರ ಎಂದು ನಾನು ಆಗಾಗ ಎಚ್ಚರಿಸಿದರೂ ಇದನ್ನು ಹೊಸ್ತೋಟರ ಶೈಲಿ ಎಂದು ಪ್ರತ್ಯೇಕಿಸಿದವರು ಪ್ರಾದೇಶಿಕ ಕಲಾವಿದರು. ಅನುಕರಣೆಯ ವಿಧಾನದಲ್ಲಿ ರೂಢಿಸಿಕೊಳ್ಳುವ ಪ್ರಾದೇಶಿಕ ಶೈಲಿಗೂ ಅಭ್ಯಾಸಕ್ಕೆ ಅನುಕೂಲವಾಗುವ ಲಯಸೂತ್ರಕ್ಕೂ ತಳಕು ಹಾಕುವ ಭೇದತಂತ್ರವೆಂದು ಬೇರೆ ಹೇಳಬೇಕಾಗಿಲ್ಲ. ಲಯ ಗಣಿತವನ್ನು ಅಳವಡಿಸಿ ಜೋಡಿಸುವಾಗ ಬಾಳೆಹದ್ದ ಭಾಗವತರು ನೆರವಾಗಿದ್ದಾರೆ ಎಂಬುದು ನೆನಪಿಡಬೇಕಾದ ಸಂಗತಿ. ಅದೇ ರೀತಿ ಪದ್ಯಗಳ ಮಟ್ಟುಗಳ ವಿಂಗಡಣೆ ಅವುಗಳ ಸಂಕಲನದಲ್ಲಿ ಎರಡು ತಿಂಗಳಷ್ಟು ಅವಧಿ ಬಾಳೆಹದ್ದದಲ್ಲಿಯೇ ನಾನಿದ್ದೆ. ಪದ್ಯಗಳ ಛಂದಸ್ಸು ಅಲಂಕಾರಗಳಿಗೆ ಸಂಬಂಧಿಸಿ ಆಲೋಚಿಸಿ ಅಧ್ಯಯನಕ್ಕೆ ಆರಂಭಿಸಿದ್ದು ಕೃಷ್ಣ ಭಾಗವತರ ಮನೆಯಲ್ಲಿಯೇ! ನನ್ನ ಯಕ್ಷಗಾನದ ಅಧ್ಯಯನ ಸ್ವರೂಪ ಕಂಡುಕೊಂಡಿದ್ದು ಬಾಳೆಹದ್ದ ಭಾಗವತರ ಒಟನಾಟದಲ್ಲಿ. ಆ ವ್ಯವಹಾರದಲ್ಲಿ ಸಾಕಷ್ಟು ಚರ್ಚಿಸಿದ್ದೇವೆ. ಕೆಲವು ಸಲ ಅದು ಜಗಳದ ಜಗುಲಿಯೂ ಆಗಿ ಪರಿಣಮಿಸಿದ್ದಿದೆ. ಅವರು ನಾದಕ್ಕೆ ನೀಡುವ ಮಹತ್ವವನ್ನು ಉಳಿದ ಸಂಗತಿಗಳಿಗೆ ನೀಡುವುದಿಲ್ಲ. ಹಾಗಾಗಿ ಸಾಹಿತ್ಯ ಬಳಕೆಗೆ ಸಂಬಂಧಿಸಿ ನಾವು ತರ್ಕಿಸಿದರೆ ಅವರಿಗೆ ಅದು ಕಿರಿಕಿರಿಯ ಸಂಗತಿಯೆನಿಸುವುದು ಸಹಜ. ಪ್ರಸಂಗ ಸಾಹಿತ್ಯಕ್ಕೆ ಸಂಬಂಧಿಸಿ ಹಾಡುಗಾರಿಕೆ, ರಂಗತಂತ್ರಗಳ ವಿಷಯದಲ್ಲಿ ಸಾಕಷ್ಟು ಮಾತುಕತೆ ನಡೆದರೂ ನಂತರ ಮುಂದಿನ ತೀರ್ಮಾನವನ್ನು ನಾನೇ ಊಹಿಸಿಕೊಳ್ಳಬೇಕಾಗುತ್ತಿತ್ತು. ಅವರ ಭಾವುಕ ಮುಗ್ಧತೆಗೆ ನಾನು ಮಣಿದಿದ್ದೇನೆ. ಪಡೆದ ಪ್ರಯೋಜನಕ್ಕೆ ಋಣಿಯೂ ಆಗಿದ್ದೇನೆ.

ಸೋಂದಾ ಹುಡುಗರಿಗೆ ಯಕ್ಷಗಾನ ಕಲಿಸಲು ನನ್ನನ್ನು ಕರೆತಂದು ಪರಿಚಯಿಸಿದವರೂ, ಆ ಹೊಣೆಗೆ ಕರ್ತವ್ಯ ನಿರ್ವಹಿಸಲು ಕಾರಣರಾದವರೂ ಬಾಳೆಹದ್ದ ಭಾಗವತರೇ! ಕೆಲವಾರು ವರ್ಷ ಮಕ್ಕಳ ಮೇಳದ ಮೈಲುಗಲ್ಲಾಗಿ ಸೋಂದಾ ಮಕ್ಕಳ ಮೇಳ ನಡೆಯಲು, ಸಲಹೆ-ಸಹಕಾರ ನೀಡಿದ ಅವರು ತಮ್ಮ ಮಗ ತಿಮ್ಮಪ್ಪನನ್ನು ಆ ಮೇಳದಲ್ಲಿ ತೊಡಗಿಸಿ ಬೆಂಬಲಿಸಿದ್ದಾರೆ. ಹೀಗೆ ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನನ್ನ ಪರಿಶ್ರಮದ ಬಹುಪಾಲು ರೂಪುರೇಷೆಯನ್ನು ನಾನು ಬಾಳೆಹದ್ದದ ಕೃಷ್ಣ ಭಾಗವತರ ಮೂಲಕ ರೂಪಿಸಿಕೊಂಡೆ.

ಬಾಳೆಹದ್ದದವರು ಬೆಳಗುಂದ್ಲಿ ಭಾಗವತರ ಬಗ್ಗೆ ಅಭಿಮಾನದಿಂದ ಹೇಳುತ್ತಿದ್ದರು; ಗುಡ್ಡಮನೆ

ಪುಟ ಪ್ರಾಯೋಜಕರು : **ಶ್ರೀ ಪರಮೇಶ್ವರ ಮಹಾಬಲೇಶ್ವರ ಹೆಗಡೆ, ದೇವರಕಲ್ಲಳ್ಳಿ**



ರಾಮ ಭಾಗವತರನ್ನು ಸ್ಮರಿಸುತ್ತಿದ್ದರು; ಯಲ್ಲಾಪುರ ಕುಪ್ಪನಮನೆ ಭಾಗವತರ ಬಳಿಗೆ ನನ್ನನ್ನು ಕರೆಯೊಯ್ದಿದ್ದರು. ಯಕ್ಷಗಾನದ ಹಿನ್ನಲೆಯ ಬಗೆಗೆ ಹಳೆಯ ಸಂಗ್ರಹಗಳ ಬಗ್ಗೆ ತುಂಬಾ ಆಸಕ್ತಿ. ಯಕ್ಷಗಾನ ಕೈ ಬರಹದ ಪ್ರತಿಗಳ ಬಗೆಗೆ ಅಥವಾ ಆ ಕುರಿತು ಯಕ್ಷಗಾನ ಮೂಲದ ಬಗೆಗೆ ಹಳೆಯ ಸಂಗ್ರಹವಿದೆ ಎಂದು ಯಾರಾದರೂ ಹೇಳಿದರೆ ಸೀದಾ ಆ ಸ್ಥಳವನ್ನು ಹುಡುಕಿಕೊಂಡು ಹೋಗುವ ಚಟುವಟಿಕೆ ಅವರದು. ಒಮ್ಮೆ ಯಾರೋ ಯಕ್ಷಗಾನದ ಬುಡದ ಬಗ್ಗೆ ತಮ್ಮಲ್ಲಿ ಸಂಗ್ರಹವಿದೆ ಎಂದು ಹೇಳಿದ್ದರಂತೆ. ತಾನು ಮೊದಲು ಹೋಗಿ ಬರುತ್ತೇನೆ, ವಿಶೇಷವೇನಾದರೂ ಇದ್ದರೆ ಆಮೇಲೆ ನಾವಿಬ್ಬರೂ ಹೋಗೋಣ ಎಂದು ಹೇಳಿ ಹೊರಡಲು ಸನ್ನದ್ಧರಾದಾಗ, ಭಾಗವತರ ಮಗ ತಿಮ್ಮಪ್ಪ ಹಾಗೂ ನಾನು ಇಬ್ಬರೂ, 'ಕೈಕರಗಸ ತೆಗೆದುಕೊಂಡು ಹೋಗಿ, ಬುಡವನ್ನು ಕತ್ತರಿಸಿ ತೆಗೆದುಕೊಂಡು ಬರಲು ಸುಲಭವಾಗುತ್ತದೆ' ಎಂದು ಕುಚೋದ್ಯ ಮಾಡಿದ್ದಿದೆ. ನಾವೂ ಆಲಸಿಗಳು, ಆ ಕುರಿತು ಚಟುವಟಿಕೆ ಕಾಣಿಸುವವರನ್ನು ಎಷ್ಟು ಹಗುರವಾಗಿ ಕಾಣುತ್ತೇವೆ ಎಂಬುದಕ್ಕೆ ಈ ಉದಾಹರಣೆ ನೀಡಿದೆ. ಅಚವೆ ಮೂಲೇಗದ್ದೆಯಲ್ಲಿ ದೊರೆತ ಕೂಜಳ್ಳಿ ನಾರಾಯಣ ಭಟ್ಟರ ಕೈಬರೆಹವನ್ನು ಮೂಲೇಗ್ದದೆಯಿಂದ ತರುವಾಗ ಅಲ್ಲಿಗೆ ಬಾಳೆಹದ್ದದವರೂ ಬಂದಿದ್ದರು. ಕಬ್ಬಿನಗದ್ದೆ ಮಹಾಬಲ ಭಾಗವತರ ಜೊತೆ ತಾರೀಮಕ್ಕಿಯ ಕಡೆ ನಾನು ಅಲೆದಾಡಿದಾಗ ಆ ಬ್ಗಗೆ ಅನುಕಂಪ ಕಾಣಿಸಿ, ನಿಮಗೆ ತಿಳಿದದ್ದನ್ನು. ನೀವು ಮಾಡಿ, ಇಂತಹ ತಿರುಪೆಯ ತಿರುಗಾಟ ಬೇಡ ಎಂದು ಹೇಳಿದ್ದರು. ಹಳೆಯ ಸಂಗ್ರಹದ ಬಗ್ಗೆ ಎಷ್ಟು ಆಸಕ್ತಿಯೋ ಅಷ್ಟೇ ಲವಲವಿಕೆ ಹೊಸ ಅನ್ವೇಷಣೆಯ ಬಗ್ಗೆಯೂ. ಸಮಕಾಲೀನರಾಗಿ ಸಂಗೀತದ ಬಗ್ಗೆ ಅರಿವುಳ್ಳ ಮಹಾಬಲ ಹೆಗಡೆ ಕೆರೆಮನೆಯವರ ಒಡನಾಟ ಅವರಿಗಿತ್ತು. ಕಾರಂತರ ಪ್ರಯೋಗಗಳ ಬಗ್ಗೆ ಒಲವಿದೆ. ವಾಯಲಿನ್ ಅಳವಡಿಸಬೇಕೆಂದು ಅಭ್ಯಾಸ ಮಾಡಿದರು. ಪಿಟೀಲು ನುಡಿಸಲು ಕಲಿತ ಮೇಲೆ ತಾಳಮದ್ದಳೆಯಲ್ಲಿ ಕೆಲವೆಡೆ ಪಿಟೀಲು ನುಡಿಸಿದರು. ಪದ್ಯದ ಸ್ವರೂಪ ನೋಡಿ ಸಾಹಿತ್ಯ ಪುಷ್ಟಿಗೆ ಬೇರೆ ಬೇರೆ ರಾಗ ಅಳವಡಿಸಿದರು. ಸಿಂಹೇಂದ್ರ ಮಧ್ಯಮ, ರೇವತಿ, ಕಲಾವತಿ, ಚಂದ್ರಕಂಸ್, ಮಾಯಾಮಾಳವಗೌಳ, ಸಾರಮತಿ ಮುಂತಾದ ರಾಗಗಳನ್ನು ಬಳಸಿ ಹಾಡಿದ್ದಾರೆ. ಎಂ. ರಾಜಗೋಪಾಲಾಚಾರ್ಯರ ಯಕ್ಷಗಾನ ಸಂಗೀತದ ಪದ್ಯ-ಸ್ವರ ಪ್ರಸ್ತಾರವನ್ನು ನೋಡಿ, ಕೆ. ವಿ. ರಾಜಯ್ಯಂಗಾರರನ್ನು ಕರೆಸಿ ಮಹಾಬಲ ಹೆಗಡೆ ಕೆರೆಮನೆಯವರ ಹಾಡಿಕೆಯಲ್ಲಿ ನಾಲ್ಕು ದಿವಸ ಯಕ್ಷಗಾನದ ಕೆಲವು ಪದ್ಯಗಳಿಗೆ ಸ್ವರ ಪ್ರಸ್ತಾರ ಹಾಕುವ ಕಾರ್ಯಕ್ರಮ ಬಾಳೆಹದ್ದದಲ್ಲಿ ನಡೆಯಿತು. ಆದರೆ ಅವು ಪ್ರಚಾರಕ್ಕಾಗಿ ಮಾಡಿದ್ದಲ್ಲ, ವಿಚಾರಕ್ಕೆ ನೆರವಾಯಿತು. ಪ್ರಕಟ ಪ್ರಸಿದ್ಧಿ ದೊರೆಯಲಿಲ್ಲ. ಯಕ್ಷಗಾನಕ್ಕೆ ಸಂಬಂಧಿಸಿ ಬಾಳೆಹದ್ದ ಭಾಗವತರ ಮನೆ ಶಾಲೆಯಾಗಿ, ವಿಚಾರ ವೇದಿಕೆಯಾಗಿ, ಪ್ರಯೋಗ ತಾಣವಾಗಿ ಆಶ್ರಯ ನೀಡಿದೆ. ಇದು ನನ್ನ ಪ್ರತ್ಯಕ್ಷಾನುಭವ.

ಬಾಳೆಹದ್ದದ ಭಾಗವತರು ಹಿತ್ಲಳ್ಳಿ, ಬೆಳಗುಂದ್ಲಿ, ಭರತನಹಳ್ಳಿ, ಮೇಳಗಳಲ್ಲಿ ಭಾಗವತಿಕೆ ಮಾಡಿದ್ದಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ತಾಳಮದ್ದಳೆಗಳಲ್ಲಿ ಹಿನ್ನೆಲೆ ಒದಗಿಸಿದ್ದಾರೆ. ಕುಂದಾಪುರದ ಆಷಾಢ ಏಕಾದಶೀ ಜಾಗರದಲ್ಲಿ ಕೆಲವು ವರ್ಷ ಪಾಲುಗೊಂಡಿದ್ದಾರೆ. ಹರಿಹರ,



ಮೈಸೂರು, ಗೋವಾ ಮುಂತದೆಡೆ ತಮ್ಮ ಹಾಡುಗಾರಿಕೆಯ ಸ್ವರ ಸೌರಭ ಕಾಣಿಸಿದ್ದಾರೆ. ತಮ್ಮ ಅನುಭವವನ್ನು ಸ್ವಾರಸ್ಯವಾಗಿ ವಿವರಿಸುವ ಅವರಿಂದಲೇ ಕೇಳಿ ತಿಳಿದ ಸಂಗತಿಗಳನ್ನು ಲಿಖಿತ ಕ್ರಮದಲ್ಲಿ ಮಂಡಿಸುತ್ತೇನೆ. ಹಿಂದಿನವರು ಸಾಹಿತ್ಯ ಬಳಸುವಲ್ಲಿ ಸರಿಯಾದ ಅರ್ಥಜ್ಞಾನವಿದ್ದೇ ವ್ಯವಹರಿಸುತ್ತಿದ್ದರು ಎನ್ನುವಂತಿಲ್ಲ, ತಾನೇ ಮುಖತೋ ಪೂರ್ಣಚಂದ್ರಸ್ಯ ಎನ್ನುವುದನ್ನು **'ಮುಖದೊಳ್ ಪೂರ್ಣಚಂದ್ರಸ್ಯ'** ಎನ್ನುತ್ತಿದ್ದೆ; ಪದ್ಯ ಸಾಹಿತ್ಯದ ತಾಳಾವರ್ತದ ಎತ್ತುಗಡೆಗೆ ಹೊಂದಿ - 'ಆದಿ ನಾರಾಯಣ ..', 'ಎಲ್ಲಿ ನೋಡಿದರು ಕೌರವಗಂಜಿ....', ತಂದೆ ಕಣ್ವನಲ್ಲ...', ' ಭೀಷ್ಮನರಿಯದ ಹಾಗೆ...' ಇತ್ಯಾದಿ ಬಳಕೆಗಳ ಬಗ್ಗೆ ವಿನೋದವಾಗಿ ತಿಳಿಸುತ್ತಿದ್ದರು. 'ಏನೆಂದೇ ಬಾಲ... ' ಎಂಬ ಪದ್ಯದಲ್ಲಿ ಹಾಸ್ಯಗಾರ ಹನುಮಂತನ ಬಾಲ ತಂದು ಹಿಡಿದು ಅಣಕವಾಡುತ್ತಿದ್ದ ಬಗೆಗೂ ಕೆಲವೊಂದು ವೇಳೆ ಅರ್ಥ ತಿಳಿಯದೆ ಬಲ್ಲವರಲ್ಲಿ ಕೇಳಿದರೆ ಅವರು ಕುಚೋದ್ಯ ಮಾಡುತ್ತಿದ್ದ ಬಗೆಗೂ ವಿವರಿಸಿದ್ದಾರೆ. ತೋಳಗೋಡ ಶಾಸ್ತ್ರಿಗಳು ಒಮ್ಮೆ ಸುಭದ್ರೆಯ ಕಲ್ಯಾಣ ಪ್ರಸಂಗದ - *'ಸಂದುದೀ ಪರಿ ಮಾಸ ಮೂರದ । ರಿಂದ ಮೇಲಣ ಕಥೆಯನೊರೆದಪೆ । '* ಈ ಪದ್ಯದ ಅರ್ಥವನ್ನು ಅಡ್ಕಳ್ಳಿ ಭಾಗವತರಲ್ಲಿ ಕೇಳಿದರಂತೆ. ಆಗ ಅವರು, 'ಮಳ್ಳಾ! ಇಷ್ಟೂ ಅರ್ಥವಾಗುವುದಿಲ್ಲವೇ. ಸುಭದ್ರೆ ಮೂರು ತಿಂಗಳ ಗರ್ಭಿಣಿಯಾಗಿದ್ದಳು ಎಂದು ಅದರ ಅರ್ಥ ಎಂದಿದ್ದರಂತೆ. ತಮ್ಮಾ ಕೋಪಿಸಬೇಡ ಸುಮ್ಮನೆ ಈರಪ್ಪ.... ' ಎಂದು ಹೇಳಿದಾಗ ತಾನು ಈರಪ್ಪನಲ್ಲ, ಲಕ್ಷ್ಮಣ ಎಂದ ಬಗ್ಗೆ, ಹಲವಾರು ಸಂದರ್ಭಗಳಲ್ಲಿ ನಡೆದ ಅವಾಂತರಗಳ ಕುರಿತು ನೆನಪನ್ನು ಮುಂದಿಡುತ್ತಿದ್ದರು. ರಂಗದಲ್ಲಿ ಪುಷ್ಪಾಂಜಲಿ ನೃತ್ಯದ ನೆನಪಿನಲ್ಲಿ ಪ್ಲೀರಿಕೆ ಸ್ತ್ರೀ ವೇಷ ಬಾಗಿ ನಿಂತು ಹೂವ ಚಲ್ಲಿ ಕೈಮುಗಿದು 'ಸ್ವಾಗತ ಗೈವೆವು ಸಭಿಕರೆ ನಿಮಗೆ' ಎಂದು ಪದ್ಯ ಹೇಳಿದ ಬಗೆಗೆ ಹೇಳಿದ್ದಾರೆ. ಹೊಸ ಸುಧಾರಣೆಯ ಕುರಿತು ಅವರಿಗಿರುವ ಉತ್ಸಾಹ, ಹಳೆಯ ಪರಂಪರೆಯ ಬಗೆಗಿನ ಕಾಳಜಿ ಕಲಾವಿದರಿಗೆ ಆದರ್ಶ. ಇಂದಿನ ಪ್ರಗತಿಪರ ಅಂಶಗಳನ್ನು ಗುರುತಿಸುವ ಅಸಂಬದ್ಧತೆಗೆ ನೊಂದುಕೊಳ್ಳುವ ಅವರ ಸ್ಪಂದನ ವಸ್ತುನಿಷ್ಠ ಕಳಕಳಿಯಿಂದ ಕೂಡಿದೆ. ಅವರ ತುಡಿತ ಮಿಡಿತಗಳಲ್ಲಿ ಸ್ವಾರ್ಥವಿಲ್ಲ ಎಂದು ಖಚಿತವಾಗಿ ಹೇಳುತ್ತೇನೆ. ಮಂಗಲ ಪದ್ಯದ *'ಜಯಜಯ ಗುರುವರ ಕರುಣಸಾಗರ'* ಭೈರವಿ ರಾಗದ ಪದ್ಯದ ಸ್ವರ ಸಂಯೋಜನೆ ಚೇತೋಹಾರಿಯಾಗಿದೆ.

ಬಾಳೆಹದ್ದ ಭಾಗವತರ ಮನೆಗೆ ದಿ. ಕೆರೆಮನೆ ಶಿವರಾಮ ಹೆಗಡೆಯವರನ್ನು ಕರೆದೊಯ್ದಿದ್ದೆ. ಒಂದೆರಡು ದಿನ ಅಲ್ಲಿ ಉಳಿದು ತಿರುಗಿ ಅಲ್ಲಿಂದ ಹೊರಟಾಗ ಅವರು ದಾರಿಯಲ್ಲಿ ಹೇಳಿದ ಮಾತು : ''ಬಾಳೆಹದ್ದದವರ ಪರಿಚಯ ಬಹಳ ವರ್ಷಗಳಿಂದ ಇತ್ತು. ಹಿಂದೆ ಅನೇಕ ಬಾರಿ ತಮ್ಮ ಮನೆಗೆ ಬರಬೇಕೆಂದು ಒತ್ತಾಯಿಸಿದ್ದರು. ನಾನು ಅದು ರಹದಾರಿಯಿಂದ ಬಹುದೂರವಿದೆ ಎಂದು ಭಾವಿಸಿದ್ದೆ. ಇಷ್ಟು ಸನಿಹವೆಂದು ಗೊತ್ತಿದ್ದರೆ ನಾನು ಆಗಾಗ ಬರುತ್ತಿದ್ದೆ'' ಎಂದು ಉದ್ಗರಿಸಿ ಒಳ್ಳೆಯ ಒಡನಾಟದ ಅವಕಾಶ ತಪ್ಪಿಸಿಕೊಂಡೆ ಎಂದು ಈಗ ಅನಿಸುತ್ತಿದೆ ಎಂದರು. ಆ ಹಿರಿಯರ ನುಡಿ



ಬಾಳೆಹದ್ದದವರ ಅತಿಥಿ ಸತ್ಕಾರಕ್ಕೆ ಹಿಡಿದ ಕನ್ನಡಿ, ಬರೆದ ಮುನ್ನುಡಿಯಲ್ಲವೇ?

ಬಾಳೆಹದ್ದ ಭಾಗವತರು ಮೊದಲು ಯಕ್ಷಗಾನ ಕಲಿಯಲು ಆರಂಭಿಸಿದ್ದು ಕಬ್ಬಿನಗದ್ದೆ ಮಹಾಬಲ ಭಾಗವತರಲ್ಲಿ. ಹಿರಿಯ ಮದ್ದಳೆಕಾರ ಕಂಪ್ಲಿ ಸುಬ್ರಾಯ ಹೆಗಡೆಯವರ ಜತೆ ಹೆಚ್ಚಾಗಿ ಹಾಡುಗಾರಿಕೆ ಸಾಗಿದೆ. ಕಂಪ್ಲಿ ಸುಬ್ಬಣ್ಣ ಎಂದೇ ಭಾಗವತರು ಹೇಳುತ್ತಾರೆ. ಇಬ್ಬರೂ ಜತೆಯಾಗಿ ಲಯ-ಸ್ವರಗಳ ಬಗೆಗೆ ಚಿಂತನೆ ನಡೆಸಿದ್ದಾರೆ. ಹಂಸಧ್ವನಿಯ 'ವಾತಾಪಿ ಗಣಪತಿಂ' ಕೀರ್ತನೆಯನ್ನು ಒಂದು ವಾರಕಾಲ ಅವರು ಅಭ್ಯಾಸ ನಡೆಸಿದ ಬಗ್ಗೆ ಕಾಳೂ ಹೆಗಡೆಯವರು ಹೇಳುತ್ತಾರೆ. ಭಾಗವತರ ಸಾಧನೆಯ ಬಗ್ಗೆ ಇದೊಂದು ದೃಷ್ಟಾಂತ. ಸಂಗೀತದ ಕುರಿತು ಅರಿವಿನ ಬಗ್ಗೆ ಯತ್ನಿಸಲು ವಿಮಲಾನಂದರೂ ಕಾರಣ ಎಂದು ಅವರು ಹೇಳಿದ್ದಾರೆ. ಇಷ್ಟೊಂದು ಅನುಭವ ಗಳಿಸಿದ ನಂತರವೂ ಅವರು ಕಬ್ಬಿನಗದ್ದೆ ಭಾಗವತರನ್ನು ಬಹುವಾಗಿ ಗೌರವಿಸುತ್ತಿದ್ದರು. ಅವರಿಗೂ ಬಾಳೆಹದ್ದ ಭಾಗವತರು ತಮ್ಮ ಶಿಷ್ಯ ಎಂದು ಹೇಳುವಾಗ ಮುಖ ಅರಳುತ್ತಿತ್ತು. ಭಾಗವತರ ಸಂಗೀತ ಪ್ರೇಮ ಯಕ್ಷಗಾನಕ್ಕಾಗಿ ಎಂಬುದು ಸಹಜವಾಗಿಯೇ ಗೊತ್ತಾಗುತ್ತಿತ್ತು. ಪಾರಂಪರಿಕವಾಗಿ ಬಂದ ಕೆಲವು ಪದ್ಯಗಳ ಮಟ್ಟನ್ನು ಅವುಗಳನ್ನು ಬಳಸುತ್ತಿದ್ದ ರಾಗಗಳಲ್ಲಿಯೇ ಹಾಡಿ ತಮ್ಮ ಸ್ವರಜ್ಞಾನದಿಂದ ಹಿಂದಿನ ಅಭಿವ್ಯಕ್ತಿ ಕ್ರಮವನ್ನು ಸುಧಾರಿಸಿ ಸಶಕ್ತವಾಗಿಸುವ ಬದಲು ಬೇರೆ ರಾಗ ಬಳಸುವ ಬಗ್ಗೆ ನಾನು ಆಗಾಗ ಪ್ರಶ್ನಿಸುತ್ತಿದ್ದೆ. ಶಾಸ್ತ್ರೀಯವಾಗಿ ಉಲ್ಲೇಖವಿರುವ ರಾಗಭಾವಗಳನ್ನು ತಿಳಿದು ರಾಗಭಾವ-ಸಾಹಿತ್ಯಭಾವ ಹೊಂದಿಸಬಹುದೆಂದು ಅವರು ಹೇಳುತ್ತಿದ್ದರು. ಸಂಗೀತದ ಅರಿವು ನನಗಾಗಲಿಲ್ಲ. ಪದ್ಯ ಛಂದಸ್ಸು ಸಾಹಿತ್ಯಗಳ ಬಗೆಗೋ ರಂಗಪ್ರಯೋಗ ಕುರಿತೋ ಅವರು ಗಮನ ಕೊಡಲಿಲ್ಲ. ಹಾಗಾಗಿ ಅವರ ಪ್ರಯೋಜನ ಪಡೆಯಲು ಪ್ರಚಲಿತ ಹಾಡುಗಾರರಿಗೆ ಸಾಧ್ಯವಾಗಲಿಲ್ಲ. ತಮ್ಮ ಅನುಭವವನ್ನು ಸಮಕಾಲೀನವಾಗಿ ವಿನಿಯೋಗಿಸಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಬಾಳೆಹದ್ದದವರ ಚಿಂತನೆಯ ನೆರವನ್ನು ತಿಳಿದು ಬಳಸಿ, ಯಕ್ಷಗಾನ ಶೈಲಿಯಲ್ಲಿ ಬಳಸಲು ತಕ್ಕ ಕಾರ್ಯಾಗಾರ ನಡೆಯಲಿಲ್ಲ. ಇದು ಆತಂಕದ ಸಂಗತಿ ಎಂಬುದು ನನಗೆ ಗೊತ್ತಿದೆ. ಭಾಗವತರ ಧೋರಣೆಯನ್ನು ಅನುಸರಿಸಲು ನನ್ನಿಂದಾಗಲಿಲ್ಲ. ಯಕ್ಷಗಾನ ಹಾಡುಗಾರಿಕೆಗೆ ಸಂಬಂಧಿಸಿದ ಮೇಳ ಸಂಬಂಧವನ್ನು ಗಣನೆಗೆ ತೆಗೆದುಕೊಳ್ಳದೆ ಮೇಳಕರ್ತರಾಗಗಳ ಪಟ್ಟಿ ನೀಡಿದ್ದರಿಂದ ಆ ಗಾನಶೈಲಿಗೆ ಸ್ಪಷ್ಟರೂಪು ಸಿಗುವುದಿಲ್ಲ.

ಕಲಾವಿದ ಸತತ ಚಿಂತನಶೀಲನಾಗಬೇಕು, ಸಾಧಕನಾಗಬೇಕು ಎಂಬುದನ್ನು ಭಾಗವತರ ಅವಿರತ ಪ್ರಯತ್ನ ನೋಡಿ ಇಂದಿನವರು ಕಲಿಯಬೇಕು. ಹಿಂದಿನ ಜಾಡಿನ ಅರಿವಿನಲ್ಲಿ ಮುಂದಿನ ಹೆಜ್ಜೆ ಇಡಲು ಬೇಕಾದ ಸಾಧನೆ ಅವರದು ಎಂಬಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರ ವೈಚಾರಿಕತೆಯೂ ಮುಗ್ಧ ಭಾವುಕತೆಯೇ ಆಗಿ ಯಾವುದೋ ಬಿಗುಮಾನದಿಂದ ಅವರು ಸಿಡಿಮಿಡಿಗೊಳ್ಳುತ್ತಾರೆ. ಸಮಾಜ ತನ್ನ ಸಾಧನೆಯನ್ನು ಗುರುತಿಸಿಲಿಲ್ಲವೆಂಬ ದುಗುಡವೂ ಮನವನ್ನು ಆವರಿಸಿರಬಹುದು. ಅವರ ಒಡನಾಟದಲ್ಲಿ ನನ್ನ ಅರಿವನ್ನು ಹೆಚ್ಚಿಸಿಕೊಂಡರೂ



ಅವರ ಅಂತರಾಳದ ಅರಿವು ನನಗಾಗಲಿಲ್ಲ.

ಬಾಳೆಹದ್ದ ಭಾಗವತರ ಹಾಡುಗಾರಿಕೆಯಲ್ಲಿ ಪದ್ಯದ ಮಟ್ಟುಗಳ ಸ್ವರೂಪಕ್ಕೆ ವಿಶೇಷ ಮೆರುಗು ಸಿಗುತ್ತದೆ. ಆ ಮಟ್ಟನ್ನು ಹಾಡಲು ಆ ದಿವಸ ತಾನು ಆಯ್ಕೆ ಮಾಡಿಕೊಂಡ ರಾಗದ ಸ್ವರಗಳನ್ನು ಪದ್ಯ ಸಾಹಿತ್ಯಕ್ಕೆ ಹೊಂದಿಸುವಲ್ಲಿ ಮುತುವರ್ಜಿ ಕಾಣಿಸುತ್ತಾರೆ. ಆ ಪದ್ಯ ಯಾವ ಪಾತ್ರದ್ದು, ಯಾವ ಸನ್ನಿವೇಶದ್ದು ಎಂದು ಯೋಚಿಸಿ ಭಾವುಕರಾಗಿ ಪದ್ಯ ಮಂಡಿಸುತ್ತಾರೆ. ಅಕ್ಷರ ವಿಂಗಡಣೆಗೆ ತೊಡಗದೆ ಶಬ್ದಗಳನ್ನು ವಾಕ್ಯಗಳನ್ನು ಗಮನಿಸಿ ಹೊಂದಿಸುವಾಗ ಸ್ವತಃ ಅನುಭವಿಸಿ ಅಭಿನಯಿಸುತ್ತಾರೇನೋ ಎನಿಸುತ್ತದೆ. ತಾಳ ಜ್ಞಾನ ನಿಖರವಾಗಿರುವುದರಿಂದ ಸಿಕ್ಕಂತೆ ಲಯ ಓಡಿಸದೆ ತನ್ಮಯತೆಯಿಂದ ಹಾಡುತ್ತಾರೆ. ಕೆಲವೊಮ್ಮೆ ಸನ್ನಿವೇಶ ತನ್ಮಯತೆಯಲ್ಲಿ ಭಾವಾವೇಶಕ್ಕೆ ಒಳಗಾಗುತ್ತಾರೋ ಎನ್ನಿಸುತ್ತದೆ. ಹಿಂದಿನ ಹಾಡುಗಾರಿಕೆಯಲ್ಲಿ ಅಂದರೆ ಕಂಪ್ಲಿಯವರ ಮದ್ದಳೆಯ ಜತೆಗೆ ಅವರ ಹಾಡಿನ ಜಾಡು ಹೇಗಿತ್ತು ಎಂದು ನನಗೆ ಗೊತ್ತಿಲ್ಲ. ಇಂದಿನ ಮದ್ದಳೆಗಾರಿಕೆಯಲ್ಲಿ ಪದ್ಯದ ನಡುವೆ ಬಿಡುತೊಡುವ ಪ್ರಕ್ರಿಯೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆಯಾದ್ದರಿಂದ ಹಾಗೂ ಅದು ಭಾವಕ್ಕೆ ಸಮನ್ವಯಿಸದೆ ಕುಣಿತಕ್ಕೆ ಒತ್ತು ನೀಡುವುದರಿಂದ ಕೆಲವೊಮ್ಮೆ ಕೈಚಳಕದ ಕ್ರಿಯೆಯೂ ಆಗುವ ನಿಮಿತ್ತ ತನ್ಮಯ ಭಾವಕ್ಕೆ ತೊಡಕಾಗುವ ಬಿಡುವ ಆರಂಭಿಸುವ ಪ್ರಕ್ರಿಯೆಯಲ್ಲಿ ಗೊಂದಲವಾಗುವ ಪ್ರಮೇಯಗಳಿರುತ್ತವೆ. ಇಂದಿನ ಹೊರಳಿಕೆ ನುಡಿಕೆಗಳೂ ಅಂದಿನ ಹೊರಳಿಕೆಯ ನುಡಿಗಳಿಗೂ ಇರುವ ವ್ಯತ್ಯಾಸವೂ ಸಮ್ಮೇಳಕ್ಕೆ ಸಮಸ್ಯೆಯೊದಗಿಸುತ್ತವೆ. ಕಲಾವಿದರ ಶ್ರುತಿಜ್ಞಾನ ಅಧ್ಯಯನಗಳು ಹಾಡುಗಾರನಿಗೆ ಪೂರಕವಾಗಿದ್ದರೆ ಹಾಡುಗಾರನ ಭಾವಕ್ಕೆ ಸ್ಪಂದಿಸುವ ಗುಣ ಅವನಿಗಿದ್ದರೆ ಭಾಗವತನ ಶ್ರಮ ಸಾರ್ಥಕವಾಗುತ್ತದೆ. ಬಾಳೆಹದ್ದದವರ ಹಾಡುಗಾರಿಕೆಯಲ್ಲಿ ಭಾಗವಹಿಸುವ ವಾದಕ ಹಾಗೂ ಪಾತ್ರಧಾರಿಗಳು ಈಗ ವಿರಳ. ಅವರ ಧೋರಣೆಯನ್ನು ಅನುಸರಿಸುವಲ್ಲಿ ಇತರರ ಚಿಂತನೆಯ ಕೊರತೆಯೂ ಕಾರಣವಾಗುತ್ತದೆ. ಭೀಷ್ಮಾರ್ಜುನ, ಕೃಷ್ಣಸಂಧಾನ, ಪಂಚವಟಿ, ಸೀತಾಪಹಾರ ಮುಂತಾದ ಪ್ರಸಂಗಗಳ ಪದ್ಯಗಳನ್ನು ಕೇಳಿ ನಾನು ಬೆರಗಾಗಿದ್ದೇನೆ. ಅವರ ಪದ್ಯಕ್ಕೆ ಅರ್ಥ ಹೇಳುವಾಗ ಸಾಹಿತ್ಯ ಜ್ಞಾನವಷ್ಟೇ ಸಾಲದು ಎಂದು ಅಳುಕಿದ್ದೇನೆ. ಕೆಲವು ಸಲ ಮದ್ದಳೆ ನುಡಿಸುವಾಗಲೂ ನುಡಿಕೆಗೆ ಶ್ರುತಿಸಾಮ್ಯ ಒದಗಿಸಲಾರದೆ ಚಡಪಡಿಸಿದ್ದೇನೆ. ಯಕ್ಷಗಾನ ಪರಂಪರೆಯ ಹಳೆಯ ಬಾಗವತರು ಅವರು ಎನ್ನುವುದಕ್ಕಿಂತ ಯಕ್ಷಗಾನದ ಜಾಡಿನಲ್ಲಿ ಪ್ರಯೋಗಶೀಲ ಚಿಂತಕರು ಎಂದು ಅವರ ಭಾವರಸ ತನ್ಮಯತೆಗೆ ಮೂಕವಿಸ್ಮಿತನಾಗಿದ್ದೇನೆ. ಯಕ್ಷಗಾನ ಪ್ರಸಂಗದ ಪದ್ಯಗಳು ಕರ್ನಾಟಕೀ ಪರಂಪರೆಯವು. ಉ. ಕ. ದಲ್ಲಿ ಉತ್ತರಾದೀ ಸಂಗೀತದ ಪ್ರಭಾವ ಮೂಡಿದೆ. ತಮ್ಮ ಸ್ವಂತ ನಿರ್ಧಾರದಿಂದ ಕರ್ನಾಟಕಿ ಸಂಗೀತ ಅಭ್ಯಾಸ ಮಾಡಿ ಪದ್ಯಕ್ಕೆ ಅಳವಡಿಸಿದ ಬಾಳೆಹದ್ದದವರ ಸಾಧನೆಯನ್ನು ಬಳಕೆದಾರರು ಗುರುತಿಸದೆ ಯಕ್ಷಗಾನಕ್ಕೆ ಸೇರ್ಪಡೆಯಾಗಲೇಬೇಕಿದ್ದ ಅನೇಕ ಉತ್ತಮಾಂಶಗಳು



ನಮ್ಮ ಕೈತಪ್ಪಿವೆ. ವಾಯಲಿನ್ ವಾದನವನ್ನು ಅಳವಡಿಸಲು ಅವರು ನಿರಂತರ ಪ್ರಯತ್ನಶೀಲರಾದರು. ಆದರೆ ಆ ವೈಶಿಷ್ಟ್ಯ ಕಾಣಿಸುವ ಸಮರ್ಥ ಹಾಡುಗಾರರು ಸಿದ್ಧರಾಗಲಿಲ್ಲ. ಅನವರತ ಅಭ್ಯಾಸಕ್ಕೂ ಅನಧ್ಯಯನಕ್ಕೂ ಇರುವ ಅಂತರವೇ ನಮ್ಮ ಅವರ ನಡುವಿನ ಪ್ರತ್ಯೇಕತೆ.

ಇತ್ತೀಚಿನ ಇಪ್ಪತ್ತೈದು ವರ್ಷಗಳ ಕಾಲ ಕವಿದ ಕಮರ್ಶಿಯಲ್ ಸ್ಟಂಟ್‌ನಿಂದ ಬಾಳೇಹದ್ದ ಭಾಗವತರು ತೆರೆಮರೆಯಲ್ಲಿ ಉಳಿದರು. ತಮ್ಮ ತಿಳುವಳಿಕೆಯನ್ನು ಕಾಣಿಸಲು ನುಗ್ಗುವ ಪ್ರಯತ್ನವನ್ನು ಭಾಗವತರು ಮಾಡಲಿಲ್ಲ. ಅದು ಅವರ ಸ್ವಭಾವಕ್ಕೆ ಒಗ್ಗದ ವಿಚಾರ. ಭಾಗವತರ ಹಾಡುಗಾರಿಕೆ ನಾಲ್ಕು ದಶಕಗಳ ಹಿಂದೆ ಹೇಗಿತ್ತು ಎಂದು ತಿಳಿಯಲು ಆಗ ಕ್ಯಾಸೆಟ್ ಬಂದಿರಲಿಲ್ಲ. ಇಂದಿನಷ್ಟು ವ್ಯಾಪಕತೆ ಹಿಂದೆ ಈ ಬಯಲಾಟಕ್ಕಿರಲಿಲ್ಲ. ಪ್ರಾದೇಶಿಕವಾಗಿ ಸೀಮಿತದಲ್ಲಿ ವ್ಯವಹಾರ ಸಾಗುತ್ತಿತ್ತು. ಭಾಗವತರು ಸ್ವತಃ ಪ್ರದರ್ಶನಪ್ರಿಯರಲ್ಲ. ತಾವಾಗಿ ನುಗ್ಗಿ ಅವಕಾಶ ಪಡೆಯುವವರಲ್ಲ. ಪರಿಚಯಕ್ಕೆ ಹಾತೊರೆಯುವವರಲ್ಲ. ರಾಜಕೀಯ ನಡೆಸಿ ಪ್ರಶಸ್ತಿಗೆ ಲಗ್ಗೆ ಹಾಕಲಿಲ್ಲ. ಶಿರಸಿ-ಯಲ್ಲಾಪುರ ತಾಲೂಕುಗಳ ಪರಿಧಿಯಲ್ಲಿ ಕಾರ್ಯ ನಿರ್ವಹಿಸಿದವರು. ಯಕ್ಷಗಾನದ ಬಗೆಗೆ ವಿಚಾರ ಮಾಡಿದರೇ ವಿನಃ ವೈಯಕ್ತಿಕ ಪ್ರಚಾರ ಮಾಡಿಕೊಳ್ಳಲಿಲ್ಲ. ಅವರ ಸಾಧನೆಗೋ ಚಿಂತನೆಗೋ ಸಲ್ಲಬೇಕಾದ ಗೌರವ ಸಲ್ಲಲಿಲ್ಲ. ತಮ್ಮಷ್ಟಕ್ಕೆ ತಾವೇ ಈ ಕಲೆಯಲ್ಲಿ ತೊಡಗಿಸಿಕೊಂಡು ತೃಪ್ತಿ ಪಟ್ಟರು. ನೊಂದುಕೊಂಡಿರಲೂ ಸಾಕು. ರಂಗದಲ್ಲಿ ಮಿಂಚುವವರನ್ನಷ್ಟೇ ನೋಡುವ ಕಣ್ಣು ವಿಶಾಲ ದೃಷ್ಟಿಯನ್ನು ಪಡೆದಿರುವುದಿಲ್ಲ. ಇಂದಿನ ಸಾಮಾಜಿಕ ಸ್ಥಿತಿಯಲ್ಲಿ ವಾಸ್ತವಿಕ ಘನತೆಯನ್ನು ಗುರುತಿಸುವ ಗುಣ ಕಡಿಮೆಯಾಗಿದೆ. ಹಾಗಾಗಿ ಸತತ ಸಾಧಕರೊಬ್ಬರ ವೈಚಾರಿಕ ಕೃಷಿಯ ಬೆಳೆಯ ಮೌಲ್ಯ ಮಾಪನ ಮಾಡಲಿಲ್ಲ.

ಈಗಲಾದರೂ ಬಾಳೆಹದ್ದ ಭಾಗವತರನ್ನು ಗೌರವಿಸಬೇಕೆನ್ನುವ ನೆನಪು ಮೂಡಿದೆಯಲ್ಲ. ಇದು ಸಂತೋಷದ ಸಂಗತಿ. ಈ ಕುರಿತು ಉದ್ಯುಕ್ತರಾದವರಿಗೆ ಸೂಕ್ತ ಪ್ರೋತ್ಸಾಹ ಸಿಗಲಿ. ಇಂತಹ ಸಂಘಟನೆಯಲ್ಲಿ ನಾನೂ ಪಾಲ್ಗೊಂಡು ದುಡಿಯಬೇಕಿತ್ತು. ಆದರೆ ಅವಕಾಶವೂ ಇಲ್ಲ, ಅರ್ಹತೆಯೂ ಇಲ್ಲ. ಸಂಘಟಕರ ಸದಾಶಯಕ್ಕೆ ಸ್ಪಂದಿಸುವ ಸಂದರ್ಭ ಈ ಬರವಣಿಗೆಯಿಂದ ಲಭಿಸಿದೆ. ನಾನು ಬಾಳೆಹದ್ದ ಭಾಗವತರಿಂದ ಅನೇಕ ಉಪಯುಕ್ತ ಅಂಶಗಳನ್ನು ಸಂಗ್ರಹಿಸಿ ನನ್ನದೇ ಆದ ಚೌಕಟ್ಟಿನಲ್ಲಿ ಬಳಸಿದ್ದೇನೆ. ಆಗಾಗ ಅಲ್ಲಲ್ಲಿ ಹೆಸರು ಬಳಸಿದ್ದೇನೆ. ಈ ಅವಕಾಶವೂ ಅವರನ್ನು ಅಭಿನಂದಿಸಲು ದೊರೆತ ಶುಭವಸರವೆಂದು ಭಾವಿಸುತ್ತೇನೆ. ಸಮಾಜ ಬಾಳೆಹದ್ದ ಭಾಗವತರನ್ನು ಮರೆಯದಿರಲಿ. ಅವರ ಹಿರಿತನದ ಘನತೆ ತಿಮ್ಮಪ್ಪ ಭಾಗವತರ ಮೂಲಕ ಮನೆತನವಾಗಿ ಮುಂದುವರಿಯಲಿ ಎಂದು ಹಾರೈಸುತ್ತೇನೆ.



# ನಾ ಕಂಡ
# ಬಾಳೆಹದ್ದ ಕೃಷ್ಣ ಭಾಗವತ

- ಎಂ. ಎ. ಹೆಗಡೆ, ಸಿದ್ದಾಪುರ

ಹಾಲಕಣಿಯಲ್ಲಿ ತಾಳಮದ್ದಳೆ. ಪ್ರತಿ ವರ್ಷವೂ ಗಣೇಶ ಚತುರ್ಥಿ ಕಳೆದ ಮೇಲೆ ಬರುವ ಏಕಾದಶಿಯಂದು ಅಲ್ಲಿ ತಾಳಮದ್ದಳೆ ನಡೆಯುತ್ತಿತ್ತು. ಅದು ಬಹಳ ವರ್ಷಗಳಿಂದ ನಡೆದು ಬಂದಿತ್ತು. ಹಾಲಕಣಿಯ ಮಹಾಬಲೇಶ್ವರ ಹೆಗಡೆಯವರ ಮನೆಯಲ್ಲಿ ನಡೆಯುತ್ತಿದ್ದ ಆ ತಾಳಮದ್ದಳೆ ಘಟ್ಟದ ಮೇಲಿನ ದೊಡ್ಡ ತಾಳಮದ್ದಳೆಗಳ ವರ್ಗಕ್ಕೆ ಸೇರಿದ್ದು. ಕನಿಷ್ಠ ಐದಾರು ನೂರು ಜನ ಸೇರುತ್ತಿದ್ದರು. ದೂರ ದೂರದಿಂದ ಕಲಾವಿದರನ್ನು ಆಮಂತ್ರಿಸಲಾಗುತ್ತಿತ್ತು. ನಾನು ಬಾಳೆಹದ್ದ ಕೃಷ್ಣ ಭಾಗವತರನ್ನು ನೋಡಿದ್ದು ಅಲ್ಲಿಯೇ.

ಕೃಷ್ಣ ಭಾಗವತರು ಹಾಡುವುದಕ್ಕೆ ಬಂದು ಕುಳಿತರು. ನನಗೆ ನೆನಪಿದ್ದಂತೆ ಎಳೆ ಹಸಿರು ಬಣ್ಣದ ಅಂಗಿ; ಅದರ ಮೇಲೆ ಕಪ್ಪು ಕೋಟು; ನೀಟಾಗಿ ಬಾಚಿದ ತಲೆಗೂದಲು; ಉದ್ದನೆಯ

**.......ಅವರಿಗಿರುವುದು ನಾದದ ಗುಂಗು, ಹಾಡಿನ ಮತ್ತು ಸಂಗೀತದ ಬಗೆಗೆ, ನಾದಲೋಕದ ಬಗೆಗೆ ಅವರದು ಬತ್ತದ ಉತ್ಸಾಹ; ಕುಂದದ ಆಸಕ್ತಿ ಅದಕ್ಕಾಗಿ ಗ್ರಂಥಗಳ ಅಧ್ಯಯನ, ಹಿರಿಯರ ಸಹವಾಸ, ಇತರರೊಂದಿಗೆ ಮಾತುಕತೆ.**

ಮುಖ; ಎದ್ದು ಕಾಣುವ ಮೂಗು; ದಟ್ಟ ಹುಬ್ಬುಗಳು; ನಸುಗೆಂಪು ಬಣ್ಣದ ಅರಳಿದ ಕಣ್ಣುಗಳು; ರೋಮಶ ಶರೀರ; ಅಗಲವಾದ ಬಾಯಿ; ಬಿಗಿದ ತುಟಿಗಳು. ಅವರು ಹಾಡುವುದನ್ನು ನೋಡುವುದೇ ಒಂದು ಸೊಗಸು. ಬಾಯಿ ತೆರೆದಂತೆ ತಲೆ ಹಿಂದೆ ಹೋಗುತ್ತದೆ. ಹಾಡಿಗೆ ತಕ್ಕಂತೆ ಮೈಕೈಗಳು ಚಲಿಸುತ್ತಿದ್ದಂತೆ; ಕಣ್ಣುಗಳಲ್ಲಿ ಭಾವ ಬದಲಾಗುತ್ತಿರುತ್ತದೆ; ಹುಬ್ಬು ಮೇಲೇರುವುದು, ಕೆಳಗಿಳಿಯುವುದು ಇತ್ಯಾದಿಗಳು ನಡೆಯುತ್ತಿರುತ್ತವೆ. ಅವರು ಹಾಡುವುದನ್ನು ಕೇಳುವುದಷ್ಟೇ ಅಲ್ಲ, ನೋಡಲೂ ಬೇಕು.

ಅವರ ಹಾಡುಗಳನ್ನು ಕೇಳಿದ ನನಗೆ ಆದ ಅನುಭವ ವಿಶಿಷ್ಟವಾದದ್ದು. ಅವರು ಹಾಡುವುದಕ್ಕೆ ಕಷ್ಟಪಡುತ್ತಿರಲಿಲ್ಲ. ಅದು ಸಹಜವಾಗಿ ಮಾತಿನಂತೆ ಅವರ ಕಂಠದಿಂದ ಹೊರಬರುತ್ತಿತ್ತು. ಯಕ್ಷಗಾನದ ಭಾಗವತರೆಂದರೆ ಅವರ ಧ್ವನಿ ಎತ್ತರಕ್ಕೇರಬೇಕು ಎಂಬ ಸೂತ್ರ ಅಲ್ಲಿ ಕೆಲಸ ಮಾಡುತ್ತಿರಲಿಲ್ಲ. ಅವರ ಉಚ್ಚಾರಣೆಗಳು ತುಂಬ ಸ್ಪಷ್ಟ. ಪದಗಳ ವಿಂಗಡಣೆ ಮಾಡುತ್ತಿದ್ದಾರೆ. ನಮ್ಮ ಇತರ ಭಾಗವತರಂತೆ ಪದಗಳು ಒಂದರೊಡನೊಂದು ಸೇರಿಕೊಳ್ಳುವುದಿಲ್ಲ. ಪದ್ಯದ



ಅರ್ಥ ಕೆಡುವಂತಿಲ್ಲ. ಅವರು ತಾಳ ಬಾರಿಸುತ್ತಿರುವುದು ನಿಜವಾದರೂ ಅದರಿಂದ ಪದ್ಯ ಸಾಹಿತ್ಯಕ್ಕೆ ಭಂಗ ಬಾರದು. ನಮ್ಮಲ್ಲಿ ಅಕ್ಷರ ತಾಳವೆಂಬ ಭಯಂಕರ ಕ್ರಮವೊಂದಿದೆ. ಅಂಥವು ಇಲ್ಲಿ ಕಾಣಲಿಲ್ಲ. ಅವರ ಹಾಡು ಮುಗಿಯುವವರೆಗೂ ಭಾಗವತ ಮೃದಂಗಕಾರರ ಓಟದ ಸ್ಪರ್ಧೆಗೆ ವಿರಾಮದ ಘೋಷಣೆಯಂತಿತ್ತು. ಮದ್ದಳೆಕಾರರ ಓಟವನ್ನು ಇವರು ತಡೆಹಿಡಿದು ನಿಲ್ಲಿಸುತ್ತಿದ್ದರೆಂದು ಕಾಣುತ್ತದೆ.

ನಿಜವಾಗಿ ಹೇಳಬೇಕೆಂದರೆ ಅವರ ಹಾಡುಗಳನ್ನು ಕೇಳಿದ ನನಗೆ ಗೊಂದಲವುಂಟಾಯಿತು. ಇದು ಯಕ್ಷಗಾನದ ಹಾಡುಗಾರಿಕೆಯ ಕ್ರಮವಲ್ಲವೆಂದು ತಳ್ಳಿಹಾಕುವ ವಿಚಾರವೂ ಬಂತು. ನನ್ನ ಕಿವಿಗೆ ಇಂಥ ಹಾಡುಗಳನ್ನು ಕೇಳಿ ಅಭ್ಯಾಸವಿರಲಿಲ್ಲ; ಯಕ್ಷಗಾನದ ಹಾಡುಗಾರಿಕೆ ಹೀಗಿರಲು ಸಾಧ್ಯವೆಂಬುದನ್ನು ಮನಸ್ಸು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಆದರೆ ನನಗಿಂತ ಹೆಚ್ಚಿನ ತಿಳುವಳಿಕೆಯುಳ್ಳವರು ಅವರನ್ನು ಮೆಚ್ಚಿಕೊಂಡುದನ್ನು ಕಂಡಾಗ ಇವರ ಹಾಡುಗಾರಿಕೆಯನ್ನು ನಿರಾಕರಿಸಲೂ ಸಾಧ್ಯವಿರಲಿಲ್ಲ. ಹೀಗಾಗಿ ಕೆಲವು ಕಾಲದವರೆಗೆ ದ್ವಂದ್ವದಲ್ಲಿಯೇ ಇದ್ದೆ. ಸುದೈವದಿಂದ ಅವರ ಹಾಡುಗಳನ್ನು ಮತ್ತೆ ಮತ್ತೆ ಕೇಳುವ ಅವಕಾಶವೊದಗಿತು. ದಿ|| ಶೀಗೇಮನೆ ನಾರಾಯಣ ಹೆಗಡೆಯವರ ನೇತೃತ್ವದಲ್ಲಿ ಭರತನಹಳ್ಳಿ ಸೀಮೆಯ ತಾಳಮದ್ದಳೆಗಳಿಗೆ ನಮ್ಮ ಕೂಟದ ಸದಸ್ಯರಿಗೆ ಆಮಂತ್ರಣ ದೊರೆಯಲಾರಂಭಿಸಿತು. ಕೆರೆಮನೆ ವೆಂಕಟಾಚಲ ಭಟ್ಟ, ಕೆರೇಕೈ ಕೃಷ್ಣ ಭಟ್ಟ, ದಂಟಕಲ್ ಗಣಪತಿ ಹೆಗಡೆ, ಹಸರಗೋಡು ಲಕ್ಷ್ಮೀನಾರಾಯಣ ಹೆಗಡೆ - ಇವರೆಲ್ಲಇದ್ದ ಕೂಟದ ಕಿರಿಯ ಸದಸ್ಯನಾಗಿ ನಾನೂ ಆ ತಾಳಮದ್ದಳೆಗಳಿಗೆ ಹೋದೆ.

**ಆತ್ಮೀಯತೆಯ ಅಂಕುರಕ್ಕೆ ದೀರ್ಘಕಾಲ ಬೇಕಿಲ್ಲ. ನಾನು ಅವರಿಗಿಂತ ತುಂಬ ಕಿರಿಯನಾದುದು ಒಂದು ಅನುಕೂಲ. ಅವರ ವಾತ್ಸಲ್ಯದ ಧಾರೆ ಹರಿಯುವುದಕ್ಕೆ ತಕ್ಕ ಪಾತ್ರನೆನಿಸಿರಬೇಕು. ಅದನ್ನು ನೆನೆದುಕೊಂಡರೆ ವಯಸ್ಸು ಅಲ್ಲಿಗೇ ನಿಂತು ಹೋಗಿದ್ದರೆ ಒಳ್ಳೆಯದಿತ್ತೆನಿಸುತ್ತದೆ.**

ಅಂಥ ತಾಳಮದ್ದಳೆಗಳಲ್ಲಿ ಭಾಗವತರ ಹಾಡುಗಳನ್ನು ಸವಿಯುವ, ಚಪ್ಪರಿಸುವ ಅವಕಾಶ ದೊರೆಯಿತು. ಅವುಗಳನ್ನು ಕೇಳುತ್ತ ಕೇಳುತ್ತ ಮೊದಲಿನ ಬಿಗುಮಾನದ ತೆರೆಗಳು ಸರಿಯತೊಡಗಿದವು. ಭಾಗವತರ ಹಾಡುಗಳ ಶ್ರುತಿಬದ್ಧತೆ, ರಾಗಶುದ್ಧಿ, ಖಚಿತಲಯ, ಭಾವಬಂಧುರತೆ, ಸಾಹಿತ್ಯ ಶುದ್ಧತೆಯೇ ಮುಂತಾದ ಗುಣಗಳು ಒಂದೊಂದಾಗಿ ಅನಾವರಣಗೊಳ್ಳತೊಡಗಿದವು. ಅವರ ಹಾಡುಗಳ ಮಾಯಾಲೋಕ ನನ್ನ ಪಾಲಿಗೆ ತೆರೆದುಕೊಳ್ಳತೊಡಗಿತು. ಮೊದಲಿದ್ದ ಕುತೂಹಲ, ಕುಚೇಷ್ಟೆಗಳ ಬದಲಾಗಿ ಗೌರವ, ಆದರಗಳು ಮನೆ ಮಾಡಿದವು.

ಭಾಗವತರು ನಿರಂತರ ಅಧ್ಯಯನಶೀಲರು. ಸಂಗೀತ ಅವರಿಗೆ ಹವ್ಯಾಸವಲ್ಲ; ಉಸಿರು.



ಅವರ ಮನಸ್ಸಿನಲ್ಲಿ ತುಂಬಿಕೊಂಡಿದ್ದು ಸಂಗೀತ. ಅವರನ್ನು ನೋಡಿದರೆ ಗುಂಗಿನಲ್ಲಿದ್ದವರಂತೆ, ಮತ್ತಿನಲ್ಲಿದ್ದವರಂತೆ ಕಂಡರೆ ಆಶ್ಚರ್ಯವಿಲ್ಲ. ಅವರಿಗಿರುವುದು ನಾದದ ಗುಂಗು, ಹಾಡಿನ ಮತ್ತು. ಸಂಗೀತದ ಬಗೆಗೆ, ನಾದಲೋಕದ ಬಗೆಗೆ ಅವರದು ಬತ್ತದ ಉತ್ಸಾಹ; ಕುಂದದ ಆಸಕ್ತಿ. ಅದಕ್ಕಾಗಿ ಗ್ರಂಥಗಳ ಅಧ್ಯಯನ, ಹಿರಿಯರ ಸಹವಾಸ, ಇತರರೊಂದಿಗೆ ಮಾತುಕತೆ. ಇವೆಲ್ಲ ಅವರಿಗೆ ತುಂಬ ಪ್ರಿಯ. ಇಳಿವಯಸ್ಸಿನಲ್ಲಿಯೂ ವಯೋಲಿನ್ ಅಭ್ಯಾಸಕ್ಕಾಗಿ ಧಾರವಾಡಕ್ಕೆ ಪ್ರಯಾಣ ಬೆಳಸುತ್ತಿದ್ದುದು ನನಗೆ ಗೊತ್ತು. ಅವರಿಗೆ ಯಕ್ಷಗಾನ ಸಂಗೀತದಷ್ಟೇ, ಅಥವಾ ಅದಕ್ಕಿಂತ ಹೆಚ್ಚಿನ ಆಸಕ್ತಿ ಶಾಸ್ತ್ರೀಯ ಸಂಗೀತದ ಮೇಲೆ.

ಅವರಿಗೆ ಆಸಕ್ತಿಯಿದ್ದಷ್ಟು ಅನುಕೂಲವಿರಲಿಲ್ಲ. ದಟ್ಟ ಕಾಡಿನ ಮಧ್ಯದ ಪುಟ್ಟಮನೆ. ಸುತ್ತ ಗದ್ದೆ - ತೋಟಗಳು. ಒಂಟಿಮನೆ. ತಂದೆಗೆ ಒಬ್ಬನೇ ಮಗ. ಉಣ್ಣುವುದಕ್ಕೆ ಉಡುವುದಕ್ಕೆ ಕೊರತೆಯಿಲ್ಲ. ಮನೆ, ಸಂಸಾರವನ್ನು ಬಿಟ್ಟು ಹೋಗುವಂತಿಲ್ಲ; ಇಟ್ಟುಕೊಂಡರೆ ಆಸಕ್ತಿಯ ಬೆನ್ನು ಹತ್ತಿ ಹೋಗುವಂತಿಲ್ಲ. ಹೀಗಾಗಿ ಭಾಗವತರು ವೃತ್ತಿ ರಂಗದ ಜಂಜಾಟಕ್ಕೆ ಸಿಲುಕಲಿಲ್ಲ. ಎರಡೂಕಡೆ ಸಮತೂಕವನ್ನು ಕಾಯ್ದುಕೊಳ್ಳುತ್ತ ತಮ್ಮ ಜ್ಞಾನವನ್ನು ಬೆಳಸಿಕೊಂಡರು. ಇದರಿಂದ ಆದ ಅನಾನುಕೂಲವೆಂದರೆ ಅವರ ತಿರುಗಾಟದ ಕ್ಷೇತ್ರ ಸೀಮಿತವಾದದ್ದು. ಯಕ್ಷಗಾನದ ಶ್ರೇಷ್ಠ ಭಾಗವತರ ಸಾಲಿಗೆ ಸೇರುವ ಎಲ್ಲ ಅರ್ಹತೆಗಳಿದ್ದು ಅದಕ್ಕೆ ತಕ್ಕ ಪ್ರಸಿದ್ಧಿ ಗೌರವಗಳಿಂದ ವಂಚಿತರಾದದ್ದು.

ಭಾಗವತರನ್ನು ಮನೆಗೆ ಕಟ್ಟುಬೀಳುವಂತೆ ಮಾಡಿದ ಇನ್ನೊಂದು ಸಂಗತಿಯೆಂದರೆ ತಾಯಿಯ ಅನಾರೋಗ್ಯ. ಅವರು ಯಾವಾಗಿನಿಂದ ಅನಾರೋಗ್ಯ ಪೀಡಿತರಾಗಿದ್ದರೆಂಬುದು ನನಗೆ ಗೊತ್ತಿಲ್ಲ. ಆದರೆ ನಾನು ಅವರ ಮನೆಗೆ ಹೋಗಲು ಪ್ರಾರಂಭಿಸಿದಾಗಲೇ ಹಾಸಿಗೆ ಹಿಡಿದಿದ್ದರು. ನಾನು ಅನೇಕ ಬಾರಿ ಅವರ ಮನೆಗೆ ಹೋಗಿದ್ದುಂಟು. ಹೋದಾಗ ಒಮ್ಮೆಯೂ ಅವರ ತಾಯಿಯನ್ನು ಕಂಡಿಲ್ಲ. ನಾವು ಮಾತನಾಡುತ್ತ ಕುಳಿತಾಗ ಕ್ಷೀಣಧ್ವನಿ ಕೇಳುತ್ತಿತ್ತು. ಭಾಗವತರು ಥಟ್ಟನೆ ಎದ್ದು ಹೋಗಿ ಅವರಿಗೆ ಬೇಕಾದುದನ್ನು ಒದಗಿಸಿ ಬರುತ್ತಿದ್ದರು. ಹೀಗೆ ಸುಮಾರು ನಾಲ್ವತ್ತು ವರ್ಷಗಳಾದರೂ ಕಳೆದಿರಬೇಕು. ಆದರೆ ಭಾಗವತರು ಸ್ವಲ್ಪವೂ ಬೇಸರಿಸದೆ ತಾಯಿಯ ಸೇವೆ ಮಾಡಿದರು.ಅದು ಆ ಮಹಾತಾಯಿಯ ಪುಣ್ಯ; ಅದಿಲ್ಲದೆ ಇಂಥ ಮಗನನ್ನು ಪಡೆಯುವುದು ಸಾಧ್ಯವೇ?

ಭಾಗವತರತ್ತ ನನ್ನನ್ನು ಸೆಳೆದುದು ಅವರ ನಿಷ್ಕಲ್ಮಷ ಹೃದಯ; ಮಗ್ನವಾದ ಪ್ರೀತಿ. ಪೇಟೆಯ ಬೀದಿಯಲ್ಲಿ ಅವರು ನಡೆದು ಬರುತ್ತಿದ್ದಾರೆ. ನಾನು ಎದುರಿನಿಂದ ಬಂದೆ. ನನ್ನನ್ನು ಕಂಡೊಡನೆ ಅವರ ಕಣ್ಣುಗಳು ಅರಳಿದವು; ಇಡೀ ಶರೀರ ಸಂತೋಷದಿಂದ ತೇಲಾಡಿತು. 'ಅರೆ ! ಮಾಬ್ಲೇಶ್ವರ!' ಎಂದು ಉದ್ಗಾರವನ್ನು ಹೊರಡಿಸುತ್ತ ಹತ್ತಿರ ಬಂದರು. ಬರಸೆಳೆದು ಬಿಗಿದಪ್ಪಿ ಕೆನ್ನೆಯ ಮೇಲೆ



ಮುತ್ತುಕೊಟ್ಟು, ನೆತ್ತಿಯನ್ನು ಆಘ್ರಾಣಿಸಿ, ಕೈಗಳನ್ನು ಹಿಡಿದುಕೊಂಡು ಕ್ಷೇಮ ಸಮಾಚಾರವನ್ನು ವಿಚಾರಿಸತೊಡಗಿದರು. ಅವರ ಭೇಟಿಯಲ್ಲಿ ಇದು ಮಾಮೂಲು. ಹಾಗೆ ನೋಡಿದರೆ ನಾನೇನು ಬಂಧುವಲ್ಲ ; ಬಳಗವಲ್ಲ. ಒಂದೆರಡು ಬಾರಿ ಭೆಟ್ಟಿಯಾದುದಿಷ್ಟೆ! ಆದರೆ ಆತ್ಮೀಯತೆಯ ಅಂಕುರಕ್ಕೆ ದೀರ್ಘಕಾಲ ಬೇಕಿಲ್ಲ. ನಾನು ಅವರಿಗಿಂತ ತುಂಬ ಕಿರಿಯನಾದುದು ಒಂದು ಅನುಕೂಲ. ಅವರ ವಾತ್ಸಲ್ಯದ ಧಾರೆ ಹರಿಯುವುದಕ್ಕೆ ತಕ್ಕ ಪಾತ್ರನೆನಿಸಿರಬೇಕು. ಅದನ್ನು ನೆನೆದುಕೊಂಡರೆ ವಯಸ್ಸು ಅಲ್ಲಿಗೇ ನಿಂತು ಹೋಗಿದ್ದರೆ ಒಳ್ಳೆಯದಿತ್ತೆನಿಸುತ್ತದೆ. ಈಗ ಹಾಗೆಲ್ಲ ನಡೆದುಕೊಳ್ಳಲಾಗುವುದಿಲ್ಲ.

ಮುಗ್ಧತೆ ಬಾಲ್ಯ ಸಹಜ ಗುಣ. ವಯೋಮಾನ ಹೆಚ್ಚಿದಂತೆಲ್ಲ ಮುಗ್ಧತೆಯನ್ನು ಕಳೆದುಕೊಳ್ಳುತ್ತ ಸಾಗುವುದು ಲೋಕ ಸಹಜ. ಮುಗ್ಧತೆ ಒಂದೊಂದು ಆವರಣವು ಶಿಥಿಲವಾದಂತೆ ಅದರ ಸ್ಥಳದಲ್ಲಿ ಬೇರೆ ಗುಣಗಳೋ, ದುರ್ಗುಣಗಳೋ ಬಂದು ಸೇರಿಕೊಳ್ಳುತ್ತವೆ. ಮೋಸ, ಕಪಟ, ವಂಚನೆಗಳು ಬೆಳೆಯುತ್ತ ಹೋಗುತ್ತದೆ. ಹಾಗಲ್ಲದಿದ್ದರೂ ಬೇರೆ ತೆರನ ಬಿಗುಮಾನಗಳು ಆವರಿಸಿಕೊಳ್ಳುತ್ತವೆ. ಅಹಂಕಾರ, ಪ್ರತಿಷ್ಠೆಗಳು ಮನೆ ಮಾಡುತ್ತವೆ. ಪರಿಚಿತರನ್ನು ಕಂಡಾಗ ಮೊಗದ ಮೇಲೆ ಮುಗುಳ್ನಗೆ ಮೂಡುವುದಿಲ್ಲವೆಂದೇನೂ ಅಲ್ಲ. ಆದರೆ ಅದು ಹೂವು ಅರಳುವಂತೆ ಸಹಜವಾಗಿ ಅರಳುವುದಿಲ್ಲ. ಅಭ್ಯಾಸಬಲದಿಂದ ತುಟಿ ಬಿರಿಯುತ್ತದೆ. 'ಪರಿಚಿತರನ್ನು ಕಂಡಾಗ ಹೀಗೆ ವರ್ತಿಸಬೇಕು' ಎಂಬ ಆದೇಶವನ್ನು ಕೊಟ್ಟು ಕೊಟ್ಟು ಅಭ್ಯಾಸ ಮಾಡಿಸಿದ್ದು ಅದು. ಅಂಥಲ್ಲಿ ಮಿದುಳಿನ ಆದೇಶ ಬೇಕಿರುವುದಿಲ್ಲ. ನಿದ್ದೆಗಣ್ಣಿನಲ್ಲಿ ಸೊಳ್ಳೆಯನ್ನು ಹೊಡೆದ ಹಾಗೆ. ಇಂಥವುಗಳಿಗೆ ಸ್ವಯಂಪ್ರೇರಿತ .ಗೌಣ ಪ್ರಕ್ಷಿಪ್ತ ಪ್ರತಿಕ್ರಿಯೆಗಳೆಂದು ಹೆಸರು. (Secondary automatic reactions). ಅದನ್ನೇ ನಾನು ಅಭ್ಯಾಸಬಲ ಎನ್ನುವುದು. ಇಂಥ ಅಭ್ಯಾಸಬಲದ ಪ್ರತಿಕ್ರಿಯೆಗಳಿಗೂ, ನಿಜವಾದುದಕ್ಕೂ ವ್ಯತ್ಯಾಸವಿದೆ. ಭಾಗವತರು ಸಹಜ ಮುಗ್ಧತೆಯ ವ್ಯವಹಾರ. ವಯಸ್ಸು ಕಳೆದರೂ ಮುರಿಯದ ಮುಗ್ಧತೆ.

ಧರ್ಮರಾಯನನ್ನು ಕರೆದು ಕೃಷ್ಣ ಕೆಟ್ಟವರನ್ನು ಹುಡುಕಿಕೊಂಡು ಬರಲು ಕಳಿಸಿದನಂತೆ. ಧರ್ಮರಾಯ ಊರೆಲ್ಲ ಸುತ್ತಾಡಿ ನಿರಾಶನಾಗಿ ಬಂದನಂತೆ. ಅವನಿಗೆ ಕೆಟ್ಟವರಾರೂ ಸಿಗಲೇ ಇಲ್ಲ. ಸ್ವಲ್ಪ ಹೆಚ್ಚೂ ಕಡಿಮೆ ಭಾಗವತರೂ ಇದೇ ಜಾತಿಯವರು. ಅವರಿಗೆ ದುರ್ಗುಣಗಳು ಕಾಣುವುದು ಅಪರೂಪ. ಅವರು ಆತ್ಮೀಯರೆಂದು ಭಾವಿಸಿದವರ ಮಾತುಗಳನ್ನು ಸುಲಭವಾಗಿ ನಂಬುತ್ತಾರೆ. ಅನಂತರ ನಂಬುಗೆ ಹುಸಿಯಾದಾಗ ಮರುಗುತ್ತಾರೆ. ಅನ್ಯರ ಕಷ್ಟ - ಸುಖಗಳನ್ನು ತನ್ನದೇ ಎಂದು ತಿಳಿಯುವುದು ಅವರಿಗೆ ಸಹಜ. ಭಾವುಕತೆ ಅವರ ಸ್ವಭಾವವಾದುದರಿಂದ ಮೋಸ ಹೋದ ಪ್ರಕರಣಗಳೂ ಸಾಕಷ್ಟು. ಹಾಗಾದಮೇಲೆಯೂ ಅವರ ಮೂಲ ಪ್ರವೃತ್ತಿ ಬದಲಾಯಿಸಲಿಲ್ಲ. ತೀವ್ರವಾದ ವಂಚನೆಗೊಳಗಾಗಿಯೂ ಮನುಷ್ಯರ ಒಳ್ಳೆಯತನದ ಬಗೆಗೆ ವಿಶ್ವಾಸವನ್ನು ಕಳೆದುಕೊಂಡವರಲ್ಲ.



ಭಾಗವತರ ಮನೆಯ ಆತಿಥ್ಯದ ಸವಿಯ ಪರಿಚಯವಿದೆ. ಅತಿಥಿಗಳನ್ನು ತುಂಬ ಪ್ರೀತಿ, ವಿಶ್ವಾಸಗಳಿಂದ ಅವರು ನಡೆಸಿಕೊಳ್ಳುವುದನ್ನು ಅನುಭವಿಸಿದ್ದೇನೆ. ಈ ವಿಷಯದಲ್ಲಿ ಪತಿ - ಪತ್ನಿಯರಿಬ್ಬರೂ ಸಮಾನರು. ಭಾಗವತರ ಸಹಧರ್ಮಿಣಿಯವರು ಈ ವಿಷಯದಲ್ಲಿ ಅವರಿಗೆ ಸ್ಪರ್ಧಿಗಳೆನ್ನಬಹುದು. ಗೃಹಸ್ಥ ಧರ್ಮದ ಪಾಲನೆಯಲ್ಲಿ ಪೂರ್ಣವಾಗಿ ತೊಡಗಿಕೊಂಡವರು. ಇಂಥ ಭಾಗವತ ದಂಪತಿಗಳ ಏಕಮಾತ್ರ ಪುತ್ರ ತಿಮ್ಮಪ್ಪ ಭಾಗವತಿಕೆಯಲ್ಲಿ ಸಾಕಷ್ಟು ಪ್ರಸಿದ್ಧಿ ಗಳಿಸಿರುವುದನ್ನೂ ಇಲ್ಲಿ ನೆನೆಯಬಹುದು. ಪ್ರಸಿದ್ಧ ಸಂಗೀತ ಕಲಾವಿದರಾದ ಶ್ರೀಪಾದ ಹೆಗಡೆ ಕಂಪ್ಲಿ ಇವರ ಅಳಿಯಂದಿರು.

ಭಾಗವತರ ಅಪಾರವಾದ ಜ್ಞಾನದ ಪ್ರಯೋಜನವನ್ನು ಪಡೆದವರಲ್ಲಿ ಹೊಸ್ತೋಟ ಮಂಜುನಾಥ ಭಾಗವತರನ್ನು ಹೆಸರಿಸಬೇಕು. ಅವರು ಯಕ್ಷಗಾನ ಸಂಗೀತದ ವಿಷಯದಲ್ಲಿ ಭಾಗವತರಿಂದ ಸಾಕಷ್ಟು ಪ್ರಯೋಜನವನ್ನು ಪಡೆದಿದ್ದಾರೆ. ಹೊಸ್ತೋಟರವರ 'ರಾಮನಿರ್ಯಾಣ' ಪ್ರಸಂಗದ ಪದ್ಯಗಳಿಗೆ ರಾಗಗಳ ನಿರ್ದೇಶನವನ್ನು ಮಾಡಿದವರು ಬಾಳೆಹದ್ದ ಭಾಗವತರೆಂಬುದನ್ನೂ ನೆನೆಯಬಹುದು. ಇವರ ಸಹವಾಸದಿಂದ ಲಾಭ ಪಡೆದವರಲ್ಲಿ ಪ್ರಸಿದ್ಧ ಮದ್ದಳೆಕಾರ ದುರ್ಗಪ್ಪ ಗುಡಿಗಾರರೂ ಒಬ್ಬರು.

ಯಕ್ಷಗಾನದ ಹಾಡುಗಾರಿಕೆಯ ಕ್ಷೇತ್ರದಲ್ಲಿ ಭಾಗವತರ ಸಾಧನೆ ದೊಡ್ಡದು. ಅವರು ವೃತ್ತಿ ನಿರತರಲ್ಲವಾದರೂ ಅವರನ್ನು ಮೀರಿಸಿದವರು. ಆದರೆ ಕಾಡಿನ ಮೂಲೆಯಲ್ಲಿರುವ ಅನರ್ಘ್ಯ ರತ್ನದಂತೆ ಅವರ ಸ್ಥಿತಿ. ಬೆಲೆ ಕಟ್ಟುವವರನ್ನು ಅರಸಿಕೊಂಡು ರತ್ನ ಹೋಗುವುದಿಲ್ಲ; ಬೆಲೆ ಗೊತ್ತಿದ್ದವರು ಇಲ್ಲಿ ಸಿಗುವುದಿಲ್ಲ ಎನ್ನುವಂತಾಗಿದೆ. ಇನ್ನು ಮುಂದೆಯಾದರೂ ಅವರ ಜ್ಞಾನ, ಅಧ್ಯಯನಗಳ ಪ್ರಯೋಜನ ಹೆಚ್ಚು ಜನರಿಗೆ ಸಿಗುವಂತಾಗಬೇಕು. ಕೇವಲ ವೃತ್ತಿ ನಿರತರ ಸುತ್ತ ಸುತ್ತುವ ಪ್ರಶಸ್ತಿ - ಗೌರವಗಳು ಅರ್ಹರಾದ ಭಾಗವತರಂಥ ಸಾಧಕರಿಗೂ ದೊರೆಯುವಂತಾಗಬೇಕು.





# ಸರಳ ಸಜ್ಜನ ಬಾಳೆಹದ್ದ ಭಾಗವತರು

**- ಪಂ. ಗಣಪತಿ ಭಟ್, ಹಾಸಣಗಿ**

ನನ್ನ ಜೀವನದಲ್ಲಿ ಕಂಡ ಕೆಲವೇ ಸರಳ ಸಜ್ಜನರಲ್ಲಿ ಬಾಳೇಹದ್ದ ಭಾಗವತರು ನನಗೆ ವಿವಿಧ ಕಾರಣಗಳಿಂದಾಗಿ ತೀರ ಮುಖ್ಯರೂ ಆಗುತ್ತಾರೆ. ನನ್ನ ಅವರ ಪರಿಚಯ ಆದದ್ದು ಸುಮಾರು 35 ವರ್ಷಗಳಷ್ಟು ಹಿಂದೆಯೇ. ಆಗ ನಾನು ಧಾರವಾಡದಲ್ಲಿ ರಾಜಗುರುಗಳ ಶಿಷ್ಯನಾಗಿ ಸಂಗೀತಾಭ್ಯಾಸ ಪ್ರಾರಂಭ ಮಾಡಿದ ದಿನಗಳು. ರಜೆಯಲ್ಲಿ ಮನೆಗೆ ಬಂದಾಗ ನಾನು ಕಲಿತದ್ದನ್ನು ಹಾಡಿ ಮೆಚ್ಚುಗೆ ಗಳಿಸಬೇಕೆಂಬ ದೌರ್ಬಲ್ಯ ಉಂಟಾದಾಗಲೆಲ್ಲ ನಾನು ಹೋಗುತ್ತಿದ್ದುದು ಅವರ ಮನೆಗೆ. ಅವರ ಮನೆಯಲ್ಲಿ ಆಗಲೇ ಒಂದು ಹಿಂದೂಸ್ತಾನಿ ಶೈಲಿಯ ತಂಬೂರಿ, ಹಾರ್ಮೋನಿಯಂ ಎಲ್ಲ ಇದ್ದವು. ಅಲ್ಲಿ ಯಾವುದೇ ಕಲೆಯನ್ನು ಆಸ್ವಾದಿಸುವ, ಪ್ರೋತ್ಸಾಹಿಸುವ ಕಲಾವಿದರನ್ನು ಆತ್ಮೀಯವಾಗಿ ಕಾಣುವ ಒಂದು ವಾತಾವರಣ ಇತ್ತು. ನನಗೆ ಇಷ್ಟು ಸಾಕಿತ್ತು. ಒಮ್ಮೆ ನಾನು ಅವರ ಮನೆಗೆ ಹೋದೆನೆಂದರೆ 2-3 ದಿನಗಳ ಕಾಲ ಎಡಬಿಡದೆ ಸಂಗೀತ ನಡೆಯುತ್ತಿತ್ತು. ಅವರ ಮನೆಯಲ್ಲಿ ಇರುವವರೆಲ್ಲ ಪ್ರೀತಿಯಿಂದ ಕೇಳುತ್ತಿದ್ದರು. ಭಾಗವತರು ಸ್ವತಃ ಹಾರ್ಮೋನಿಯಂ ನುಡಿಸುತ್ತಿದ್ದರು. ಒಂದು ರೀತಿಯಲ್ಲಿ ಇವೆಲ್ಲ ನನಗೆ ನನ್ನ ಆತ್ಮರತಿಯನ್ನು ಪೋಷಿಸುವ ಸುಖದ ಕ್ಷಣಗಳಾಗಿದ್ದವು. ಹೀಗಾಗಿ ಮತ್ತೆ ಮತ್ತೆ ಅವರಲ್ಲಿಗೆ ಹೋಗುತ್ತಿದ್ದೆ. ಅವರೂ ನಮ್ಮ ಮನೆಗೆ ಅನೇಕ ಸಾರೆ ಬಂದದ್ದುಂಟು. ಹೀಗೆ ಒಂದು ರೀತಿಯ ಮಾನಸಿಕ ಅವಲಂಬನೆಯ ಬಂಧುತ್ವ ನಮ್ಮಲ್ಲಿ ಉಂಟಾಯಿತು.

ಭಾಗವತರು ಆಗಲೇ ಯಕ್ಷಗಾನ ಕ್ಷೇತ್ರದಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದವರಾಗಿದ್ದರು. ಅವರಿಲ್ಲದೇ ಯಾವ ಯಕ್ಷಗಾನ ಕಾರ್ಯಕ್ರಮವೂ ನಡೆಯುತ್ತಿರಲಿಲ್ಲ. ಅವರ ಹಾಡುಗಾರಿಕೆಯೇ ಮುಖ್ಯವಾದ ಆಕರ್ಷಣೆಯಾಗಿ ಕಾರ್ಯಕ್ರಮ ಕಳೆ ಕಟ್ಟುತ್ತಿತ್ತು. ಅನೇಕ 'ತಾಳಮದ್ದಳೆ'ಗಳನ್ನು ನಾನು ಕೇಳಿದ್ದೇನೆ. ಇಂಥ ಒಬ್ಬ ಹೆಸರಾದ ಭಾಗವತರು ನನ್ನನ್ನು ಹತ್ತಿರದಿಂದ, ಪ್ರೀತಿಯಿಂದ ಪ್ರೋತ್ಸಾಹಿಸುತ್ತಿರುವುದು ನನಗೆ ಧನ್ಯತೆಯನ್ನುಂಟುಮಾಡುತ್ತಿತ್ತು. ಹೀಗೆ ನಾವು ಕ್ರಮೇಣ ಪರಸ್ಪರ ಹತ್ತಿರವಾಗುತ್ತ ನಾನೂ ಅವರ ಆತ್ಮೀಯರಲ್ಲಿ ಒಬ್ಬನಾಗಿಬಿಟ್ಟಿದ್ದೆ.

ಅವರ ವ್ಯಕ್ತಿತ್ವ ತುಂಬ ಸರಳವಾದದ್ದು. ತೀರ ಮುಗ್ಧ ಸ್ವಭಾವದವರು. ಎಲ್ಲರೊಡನೆ ಸಹಜವಾಗಿ ಬೆರೆಯಬಲ್ಲಂಥ ನಿರಹಂಕಾರಿ ಪ್ರವೃತ್ತಿಯಿಂದ ಎಲ್ಲರಿಗೂ ಬೇಕಾಗುವವರು. ಅವರ ಬಗೆಗೆ ಯಾರಿಗೂ ಅನ್ಯ ಭಾವನೆಗಳು ಉಂಟಾಗಲು ಸಾಧ್ಯವೇ ಇಲ್ಲದಷ್ಟು ನಿಷ್ಕಪಟಿಗಳು. ಇವೆಲ್ಲ



ವಿಶೇಷ ಗುಣಗಳು ಮೂರ್ತರೂಪ ಪಡೆದು ಆದಂಥ ಅಪರೂಪದ ವ್ಯಕ್ತಿಗಳು. ಈ ಕಾಲದಲ್ಲೂ ಇವೆಲ್ಲ ಗುಣಗಳನ್ನು ಕಾಪಾಡಿಕೊಂಡು ಬಂದದ್ದರಿಂದಲೇ ಅವರು ಒಂದು ರೀತಿಯಲ್ಲಿ ಅನನ್ಯವೆನಿಸುತ್ತಾರೆ.

ಅವರ ಮನೆಯೆಂದರೆ ಆ ಕಾಲದಲ್ಲಿ ಒಂದು ಅನ್ನ ಛತ್ರವಿದ್ದಂತೆ. ಯಾರಾರೆಲ್ಲ ಎಲ್ಲೆಲ್ಲಿಂದ ಬರುತ್ತಿದ್ದರು ಎಂಬುದಿಲ್ಲ. ಎಲ್ಲರಿಗೂ ಪ್ರೀತಿಯ ಸ್ವಾಗತ, ಆದರದ ಆತಿಥ್ಯ. ಇದಕ್ಕೆ ಅವರ ಶ್ರೀಮತಿಯವರ ಸಹಕಾರ ತುಂಬ ಪ್ರಾಮುಖ್ಯತೆ ಪಡೆಯುತ್ತದೆ. ಮಧ್ಯರಾತ್ರಿಯಲ್ಲಿ ಹತ್ತಾರು ಜನ ಬಂದು ಬಾಗಿಲು ತಟ್ಟಿದರೂ ಅವರಿಗೆಲ್ಲ ಪ್ರೀತಿಯಿಂದ ಬಿಸಿ ಅಡುಗೆ ಮಾಡಿ ಬಡಿಸಿ ಸುಖಿಸುವ, ಭಾಗವತರಿಗೆ ಹೇಳಿಮಾಡಿಸಿದಂಥ ಹೆಂಡತಿ. ಎಂಥ ಸಂದರ್ಭದಲ್ಲಿಯೂ ಮುಖದ ಪ್ರಸನ್ನತೆ ಕಳೆಯದ, ಸಿಡುಕಿ ಏರುದನಿ ತೆಗೆಯದ ಸೌಜನ್ಯಮೂರ್ತಿ. ಭಾಗವತರ ಹೃದಯ ಶ್ರೀಮಂತಿಕೆಗೆ, ಧಾರಾಳತನಕ್ಕೆ ಕೈ ಕೈ ಜೋಡಿಸಿ ಮುನ್ನಡೆಸಿದವಳು. ಇಂಥ ಜೊತೆಯನ್ನು ನೋಡುವುದು, ಅವರೊಡನಿದ್ದು ಒಡನಾಡುವುದು ಕೂಡಾ ಒಂದು ದಿವ್ಯ ಅನುಭವ. ಅಚ್ಚರಿ ಎಂದರೆ ಅವರ ಹೆಸರು 'ರಾಧೆ' ಇವರ ಹೆಸರು 'ಕೃಷ್ಣ'. ಈ ಜೋಡಿಯನ್ನು ನೋಡಿದ ಮೇಲೆ 'ರಾಧಾಕೃಷ್ಣ'ರ ದಿವ್ಯ ಜೋಡಿಯನ್ನು ಊಹಿಸಿಕೊಳ್ಳುವುದು ಸುಲಭವಾಗುವಂಥ, ಮಾದರಿಯ ಜೊತೆ.

ಅವರಲ್ಲಿರುವ ಇನ್ನೊಂದು ಮುಖ್ಯವಾದ ಅನುಸರಣೀಯ ಗುಣವೆಂದರೆ ಸದಾ ಅಭ್ಯಾಸದ ಪ್ರವೃತ್ತಿ. ಯಕ್ಷಗಾನದ ಭಾಗವತಿಕೆಯಲ್ಲಿ ಸಿದ್ಧಹಸ್ತರಾಗಿದ್ದರೂ ಅದರ ಮೂಲದ್ರವ್ಯವಾದ ಕರ್ನಾಟಕ ಸಂಗೀತವನ್ನು ಅಭ್ಯಾಸ ಮಾಡಿ ಅದರಿಂದ ಇದು ಹೇಗೆ, ಏಕೆ, ಎಲ್ಲಿ ಭಿನ್ನವೆಂಬುದನ್ನು ತಿಳಿಯಲು ಅವರು ಮಾಡಿದ ಪ್ರಾಮಾಣಿಕ ಪ್ರಯತ್ನ ಶ್ಲಾಘನೀಯ. ಧಾರವಾಡದವರೆಗೆ ಆಗಾಗ ಹೋಗಿ ಕರ್ನಾಟಕ ವಾಯಲಿನ್ ವಿದ್ವಾಂಸರಾದ ರಾಜ ಅಯ್ಯಂಗಾರರ ಶಿಷ್ಯವೃತ್ತಿ ಕೈಕೊಂಡು ಒಂದು ಹಂತದವರೆಗೆ ಪಿಟೀಲು ನುಡಿಸುವುದನ್ನು ಕಲಿತು ಆ ಮೂಲಕ ಯಕ್ಷಗಾನದ ಹಾಡುಗಾರಿಕೆಗೆ ನಿಶ್ಚಿತವಾದ ಒಂದು ಸ್ವರೂಪ ತರಲು ಅವರು ಮಾಡಿದ ಪ್ರಯತ್ನ ದಾಖಲಾರ್ಹವಾಗುತ್ತದೆ. ಜೊತೆಗೆ ಹಿಂದೂಸ್ತಾನಿ ಶೈಲಿಯಲ್ಲಿಯೂ ಆಸಕ್ತಿ, ಪ್ರೀತಿ ಬೆಳೆಸಿಕೊಂಡು, ನನ್ನಂಥ ಕಲಾವಿದರ ಜೊತೆಗಿನ ಸಂಬಂಧ ಸಂಪರ್ಕಗಳಿಂದಾಗಿ ಅದರಿಂದಲೂ ಯಕ್ಷಗಾನಕ್ಕೆ ಪೂರಕವಾದ ಸಂಗತಿಗಳನ್ನು ಅಳವಡಿಸಿಕೊಂಡು ತಮ್ಮದೇ ಆದ ವಿಶಿಷ್ಟಶೈಲಿಯನ್ನು ರೂಪಿಸಿಕೊಂಡಿದ್ದು ಅವರ ವಿಶೇಷ. ಒಂದು ಕಲೆಯನ್ನು ಬೇರೆ ಬೇರೆ ಕಲಾಪ್ರಕಾರಗಳ ಜೊತೆಗೆ ಕೊಡಕೊಳ್ಳುವುದರಿಂದ ಹೇಗೆ ಸಮೃದ್ಧಗೊಳಿಸಬಹುದೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

ಒಟ್ಟಿನಲ್ಲಿ ಯಕ್ಷರಂಗದ ಈ ಮೇರು ಕಲಾವಿದರು ಬದುಕಿದ ರೀತಿ ಎಲ್ಲರಿಗೆ ಮಾದರಿಯಾಗುವಂತದು. ಪ್ರಸಿದ್ಧಿಯ ಕಡೆಗೆ ನಿರೀಕ್ಷೆಗಳನ್ನು ಮಾಡದೆ ಸತತ ಸಾಧನೆಯಲ್ಲಿ



ಸಂತೃಪ್ತಿಯನ್ನು ಕಂಡ ಭಾಗವತರು ಇಂದಿನ ಪ್ರಚಾರ ಯುಗದಲ್ಲೂ ಎಲೆಯ ಮರೆಯ ಕಾಯಿಯಂತೆ ಇದ್ದರೂ ಅದು ಅವರನ್ನು ಉಳಿದವರಿಗಿಂತ ಭಿನ್ನವಾದ ನೆಲೆಯಲ್ಲಿ ಪ್ರತಿಷ್ಠಾಪಿಸುತ್ತದೆ.

ಈ ಸೀಮೆಯ ಸಾಂಸ್ಕೃತಿಕ ಸಮೃದ್ಧಿಯನ್ನು ಹೆಚ್ಚಿಸುವಲ್ಲಿ ಬಾಳೆಹದ್ದ ಭಾಗವತರದು ಬಹುದೊಡ್ಡ ಕೊಡುಗೆ ಎಂಬುದನ್ನು ಅನವರತವೂ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವೆನಿಸುತ್ತದೆ.

ಇತ್ತೀಚೆಗೆ ಭಾಗವತರ ನಿಕಟ ಸಂಪರ್ಕದಿಂದ ವೈಯಕ್ತಿಕ ಕಾರ್ಯಕ್ಷೇತ್ರದ ವಿಸ್ತಾರದ ಕಾರಣಕ್ಕಾಗಿ ದೂರವಾಗಿದ್ದರೂ ಭಾವನಾತ್ಮಕವಾಗಿ ನನಗೆ ಸದಾ ಅವರು ಹತ್ತಿರವೇ ಎನಿಸುತ್ತಾರೆ. ಯಾವಾಗಲಾದರೊಮ್ಮೆ ಭೇಟಿಯಾದಾಗ ಅದೇ ಆತ್ಮೀಯತೆ, ಸರಳತೆ ನನ್ನನ್ನು ಮೂಕವಾಗಿಸುತ್ತದೆ.

**-: ಯಕ್ಷಗಾನ :-**

**ರಂಗವೇರಿ ಬರಿ ಕುಣಿದರಾದೀತೆ**
**ಯಕ್ಷಗಾನ**
**ಇರಬೇಕು ತಾಳ ಲಯ ಪೌರಾಣಿಕ**
**ತತ್ವಜ್ಞಾನ**

-'ತುಂತುರು' ಸಂಕಲನದಿಂದ

ಪುಟ ಪ್ರಾಯೋಜಕರು : **ಶ್ರೀ ರಾಮಚಂದ್ರ ಪುಟ್ಟ ಭಟ್ಟ, ಚಂದುಗ್ಳಿ**



# ಭಲಾ ವೀರನೆ .....!

-ವಿದ್ವಾನ್ ಉಮಾಕಾಂತ ಭಟ್ಟ, ಕೆರೆಕೈ

ಎಪ್ಪತ್ತರ ದಶಕದ ಆರಂಭ. ಮಳಗಿಮನೆಯಲ್ಲಿ ತಾಳಮದ್ದಳೆ. ಅನಂತ ಚತುರ್ದಶಿಯ ಕಾರ್ಯಕ್ರಮ. ವಾರ್ಷಿಕವಾಗಿ ಹಲವು ವರ್ಷಗಳಿಂದ ನಡೆಸಿಕೊಂಡು ಬಂದ ಕೂಟವದು. ಆ ದಶಕವಂತೂ ಊರೂರಲ್ಲಿ ತಾಳಮದ್ದಳೆಗಳು ಭರಾಟೆಯಿಂದ ನಡೆಯುತ್ತಿದ್ದ ಕಾಲ. ಜಾಗರಣೆಗಾಗಿ ರಾತ್ರಿಯೆಲ್ಲ 'ಪ್ರಸಂಗ' ವನ್ನು ಮಾಡಿಸುವ ವ್ರತನಿಷ್ಠೆ ಜಾಗೃತವಾದ ಸಮಯ. ಶಿರಸಿ - ಸಿದ್ದಾಪುರದ ಕಲಾವಿದರಿಗೆ ರಾತ್ರಿ ಹುಳಗೋಳದ ಹೆಗಡೆಯವರ ಮನೆಯಲ್ಲಿ ಜಾಗರಣೆ. ಅವರನ್ನು ಹೇಗಾದರೂ ಮಾಡಿ ತಮ್ಮ ಮನೆಯ ಕಾರ್ಯಕ್ರಮಕ್ಕೆ ಕರೆಸಿಕೊಳ್ಳುವ ಆಸೆ ಸುಬ್ರಾಯ ಹೆಗಡೆಯವರದು. ಆದುದರಿಂದ ಮಧ್ಯಾಹ್ನ ಮೂರು ಗಂಟೆಯಿಂದ ಒಂದು ಪ್ರತ್ಯೇಕ ತಾಳಮದ್ದಳೆಯ ಏರ್ಪಾಟು ಮಾಡಿಸಿದ್ದರು. ರಾತ್ರಿಯಿಂದ ಬೆಳಗಿನವರೆಗೆ ಮಾಮೂಲಿನಂತೆ ಕಾರ್ಯಕ್ರಮವೂ ಇತ್ತು. ಸುಮಾರು ಏಳೆಂಟು ನೂರು ಜನ ಸೇರಿದ್ದರು. ಸೇರಿದವರಲ್ಲಿ ಜಾತ್ರೆಯ ಹುರುಪು ತುಂಬಿತ್ತು. ನನಗಾಗ 12-13 ವರ್ಷ . ಹೈಸ್ಕೂಲ್ ವಿದ್ಯಾರ್ಥಿ. ಹಟ ಹಿಡಿದು ತಂದೆಯವರ ಜೊತೆ ಕಾರ್ಯಕ್ರಮಕ್ಕೆ ಹೋಗುವ ರೂಢಿ. ಅಂದು ನಾನು ಹೋದದ್ದು ಒಳ್ಳೆಯದೆ ಆಯಿತು. ನನ್ನ ತಂದೆಯವರು, ದಿ। ವೆಂಕಟಾಚಲ ಭಟ್ಟರು, ಹಸಿರುಗೋಡು ಲಕ್ಷ್ಮೀನಾರಾಯಣ ಹೆಗಡೆಯವರು ಅರ್ಥಗಾರಿಕೆಯ ಭೂಮಿಕೆಯಲ್ಲಿದ್ದರು. ಬಾಳೆಹದ್ದ ಭಾಗವತರದೆ ಹಾಡುಗಾರಿಕೆ. ದುರ್ಗಪ್ಪ ಗುಡಿಗಾರರ ಮೃದಂಗ.

ಕಾರ್ಯಕ್ರಮ ಅದ್ಭುತವಾಗಿತ್ತು. ತಲೆದೂಗು - ಚಪ್ಪಾಳೆಗಳ ಸರಮಾಲೆ. ಸುಮಾರು ಎಂಟು ಗಂಟೆಯ ಹೊತ್ತಿಗೆ ಆಖ್ಯಾನ ಮುಗಿದಿತ್ತು. ಕಲಾವಿದರನ್ನು ಕಳುಹಿಸಿಕೊಡಲು ಯಾರಿಗೂ ಮನಸ್ಸಿಲ್ಲ. ಕಲಾವಿದರಂತೂ ಅಲ್ಲಿಂದ ಕದಲಲು ಶಕ್ತರಾಗಲೇ ಇಲ್ಲ. ಅಭಿನಂದನೆಯ ಮಹಾಪೂರ. ಊಟೋಪಚಾರಗಳಾಗಬೇಕು. ರಾತ್ರಿ, ಇನ್ನೊಂದು ಕಾರ್ಯಕ್ರಮಕ್ಕೆ ಅಣಿಯಾಗಬೇಕು. ಅಂಥ ಭಾವನೆಯ ಮೋಡಿ...! ಇದೆಲ್ಲ ನನ್ನ ನೆನಪು. ಮೆಲುಕಿಸುವಾಗ ಮಾತ್ರ ಎದ್ದೆದ್ದು ಬರುವ ಸ್ಮೃತಿಯ ಶಕಲಗಳು..... ಕನಸಿನಲ್ಲಿ ಕಂಡಂತಿರುವ ಘಟನೆ ..... ಕನಸಾದರೂ ಕಾಣುತ್ತಿರುವಾಗ ನಿಜವಷ್ಟೇ ! ಆದರೆ ..... ಈಗಲೂ ನನ್ನ ಮನಸ್ಸಿನ ದೂರದರ್ಶನದಲ್ಲಿ ಸ್ಫುಟವಾಗಿ ಕುಣಿಯುವ ದೃಶ್ಯ.... ಕಾರ್ಯಕ್ರಮದ ನಡುವೆ ....... ಸುಧನ್ವನ ಪದ್ಯ..... 'ಭಲಾ ವೀರನೇ!' ಸುಧನ್ವನ ಅರ್ಥ ಮರೆತು ಹೋಗಿದೆ. ಅರ್ಜುನನನ್ನು ಪಚಾರಿಸುವ ಭಾಗವತರ ಪದ್ಯ ಚಿತ್ರವಾಗಿ - ದೃಶ್ಯವಾಗಿ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ. ಭಾಗವತರ ಬಿಳಿಯ ಅಗಲವಾದ ಹಣೆಯ ಮೇಲೆ ರೂಪಕ ತಾಳಧ ಗತಿಯಲ್ಲಿ ಕುಣಿಯುವ ಕಪ್ಪಾದ ಮುಂಗುರುಳುಗಳು ....... ಅವುಗಳನ್ನು



ಲಯಬದ್ಧವಾಗಿ ಮೇಲೇರಿಸುವ ಹುಬ್ಬುಗಳು ......'ನೋಳ್ಪುದೇನು ಶೂರನೆ!' ಮಟ್ಟು........ ಮಟ್ಟಿಗೆ ಸರಿಯಾದ ಕಟ್ಟು..........ನಿಂತು ನೋಡಿ, ಮತ್ತೆ ಆವರ್ತದ ಗತಿಗೆ ಒದಗುವ ತಾಳದ ಪೆಟ್ಟು. ಛೇ! ಈಗಲೂ ಕಂಡಂತಿರುವ ಅನುಭವ. ಮತ್ತೆ ಮತ್ತೆ ಕಾಣುವ ದೃಶ್ಯ. ಅನುಭವ ಸಮಾನಾಕಾರವಾದ ಸ್ಮೃತಿ. ಕಾಲ ಕಳೆದರೂ ವರುಷಗಳು ಸರಿದರೂ .... ಮಾಸಿಲ್ಲ.

ಈಗ ಭಾಗವತರಿಗೆ ವಯಸ್ಸಾಗಿದೆ. ನಾನೂ ಮಧ್ಯ ವಯಸ್ಸಿಗೆ ದಾಟಿ ಬಂದಿದ್ದೇನೆ. ಆದರೆ, ಅಂದು ....... ನನ್ನನ್ನು ತಬ್ಬಿ, ಮುದ್ದಾಡಿ .......'ಶಣೂ! ನೀನೂ ಬೈಂದ್ಯನೋ.! ' ಎಂದು ಕೇಳುತ್ತ ತನ್ನವನನ್ನಾಗಿಸಿಕೊಂಡ ಪರಿ - ಮುಗ್ಧ ಪ್ರೀತಿ ಹಾಗೆ ಇದೆ. ಈಗಲೂ ಅವರು ಅಷ್ಟೇ ಹಸಿಯಾಗಿ ಹಚ್ಚಿಕೊಳ್ಳುತ್ತಾರೆ. ಗಾಢವಾಗಿ ಕಟ್ಟಿಕೊಳ್ಳುತ್ತಾರೆ. ಅವರ ಆತ್ಮೀಯತೆಗೆ ವಯಸ್ಸಾಗಿಲ್ಲ. ಅದು ಹಳಸಿಲ್ಲ ; ಹಳತಾಗಿಲ್ಲ. ಭಾಗವತರ ಸದ್ಗುಣಗಳಿಗೆ ವಾರ್ಧಕ್ಯ ಬಂದಿಲ್ಲ. ಬರುವುದೂ ಇಲ್ಲ. ಅವರ ಮನೆಯ ಆತಿಥ್ಯ ಆಡಂಬರ - ಬಿಗುಮಾನಗಳಿಂದ ಬಲುದೂರ. ನನ್ನ ತಂದೆಯವರಿಗೂ ಅವರಿಗೂ ಗಲಸ್ಯ - ಕಂಠಸ್ಯ ಗೆಳೆತನದ ಸಲುಗೆಯ ಜೊತೆಗೆ ಒಬ್ಬರನ್ನೊಬ್ಬರು ಆದರಿಸುವ ಗೌರವದ ಎತ್ತರ. ಇದು ಇಂದಿಗೂ ಮುಂದುವರಿದಿದೆ. ತಿಮ್ಮಪ್ಪ ನನ್ನ ಸ್ನೇಹಿತ. ನಮ್ಮೆರಡು ಕುಟುಂಬಗಳಿಗೆ ಆಪ್ತತೆಯ ನಂಟಿದೆ. ಭಾಗವತರು ಎಲ್ಲ ದೃಷ್ಟಿಯಿಂದಲೂ ನಮ್ಮವರೇ.

ಮಳಗಿಮನೆಯ ಪ್ರಸಂಗದ ನಂತರ ಹಲವು ಕಡೆ ಭಾಗವತರ ಪದ್ಯಗಳನ್ನು ಕೇಳಿ ಆನಂದಿಸಿದ್ದೇನೆ. ಆದರೆ ಅವರ ಭಾಗವತಿಕೆಯ ಪೂರ್ಣ ರಸಾಸ್ವಾದ ಸಿಕ್ಕಿದ್ದು ಲಿಂಗದಕೋಣದ ತಾಳಮದ್ದಳೆಯಲ್ಲಿ. ರಾತ್ರಿ ಬೆಳಗಿನವರೆಗೆ ಒಬ್ಬರೆ ಭಾಗವತರು. ರುಕ್ಮಾಂಗದ ಚರಿತ್ರೆ ಪ್ರಸಂಗ. ದುರ್ಗಪ್ಪ ಗುಡಿಗಾರರ ಸಾಥು. ಭಾಗವತರು ಪ್ರಸಂಗವನ್ನು ಹಾಡಿದರು. ಆಡಿದರು... ಆಡಿಸಿದರು. ಅವೆಷ್ಟು ಮಟ್ಟುಗಳು ..... ಅವೆಷ್ಟು ರಾಗಗಳು.............. ಎಂಥೆಂಥಹ ಭಂಗಿ ಭಣಿತಿಗಳು. ಇಡೀ ಪ್ರಸಂಗದ ಯಶಸ್ಸು ಭಾಗವತರ ಕೌಶಲವನ್ನು ಅವಲಂಬಿಸಿತ್ತು. ಅಂದು ರುಕ್ಮಾಂಗದ ವ್ರತದಂತೆ ಭಾಗವತರ ವ್ರತವೂ ಪರೀಕ್ಷಿತವಾಗಿ ಫಲಿಸಿತ್ತು ಸಂಮೋಹಿನೀ ಶಕ್ತಿಯಿಂದ.

ಆದರೆ ಆಗೆಲ್ಲ ನನಗೆ ಇಂದಿನ ಅನುಭವ - ಸಿದ್ಧತೆಗಳಿರಲಿಲ್ಲ. ರುಚಿ ಅಭಿರುಚಿಯಾಗಿ ಬೆಳೆದಿರಲಿಲ್ಲ. ಆಗ ತಾದಾತ್ಮ್ಯವಿತ್ತು. ಯಕ್ಷಗಾನದ ಮೋಡಿಗೆ ಒಳಗಾಗುವ 'ಬಾಲ್ಯ' ವಿತ್ತು. ಅಂದು ಇಂದಿನ ಪರಿಕರಗಳಿದ್ದಿದ್ದರೆ ಇನ್ನೆಷ್ಟು ಅನುಭವದ ಲಾಭವಾಗುತ್ತಿತ್ತೋ! ರಸ ಸಂತಸ ಸಿಗುತ್ತಿತ್ತೋ! ಏನು ಮಾಡೋಣ? ಅಂದು ಇಂದಲ್ಲ, ಇಂದು ಅಂದಾಗಲಾರದು.

ಭಾಗವತರ ಹಲವು ಮುಖಗಳು ನನಗೆ ಕಂಡಿಲ್ಲ. ಕಾಣುವ ಅಗತ್ಯವೂ ಇಲ್ಲ. ಆದರೆ ಕಂಡ ಮುಖ ಅಂದವಾಗಿಯೆ ಇದೆ. ಅದನ್ನು ಅಂದವಾಗಿಯೇ ಇಂದಿಗೂ ಕಾಣುತ್ತೇನೆ. ಕಾಣುತ್ತ ಹಿಗ್ಗುತ್ತೇನೆ. ನಾನೂ ಹಾಗೆಯೇ ಆಗಲು ಹವಣಿಸುತ್ತೇನೆ. ಯಕ್ಷಗಾನದಲ್ಲಿ ಹೊಸ ಹುಡುಗರು ಹುರುಪಿನಿಂದ ಕಲಿತು, ಬಲಿಯಬೇಕು. ಪರಿಷ್ಕಾರ - ಪರಿಶುದ್ಧಿಗಳನ್ನು ಪಡೆದು



ಸಿದ್ಧಿಯನ್ನು ಪಡೆಯುವಂತಾಗಬೇಕು - ಎಂಬ ಹಾರೈಕೆ ಮತ್ತು ಕಾಳಜಿ ಅವರದು. ಈ ವಿಷಯದಲ್ಲಿ ಅವರು ತುಂಬಾ ಉದಾರಿಗಳೂ, ನಿಷ್ಠುರರೂ ಆಗಿದ್ದಾರೆ.

1990 ರಲ್ಲಿ ನಾನು ಕಾಳಿದಾಸನ ಮೇಘದೂತವನ್ನು ಯಕ್ಷಗಾನ ರೂಪಕವಾಗಿ ಆಡಿಸಲು ನಿಶ್ಚಯಿಸಿದೆ. ಪ್ರೊ. ಎಂ. ಎ. ಹೆಗಡೆಯವರ ಮಾರ್ಗದರ್ಶನದಲ್ಲಿ ಪದ್ಯ ರಚನೆಗೆ ತೊಡಗಿದೆ. ಸುಮಾರು 62 ಪದ್ಯಗಳ ಕಿರುದಾದ ಕೃತಿ ಸಿದ್ಧವಾಯಿತು. ತಿಮ್ಮಪ್ಪ ಈ ಪದ್ಯಗಳನ್ನು ಹಾಡುವುದು ಎಂದು ನಮ್ಮ ಒಪ್ಪಂದ. ಬಾಳೆಹದ್ದಕ್ಕೆ ಹೋದೆ. ಭಾಗವತರ ಸಮ್ಮುಖದಲ್ಲಿ ನಾನು ಮತ್ತು ತಿಮ್ಮಪ್ಪ ಸಮಾಲೋಚನೆಯನ್ನು ಮಾಡುತ್ತಿದ್ದೆವು. ಭಾಗವತರು ಪ್ರತಿಯನ್ನು ಕೈಗೆತ್ತಿಕೊಂಡರು. ಹಿಂದೆ ಮುಂದೆ ಪುಟಗಳನ್ನು ತಿರುವುತ್ತ ಅಲ್ಲಲ್ಲಿ ಪದ್ಯಗಳನ್ನು ಗುನುಗುನಿಸಿದರು. ತಿಮ್ಮಪ್ಪನನ್ನು ನೋಡಿ 'ಈ ಪದ್ಯ ಎಲ್ಲ ಹ್ಯಾಂಗೆ ಹೇಳ್ತ್ಯೋ......!' ಎಂದು ನಕ್ಕರು. ನನಗೆ ಸೋಲು ಅರ್ಥವಾಗಿತ್ತು. ಪೆಚ್ಚಾದೆ. ಬೆವರಿ ಬೆಳುಚಿದೆ. ನನ್ನ ಅಸಹಾಯಕತೆಯನ್ನು ಭಾಗವತರು ಗುರುತಿಸಿದರು. 'ಹೆದರಡ್ಡ.........ಸರಿ ಮಾಡನ' ಅವರ ಆರ್ದ್ರವಾದ ಸಾಂತ್ವನದ ಮಾತು ನನಗೆ ಮರುಳುಗಾಡಿನಲ್ಲಿ ನೀರು ಸಿಕ್ಕ ಹಿತವನ್ನು ತಂದುಕೊಟ್ಟಿತು. ಮಟ್ಟಿಗೆ ಸರಿಯಾಗಿ ಅಕ್ಷರಗಳನ್ನು ಹಂಚಿ ಹಾಡುವ ಗುಟ್ಟನ್ನು ಭಾಗವತರು ಅಂದು ತೆರೆದಿಟ್ಟರು. ತಾಳದ ಆವರ್ತಕ್ಕೊ, ಸಾಹಿತ್ಯದ ಭಾವಕ್ಕೊ ಸರಿಯಾಗಿ ರಾಗದ ಗಮಕಗಳನ್ನು ಹೊಂದಿಸುವ ಮರ್ಮವನ್ನು ವಿವರಿಸಿದರು. ಗಂಟೆಯ ಕಾಲದಲ್ಲಿ ಯಕ್ಷಗಾನ ಮೇಘದೂತಕ್ಕೆ ಭಾಗವತಿಕೆಯ ಮಾರ್ಗ ಸಿಕ್ಕಿತ್ತು. ಮಂಚೀಕೇರಿಯಲ್ಲಿ ನಡೆಸಲಾದ ರಿಹರ್ಸಲ್ಲಿಗೂ ಭಾಗವತರು ಬಂದು ಹರಸಿದರು. 'ಅಡ್ಡಿಲ್ಯೋ.....ಏನೋ ಮಾಡಿದ್ದಿ' - ಎಂಬ ಬೆಂಬಲದ ಮಾತಿನೊಡನೆ ಅವರ ಕಣ್ಣಿನ ಹೊಳಪು ನನ್ನ ಪ್ರಯೋಗದ ಸರಿದಾರಿಯನ್ನು ಬೆಳಗಿಸಿತ್ತು.

ಇಂಥಹ ಎಷ್ಟೋ ಅನುಭವಗಳು ನನ್ನ ಬಾಳಿನ ಹದವಾಗಿ ಬೆಳೆಯುವುದಕ್ಕೆ ಬಾಳೆಹದ್ದ ಭಾಗವತರು ಕಾರಣ.

ಈಚೀಚೆ ಯಕ್ಷಗಾನ ಭಾಗವತಿಕೆ ಕವಲುದಾರಿಯ ಇಕ್ಕಟ್ಟಿಗೆ ಸಿಲುಕುತ್ತಿದೆ. 'ಯಕ್ಷಗಾನದ ಶೈಲಿ' ಯಾವುದು ಎಂಬ ಬಗ್ಗೆ ಗಂಭೀರ ಚಿಂತನೆ ಬೆಳೆಯುತ್ತಿದ್ದರೂ ಇನ್ನಿತರ ಗಾನ ಪದ್ಧತಿಯ ಪ್ರಭಾವಕ್ಕೆ ನಮ್ಮ ಹಾಡುಗಾರಿಕೆ ಸಿಲುಕುತ್ತಿದೆ. ಕೇವಲ ಅನುಕರಣೆಯ ಆಧಾರದ ಮೇಲೆ ಬೆಳೆದು ಬರುತ್ತಿರುವ ಕಾರಣ ಪರಂಪರೆಯು ಗೊಂದಲಮಯವಾಗುತ್ತಿದೆ. ಕೆಲವರಿಗೆ ಮಟ್ಟು ಪ್ರಧಾನ. ಕೆಲವರಿಗೆ ರಾಗ ಪ್ರಧಾನ. ಸ್ವರಶುದ್ಧಿ, ಲಯ ಸ್ಥಿರತೆ ಮೊದಲಾದ ಶಿಷ್ಟತೆಯ ಚೌಕಟ್ಟು ಕೆಲವರಿಗೆ ತೊಡಕಾಗಿ ಕಾಣುತ್ತಿದೆ ಪರಂಪರೆಯ ಹೆಸರಿನ ಹಲವು ಪ್ರಮಾದಗಳು ಇನ್ನಿತರ ಮುಜುಗರಕ್ಕೆ ಕಾರಣವಾಗಿದೆ. ಇಂಥಹ ಸಂದಿಗ್ಧ ಸ್ಥಿತಿಯಲ್ಲಿ ಬಾಳೆಹದ್ದ ಭಾಗವತರಂಥವರ ಮಾರ್ಗದರ್ಶನ ಅತ್ಯಂತ ಅಗತ್ಯ - ಅನಿವಾರ್ಯ. ಮಟ್ಟನ್ನು ಮೀರದೆ ರಾಗವನ್ನು ಅಳವಡಿಸುವ ಅವರ ದಾರಿ ಎಲ್ಲರಿಗೂ ಯಶೋಮಾರ್ಗ. ಪ್ರತಿಯೊಂದು ಪದ್ಯವನ್ನೂ ಮೂರು ಲಯಗಳಲ್ಲೂ ಅಬಾಧಿತವಾಗಿ ನಡೆಸುವ ಅವರ ನಡೆ ಯಕ್ಷಗಾನಕ್ಕೆ ರಕ್ಷಕವಾದ ಗತಿ.



## ಪದದಾಳದ ಹದವರಿತ ಸಂಪ್ರದಾಯಿ :

# ಬಾಳೆಹದ್ದ ಭಾಗವತರು

**- ಟಿ. ಎಂ. ಸುಬ್ಬರಾಯ**

ನಾನಲ್ಲ ಯಕ್ಷಗಾನದ ಅಭ್ಯಾಸಿ ; ನಾನು ಕೇವಲ ಯಕ್ಷಗಾನದ ಹವ್ಯಾಸಿ. ಯಕ್ಷಗಾನ ನನ್ನ ವೃತ್ತಿ ಅಲ್ಲ; ಕೇವಲ ಪ್ರವೃತ್ತಿ. ನನ್ನ ತೀರ್ಥರೂಪರು ಯಕ್ಷಗಾನದ ವೇಷಧಾರಿ ; ಮೇಳದ ಸಂಘಟಕ. ರಕ್ತಗತವಾಗಿ ಬಂದಿದ್ದ ಯಕ್ಷಗಾನದ ರುಚಿ - ಅಭಿರುಚಿಗೆ ಪ್ರೇರಣೆ - ಪ್ರೋತ್ಸಾಹ ನನಗೆ ದೊರಕಿದ್ದು ನನ್ನ ಚಿಕ್ಕಪ್ಪ - ಯಕ್ಷಗಾನ ಭಾಗವತ, ಪ್ರಸಂಗಕರ್ತ ದಿ. ಗುಂಡೂ ಸೀತಾರಾಮ್ ರಾವ್ ಅವರಿಂದ. ನನ್ನ ಈ ಸೀತಾರಾಮ ಕಕ್ಕ ಅಮೃತೇಶ್ವರಿ ಮೇಳಕ್ಕೆ ಹೊಸ ಹೊಸ ಯಕ್ಷಗಾನ ಪ್ರಸಂಗಗಳನ್ನು ರಚನೆ ಮಾಡುತ್ತಿದ್ದಾಗ - ಅವುಗಳ ಕಥಾನಕ, ಓಟ, ಪದ್ಯ, ಲಯ, ಧಾಟಿ, ಸಂದರ್ಭ ಸಂಭಾಷಣೆ ಕುರಿತಂತೆ ನನ್ನೊಂದಿಗೆ ವಿಚಾರ ವಿನಿಮಯ ನಡೆಸುತ್ತಿದ್ದ; ಸಾಂದರ್ಭಿಕವಾಗಿ ಬಳಕೆಯಾಗುತ್ತಿದ್ದ - ಬಳಕೆಯಾಗುವ ಸಾಹಿತ್ತಿಕ ಶಬ್ದಗಳ ಬಗ್ಗೆ ನನ್ನನ್ನು ಕೇಳುತ್ತಿದ್ದ; ನನ್ನ ಸಲಹೆ ಪಡೆಯುತ್ತಿದ್ದ. ಕೆಲವು ಪದ್ಯಗಳನ್ನು ಬೇರೆ ಬೇರೆ ರಾಗಗಳಲ್ಲಿ - ವಿಭಿನ್ನ ತಾಳ ಬಳಸಿ - ಯಾವುದು ಸೂಕ್ತ ಎನ್ನಿಸುತ್ತದೆ ಎಂದು ಹಾಡಿ ತೋರಿಸುತ್ತಿದ್ದ. ಯಕ್ಷಗಾನದ ಮೂಲ ತಟ್ಟು - ಮಟ್ಟುಗಳ ಪರಿಪೂರ್ಣ ಜ್ಞಾನ ನನಗಿಲ್ಲವಾಗಿದ್ದರೂ - ಸಂದರ್ಭೋಚಿತವಾಗಿ ಈ ಇಂಥಾ.... ಅದೇ ಮೂರನೇ ಸಲ ಹಾಡಿದ್ದು.......... ಅಥವಾ ಎರಡನೇ ಬಾರಿ ಹಾಡಿದ್ದು ..... ಈ ಸಂದರ್ಭಕ್ಕೆ ಒಗ್ಗೀತು.... ಒಪ್ಪೀತು..... ಎನ್ನುತ್ತಿದ್ದೆ. 'ಇದು .......... ಹಾಗಾದರೆ ....ಈ ರಾಗ ..... ಇದಕ್ಕೆ ಈ ತಾಳ........ ಇದು ತೀರಾ ಹಳೆಯ ರಾಗ ....... ಹಳೆಯ ಮಟ್ಟು ..... ಉಪ್ಪೂರರೊಬ್ಬರೇ ಹಾಡಲು ಬಲ್ಲರು ಇದನ್ನು .... ಇನ್ನು ಹಾಡಿದರೆ ....... ಬಾಳೆಹದ್ದದ ಭಾಗವತರು ಹಾಡಬೇಕು ಅಷ್ಟೇ .... ಈ ಇಬ್ಬರನ್ನು ಬಿಟ್ಟರೆ ಮತ್ತೆ ಯಾರಿಗೂ ಈ ರಾಗದ ತಲೆ - ಬುಡ ಗೊತ್ತಿಲ್ಲ .... ' ಎನ್ನುತ್ತಿದ್ದ.

ಆಗಲೇ .... ಮೊದಲ ಬಾರಿಗೆ ನನ್ನ ಕಿವಿಗೆ ಬಿದ್ದದ್ದು ಬಾಳೆಹದ್ದ ಭಾಗವತರ ಹೆಸರು .....

ಸೀತಾರಾಮಕಕ್ಕನದು ಪ್ರಸಂಗ ರಚನೆ ; ಅದಕ್ಕೆ ಒಪ್ಪ - ಓರಣ ಕೊಟ್ಟು ರಂಗಕ್ಕೆ ತರುವ ಕೆಲಸ ಉಪ್ಪೂರರದು. ಮಾರಿಕಾಂಬಾ ದೇವಿಯ ಜಾತ್ರಾ ವೇಳೆ ಶಿರಸಿಯಲ್ಲಿ ಅಮೃತೇಶ್ವರಿ ಮೇಳದ ಕ್ಯಾಂಪು ; ಸೀತಾರಾಮ ಕಕ್ಕನ ಮೂಲಕ ನನ್ನ ಮನೆಯಲ್ಲಿ ಉಪ್ಪೂರರ ಕ್ಯಾಂಪು. ಮುಂಚಿನ ರಾತ್ರಿಯ ಊಟ ಮುಗಿಸಿ, ನನ್ನ ಮನೆಗೆ ಬಂದು, ಸ್ನಾನ ಚಹಾ ಮುಗಿಸಿ ಉಪ್ಪೂರರದು ನಿದ್ರೆ,



ಮಧ್ಯಾಹ್ನ ಊಟ, ನಂತರ ಮತ್ತೆ ಸಂಜೆಯವರೆಗೆ ನಿದ್ರೆ. ನನ್ನ ಅವರ ಭೇಟಿ- ನನ್ನ ಮನೆಯಲ್ಲಿ -ಮಧ್ಯಾಹ್ನದ ಊಟದ ವೇಳೆ. ಆ ಸಮಯದಲ್ಲಿಯೇ ನಮ್ಮ ನಡುವೆ ಯಕ್ಷಗಾನ ಕುರಿತು ಮಾತುಕತೆ - ಹೆಚ್ಚಾಗಿ ಆ ಮಾತುಕತೆ ನನ್ನ ಸೀತಾರಾಮ ಕಕ್ಕನ ಪ್ರಸಂಗ ಕೃತಿಗಳಲ್ಲಿ ಬಳಕೆಯಾದ ಸಾಹಿತ್ತಿಕ ಶಬ್ದಗಳ, ರಾಗ, ತಾಳ, ಧಾಟಿ, ಓಘ, ಸಂಭಾಷಣೆ, ತಂತ್ರ ಮೊದಲಾದವುಗಳ ಬಗ್ಗೆ.

'ಅಂಥಾ ಸಂದರ್ಭಕ್ಕೆ ಯಾಕೋ ಆ ರಾಗ ನನಗೆ ಸರಿ ಹೊಂದಿದಂತೆ ಕಂಡು ಬಂದಿಲ್ಲ...' ಎಂದೋ, 'ಈ ಝೂವಕ್ಕೆ ಈ ಪದ್ಯ ಭಾವ ನನಗೆ ಸರಿ ಅನ್ನಿಸಲಿಲ್ಲ...' ಎಂದೋ ನನಗೆ ಅನ್ನಿಸಿದ್ದನ್ನು ನೇರವಾಗಿ ಹೇಳುತ್ತಿದ್ದೆ. ಆ ಸಂದರ್ಭದ ಪದ್ಯ - ರಾಗ- ತಾಳಗಳನ್ನು ನೆನಪಿಸಿಕೊಂಡು - ಊಟ ಮಾಡ ಮಾಡುತ್ತಲೇ ಉಪ್ಪೂರರು ಅದನ್ನು ಹಾಡುತ್ತಿದ್ದರು. ಜೊತೆಗೆ ವ್ಯಾಖ್ಯಾನ. 'ಇದನ್ನು ನಿಜಕ್ಕೂ ಈ ರಾಗದಲ್ಲಿ ಹಾಡಬೇಕು ಮಹಾರಾಯರೇ.... ಆದರೆ..... ಈಗ ಯಾರು ಇದನ್ನು ಬಳಕೆ ಮಾಡಲಿಕ್ಕುಂಟು ಹೇಳಿ.... ನಾನೇನಾದರೂ ಈ ರಾಗದಲ್ಲಿ ಹಾಡಿದರೆ ..... ನಟ ರಂಗದ ಮೇಲೆ ಹೆಜ್ಜೆ ಹಾಕದೆ ಸುಮ್ಮನೆ ನಿಂತಾನು.... ಕುಣಿತಕ್ಕೆ ಈ ರಾಗ ಒಪ್ಪುವುದುಂಟಾ ಅಂತ ಕೇಳಿಯಾನು .... ಏನೂ ಹೇಳಿ....... ಚಂದ ಇದ್ದರೂ ಈ ರಾಗ ಬಳಸುವಂತಿಲ್ಲ...... ಅದಕ್ಕೇ ಅದರ ಬದಲು ಈ ರಾಗ ...'

ಹೀಗೆಯೇ ನಮ್ಮ ಚರ್ಚೆ ...

ಒಮ್ಮೆ ನಮ್ಮ ಈ ಮಾತುಕತೆಯಲ್ಲಿ ನುಸುಳಿಕೊಂಡದ್ದು.... ಅಮೃತೇಶ್ವರೀ ಮೇಳದ ಆ ವರ್ಷದ ಟ್ರಂಪ್ ಕಾರ್ಡ್ ಪ್ರಸಂಗ - ಮಾಯಾ ಮೃಗಾವತಿ - ಯ ಒಂದು ಸನ್ನಿವೇಷ ; ಅದಕ್ಕೆ ಸಂಬಂಧಪಟ್ಟ ಪದ್ಯಗಳು. ಅದರ ಕುರಿತು ಮಾತುಕತೆ ನಡೆಯುತ್ತಿದ್ದಾಗ - ಒಂದು ಪದ್ಯವನ್ನೆತ್ತಿಕೊಂಡು ಉಪ್ಪೂರರು 'ಇದನ್ನು ನೋಡಿ... ಈ ಮಟ್ಟಿನಲ್ಲಿ ಇದನ್ನು ಹಾಡಿದರೆ ಚಂದ.... ಚಂದ ಏನು ಮೊದಲು ಹೀಗೇ ಹಾಡುತ್ತಿದ್ದುದು .... ಈ ಸಂದರ್ಭಕ್ಕೆ ಇದು ಒಗ್ಗೋ ಮಟ್ಟು..... ರಸಾಸ್ವಾದನೆಗೂ ಇದು ಹೆಚ್ಚು ಪರಿಣಾಮಕಾರಿ. ಈಗ ಇದನ್ನು ಯಾರು ಹಾಡುವವರಿದ್ದಾರೆ..... ಇದ್ದರೆ ........ ಬಾಳೆಹದ್ದ ಭಾಗವತರೊಬ್ಬರೇ...' ಎಂದರಲ್ಲದೆ ನಾನೂ ಎಂದೆಂದೂ ಕೇಳಿರದ ಹಳೆಯ ದಾಟಿಯೊಂದರಲ್ಲಿ ಅದನ್ನು ಹಾಡಿ ತೋರಿಸಿದರು.

ಎರಡನೇ ಬಾರಿ ..... ಅದೂ ಉಪ್ಪೂರರ ಬಾಯಿಯಿಂದ ಬಾಳೆಹದ್ದ ಭಾಗವತರ ಬಗ್ಗೆ ನಾನು ಕೇಳಿದ್ದೆ...

ಯಾರು ಈ ಬಾಳೆಹದ್ದ ಭಾಗವತರು? ಯಕ್ಷಗಾನದ ಹಳೆಯ ತಿಟ್ಟು - ಮಟ್ಟು ಬಲ್ಲಂಥ ಈ ಮಹಾಶಯ ಎಷ್ಟು ಹಳಬರು? ಯಕ್ಷರಂಗಕ್ಕೆ ಇವರ ಕೊಡುಗೆ ಏನು? ಹಳೆಯ ರಾಗ, ಮಟ್ಟು, ತಿಟ್ಟು ಬಲ್ಲ ಇವರೇಕೆ ಪ್ರಸಿದ್ಧರಾಗಿಲ್ಲ? ಇತ್ಯಾದಿ ಪ್ರಶ್ನೆಗಳು........ ಜೊತೆಯಲ್ಲಿ



ಕುತೂಹಲ.... ಈ ಬಾಳೆಹದ್ದ ಭಾಗವತರನ್ನು ಒಮ್ಮೆ ಕಾಣಬೇಕೆಂಬ ಹಂಬಲ.

ಯಕ್ಷಗಾನ ಸಂಬಂಧೀ ಪ್ರತಿಷ್ಠಾನವೊಂದರ ಸಲುವಾಗಿ ದೇಣಿಗೆ ಆಕರಣೆಗೆಂದು ಪುರ್ಲೆ ಹೆಗಡೆಯವರ ಜೊತೆ ಹೊರಟಾಗ ಬಾಳೆಹದ್ದ ಭಾಗವತರ ಮನೆಯೊಳಗೆ ನನ್ನಪ್ರವೇಶ; ನನ್ನ ಮನದೊಳಗೆ ಬಾಳೆಹದ್ದ ಭಾಗವತರ ಪ್ರವೇಶ.

ಬಾಳೆಹದ್ದ ಭಾಗವತರ ಪದ್ಯಗಳನ್ನು ಕೇಳಿದ್ದು ಒಂದೆರಡು ಬಾರಿ ; ಅದರ ನಾದ ನಿನಾದ ವೈಭವ ನನ್ನಲ್ಲಿ ಪ್ರತಿ ಬಾರಿಯೂ. ಅವರ ಆತಿಥ್ಯ ಸ್ವೀಕರಿಸಿದ್ದು ಮೂರ್ನಾಲ್ಕು ಬಾರಿ ಆದರೆ, ಅದರ ಸ್ವಾದ ಸತತ. ಅವರೊಂದಿಗೆ ಮಾತನ್ನಾಡಿದ್ದು ಆರೆಂಟು ಬಾರಿ ; ಅದರ ಮೆಲುಕು - ಪಲುಕು ಯಾವೊತ್ತೂ.

'ಆತ್ಮೀಯತೆ' ಎನ್ನುವ ಶಬ್ದಕ್ಕೆ ಪರ್ಯಾಯ ಬಾಳೆಹದ್ದ ಕೃಷ್ಣ ಭಾಗವತರು.

ಬಾಳಿನ ಹದವರಿತ, ಅದರೊಂದಿಗೆ ಸಾಂಪ್ರದಾಯಿಕ ಸೆಲೆಯನ್ನುಳಿಸಿಕೊಂಡ ಬಾಳೆಹದ್ದ ಭಾಗವತರು, ಬಾಳಿನ ಶುದ್ಧತೆ ಹೊಂದಿದ, ಬಾಳಿನ ಬದ್ಧತೆ ರೂಢಿಸಿಕೊಂಡ ಈ ಕಾಲಮಾನದ ಅಪರೂಪ ವ್ಯಕ್ತಿ.

ಯಕ್ಷಗಾನದಲ್ಲಿ ಅವರಿಗಿರುವ ಅಪಾರ ಅನುಭವ, ರಾಗ - ತಾಳ - ಧಾಟಿಗಳ ಪಾರಮ್ಯ, ಪೂರ್ವಾಪರ ದೃಷ್ಟಿ - ಯಾವುದೂ, ಯಾವುವೂ ನನ್ನಲ್ಲಿ ಕಿಂಚಿತ್ ಇಲ್ಲದಿದ್ದರೂ - ಯಕ್ಷಗಾನದ ಬಗೆಗಿನ ನನ್ನ ಆಸ್ಥೆ, ಆಸಕ್ತಿ ಗುರುತಿಸಿ ಗೌರವಿಸುತ್ತಿರುವ ಮಹಾನುಭಾವರು ಈ ಬಾಳೆಹದ್ದ ಭಾಗವತರು.

ವಯೋಮಾನ, ಜ್ಞಾನ, ಅಂತಸ್ಸು - ಎಲ್ಲವನ್ನೂ ಗೌಣವಾಗಿಸಿ ನನ್ನನ್ನು ತಮ್ಮ ಸಮಾನ ಭಾವದಿಂದ ಕಾಣುವ ಬಾಳೆಹದ್ದ ಭಾಗವತರ ಅಪರೂಪದ ಜಾಯಮಾನಕ್ಕೆ ನಾನು ಸದಾ ಮೂಕ ವಿಸ್ಮಿತ.

ಯಕ್ಷಗಾನ ಬಾಳ ಹೆದ್ದೊರೆಯ ಈ ಭಾಗವತರ ಮಗ ತಿಮ್ಮಪ್ಪ ಭಾಗವತ. ಆತ್ಮೀಯತೆಯಲ್ಲಿ ಅಪ್ಪನಿಗೆ ತಕ್ಕ ಮಗ. ನಮ್ಮಿಬ್ಬರ ಭೇಟಿ ಆರಂಭವಾಗುವುದು ಸದಾ - ಸಸ್ನೇಹ ಪೂರ್ಣ ಜಗಳದಿಂದಲೇ. ಪರಸ್ಪರ ಆರೋಪ - ಪ್ರತ್ಯಾರೋಪ - ದೋಷಾರೋಪ- ದೂಷಣೆ - ಪ್ರತಿದೂಷಣೆಗಳಿಂದಲೇ. ಭೇಟಿಯ ವಿದಾಯ - ಮುಕ್ತಾಯ ಕೂಡ ಅಂತೆಯೇ. ನನ್ನದು ಅತಿ ಆದರೆ - ತಿಮ್ಮಪ್ಪನದು ಪ್ರೀತಿ.... ಇಲ್ಲಾ ವೈಸ್ ವರ್ಸಾ. ಆದರೂ ನಮ್ಮ ಬಾಂಧವ್ಯ ಅನ್ಯೋನ್ಯ; ಅನನ್ಯ ; ಅನೂಹ್ಯ ಕೂಡಾ.

ಪುಟ ಪ್ರಾಯೋಜಕರು : **ಶ್ರೀ ಟಿ. ಕೆ. ಕೆರೆಗದ್ದೆ**



# 'ಯಕ್ಷಸಂಸಾರ'

– ದಿವಾಕರ ಹೆಗಡೆ, ಧಾರವಾಡ

'ಕೃಷ್ಣಸಂಧಾನ' ದ ತಾಳಮದ್ದಲೆ, ಅಂಬುಜಾಕ್ಷಿಯವರ ಗಡಣದಲ್ಲಿ ಹೊನ್ನಂದಣವನ್ನು ಏರಿ ಹೊರಟ ದ್ರೌಪದಿ ಭೀಮನೆಡೆಗೆ ಬರುತ್ತಾಳೆ. ಭೀಮನನ್ನು ಕಂಡಾಗ ''ಬಂದಂದಣ ವಿಳಿದನಿಲಜಗೆರಗಲ್ ಕಂತುವಿನರಗಿಣಿಯಂ ಕಂಡಂತಃಕರಣದಿ ತಳ್ಕಿಸುತೆಂದ'' ಎಂಬ ವಚನವನ್ನು ಭಾಗವತರು ಹಾಡಿದರು. ಅದರಲ್ಲಿ ಭೀಮನ ಪ್ರೀತಿ, ಯುದ್ಧವಿಲ್ಲ ಎಂಬ ದುಗುಡ, ಮುಗ್ಧೆಗೆ ಇದು ತಿಳಿದಿಲ್ಲ ಎಂಬ ಮರುಕ ಎಲ್ಲವೂ ಮಡುಗಟ್ಟಿತ್ತು. ಆ ಸಾಹಿತ್ಯಕ್ಕೆ ನಿರ್ವಚನ ಸಾಧ್ಯವಿದ್ದರೂ ಬಾಳೆಹದ್ದ ಭಾಗವತರು ಹಾಡಿದ ರೀತಿಯಲ್ಲಿ ಆ ಸಂದರ್ಭವನ್ನು ಮಾತಿನಲ್ಲಿ ಕಟ್ಟುವುದು ಬಹಳ ಕಷ್ಟದ ಕೆಲಸವಾಗಿತ್ತು. ಅಂತಹ ಅನಿರ್ವಚನೀಯ ಆನಂದವನ್ನು ಪ್ರೇಕ್ಷಕರೆಲ್ಲ ಅನುಭವಿಸಿದ್ದರು. ಅಂದು ಭೀಮನ ಪಾತ್ರವಹಿಸಿದ್ದ ನನಗೆ, ಒಂದು ಪಾತ್ರ, ಒಂದು ಸಂದರ್ಭ ತರ್ಕವನ್ನು ಮೀರಿ ಬೆಳೆಯುವ ಅನಿವಾರ್ಯತೆ ಅರ್ಥವಾಗಿತ್ತು. ಆದರೆ ಅರ್ಥಗಾರಿಕೆಗೆ ತೀರ ಹೊಸಬನಾಗಿದ್ದ ನಾನು ಭೀಮನ ಮಾತಿನಲ್ಲಿ ಸಂಗೀತವನ್ನು ತುಂಬಲಾರದೇ ಕಾವ್ಯವನ್ನು ಕಟ್ಟಲಾರದೇ ಅಸಹಾಯಕನಾಗಿದ್ದೆ. ರಸದೃಷ್ಟಿಯುಳ್ಳ ಬಾಳೆಹದ್ದ ಭಾಗವತರ ಪದಕ್ಕೆ ಅರ್ಥ ಹೇಳುವ ಎಲ್ಲ ಅರ್ಥಧಾರಿಗಳಿಗೂ ಇಂತಹ ಕಷ್ಟ ಎದುರಾಗಿರಲೇಬೇಕು. ಎಂತಹ ಬೋರಿನ ಪದವೇ ಇರಲಿ. ಆದರ ಸಾಹಿತ್ಯ ಕೆಡದು. ಯಾವ ಎತ್ತರದಲ್ಲಿ ಹೇಳಿದರೂ ಸ್ವರಕ್ಕೆ ಶಕ್ತಿ ತುಂಬುತ್ತಾರೆಯೇ ವಿನಃ ಕಿರುಚಿ ಕೂಗಿಸಿದಂತಿರುವುದಿಲ್ಲ. ಅರ್ಥಧಾರಿ ಪದಕ್ಕೆ ಸಂದರ್ಭ ಕೊಟ್ಟ ರೀತಿ ಹೇಗಿದೆಯೋ ಹಾಗೆಯೇ ಆ ಹಾಡು ಬರುತ್ತದೆ. ಇಂತಹ ತಾದಾತ್ಮ್ಯದ ಹಾಡುಗಾರಿಕೆ ತೀರ ಅಪರೂಪ. ಅಂತಹ ಅಪರೂಪದ ಹಾದಿ ಭಾಗವತರದ್ದು.

ಬಾಳೆಹದ್ದಕ್ಕೆ ಈಗಲೂ ಸಾರ್ವಜನಿಕ ರಸ್ತೆ ಇಲ್ಲ. ಭಾಗವತರು ತುಳಿದ ಹಾದಿಯಲ್ಲಿಯೇ ನಾವೂ ಹೋಗಬೇಕು. ಬೆಟ್ಟದಾಚೆ ಗದ್ದೆಗಿಳಿದು, ತೋಟಸುತ್ತಿ ಅವರ ಮನೆ ಸೇರಬೇಕು. ಹಾಗೆ ಸೇರಿದ ಮೇಲೆ ಆ ಮನೆ ನಮ್ಮದೇ. ಅಲ್ಲಿ ಸಂಕೋಚಕ್ಕೆ, ದಾಕ್ಷಿಣ್ಯಕ್ಕೆ ಅವಕಾಶವಿಲ್ಲ. ಮನೆಯವರೆಲ್ಲರಿಗೂ ಅಂತಹ ಸಹೃದಯತೆ. ಅವರೆಲ್ಲರೂ ಒಂದೇ ಶ್ರುತಿಗೆ ಪಕ್ಕಾದವರು. ಇಲ್ಲದಿದ್ದರೆ ಇಂತಹದೊಂದು ಯಕ್ಷಸಂಸಾರ ಸಾಧ್ಯವಿರಲಿಲ್ಲ. ಅವರ ಮನೆಗೆ ಬಂದು ಹೋಗುವವರದೆಷ್ಟೋ ಜನ. ನಾನೇ ನೂರಾರು ಬಾರಿ ಅಲ್ಲಿಗೆ ಹೋದರೂ ಅವರ ಮನೆಯ ಯಾವ ಸಮಸ್ಯೆಯೂ ನನ್ನ ಗಮನಕ್ಕೆ ಬರಲಿಲ್ಲ. ಯಾರೋ ಸಿಟ್ಟು ಮಾಡಿದ್ದು, ಧ್ವನಿ ಏರಿಸಿ ಮಾತಾಡಿದ್ದು ನನಗೆ ನೆನಪಿಲ್ಲ. ಎಲ್ಲರ ಬಾಯಲ್ಲೂ ಹಾಡಿದೆ. ಅವರ ಸಂಗೀತದ ಸಂಸಾರದಲ್ಲಿ ರಾಗವೇ ಇದೆ. ದ್ವೇಷವಿಲ್ಲ, ಬದುಕಿನ



ಅನಿವಾರ್ಯ ಕಷ್ಟಗಳಿಂದ ಮನಸ್ಸನ್ನು ಮೇಲೆತ್ತೆಂದು ಬಯಸಿ ಹಾಡಿದ ಅನೇಕ ಕವಿಗಳು ನಮ್ಮಲ್ಲಿದ್ದಾರೆ. ಹಾಗೆ ಪ್ರಯತ್ನಿಸುವ ಸಾತ್ವಿಕರ ಸಂಖ್ಯೆಯೂ ಅನೇಕ. ಭಾಗವತರಿಗೆ ಅದು ಸ್ವಭಾವ ಸಹಜ. ಕಾಲಿಗೆ ಕಪ್ಪಿದ ಮುಳ್ಳನ್ನು ತೆಗೆಯುವಾಗಲೂ ಅಠಾಣಾ ರಾಗದ ಆರೋಹ -ಅವರೋಹಣಗಳನ್ನು ಗುನುಗಬಲ್ಲರು. ಮುಳ್ಳಿನ ನೋವನ್ನು ಸಂಗೀತದ ಮುಳ್ಳು ಮೀರುತ್ತದೆ. ಮೇಲ್ನೋಟಕ್ಕೆ ಭಾಗವತರು ಬದುಕಿನ ಕರ್ತವ್ಯಗಳನ್ನು ಅಷ್ಟಾಗಿ ಹಚ್ಚಿಕೊಂಡವರಲ್ಲ. ಮನುಷ್ಯರ ಸಣ್ಣತನಗಳು ಅವರ ಗಮನಕ್ಕೆ ಬರುವುದೇ ಇಲ್ಲ. ಬೆಳ್ಳಗಿದ್ದದ್ದೆಲ್ಲ ಹಾಲೇ ಎಂದೆನಿಸುತ್ತದೆ. ಒಂದೇ ಸ್ವರದ ತೀವ್ರ, ಶುದ್ಧ ಕೋಮಲಗಳ ಸೂಕ್ಷ್ಮವನ್ನು ತಿಳಿಯುವುದಿಲ್ಲ ಎಂದುಕೊಳ್ಳುವುದು ನಮ್ಮ ಮುಗ್ಧತೆ. ಬೇರೆಯವರ ಸಣ್ಣತನವನ್ನು ಎಣಿಸದಿರುವುದು, ಸ್ವಂತದ ಕಷ್ಟವನ್ನು ಹಾಡಿಕೊಳ್ಳದಿರುವುದು ಬಹುಕಷ್ಟದ ವ್ರತ. ಅಂತಹ ವ್ರತಕ್ಕೆ ಒಗ್ಗಿಕೊಂಡವರು ಭಾಗವತರು, ಅವರ ಸಂಸಾರ. ಹಾಗಾಗಿಯೇ ಬಾಳೆಹದ್ದ ಎಲ್ಲರಿಗೂ ಹತ್ತಿರವಾಗುತ್ತದೆ, ಅಪ್ತವಾಗುತ್ತದೆ.

ಸಂಗೀತದ ಸೂಕ್ಷ್ಮಗಳನ್ನು ಯಕ್ಷಗಾನದಲ್ಲಿ ದುಡಿಯುವುದಕ್ಕೆ ಅನೇಕ ಸಮಸ್ಯೆಗಳಿವೆ. ಅದು ಹಾಡಿನ ಪದ್ಧತಿ ಮಾತ್ರವಲ್ಲ, ಕಥೆಯನ್ನು ಕಟ್ಟುವ ಸಾಮೂಹಿಕ ಜವಾಬ್ದಾರಿಗಳಿವೆ. ಭಾವರಸಗಳ ಕಲ್ಪನೆಯಿರುವ ಭಾಗವತರಿಗೆ ರಸಭಂಗದ ಸನ್ನಿವೇಶಗಳನ್ನು ಮತ್ತೆ ಮತ್ತೆ ಎದುರಿಸುವ ಕಷ್ಟವಿದೆ. ಆದರೂ ಅದನ್ನೇ ಅವಲಂಬಿಸಿ ಹೊಸದನ್ನು ಕಟ್ಟುವ ನಿರಂತರ ಪ್ರಯೋಗಶೀಲತೆಗೆ ಅಪಾರ ತಾಳ್ಮೆ ಬೇಕು. ಯಕ್ಷಗಾನದ ಎಲ್ಲ ಮಿತಿಗಳನ್ನೂ ಒಪ್ಪಿಕೊಂಡೇ ದುಡಿಯುವ ಪ್ರೀತಿ ಬೇಕು. ಭಾಗವತರು ಸಂಗೀತವನ್ನು ಅನುಭವಿಸುವುದಕ್ಕಾಗಿ ಯಕ್ಷಗಾನವನ್ನು ಅವಲಂಬಿಸಿದ್ದಾರೆಯೇ ವಿನಃ ಯಕ್ಷಗಾನಕ್ಕಾಗಿ ಸಂಗೀತವನ್ನು ಆರಾಧಿಸಿದವರಲ್ಲ ಎಂದೇ ಅನಿಸುತ್ತದೆ ನನಗೆ.

ಇಂದು ಕಲೆ ವ್ಯಾವಸಾಯಿಕ ರೂಪವನ್ನು ಪಡೆದಿದೆ. ತಾಂತ್ರಿಕತೆಯಲ್ಲಿ ಗಟ್ಟಿಯಿದ್ದರೆ ಸತ್ವವಿಲ್ಲದೆಯೂ ರಂಜಿಸಬಹುದೆಂಬ ವಿಶ್ವಾಸ ಅನೇಕರಲ್ಲಿದೆ. ಕಲೆಯ ಉಳಿವಿನ ಪ್ರಶ್ನೆ ಬಂದಾಗ ಸಾಮೂಹಿಕ ಹೊಣೆಯನ್ನು ಸರಕಾರದ ಹೊಣೆಯಾಗಿಸುವ ರೀತಿ ನಮಗೆ ಗೊತ್ತಿದೆ. ಮೌಲ್ಯಗಳ ಪ್ರಶ್ನೆ ಬಂದಾಗ ಕಲಾವಿದರನ್ನು ವೈಯಕ್ತಿಕವಾಗಿ ಹೊಣೆಗಾರರನ್ನಾಗಿಸಲು ಹಿಂಜರಿದು ವ್ಯಾವಹಾರಿಕ ಅನಿವಾರ್ಯತೆಯನ್ನು ವೃತ್ತಿಯ ಅಸಹಾಯಕತೆಯನ್ನು ಮುಂದಿಡುತ್ತೇವೆ. ಗೌರವದ, ಪ್ರಸಿದ್ಧಿಯ ಪ್ರಶ್ನೆ ಬಂದಾಗ ಅಕಾಡೆಮಿಯತ್ತ ಸರಕಾರದತ್ತ ಕೈ ತೋರಿಸುತ್ತೇವೆ. ಅಥವಾ ವ್ಯವಸ್ಥಿತವಾಗಿ ಅರ್ಜಿ ಹಾಕುವುದು ಹೇಗೆ ಎಂಬುದರತ್ತ ಗಮನ ಹರಿಸುತ್ತೇವೆ. ಭಾಗವತರ ಕಲೆಯ ಉಪಾಸನೆಯಲ್ಲಿ ಈ ತೆರನ ಚಿಂತನೆಗಳೇ ಇಲ್ಲ. ಯಕ್ಷಗಾನವನ್ನು ಅವರು ಪ್ರೀತಿಸಿದರು. ಆದಕ್ಕಾಗಿ ಸಮಯ, ಶ್ರಮಗಳನ್ನು ಮೀಸಲಿಟ್ಟರು. ಮನೆ ಶಾಲೆಯಾಯಿತು. ಮಗ ಭಾಗವತನಾದ. ಎಂದೂ ಕಲೆಯ ಮರ್ಯಾದೆಯನ್ನು ಮೀರಿದವರಲ್ಲ. ಪರಂಪರೆಯ ಮರ್ಯಾದೆಯನ್ನು ವಿಸ್ತರಿಸಿದರೂ ಮುರಿದವರಲ್ಲ. ಸಂಗಡಿಗರನ್ನು ಕಟ್ಟಿಕೊಂಡು ಕಾರ್ಯಕ್ರಮಕ್ಕೆ ಹೊರಟರೆ ಅನೇಕ ಬಾರಿ ಎಲ್ಲರ



ಖರ್ಚನ್ನೂ ಇವರೇ ನಿಭಾಯಿಸಿದರು. ಕಲೆಯ ಸುಖವನ್ನು ಉಳಿದವರಿಗೆ ಹಂಚಿದರು. ತಾವೂ ಅನುಭವಿಸಿದರು. ಅದಕ್ಕಿಂತ ಹೆಚ್ಚಿನ ಆನಂದ ಪ್ರಶಸ್ತಿಯಲ್ಲಿ ಸಿಕ್ಕೀತು ಎಂದು ಅವರೆಂದೂ ಎಣಿಸಲಿಲ್ಲ. ವೃತ್ತಿ ಕಲಾವಿದರೇ ಮಾದರಿಯಾಗಿ ನಿಲ್ಲುವ ಕಾಲದಲ್ಲೂ ಹವ್ಯಾಸಿಗಳೂ ಕೌಶಲದಲ್ಲಿ ಕಡಿಮೆಯಾದವರಲ್ಲ ಎಂಬ ಮೇಲ್ಪಂಕ್ತಿ ಹಾಕಿದರು. ಒಂದು ಒಳ್ಳೆಯ ರುಚಿಯನ್ನು ಅನೇಕರಲ್ಲಿ ಹಂಚಿದರು. ಕಲೆಯ ಉಪಾಸನೆ ಎಂದರೆ ಇದೇ ಆಗಿದೆ. ಯಕ್ಷಗಾನದಲ್ಲಿ ಪ್ರೀತಿಯಿಲ್ಲದವರೂ ಭಾಗವತರ ಹಾಡು ಕೇಳುವುದಕ್ಕಾಗಿ ಯಕ್ಷಗಾನ ಕಾರ್ಯಕ್ರಮಕ್ಕೆ ಬರುತ್ತಿದ್ದರು. ಅಂತಹ ಒಂದು ವ್ಯಾಪ್ತಿಗಾಗಿ ಈಗಲೂ ಯಕ್ಷಗಾನ ಹಸಿದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಅನೇಕರ ಈ ರೀತಿಯ ಪ್ರಯತ್ನಗಳಿಂದಲೇ ಯಕ್ಷಗಾನ ನಮ್ಮ ಗ್ರಾಮಗಳಲ್ಲಿ ಬದುಕಿ ಬಂದಿದೆ. ಇಂದಿಗೂ ಇಂತಹ ಮೇಲ್ಪಂಕ್ತಿಯನ್ನು ಗುರುತಿಸಿ ಅನುಸರಿಸಬಲ್ಲ ಮನೋಸ್ಥಿತಿ ಸಾಮಾಜಿಕರಲ್ಲಿ ಬಂದಾಗ ಮಾತ್ರ ಕಲೆ ಸರಕಾರದ ಆಶ್ರಯವಿಲ್ಲದೆಯೂ ಬದುಕಬಲ್ಲದೆಂಬ ವಿಶ್ವಾಸ ಮೂಡುತ್ತದೆ.

ಕಲೆ ನಿರಂತರ ಶೋಧದ ಸಂಗತಿ, ಹೊಸತನಕ್ಕೆ ನಿತ್ಯವೂ ನಮ್ಮನ್ನನುಗೊಳಿಸುವ ಸಂಗತಿ ಎಂಬರಿವು ಮೂಡಿದಾಗ ಕಲೆಯ ಪ್ರಯೋಜನ ಆನಂದದಲ್ಲಿ, ಪ್ರಶಸ್ತಿಯಲ್ಲಿಲ್ಲ ಎಂಬುದು ಅನುಭವಕ್ಕೆ ಬರುತ್ತದೆ. ವಿವರಣೆಗೆ ಸಿಗುವ ಶಾಸ್ತ್ರ ಕಲೆಯ ಶರೀರವೇ ವಿನಃ ಆತ್ಮವಲ್ಲ. ಆತ್ಮ ಅನಿರ್ವಚನೀಯವಾದ ಆನಂದವೇ ಆಗಿದೆ. ಅಂತಹ ಆತ್ಮೀಯತೆಗೆ ಹಂಬಲಿಸುವ ಸಹೃದಯನೇ ಕಲಾವಿದರ ಆಪ್ತ. ಅಂತಹ ಆಪ್ತವಲಯದ ವ್ಯಾಪ್ತಿ ನಮ್ಮ ಸಾಂಸ್ಕೃತಿಕ ಸಂಪತ್ತು. ಬದುಕಿನ ಕಷ್ಟಗಳು ಇದ್ದೇ ಇರುತ್ತದೆ. ಆ ಕಷ್ಟಗಳನ್ನು ಯಾಂತ್ರಿಕ, ತಾಂತ್ರಿಕ ಅನುಕೂಲಗಳಲ್ಲಿ ಗೆಲ್ಲಬಹುದೆಂಬ ಪ್ರಯತ್ನ ಆಧುನಿಕವೆನ್ನಿಸಿದರೂ ಮಾನವಿಕವೆನ್ನಿಸಲಾರದು. ಸಾಹಿತ್ಯ ಸಂಗೀತಗಳ ಸಾಂಗತ್ಯ ಆ ಕಷ್ಟಗಳನ್ನು ಗೆಲ್ಲುವ ಶಕ್ತಿಕೊಟ್ಟರೆ ಅದು ಅವಲಂಬನೆಯಿಲ್ಲದ ಆತ್ಮಶ್ರೀಯನ್ನು ಕಟ್ಟುತ್ತದೆ. ಕಲೆ ದುಬಾರಿಯಾಗಿದೆ, ಕಾರ್ಯಕ್ರಮದ ಖರ್ಚು ಹೆಚ್ಚಾಗಿದೆ ಎಂದು ಮಾರುಕಟ್ಟೆಯ ಭಾಷೆಯಲ್ಲಿ ಮಾತಾಡುವ ನಾವು ಒಂದು ಕಾರ್ಯಕ್ರಮದ ವಿಮರ್ಶೆಯಲ್ಲಿ ರಸಾನುಭವದ ದೃಷ್ಟಿಯಿಂದ ಹೊರಬಂದು ತಾರ್ಕಿಕ ಮಾನದಂಡಗಳಿಂದ ಕಲಾವಿದನ ತಾಂತ್ರಿಕ ಸಿದ್ಧಿಯನ್ನು ವಿಶ್ಲೇಷಿಸುತ್ತೇವೆ. ಎಲ್ಲ ಜೀವಗಳ ಅಂತರಂಗದ ಬಯಕೆಯಂತೆ ನಮ್ಮೆಲ್ಲರಿಗೂ ರಸಾನುಭವದ ಹಸಿವೆ ಇದ್ದರೂ ನಮ್ಮ ಅನುಭವವನ್ನು ವಾಚ್ಯವಾಗಿಸುವ ಆತುರದಲ್ಲಿ ಅಭಿಪ್ರಾಯಗಳಿಗೆ ಕಟ್ಟುಬೀಳುತ್ತೇವೆ. ಈ ಹಂತದಲ್ಲಿಯೇ ಕಲೆಯ ಆನಂದದ ವಿಷಯದಲ್ಲಿ ಭಾಗವತರಿಗೂ, ನಮ್ಮ ಯುವ ಪೀಳಿಗೆಗೂ ಜನರೇಶನ್ ಗ್ಯಾಪ್ ಕಾಣಿಸಿಕೊಳ್ಳುತ್ತದೆ. ಕಾಲದ ಓಟದಲ್ಲಿ ಕಲೆಯ ಆವರಣವನ್ನು ಬದಲಾಯಿಸಬಹುದು. ಆದರೆ ಆತ್ಮವನ್ನಲ್ಲ. ಭಾಗವತರಂತೆ ಅನುಭವವೇದ್ಯವಾದ, ಸಂವೇದನಶೀಲವಾದ ಕಲಾ ಸಂಸಾರವನ್ನು ಕಟ್ಟುವ ಸವಾಲು ನಮ್ಮ ಮುಂದಿದೆ. ಕಾವ್ಯ ಶಾಸ್ತ್ರಗಳ ವಿನೋದಕ್ಕೆ ಸಲ್ಲುವ ಯಕ್ಷಗಾನ ನಮ್ಮದಾಗಿದೆ. ರಸೈಕ ದೃಷ್ಟಿಯ ಬದುಕೊಂದು ಭಾಗವತರ ರೂಪದಲ್ಲಿ ನಮ್ಮ ಸಂಗಡ ಇದೆ. ಹೊಸ ತಿಳುವಳಿಕೆ, ಹೊಸ ಕನಸುಗಳು ಬದುಕಿನಲ್ಲಿ ಅನನ್ಯ ಕ್ಷಣಕ್ಕೆ ಹಾದಿಯಾಗಬೇಕಿದೆ.



# ನಾ ಕಂಡ ಶ್ರೇಷ್ಠ ಭಾಗವತ

**- ದುರ್ಗಪ್ಪ ಗುಡಿಗಾರ**

ಶಿರಸಿಯಲ್ಲಿ ನನ್ನ ಭಾವನ ಕಾರನ್ನು ಬಾಡಿಗೆಗೆ ಓಡಿಸುತ್ತಿದ್ದ ಕಾಲ. ನಾನು ಕಾರನ್ನು ಓಡಿಸುತ್ತಿದ್ದರೂ ತಲೆಯಲ್ಲಿ ತುಂಬಿರುವುದು ಯಕ್ಷಗಾನದ ಮದ್ದಲೆ ವಾದನ. ಅಲ್ಲಿ ಇಲ್ಲಿ ಕಾರ್ಯಕ್ರಮಗಳಿಗೂ ಮದ್ದಲೆ ಬಾರಿಸಲು ಹೋಗುತ್ತಿದ್ದೆ. ಯಾವುದೋ ಕಾರ್ಯಕ್ರಮದಲ್ಲಿ ಬಾಳೇಹದ್ದ ಭಾಗವತರ ಸಂಗತಿ ಗೊತ್ತಾಯಿತು. ಅಲ್ಲಿಂದ ತಡಮಾಡದೇ ಬಾಳೆಹದ್ದಕ್ಕೆ ಹೋದೆ. ಚಳಿಗಾಲದ ಅಡಿಕೆ ಕೊಯ್ಲಿನ ಸಮಯ. ಭಾಗವತರು ಅಡಿಕೆ ಸುಲಿಯುತ್ತಾ ಅಂಗಳದಲ್ಲಿ ಕುಳಿತಿದ್ದರು. ಪರಿಚಯವಿಲ್ಲದ ನನ್ನನ್ನು ಕಂಡು ನನ್ನನ್ನು ಪರಿಚಯ ಮಾಡಿಕೊಂಡರು. ನಾನು ಮದ್ದಲೆ ಬಾರಿಸುತ್ತೇನೆ ಎಂದು ಹೇಳಿಕೊಂಡರೂ ಎದ್ದು ಬರಲಿಲ್ಲ. ಅದಕ್ಕೆ ಕಾರಣವೂ ಅನಂತರ ನನಗೆ ಗೊತ್ತಾಯಿತು. ಅವರು ಗುರುಗಳು ಮತ್ತು ಖಾಯಂ ಸಾಥಿದಾರರಾಗಿದ್ದ ಕಂಪ್ಲಿ ಸುಬ್ರಾಯ ಹೆಗಡೆಯವರ ನಿಧನದ ದುಃಖದಲ್ಲಿದ್ದರು. ಅಂತಹ ಮದ್ದಲೆ ವಾದಕರೇ ಇನ್ನಿಲ್ಲದ ಮೇಲೆ ತನಗೆ ಕಾರ್ಯಕ್ರಮವೇ ಬೇಡ ಎಂಬ ಜಿಗುಪ್ಸೆಯಲ್ಲಿದ್ದರು. ನಾನು ಅವರ ಮನೆಯ ಜಗುಲಿಗೆ ಬಂದು ಅಲ್ಲಿ ಗೋಡೆಗೆ ನೇತಾಗಿಟ್ಟ ಮೃದಂಗವನ್ನು ತೆಗೆದು ಶೃತಿ ಮಾಡಿ ಒಂದು ನುಡಿತವನ್ನು ನುಡಿಸಿದ್ದೇ ತಡ ಸಂತೋಷದಿಂದ ಎದ್ದು ಬಂದು ಪದ್ಯ ಹೇಳುತ್ತೇನೆ ಮದ್ದಲೆ ಬಾರಿಸು ಎಂದರು. ಅಲ್ಲಿಂದ ಮುಂದೆ ಎಲ್ಲಿ ಕಾರ್ಯಕ್ರಮವಾದರೂ ನಮ್ಮಿಬ್ಬರದೇ ಜೋಡಿ. ನಂತರ ಸ್ವಲ್ಪ ವೇಳೆ ಸಿಕ್ಕಿದರೂ ನಾನು ಬಾಳೆಹದ್ದದಲ್ಲಿಯೇ ಇರುತ್ತಿದ್ದೆ. ಎಷ್ಟೇ ಹೊತ್ತಿಗೆ ಹೋದರೂ ನಗುಮುಖದಿಂದ ಸ್ವಾಗತಿಸುವ ಅಮ್ಮ (ಭಾಗವತರ ಪತ್ನಿ) ಊಟ ಉಪಚಾರಕ್ಕೆ ಯಾವಾಗಲೂ ಕೊರತೆ ಮಾಡುತ್ತಿರಲಿಲ್ಲ. ಸರಳ ಸಜ್ಜನಿಕೆಯ ಭಾಗವತರು. ಅಮ್ಮ , ಕಾಳೂ ಹೆಗಡೆ ಇವರನ್ನು ಈ ಜನ್ಮದಲ್ಲಿ ಮರೆಯುವುದು ಸಾಧ್ಯವಿಲ್ಲ.

ಮುಂದೆ ಇಂತಿಂಥ ಪ್ರಸಂಗಗಳ ಇಂತಿಂಥ ಪದ್ಯಗಳನ್ನು ಹೀಗೆಯೇ ಹೇಳಬೇಕು. ಈ ರಾಗ ಈ ತಾಳದಲ್ಲಿಯೇ ಹೇಳಿದರೆ ಚೆನ್ನಾಗಿರುತ್ತದೆ ಎಂದು ನಾವು ಚರ್ಚಿಸಿಕೊಂಡು ಹಾಗೆಯೇ ಪ್ರದರ್ಶನ ಕೊಡುತ್ತಿದ್ದೆವು. ಅದಕ್ಕೆ ಒಳ್ಳೆಯ ಪ್ರಚಾರವೂ ಬಂತು. ಇಂದಿಗೂ ಆದಿತಾಳ ಮತ್ತು ಅಷ್ಟತಾಳದ ಪದ್ಯಗಳನ್ನು ಕೇಳುವಾಗ ಬಾಳೆಹದ್ದದ ಭಾಗವತರ ಲಯ ಮತ್ತು ಇಡೀ ಆವರ್ತದ ಪೆಟ್ಟುಗಳು ಯಾರಲ್ಲೂ ಕಂಡು ಬರುವುದಿಲ್ಲ. ಇದು ಅವರ ವೈಶಿಷ್ಟ್ಯ. ಬೇರೆ ತಾಳಗಳಲ್ಲಿಯೂ ಅವರ ಕಲಾತ್ಮಕತೆ ಇಲ್ಲವೆಂದಲ್ಲ. ಆದರೂ ಇವೆರಡು ತಾಳಗಳ ವೈಶಿಷ್ಟ್ಯವೇ ಬೇರೆ. ಈಗಲೂ ಅವರ ಭಾಗವತಿಕೆಗೆ ಸಾಥ್ ನೀಡುವಾಗಿನ ಖುಷಿ ಬೇರೆ ಭಾಗವತರಲ್ಲಿ ಸಿಗುವುದು ಅಪರೂಪ.

ಇನ್ನು ಅವರ ವ್ಯವಹಾರಿಕ ಬದುಕು ಕೂಡ ಅಷ್ಟೇ ಅಪ್ಯಾಯಮಾನ. ನನ್ನ ಕೈಗೆ



ಆರಾಮಿಲ್ಲದೇ ಮದ್ದಲೆ ಬಾರಿಸದ ಸ್ಥಿತಿಯಲ್ಲಿ ನಾನಿರುವಾಗ ನನ್ನ ಸಹಾಯಾರ್ಥ ಆಟಗಳನ್ನು ಮಾಡಿಸಿಯೋ , ಇಲ್ಲವೇ ಅವರೆ ಸ್ವಂತ ಹಣದಲ್ಲೊ ಬಹಳ ಸಹಾಯ ಮಾಡಿದ್ದಾರೆ. ನಾನು ಮೇಳದಲ್ಲಿರುವಾಗಲೂ ಇವೆಲ್ಲ ಆಗಾಗ ನೆನಪಿಗೆ ಬರುತ್ತಲೇ ಇರುತ್ತದೆ.

ಭಾಗವತರ ಪುತ್ರ ತಿಮ್ಮಪ್ಪನಿಗೆ ಅವನ 7 ನೇ ವರ್ಷದಲ್ಲಿಯೇ ಅವನ ಪದ್ಯಕ್ಕೆ ಮದ್ದಲೆ ಬಾರಿಸಿದವ ನಾನು. ಈಗ ಪ್ರಸಿದ್ಧ ಭಾಗವತನಾಗಿದ್ದಾನೆ. ಭಾಗವತರ 75 ನೇ ವರ್ಷದ ಅಭಿನಂದನಾ ಸಂದರ್ಭದಲ್ಲಿ ಅವರನ್ನು ನೆನಪಿಸಿಕೊಳ್ಳುವುದಕ್ಕೆ ಒಂದು ಅವಕಾಶ ಕೊಟ್ಟ ಸಂಯೋಜಕರಿಗೆ ವಂದನೆ.

## ಭಾಗವತರೊಬ್ಬ ವ್ಯಕ್ತಿ ಅಲ್ಲ ; ಶಕ್ತಿ

**- ನೆಬ್ಬೂರು ನಾರಾಯಣ ಭಾಗವತ**

ಸಹೃದಯಿಗಳೂ, ಗೌರವಾನ್ವಿತರೂ, ಸದ್ಗೃಹಸ್ಥರೂ ಆದ ಶ್ರೀ ಕೃಷ್ಣ ಭಾಗವತರು ನನ್ನ ಆತ್ಮೀಯ ಅಭಿಮಾನಿಗಳೂ, ಪ್ರಾಮಾಣಿಕರೂ ಎನ್ನುವುದು ನನ್ನ ಮನಃಪೂರ್ವಕ ಅನಿಸಿಕೆ. ನನ್ನ ತಂದೆಯವರ ಕಾಲದಿಂದಲೂ ಅವರ ಒಡನಾಟವಿದ್ದುದರಿಂದ ಇದು ನಾನು ಕಂಡ ಸತ್ಯ ಸಂಗತಿ. ಸಾಂಸ್ಕೃತಿಕವಾಗಿ , ವ್ಯವಹಾರಿಕವಾಗಿ, ಬೌದ್ಧಿಕವಾಗಿ ಉಪಕಾರಿಗಳಾಗಿ ಅನುಕಂಪದಿಂದ ನನ್ನನ್ನು ಸದಾ ಕಂಡ ಭಾಗವತರು ನನಗೆಂದೂ ಪೂಜ್ಯರು. ಅವರ ಮನೆಯ ಪ್ರತಿಯೊಬ್ಬರೂ ನನ್ನನ್ನು ಓರ್ವ ಸಹೋದರನಂತೆ ಕಂಡು, ಸದಾ ನನ್ನ ಹಿತವನ್ನೇ ಬಯಸಿದ ಹಿತಚಿಂತಕರು. ನನ್ನ ಕ್ಷೇತ್ರವಾದ ಯಕ್ಷಗಾನದಲ್ಲಿ ಅಪಾರ ತಜ್ಞತೆ ಹೊಂದಿದ ಭಾಗವತರು ರಾಗ-ತಾಳದ ಗತಿಯ ಕುರಿತು ತಿದ್ದಿ ಹೇಳಿದವರು. ನನ್ನ ಅವರ ಸಂಬಂಧ ಅವಿನಾ ಸಂಬಂಧ. ಅವರ ಮಗ ತಿಮ್ಮಪ್ಪನೂ ನನ್ನನ್ನು ಒಡಹುಟ್ಟಿದ ಅಣ್ಣನಂತೆ ಕಂಡು, ಕಷ್ಟಕಾರ್ಪಣ್ಯಕ್ಕೆ ಒದಗಿ ಅಪ್ಪನ ಮಾರ್ಗದಲ್ಲೇ ಸದಾ ನಡೆದ ಆತ್ಮೀಯ ಸಹೋದರ. ನನ್ನನ್ನು ಅವರ ಮನೆಯ ವ್ಯಕ್ತಿಯಂತೆ ಕಾಣುವ ಅವರ ಮನಸ್ಸನ್ನು ಅರಿತಾಗ ಇದು ನನ್ನ ಭಾಗ್ಯವೆಂತಲೇ ತಿಳಿದಿದ್ದೇನೆ.

ನಾನು ಯಕ್ಷಗಾನದಲ್ಲಿ ಭಾಗವತಿಕೆ ಮಾಡುವಾಗಿನಿಂದ ಹಾಲ್ಕಣಿ, ತುಡುಗುಣಿ ಅಲ್ಲದೇ ಇನ್ನೂ ಅನೇಕ ಕಡೆಗಳಲ್ಲಿ ಮಗನಿಗೆ ಹೇಳಿಕೊಡುವಂತೆ ನನಗೂ ಹೇಳಿ - ಕೇಳಿ ಸಂತೋಷಪಡುತ್ತಿದ್ದ ಶ್ರೀ ಕೃಷ್ಣ ಭಾಗವತರು ಸದ್ಭಾವನೆಯಿಂದ ನನ್ನ ಬಗ್ಗೆ ಸದಾ ಅಭಿಮಾನವಿಟ್ಟವರು. ಈ ಹುಡುಗ ಹೇಗಾದರೂ ಒಳ್ಳೆಯದಾಗಿ ಸಮಾಜದಲ್ಲಿ ಮನ್ನಣೆ ಪಡೆಯಲಿ ಎಂತ ಮನಸ್ವೀ ಬಯಸಿದ ಶ್ರೇಷ್ಠ ವ್ಯಕ್ತಿಗಳು ಭಾಗವತರು ಎಂಬುದರಲ್ಲಿ ಸಂದೇಹವೇ ಇಲ್ಲ. ಇಂಥ ವ್ಯಕ್ತಿ ನನ್ನ ಜೀವನದಲ್ಲಿ ನನಗೆ ಒಡನಾಡಿಗಳಾಗಿ ಸಿಕ್ಕಿದ್ದು ಯಾವ ಜನ್ಮದ ಭಾಗ್ಯವೋ, ಯಾವ ಜನ್ಮದ ಮೈತ್ರಿಯೋ ಅಂತ ಭಾವಿಸಿ, ಇನ್ನು ಮುಂದೂ ನನ್ನ ಅವರ ಸಂಬಂಧ ಇದೇ ರೀತಿ ಮುಂದುವರಿಯಲಿ ಅಂತ ಪ್ರಾರ್ಥಿಸಿ, ಇಂಥವರು ಒಬ್ಬ ವ್ಯಕ್ತಿ ಅಲ್ಲ ಶಕ್ತಿ! ಸದಾ ಸುಖ ಸಂತೋಷ ನೆಮ್ಮದಿಯಲ್ಲಿ ಅವರು ನೂರ್ಕಾಲ ಬಾಳಲಿ. ಅವರ ಕುಟುಂಬಕ್ಕೆ ಉತ್ತರೋತ್ತರ ಅಭಿವೃದ್ಧಿಯಾಗುವಲ್ಲಿ ನಾನು ನಂಬಿದ ಇಷ್ಟದೈವ ಶ್ರೀ ಇಡಗುಂಜಿ ಮಹಾಗಣಪತಿ ಅನುಗ್ರಹಿಸಲಿ ಎಂಬ ಪ್ರಾಮಾಣಿಕ ಬಯಕೆಯೊಂದಿಗೆ ಶ್ರೀ ಕೃಷ್ಣ ಭಾಗವತರಿಗೆ ವಂದಿಸುತ್ತೇನೆ.



# ಶ್ರುತಿಗೆ ನೀರೆರೆದವರು

**- ಶ್ರೀಪಾದ ಹೆಗಡೆ, ಕಾಂಪ್ಲಿ**

ಹದಿಹರಯದಲ್ಲಿಯೇ ಸರಿಗಮದ ಒಡನಾಟಕ್ಕೆ ಬಂದ ನನಗೆ ಸಂಗೀತಾಸಕ್ತರೇ ಸ್ನೇಹಿತರು, ಬಳಗ ಎನ್ನುವಂತಾಗಿತ್ತು. ಹಾಸಣಗಿ ಗಣಪತಿ ಭಟ್ಟರಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದಾಗ ಸಹಪಾಠಿಗಳಾದ ಹಿತ್ಲಳ್ಳಿಯ ವಿಘ್ನೇಶ್ವರ ಭಟ್ಟರೂ, ಜಿ. ಜಿ. ಹೆಗಡೆಯವರೂ ಆಪ್ತರು. ಗುರುಗಳು ಕಲಿಸಿದ್ದನ್ನು ಅಂದೇ ಕಲಿತು ಮುಂದಿನದಕ್ಕೆ ಅಣಿಯಾಗುವ ಉತ್ಸಾಹ. ನನ್ನ ಅಭ್ಯಾಸ ಹೆಚ್ಚಿನ ದಿನ ಹಿತ್ಲಳ್ಳಿಯ ಜಿ. ಜಿ. ಹೆಗಡೆಯವರ ಮನೆಯಲ್ಲಿ. ರಾತ್ರಿ ಊಟಮಾಡಿ ರಿಯಾಜಿಗೆ ಕುಳಿತರೆ ಬೆಳಗಿನ ಜಾವದವರೆಗೂ ಮುಂದುವರಿಯುತ್ತಿತ್ತು. ಹೊಟ್ಟೆಯ ಹಸಿವೆ ಅನೇಕ ಬಾರಿ ಇನ್ನು ಅಭ್ಯಾಸ ಸಾಕು ಎಂದಿದ್ದಿತ್ತು. ಆಪ್ತವಾದ ವಲಯ, ಅಭ್ಯಾಸದ ಉತ್ಸಾಹದ ನಡುವೆ ಅಧ್ಯಯನದ ಕನಸಿತ್ತೇ ಹೊರತು ಅಧ್ಯಾಪನದ ಆಸಕ್ತಿ ಇರಲಿಲ್ಲ. ಆದರೆ ಅಂತಹದೊಂದು ಅವಕಾಶ ಬಂತು. ಅದು ನನ್ನನ್ನು ಬಾಳೆಹದ್ದಕ್ಕೆ ಕರೆದೊಯ್ಯಿತು. ಬಾಳೆಹದ್ದ ಭಾಗವತರ ಕಿರಿಯ ಮಗಳು ಮಾದೇವಿಗೆ ಸಂಗೀತದ ಆರಂಭಿಕ ಪಾಠ ಹೇಳುತ್ತಿದ್ದ ಹಿತ್ಲಳ್ಳಿಯ ವಿಘ್ನೇಶ್ವರ ಭಟ್ಟರು 'ಶ್ರೀಪಾದ, ನೀನೇ ಪಾಠ ಹೇಳಿಬಿಡು' ಎಂದರು. ಹೀಗಾಗಿ ೧೯೭೪ ರಲ್ಲಿ ಬಾಳೆಹದ್ದ ಭಾಗವತರ ಸಂಪರ್ಕಕ್ಕೆ ಬಂದೆ.

'ಮಂಚಿಕೇರಿಯ ಸುತ್ತಮುತ್ತ ಸಂಗೀತದ ಸಂಬಂಧದಲ್ಲಿ ಯಾರೊಂದಿಗಾದರೂ ಚರ್ಚಿಸಬಹುದಾದರೆ ಅದು ಬಾಳೆಹದ್ದ ಭಾಗವತರೊಂದಿಗೆ ಮಾತ್ರ'' ಎಂದು ಆ ಕಾಲದಲ್ಲಿ ಹಾಸಣಗಿ ಗಣಪತಿ ಭಟ್ಟರು ಹೇಳಿದ್ದು ನೆನಪಿತ್ತು.ನಮ್ಮೂರಿನ ಸುತ್ತಮುತ್ತ ನಡೆಯುತ್ತಿದ್ದ ತಾಳಮದ್ದಳೆಗಳಲ್ಲಿ ರಾಗವಾಗಿ ಹಾಡುತ್ತಿದ್ದ ಭಾಗವತರ ಸುಂದರ ರೂಪವನ್ನು ಕಂಡಿದ್ದೆ, ಧ್ವನಿಯನ್ನು ಆಲಿಸಿದ್ದೆ. ಬಾಳೆಹದ್ದಕ್ಕೆ ನಡೆದುಕೊಂಡು ಹೋಗಿ ಅವರ ಮನೆಯಲ್ಲಿ ಆಗೀಗ ಉಳಿದು ಪಾಠ ಹೇಳುತ್ತಿದ್ದಾಗ ಭಾಗವತರ ಸಂಗೀತಾಸಕ್ತಿ, ಶ್ರದ್ಧೆ ಗಮನಕ್ಕೆ ಬಂದವು. ಭಾಗವತರ ಮನೆಯಲ್ಲಿ ಸಂಗೀತದ ಕುರಿತ ಪುಸ್ತಕಗಳ ರಾಶಿಯೇ ಇತ್ತು. ಆ ಸಂಬಂಧದ ಮಾತುಕತೆ, ಚರ್ಚೆ ನಿತ್ಯದ ಮಾತು. ಯಕ್ಷಗಾನದವರು ರಾಗದ ಕುರಿತು ಇಷ್ಟೆಲ್ಲ ಚಿಂತಿಸುತ್ತಾರೆ ಎಂದು ತಿಳಿದಿದ್ದು ಆವಾಗಲೇ. ಭಾಗವತರು ಶಾಸ್ತ್ರೀಯ ಸಂಗೀತದ ಅಭ್ಯಾಸಿಗಳೂ ತಲೆದೂಗುವಂತೆ ಭಾಗವತಿಕೆ ಮಾಡಬಲ್ಲವರು. ಸಾಹಿತ್ಯದ ಗುಣ ಸಂದರ್ಭದ ಅಗತ್ಯವನ್ನು ಮನಗಂಡು ರಾಗ ಸಂಯೋಜನೆ ಮಾಡುವ ಅವರ ಕ್ರಮ ಅನನ್ಯ. ಶುದ್ಧ ಸಾರಂಗ ರಾಗದಲ್ಲಿ 'ಜಲಜಮುಖಿಯರೆಲ್ಲ ಕೇಳಿರೆ....' ಎಂಬ ಹಾಡು, ಜಂಜೂಟಿ ರಾಗದಲ್ಲಿನ ''ಲೇಸು ಮಗನೆ ರಾಮ ವನಕೆ ಪೋಪನಾದರೆ...' ಎಂಬ ಹಾಡುಗಳು ನನ್ನ



ಕಿವಿಯಲ್ಲಿ ಆಗಾಗ ಅನುರಣಿಸುತ್ತವೆ. ನನ್ನ ಸುಗಮ ಸಂಗೀತದ ಹಾಡುಗಾರಿಕೆಯ ಮೇಲೆ ಭಾಗವತರ ಹಾಡಿನ ಪ್ರಭಾವ ಅಪಾರ. ಸಂಗೀತ ಸಂಯೋಜನೆ ಮಾಡುವಾಗ ಹಾಡಿನ ಪ್ರಬಂಧ ಧ್ವನಿಯನ್ನು ಹೇಳುವುದರ ಸಂಗಡ ಹಾಡಿನ ಪ್ರತಿ ಶಬ್ದಕ್ಕೂ ಇರುವ ಸ್ಥಾನವನ್ನು ಗುರುತಿಸುವುದಕ್ಕೆ ಭಾಗವತರು ಬಳಸುವ ಸೂತ್ರ ಇಂದಿಗೂ ಮಾರ್ಗದರ್ಶಕ. ಬಾಳೆಹದ್ದದಲ್ಲಿ ಆಗಾಗ ಭೇಟಿಯಾಗುತ್ತಿದ್ದ ಹೊಸ್ತೋಟ ಮಂಜುನಾಥ ಭಾಗವತರ ಸಲಹೆ - ಸೂಚನೆಗಳೂ ಸಾಹಿತ್ಯದ ಅರಿವಿಗೆ ನೆರವಾಗಿವೆ. ಸಾಹಿತ್ಯ ಶುದ್ಧಿಗೆ, ಸ್ವರದ ಬಳಕೆಯ ಸೂಕ್ಷ್ಮಕ್ಕೆ ಯಾವಾಗಲೂ ಬದ್ಧರಾಗಿರುವ ಭಾಗವತರ ರೀತಿ ಯಾವುದೇ ಹಾಡುಗಾರನಿಗೂ ಅನುಕರಣೀಯವಾದದ್ದು.

ಯಾವ ವಿಷಯದಲ್ಲಿಯೂ ನಿಷ್ಠುರವಾಗಿ ಮಾತಾಡಲಾರದ ಅವರು ಸಂಗೀತದ ವಿಷಯದಲ್ಲಿ ಜಗಳದವರೆಗೂ ಹೋಗಬಲ್ಲವರು. ಅದಕ್ಕೆ ಅವರ ಸಂಗೀತದ ಪ್ರೀತಿ ಕಾರಣವೇ ವಿನಃ ಸ್ವಭಾವ ದೋಷವಲ್ಲ.

ಭಾಗವತರ ಪಾಲಿಗೆ ಸಂಗೀತ ಯಾವಾಗಲೂ ಕಲಿಯುವ ಸಂಗತಿ. ಅವರ ನಲ್ವತ್ತರ ನಂತರ ಕರ್ನಾಟಕ ಸಂಗೀತದ ಅಭ್ಯಾಸಕ್ಕೆ ಅವರು ಆಯ್ದುಕೊಂಡಿದ್ದು ಪಿಟೀಲನ್ನು. ಸಂಗೀತ ವಿದ್ವಾಂಸರಾದ ಕೆ. ವಿ. ರಾಜಯ್ಯಂಗಾರರು ಶಿಕ್ಷಕರು. ಸುಮಾರಾಗಿ ಸಮವಯಸ್ಕರಾದ ಭಾಗವತರು ಶಿಷ್ಯರು. ಮಗಳು ನಾಗವೇಣಿಗೂ ಪಿಟೀಲಿನ ಪಾಠ. ದಿನಾ ಬೆಳಗಿನ ಜಾವದಲ್ಲಿ ಎದ್ದು ಸ್ವರಾಭ್ಯಾಸ ಮಾಡಲೇಬೇಕು: ಕಲಿಕೆಗೆ ಆಲಸ್ಯ ಸಲ್ಲ ಎಂಬುದನ್ನು ಬಲ್ಲರು. ಕಲಿಯುವ ಹಂಬಲವುಳ್ಳ ಯಾರಿಗೂ ಇಲ್ಲ ಎಂದವರಲ್ಲ. ಮನೆಯಲ್ಲಿಟ್ಟುಕೊಂಡು ಊಟವಿಕ್ಕಿ ಪಾಠ ಹೇಳಿದ್ದಾರೆ. ಸಂಗೀತದಲ್ಲಿ ಭಾಗವತರಿಗಿದ್ದ ಪ್ರೀತಿಯೇ ನನ್ನನ್ನಿಂದು ಹಾಡುಗಾರನನ್ನಾಗಿ ಮಾಡಿದೆ. ಮಾದೇವಿಗೆ ಪಾಠ ಹೇಳಲು ಹೋದ ನನಗೆ ನಾಗವೇಣಿ ಬದುಕಿನಲ್ಲಿ ಸಹಪಾಠಿಯಾದಳು ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಮಾವನಾದ ಭಾಗವತರು ತಂದೆಯಂತೆ ನನ್ನ ವಿದ್ಯೆಗೆ ಪ್ರೋತ್ಸಾಹ ಕೊಟ್ಟಿದ್ದು, ನಿಜದ ಅರ್ಥದಲ್ಲಿ ತೀರ್ಥಸ್ವರೂಪರಾದದ್ದು ಎಲ್ಲರಿಗೂ ತಿಳಿದ ವಿಷಯವಲ್ಲ. ಮದುವೆಯಾದ ವರ್ಷವೇ ಅಂದರೆ ೧೯೮೧ ರಲ್ಲಿ ಧಾರವಾಡದಲ್ಲಿಯೇ ಉಳಿದು ಡಾ. ಬಸವರಾಜ ರಾಜಗುರುಗಳಲ್ಲಿ ಅಧ್ಯಯನ ಮಾಡಬೇಕೆಂದು ನಾನು ಬಯಸಿದಾಗ ಅದಕ್ಕೆ ಒತ್ತಾಸೆಯಾಗಿ ನಿಂತವರು ಭಾಗವತರು. ಆ ಸಂದರ್ಭದಲ್ಲಿ ಅಂತಹದೊಂದು ಸಹಾಯ ಪ್ರೀತಿ ಒದಗಿಬರದಿದ್ದರೆ ನಾನಿಂದು ಈ ಸ್ಥಿತಿಗೆ ಬರುವುದು ಸಾಧ್ಯವಿರಲಿಲ್ಲ ಎಂಬುದನ್ನು ಕೃತಜ್ಞತೆಯಿಂದ ನೆನೆಯಲೇಬೇಕು. ಅಂತೆಯೇ ನನ್ನತ್ತೆಯ ಪ್ರೀತಿಯ ಸಹಾಯವನ್ನೂ ಕೂಡ.

ಭಾಗವತರ ಪ್ರೀತಿಗೆ ಎಲ್ಲೆಯೇ ಇಲ್ಲ. ಎದುರಿಗೆ ಬಂದ ಯಾರನ್ನೂ ಅಲಕ್ಷಿಸಿದ್ದು, ಅನಾದರ ಮಾಡಿದ್ದು ಇಲ್ಲ. ಎಲ್ಲ ರೀತಿಯ ಜನ ಅವರ ಮನೆಗೆ ಬರುತ್ತಾರೆ. ನಾವು ಗೆಳೆಯರೆಲ್ಲ ಸೇರಿದಾಗ



ತಮಾಷೆಗೆ ಹೇಳುವುದಿತ್ತು - 'ಸುತ್ತಲಿನ ಹತ್ತು ಹರದಾರಿಯಲ್ಲಿರುವ ಹುಚ್ಚರೆಲ್ಲ ಒಂದೇ ಕಡೆ ಸೇರುವುದಿದ್ದರೆ ಬಾಳೆಹದ್ದದಲ್ಲಿ ಮಾತ್ರ'' ಎಂದು. ಆ ಮಾತು ತಮಾಷೆಯಲ್ಲ. ಸುತ್ತಲಿನ ಪ್ರದೇಶದಲ್ಲಿ ಸಂಗೀತದ, ಸಾಹಿತ್ಯದ ಹುಚ್ಚು ಹತ್ತಿದ ಎಲ್ಲರೂ ಬಾಳೆಹದ್ದದಲ್ಲಿ ಸೇರಿಯೇ ಸೇರುತ್ತಿದ್ದರು. ಅವರ ಮನೆಗೆ ಬಂದ ಕಲಾವಿದರ ನಡುವೆ ಜಗಳವಿರಬಹುದು, ಮನಸ್ತಾಪವಿರಬಹುದು. ಆದರೆ ಭಾಗವತರಲ್ಲಿ ಎಲ್ಲರಿಗೂ ಪ್ರೀತಿ. ಹಂಚಿ ತಿನ್ನುವ ವಿಷಯದಲ್ಲಿ ಯಾವ ಸಿದ್ಧಾಂತವನ್ನು ಓದದೆಯೂ ಪರಂಪರೆಯನ್ನು ಪಾಲಿಸುತ್ತಲೇ ಬದುಕನ್ನು ಎಲ್ಲರೊಡನೆ ಹಂಚಿಕೊಂಡವರು ಭಾಗವತರು. ಶ್ರುತಿಯ ಪ್ರೀತಿಯಲ್ಲಿ ಅವರು ಎಲ್ಲರನ್ನೂ ಒಳಗೊಂಡಿದ್ದಾರೆ. ನನ್ನ ಶ್ರುತಿಯ ಪ್ರೀತಿಗೆ ನೀರೆರೆದು ಪೋಷಿಸಿದ್ದಾರೆ. ಬದುಕಿನ ಪ್ರೀತಿಗೆ ಧಾರೆ ಎರೆದು ಪಾಲಿಸಿದ್ದಾರೆ. ನೆರಳಿನಲ್ಲಿ ನಿಂತವರು ಮರದ ಋಣ ತೀರಿಸಲಾರರು ಎಂದೇ ಹೇಳಬೇಕು.

---

## ಯೋಗ್ಯತೆ

**ಕೊಳ್ಳುವವರಲ್ಲ ಈ**
**ಭಾಗವತ**
**ಕೊಡುವುದರಲ್ಲಿ ತೀರ**
**ಸಂಬಾವಿತ**

**ಇವರು ....**

**ರಾಗತಪಸ್ವಿ - ಗಾನ**
**ಯೋಗಿ**
**ಪದ್ಯ ಲಯಗಳ ಸಂ**
**ಯೋಗಿ**

**- 'ರಾಯ, ಶಿರಸಿ**

ಪುಟ ಪ್ರಾಯೋಜಕರು : **ಶ್ರೀ ಗಣಪತಿ ಶಿವರಾಮ ಹೆಗಡೆ, ಶಂಕರಗದ್ದೆ**



# ಬಟಾ ಬಯಲಿನ ಮಾಮರ

**- ಕಾಶ್ಯಪ ಪರ್ಣಕುಟಿ**

ಒಂದು ಕಾಲದಲ್ಲಿ ದಟ್ಟವಾದ ಕಾಡಿತ್ತು. ಈಗ ಎಲ್ಲ ಬೋಳಾಗಿದೆ. ಮರಗಳೇ ಕಡಿಮೆಯಾಗಿವೆ. ಗಾಳಿ ಹೆಚ್ಚಾಗಿದೆ. ಅಂತರ್ಜಲದ ಮಟ್ಟ ಕುಸಿದುಹೋಗಿದೆ. ಶಿವರಾತ್ರಿ ಬಂತೆಂದರೆ ಸಾಕು, ಹೊಳೆ ಹಳ್ಳಗಳೆಲ್ಲ ಬತ್ತಿ ಹೋಗಿ ಶಿವನ ಅಭಿಷೇಕಕ್ಕೂ ನೀರಿಲ್ಲದಂತಾಗುತ್ತಿದೆ. ಒಟ್ಟಾರೆ ಮಲೆನಾಡು ಕೂಡಾ ಬಯಲುನಾಡಿನಂತಾಗಿದೆ. ಕುರಚಲು ಗಿಡಮರಗಳು. ಅಲ್ಲೊಂದು ಇಲ್ಲೊಂದು ಮರಗಳಷ್ಟೆ! ಅಂಥ ನಾಡಿನಲ್ಲಿ ದೊಡ್ಡದಾದ ಮಾವಿನಮರ. ಮರದು ತುಂಬ ಪ್ರತಿವರ್ಷ ಹೂವು, ಕಾಯಿ ಹಣ್ಣುಗಳು. ಹಣ್ಣುಗಳಂತೂ ತುಂಬ ಸ್ವಾದಭರಿತ. ಮಲ್ಲಿಕಾ, ಆಪೂಸ್ ಯಾವುದೂ ಅದರ ಮುಂದೆ ನಿಲ್ಲಲಾರವು. ದಣಿದ ಪಥಿಕರಿಗೆ ತಂಪಾದ ನೆಳಲು, ಹಸಿದವರಿಗೆ ಸ್ವಾದಿಷ್ಟವಾದ ಹಣ್ಣುಗಳು, ಗಿಳಿ ಕೋಗಿಲೆಗಳಿಗೆ ಆಶ್ರಯ ತಾಣ. ಬಿದ್ದ ಮಳೆಯ ನೀರು ಇಂಗುವುದಿಲ್ಲ. ಇಂಥ ಮಾಮರದ ರಕ್ಷಣೆ ಅಗತ್ಯ. ಹೊಸ ಗಿಡಗಳನ್ನು ನೆಟ್ಟು ಬೆಳೆಸುವುದು ಅಗತ್ಯ; ಕರ್ತವ್ಯ ಕೂಡ. ಆಗದಿದ್ದಲ್ಲಿ ಈ ಮರವನ್ನು ಗುರುತಿಸಿ, ಗೌರವಿಸುವ ಕೆಲಸವನ್ನಾದರೂ ಸಮಾಜ ಮಾಡಬೇಕು. ಇಲ್ಲದಿದ್ದರೆ ಸಮಾಜವೇ ಅಸ್ತಿತ್ವಹೀನ.

ಮಾವಿನ ಮರಕ್ಕೆ ಈಗ ವಯಸ್ಸಾಗಿದೆ. ಕಾಲ ಯಾವುದನ್ನೂ ಶಾಶ್ವತವಾಗಿಡುವುದಿಲ್ಲ. ಎಲ್ಲವೂ ಕಾಲವಶವಾಗಲೇಬೇಕು. ಕಾಲವನ್ನು ಗುರುತಿಸುವುದು ಕರ್ಮದಿಂದ. ಕರ್ಮದ ದಾಖಲೆಯಾಗುವುದಕ್ಕೆ ಚಾರಿತ್ರಿಕ ಮಹತ್ವ. ಅದೇ ನಿಜವಾಗಿಯೂ ಕಾಲದ ಚರಿತ್ರೆ. ಅದು ನಮ್ಮೆಲ್ಲರ ಕರ್ತವ್ಯ.

ನಮ್ಮ ಜಿಲ್ಲೆ ನಿಜಕ್ಕೂ ಬರಡು. ನರ ಸತ್ತವರೇ ಇಲ್ಲಿ ಹೆಚ್ಚು. ಪ್ರತಿಭಾವಂತರ ಜಿಲ್ಲೆಯೆಂಬ ಹೆಮ್ಮೆ ಇದೆ. ಆದರೆ ಇಂಥ ವ್ಯಕ್ತಿಗಳ ಕುರಿತು ಸಾರ್ವಜನಿಕವಾಗಿ ಗುರುತಿಸುವ, ದಾಖಲಿಸುವ ಕೆಲಸ ಮಾಡುವುದು ವಿರಳ. ಅದೇ ನಮ್ಮ ದೌರ್ಬಲ್ಯ; ದೌರ್ಭಾಗ್ಯ ಕೂಡ.

ಬಾಳೆಹದ್ದ ಕೃಷ್ಣ ಭಾಗವತರೆ ಯಕ್ಷಗಾನ ಕಲೆಯ ಮಣ್ಣಿನ ನಾಡಿನಲ್ಲಿ ಬೆಳೆದು ನಿಂತ ಬೃಹತ್ ಮಾಮರ. ಬಾಳೆಹದ್ದ ಎಂಬ ಊರು ಕೂಡ ಈಗ ಅರೆಮಲೆನಾಡು. ನಿತ್ಯ ಹರಿದ್ವರ್ಣದ ನಾಡಿನಲ್ಲೀಗ ನೀರಿಗೆ ಬರ. ಯಕ್ಷಗಾನದ, ತಾಳಮದ್ದಳೆಯ ಅಬ್ಬರಕ್ಕೆ ಬದಲಾಗಿ ಡೋಲು, ತಾಳಗಳ ಧ್ವನಿ. ಆದರೂ ಕೃಷ್ಣ ಭಾಗವತರಂಥ ಮಾಮರಗಳಿವೆ. ತಮ್ಮದೇ ಕುಡಿಯನ್ನು ಜೋಪಾನವಾಗಿ ಬೆಳೆಸಿವೆ. ಮಗ ತಿಮ್ಮಪ್ಪ ಕೂಡ ಅಪ್ಪನ ಎತ್ತರಕ್ಕೇರುವ ದಾರಿಯಲ್ಲಿರುವುದು ಮಹತ್ವದ ಸಂಗತಿ.

ಪುಟ ಪ್ರಾಯೋಜಕರು : **ಶ್ರೀ ಸದಾಶಿವ ಲಕ್ಷ್ಮೀನಾರಾಯಣ ಭಟ್ಟ, ಚಿಕ್ಕೊತ್ತಿ**



ಯಕ್ಷಗಾನ ಕಲೆ ಇಂದು ಜೀವನೋಪಾಯದ ವೃತ್ತಿ. ಬದುಕಲು ಅದೊಂದು ದಂಧೆ. ಸೇವೆಯಾಗಿ ಉಳಿದಿಲ್ಲ. ಬರೀ ಸೇವೆ, ಹವ್ಯಾಸ, ಚಟವಾಗಿದ್ದ ಕಾಲದಲ್ಲೇ ಅಪ್ರತಿಮ ಭಾಗವತರಾಗಿ ಕಲೆಯನ್ನು ಬೆಳೆಸಿದವರು. ಚಿಕ್ಕಾಸಿನ ಪ್ರತಿಫಲವನ್ನೂ ಪಡೆದವರಲ್ಲ. ಅವರದು ನಿಜವಾದ ಅರ್ಥದಲ್ಲಿ ನಿಷ್ಕಾಮಕರ್ಮ. ಫಲವನ್ನೂ ಸಮಾಜಕ್ಕೇ ನೀಡಿದ ಉದಾತ್ತ ವ್ಯಕ್ತಿ.

ಯಕ್ಷಗಾನ ಸಾಹಿತ್ಯದಲ್ಲಿ ನೂರಾರು ರಾಗಗಳಿವೆ. ಒಂದು ರಾಗದ ಪದಬಂಧ ನೋಡಿ ಅದರಂತೆ ಎಲ್ಲ ಕವಿಗಳೂ ರಚಿಸಿದರು. ಯಾರಿಗೂ ಯಾವ ರಾಗವನ್ನೂ ಹಾಡಿ ಗೊತ್ತಿಲ್ಲ. ಎಲ್ಲ ಭಾಗವತರಿಗೂ ಹತ್ತಾರು ರಾಗಗಳಷ್ಟೇ ಗೊತ್ತು.ಕೃಷ್ಣ ಭಾಗವತರು ಜೀವಮಾನವಿಡೀ ಮಾಡಿದ್ದು ಅಂಥ ರಾಗಗಳ ಅಸ್ತಿತ್ವದ ಅನ್ವೇಷಣೆ. ಯಕ್ಷಗಾನದಲ್ಲಿ ಯಶಸ್ವಿಯಾಗಿ ಬಳಸಲು ಯೋಗ್ಯವಾಗಿಸಿದ್ದು ಅದ್ಭುತ ಸಾಧನೆ. ಯಕ್ಷಗಾನದ ಪದ್ಯಗಳಿಗೆ ಬರೀ ರಾಗ ಮುಖ್ಯವಲ್ಲ. ಮಟ್ಟು, ಭಾವಗಳೂ ಮುಖ್ಯ. ಪದ್ಯದ ಭಾವಕ್ಕೆ ಧಕ್ಕೆಯಾಗದಂತೆ, ಪೂರಕವಾಗುವಂತೆ ಜೋಡಿಸಿ ಭಾವಪೂರ್ಣವಾಗಿ ಹಾಡುವುದು ಅವರ ವಿಶೇಷತೆ. ನೀರಸ ಅರ್ಥಧಾರಿ ಕೂಡ ಭಾವಕ್ಕೆ ಒಳಗಾಗುವಂತೆ ಮಾಡುವುದು ಅವರ ಕೌಶಲ್ಯ. 'ಯೋಗಃ ಕರ್ಮಸು ಕೌಶಲಂ'' ಎನ್ನುವಂತೆ ಭಾಗವತರು ನಿಜವಾದ ಯೋಗಿ, ರಸಋಷಿ.

ಯಕ್ಷಗಾನದಲ್ಲಿ ದೊಡ್ಡ ಹೆಸರನ್ನು ಮಾಡಿದ ಭಾಗವತರು ಬಹಳಷ್ಟು ಜನರಿದ್ದಾರೆ. ಅಪಾರವಾದ ಗಳಿಕೆಯನ್ನೂ ಅವರು ಮಾಡಿರಬಹುದು. ಆದರೆ ಮನೆಯ ಗಳಿಕೆಯನ್ನೇ ವ್ಯಯಿಸಿ ಕಲೆಗಾಗಿ ದುಡಿದವರು ಕೃಷ್ಣ ಭಾಗವತರು ಮಾತ್ರ. ಅನೇಕ ಭಾಗವತರನ್ನು, ಮದ್ದಳೆಕಾರರನ್ನು ಸಿದ್ಧಗೊಳಿಸಿದವರು. ಹೆಸರಾಂತ ಭಾಗವತರೆಲ್ಲ ಇವರಿಂದಲೇ ಕೆಲವಷ್ಟು ಪಡೆದವರು. ಅಂಥ ಘನ ವ್ಯಕ್ತಿತ್ವ ಬಾಳೆಹದ್ದ ಭಾಗವತರದ್ದು. ನಿಜಕ್ಕೂ ಇವರೊಂದು ಯಕ್ಷಗಾನ ಪ್ರಪಂಚದಲ್ಲಿ ದೊಡ್ಡ ಮಾಮರ.

ಕೃಷ್ಣಭಾಗವತರಿಗೆ ಬದುಕಿನ ರಮ್ಯ ಮುಖ ಮಾತ್ರ ಗೊತ್ತು. ರೌದ್ರ ಮುಖವಿದೆ ಎನ್ನುವುದೇ ಅವರಿಗೆ ತಿಳಿದಿಲ್ಲ. ಕೆಟ್ಟವರು, ದುಷ್ಟರು ಎಂಬ ಶಬ್ದಗಳು ಅವರ ಕೋಶದಲ್ಲೇ ಇಲ್ಲ. ಎಲ್ಲರೊಡನೆಯೂ ಆತ್ಮೀಯ ಸಂಬಂಧ; ಆಪ್ತವಾದ ನಡವಳಿಕೆ. ಯಕ್ಷಗಾನದ ಹಿಮ್ಮೇಳ ಕಲಿಯಬೇಕೆನ್ನುವವರಿಗೆಲ್ಲ ತಮ್ಮ ಮನೆಯಲ್ಲಿಯೇ ಆಶ್ರಯ ನೀಡಿ ಕಲಿಸಿದವರು. ಪ್ರತಿಫಲವನ್ನಂತೂ ಪಡೆದವರೇ ಅಲ್ಲ. ಮದ್ದಳೆ ಬಾರಿಸಲು ಬಾರದೆ, ಕೇವಲ ಬಡಿಯುವವನಾದರೂ ಸರಿ, ಖುಶಿಯಿಂದ ಭಾಗವತಿಕೆ ಮಾಡಿದವರು. ತುಂಬ ಜನರಿರಬೇಕು, ದೊಡ್ಡ ಸಭೆಯಾಗಬೇಕು, ಹೆಸರಾಂತ ಮದ್ದಳೆಕಾರ ಬೇಕು ಎಂದು ಬಯಸಿದವರೇ ಅಲ್ಲ. ಅದೆಲ್ಲ ಅವರಿಗೆ ಗೊತ್ತೇ ಇಲ್ಲ. ತಮ್ಮ ಖುಶಿಗೆ ಹಾಡಿದರು. ಕೇಳುಗರ ಹೃದಯ ತುಂಬಿದರು.

ಮಾಮರಕ್ಕೆ ಚೂತ ಎಂಬ ಹೆಸರಿದೆ. ಮನ್ಮಥನ ಪಂಚ ಬಾಣಗಳಲ್ಲಿ ಮೂರನೆಯ ಬಾಣದ


## ಭಾಗವತ ಕುಟುಂಬ



ಕುಳಿತವರು : ಮಗ ತಿಮ್ಮಪ್ಪ ಮತ್ತು ಸೊಸೆ ಶಾರದಾಳೊಂದಿಗೆ ಭಾಗವತ ದಂಪತಿಗಳು
ನಿಂತವರು : ಬಲದಿಂದ ಎಡಕ್ಕೆ : ಶ್ರೀಪಾದ ಹೆಗಡೆ, ಕಂಪ್ಲಿ (ಅಳಿಯ),
ನಾಗವೇಣಿ ಶ್ರೀಪಾದ (ಮಗಳು), ಮಹಾದೇವಿ ವೆಂಕಟ್ರಮಣ (ಮಗಳು) ಮತ್ತು
ವೆಂಕಟ್ರಮಣ ಹೆಗಡೆ, ಜಾಲಿಮನೆ (ಅಳಿಯ) ಹಾಗೂ ಮೊಮ್ಮಕ್ಕಳು



ಮೊಮ್ಮಕ್ಕಳಿಗೆ ಪಾಠವೋ ? ಸ್ವಂತ ಅಧ್ಯಯನವೋ ?



ಸ್ವರ್ಣವಲ್ಲೀ ಶ್ರೀ ಶ್ರೀಗಳವರಿಂದ
'ಯಕ್ಷಗಾನ ಜ್ಞಾನನಿಧಿ' ಪ್ರಶಸ್ತಿ ಸ್ವೀಕರಿಸುತ್ತಿರುವ ಭಾಗವತರು



ಸ್ವರ್ಣವಲ್ಲೀ ಶ್ರೀ ಶ್ರೀಗಳವರಿಂದ
ಶ್ರೀಮಠದಲ್ಲಿ ಸನ್ಮಾನ ಸ್ವೀಕರಿಸುತ್ತಿರುವ ಭಾಗವತ ದಂಪತಿಗಳು




ಡಿ.ವಿ.ಜಿ. ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಹಾಡುತ್ತಿರುವ ಭಾಗವತರು

ಮೃದಂಗ : ಕಿನ್ನೀರು ನಾರಾಯಣ ಹೆಗಡೆ

ಎಡಕ್ಕೆ : ಕೆರೆಮನೆ ಮಹಾಬಲ ಹೆಗಡೆ



ಕೃಷಿಕ ಭಾಗವತರು



ಉಭಯ ಕುಶಲೋಪರಿಯಲ್ಲ.....
ಯಕ್ಷಪ್ರಪಂಚದ ಕುರಿತು ಗಂಭೀರ ಚಿಂತನೆಯಲ್ಲಿ.




ರೋಟರಿ ಗ್ರಾಮದಳ ಉಮಚಗಿ ಇವರ
ಕಾರ್ಯಕ್ರಮದಲ್ಲಿ ಹಾಡುಗಾರಿಕೆ



ಹೆಸರೂ ಕೂಡ ಚೂತ. ಅದರ ಪ್ರಯೋಗವಾದರೆ ಎಂಥವನಾದರೂ ಮೋಹವಶನಾಗಲೇಬೇಕು. ಭಾಗವತರ ಹಾಡುಗಾರಿಕೆ ಕೂಡ ಹಾಗೆ! ಎಂಥ ಅರಸಿಕನೇ ಆಗಿರಲಿ, ಯಕ್ಷಗಾನದ ಗಂಧವೇ ಇಲ್ಲದವನಾಗಿರಲಿ ಬಾಳೆಹದ್ದ ಭಾಗವತರ ಹಾಡಿನ ಮೋಡಿಗೆ ಒಳಗಾಗದೇ ಇರಲು ಸಾಧ್ಯವಿಲ್ಲ. ಕಿವಿಗಳಿದ್ದರೆ ಸಾಕು, ಅವರ ಹಾಡು ಹೃದಯಕ್ಕೇ ನೇರವಾಗಿ ತಟ್ಟುತ್ತದೆ. ಬುದ್ಧಿಯ ಬಲದಿಂದ ವ್ಯಾಖ್ಯಾನ ಮಾಡಿ ತಿಳಿಸಬೇಕಾಗಿಲ್ಲ. ಭಾಗವತರ ಹಾಡಿಗೆ ವಿಮರ್ಶೆಯ ಅಗತ್ಯವೇ ಇಲ್ಲ. ಬುದ್ಧಿಗೆ ಎಟಕುವ ಹಾಡಿಗೆ ಮಾತ್ರ ವಿಮರ್ಶೆಯ, ವ್ಯಾಖ್ಯಾನದ ಅಗತ್ಯ.

ಭಾಗವತರು ಸಹೃದಯಿಗಳು, ಮಾನವೀಯ ಮೌಲ್ಯಗಳೆಲ್ಲ ಒಟ್ಟಾಗಿ ರೂಪಿಸಲ್ಪಟ್ಟವರು. ಬದುಕಿನ ರಮಣೀಯ ಮುಖವನ್ನಷ್ಟೇ ಕಾಣುತ್ತ, ತಮ್ಮದೇ ಭಾವ ಪ್ರಪಂಚದಲ್ಲಿ ನೆಮ್ಮದಿಯಾಗಿರುವವರು. ನೀರೊಳಗಿದ್ದೂ ನೀರಿಗೆ ತಾಗದ ತಾವರೆಯೆಲೆಯಂತೆ ಎಂದು ಗೀತಾಚಾರ್ಯ ಹೇಳಿದ ಬದುಕು ಅವರದು. ತುಂಬು ಕುಟುಂಬದ ಸಂತೃಪ್ತ ಜೀವಿ ಅವರು. ಇನ್ನೂ ಅನೇಕ ವರ್ಷಗಳ ಕಾಲ ಯಕ್ಷಗಾನಕ್ಕೆ ನಿರ್ದೇಶನ ನೀಡಿದರೆ ಬರಡಾಗಿರುವ ನೆಲ ಹಸಿರಾಗಬಹುದು. ಇನ್ನಷ್ಟು ಮಾಮರಗಳೇಳಬಹುದು. ಮತ್ತೊಮ್ಮೆ ನಿತ್ಯ ಹರಿದ್ವರ್ಣದ ಕಾಡು ಕಂಗೊಳಿಸಬಹುದು. ಅವರ ಶುಭಾಶೀರ್ವಾದ ಸದಾ ಇರಲೆಂದು ಆಶಿಸುತ್ತ ಅವರ ಪಾದ ಪದ್ಮಗಳಿಗೆ ಈ ಪುಟ್ಟ ಬರಹದ ಅರ್ಪಣೆ.

---

## ಭಾಗವತರಿಗೆ....

ಎಲೆ ಅಡಿಕೆ ಬೆಸೆದ
ಸಂಗಾತಿ
ಶೈಲಿ ಲಯಗಳ ಬಗೆಗೆ
ಸಂಪ್ರೀತಿ

**ಬಾಳೇ ಹ (ಹೊ) ದ್ದ**

ಸಿದ್ಧ, ಶುದ್ಧ ಬಾಳನು
ಹೊದ್ದ
ಭಾಗವತ ಮಹಾಶಯ ಬಾಳೆ
ಹದ್ದ

– 'ರಾಯ, ಶಿರಸಿ

---

ಪುಟ ಪ್ರಾಯೋಜಕರು : **ಶ್ರೀ ಶಂಭು ಗಣಪತಿ ಹೆಗಡೆ, ಮುಳಕನಜಡ್ಡಿ**



# ಯಕ್ಷಗಾನದ ಹಿಮ್ಮೇಳ

**ಡಾ|| ವಿಜಯನಳಿನಿ ರಮೇಶ, ಶಿರಸಿ**

ಜಾಗತೀಕರಣದ ಕಾವು ವಾಣಿಜ್ಯ , ಕೃಷಿ , ಶಿಕ್ಷಣ, ತಂತ್ರಜ್ಞಾನ ಮುಂತಾಗಿ ನಮ್ಮ ಬದುಕಿನ ಹಲವು ರಂಗಗಳನ್ನು ತಟ್ಟಿದ ಹಾಗೇ ನಮ್ಮ ನೆಲದ ಕಲೆಗಳನ್ನೆಲ್ಲ ಒಳಗೊಂಡ ಸಾಂಸ್ಕೃತಿಕ ರಂಗವನ್ನು ಸಹ ತಟ್ಟಿ ಅಲ್ಲಾಡಿಸುತ್ತಿರುವ ಸತ್ಯದ ಅರಿವು ನಮಗೆಲ್ಲರಿಗೂ ಇದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಪ್ರಾದೇಶಿಕ ಕಲೆಗಳು, ಕೌಶಲಗಳು, ಜಾನಪದ - ಮುಂತಾದವೆಲ್ಲವೂ ಜಾಗತೀಕರಣದ ಬಿರುಗಾಳಿಯಲ್ಲಿ ಹಾರಿ ಹೋಗುವ ಅಪಾಯವಿದೆಯೆಂಬುದು ಎಷ್ಟು ಸತ್ಯವೋ ಅಷ್ಟೇ ಸತ್ಯವಾದ ಇನ್ನೊಂದು ಸಂಗತಿಯಿದೆ. ಅದೆಂದರೆ - ನಮ್ಮ ಸಶಕ್ತವಾದ ಕೆಲವು ಕಲೆಗಳನ್ನು ಪರಿಷ್ಕರಿಸಿ ಅದರೆಲ್ಲ ಸತ್ತ್ವ , ಸಾಮರ್ಥ್ಯಗಳೊಂದಿಗೆ ಪರಿಸ್ಫುಟಗೊಳಿಸುವಂತೆ ಮಾಡಿ ನಮ್ಮ ಮೇಲೆ ದಾಳಿ ಮಾಡುತ್ತಿರುವ ಕಲೆಗಳ ಎದುರಿನಲ್ಲಿ ನಿಲ್ಲಿಸಿ - ಕಣ್ಣು ಕುಕ್ಕುವಂತೆ ಮಾಡಬಹುದು. ಜಗತ್ತು ಮೆಚ್ಚುವಂತೆ ಸಾಧಿಸಬಹುದು. ಹಾಗೆ ಕಣ್ಣು ಕುಕ್ಕಿಸುವ ಮೆಚ್ಚುಗೆಗೆ ಪಾತ್ರವಾಗುವ ಶಕ್ತಿ ಯಕ್ಷಗಾನಕ್ಕಿದೆ. ಆದರೆ ಶೈಲೀಕೃತವಾದ ಈ ರಮ್ಯಾದ್ಭುತ ಕಲೆಯನ್ನು ಮೊದಲು ಈ ನೆಲದ ಮಕ್ಕಳಿಗೇ ಪ್ರಿಯವಾಗುವಂತೆ ಆಕರ್ಷಕವಾಗುವಂತೆ ಶಿಥಿಲವಾಗುತ್ತಿರುವ ಅದರ ಅಂಗಾಂಗಗಳನ್ನು ಬಿಗಿಗೊಳಿಸಿ ಬಂಧದ ಕಲಾತ್ಮಕತೆಯನ್ನು ಪುನರ್ನಿಮಿಸಬೇಕಾಗಿದೆ. ಕೇವಲ ಚಪ್ಪಾಳೆಗಾಗಿ , ಟಿಕೇಟು ಮಾರಾಟಕ್ಕಾಗಿ ಅಥವಾ ಅಸಡ್ಡೆ, ಅಲಕ್ಷ್ಯಗಳಿಂದಾಗಿ, ಇಲ್ಲವೇ ವ್ಯಕ್ತಿ ಪ್ರತಿಷ್ಠೆಯೆಂದಾಗಿ ಒಟ್ಟಿನಲ್ಲಿ ಕಾರಣಾಂತರಗಳಿಂದ ಅಡ್ಡಾದಿಡ್ಡಿಯಾಗಿ ಹೋಗಿರುವ ಸ್ವರೂಪವನ್ನು ವ್ಯವಸ್ಥಿತಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಥಮ ಮತ್ತು ಪ್ರಧಾನ ಪ್ರಯತ್ನ ನಡೆಯಬೇಕಾಗಿರುವುದು ಹಿಮ್ಮೇಳದಲ್ಲಿ.

ಯಕ್ಷಗಾನ 'ಆಟ' ಅಥವಾ 'ತಾಳಮದ್ದಲೆ ' - ಅದೊಂದು ಮೇಳಕ್ರಿಯೆ. (Teamwork) ಈ ಒಂದು ಪೂರ್ಣ 'ಮೇಳ' ವನ್ನು ಹಿಮ್ಮೇಳ ಮತ್ತು ಮುಮ್ಮೇಳವೆಂದು ವಿಭಾಗಿಸಲಾಗುತ್ತದೆ. 'ಆಟ' ದ ಮುಮ್ಮೇಳವು ವೇಷ - ಭೂಷಣ, ಮುಖ ವರ್ಣಿಕೆ, ನೃತ್ಯ , ರಂಗತಂತ್ರಗಳು, ಸಂಭಾಷಣೆ ಮತ್ತು ಅಭಿನಯಗಳಿಂದ ಕೂಡಿರುವುದಾದರೆ ತಾಳಮದ್ದಳೆಯ ಮುಮ್ಮೇಳದಲ್ಲಿ ವಾಚಿಕಾಭಿನಯ ಹಾಗೂ ಕೆಲಮಟ್ಟಿಗೆ ಸಾತ್ವಿಕಾಭಿನಯ ಹಾಗೂ ಕೈಗಳ ಅಭಿನಯ (ಹಸ್ತಾಭಿನಯವೆಂಬ ಪಾರಿಭಾಷಿಕ ಪದವನ್ನು ಇಲ್ಲಿ ಬಳಸುವಂತಿಲ್ಲ ) ಇರುತ್ತವೆ. ಪ್ರಸ್ತುತ ನಮ್ಮ ವಿವೇಚನೆಗೆ ಒಳಗಾಗಿರುವ ಹಿಮ್ಮೇಳವು ಯಕ್ಷಗಾನ 'ಆಟ' ಮತ್ತು 'ತಾಳಮದ್ದಳೆ'ಗಳೆಲ್ಲ ಮೇಲ್ನೋಟಕ್ಕೆ ಒಂದೇ ಬಗೆಯದಾಗಿದ್ದರೂ ಈ ಎರಡೂ ಕಡೆ ಅದರ ಉದ್ದೇಶ, ಪರಿಣಾಮಗಳೆಲ್ಲ



ಪ್ರತ್ಯೇಕವಾಗಿರುತ್ತವೆ. ಮುಮ್ಮೇಳವನ್ನು ಕಾಣಿಸಿಕೊಡುವವರು, ಮುಮ್ಮೇಳದ ಕ್ರಿಯೆಗೆ ಕಾರಣರಾಗುವವರು, ಮುಮ್ಮೇಳವನ್ನು ನಿಯಂತ್ರಿಸುವವರು ಇಡೀ 'ಮೇಳ'ದ ಪರಿಣಾಮಕ್ಕೆ ಕಾರಣರಾಗುವವರು ಹಿಮ್ಮೇಳದವರು. ಈ ಹಿಮ್ಮೇಳದ ಪ್ರಧಾನ ಭಾಗ ಮಾತ್ರವಲ್ಲ, ಇಡೀ ಮೇಳದ ಕೇಂದ್ರ, ಇಡೀ ಮೇಳದ ನಿಯಂತ್ರಕ, ಸೂತ್ರಧಾರ, ನಿರ್ದೇಶಕ - ಭಾಗವತ. ಆದ್ದರಿಂದಲೇ 'ಆಟ'ದಲ್ಲಿ ಇವನನ್ನು 'ಮೊದಲ ವೇಷ'ವೆಂದೇ ಗುರುತಿಸಲಾಗುವುದು.

ಅವನನ್ನು ಅನುಸರಿಸುವವರು ಅಥವಾ ಅವನಿಗೆ ಜೊತೆ ಕೊಡುವವರು ಚೆಂಡೆ ಮತ್ತು ಮದ್ದಲೆಯವರು. ಈ ವಾದಕರು ಭಾಗವತನಿಗೆ ಜೊತೆ ಕೊಡುವವರು ಮಾತ್ರವಲ್ಲ, 'ಆಟ'ದಲ್ಲಿ ನಡೆಯುವ ಘಟನೆಗಳನ್ನು 'ಕೇಳಿಸುವ' ಮೂಲಕ 'ಕಾಣಿಸು'ತ್ತಾರೆ. ಪ್ರಯಾಣ, ಜಲಕ್ರೀಡೆ, ಯುದ್ಧ, ಬೇಟೆ ಮುಂತಾದವುಗಳನ್ನೆಲ್ಲ 'ನುಡಿಸಿ' 'ತೋರಿಸು'ವರು. ತಾಳಮದ್ದಲೆಯಲ್ಲಂತೂ ರಂಗದ ಮೇಲೆ ನಡೆಯುವ ಕ್ರಿಯೆಯೆಲ್ಲ ಹಿಮ್ಮೇಳದವರಿಂದಲೇ ಸೂಚಿತವಾಗಬೇಕಾಗುತ್ತದೆ. ಎಷ್ಟೋ ಸಲ ರಂಗದ ಮೇಲೆ ಕಾಣುವ ಚಿತ್ರಕ್ಕಿಂತ ಹಿಮ್ಮೇಳ ಮೂಡಿಸುವ ಚಿತ್ರವೇ ಹೆಚ್ಚು ಆಕರ್ಷಕವಾಗಿರುತ್ತದೆ. ಚೆಂಡೆ ಆಟಕ್ಕೆ ಕಳೆ ಕೊಡುವ ವಾದನ, ವೀರರಸ ಪ್ರಧಾನವಾದ ಯಕ್ಷಗಾನದಲ್ಲಿ ಚೆಂಡೆಯ ಅಬ್ಬರವೇ ಒಂದು ಅದ್ಭುತವಾದ ಪರಿಣಾಮಕ್ಕೆ ಕಾರಣವಾಗುವಂತಹದು. ಆದರೆ ಹಿಂದೆ ಬಯಲಲ್ಲಿ ಆಟ ನಡೆಯುತ್ತಿದ್ದ ಕಾಲದಲ್ಲಿ ತಾರಸ್ಥಾಯಿಯಲ್ಲಿ ಭಾಗವತರು ಹಾಡುವುದು (?) ಹಾಗೂ ಅಬ್ಬರದಲ್ಲಿ ಚೆಂಡೆ ಬಾರಿಸುವುದು ರೂಢಿಯಲ್ಲಿತ್ತು. ಚೆಂಡೆ ಮದ್ದಳೆಗಳ ಆಬ್ಬರದಲ್ಲಿ ಭಾಗವತನ ಹಾಡು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಆ ವಾದನಗಳ ಶಬ್ದವನ್ನು ಮೀರಿ ಕೇಳಿಸಬೇಕೆಂದು ಭಾಗವತ ಕಿರುಚಬೇಕಾಗಿದ್ದ ಕಾರಣ ಭಾಗವತಿಕೆಯೆಂದರೆ ಏರು ದನಿಯಲ್ಲಿ 'ಕಿರುಚುವುದು' ಎಂದೇ ತಿಳಿಯಬೇಕಾದ ಪ್ರಸಂಗವಿತ್ತು. ಇದರಿಂದ ರಮ್ಯಾದ್ಭುತ ಸನ್ನಿವೇಶಗಳಿಗೇನೋ ಹೇಗೋ ಹೊಂದುತ್ತಿತ್ತು. ಆದರೆ ಕರುಣ, ಭಕ್ತಿ, ಆನಂದ - ಆವೇಶಗಳಲ್ಲಿ ಹಾಡನ್ನು ಮಂದ್ರಸ್ಥಾಯಿಯಲ್ಲಿ ಹಾಡುವುದಾಗಲೀ, ಚೆಂಡೆ ಮದ್ದಳೆಗಳನ್ನು ಆ ರೀತಿಯಲ್ಲಿ ನುಡಿಸುವುದಾಗಲೀ ರೂಢಿಯಲ್ಲಿರಲಿಲ್ಲ. ಡಾ॥ ಶಿವರಾಮ ಕಾರಂತರು ಹಲವಾರು ಶಿಬಿರಗಳನ್ನು ವಿಚಾರಗೋಷ್ಠಿಗಳನ್ನೂ ನಡೆಸಿ ಹಾಡಿನ ಹಾಗೂ ವಾದನಗಳ ಸಾಧ್ಯತೆಗಳನ್ನೆಲ್ಲ ವೈವಿಧ್ಯತೆಗಳನ್ನೆಲ್ಲ ಗುರುತಿಸಿದರು. ಚೆಂಡೆಮದ್ದಳೆಗಳನ್ನು ಸಹ ವೈವಿಧ್ಯಪೂರ್ಣ ಭಾವಗಳ ಅಭಿವ್ಯಕ್ತಿಯ ಪದ್ಯಗಳಿಗೆ ವೈವಿಧ್ಯಪೂರ್ಣವಾಗಿ ನುಡಿಸಲು ಸಾಧ್ಯವೆಂಬುದನ್ನು ತೋರಿಸಿದರು. ವಾಯಲಿನ್‌ನಂತಹ ವಾದ್ಯಗಳ ಉಪಯುಕ್ತತೆಯನ್ನು ಮನಗಾಣಿಸಿದ್ದಾರೆ. ಒಟ್ಟಿನಲ್ಲಿ ಏರು ಮದ್ದಲೆ - ಇಳಿಮದ್ದಲೆ ಮುಂತಾಗಿ ವೈವಿಧ್ಯಪೂರ್ಣ ಮದ್ದಲೆಗಳನ್ನು ಬಳಸಿ ಮದ್ದಲೆಯ ನುಡಿತ ಮಿಡಿತಗಳನ್ನು ಇನ್ನಷ್ಟು ಸೂಕ್ಷ್ಮಗೊಳಿಸಿ ಶೃಂಗಾರ - ಕರುಣ - ಮುಂತಾದ ಸೂಕ್ಷ್ಮ ಸಂವೇದನೆಗಳ ಅಭಿವ್ಯಕ್ತಿಗೆ ಈ ವಾದನಗಳು ಜೊತೆ ನೀಡುವಂತಾದರೆ



ಭಾಗವತಿಕೆಯ ಪರಿಣಾಮವೂ ರಮಣೀಯವಾಗುವುದು.

**ಭಾಗವತಿಕೆ :** ಇದೊಂದು ಬಹು ಚರ್ಚಿತವಾದ ಅಂಶವಾಗಿದೆ. ಡಾ॥ ಶಿವರಾಮ ಕಾರಂತರು ಯಕ್ಷಗಾನದಲ್ಲಿ 150 ರಾಗಗಳನ್ನು ಹೆಸರಿಸಿದ್ದಾರಾದರೂ '60 ರಾಗಗಳನ್ನು ಮಾತ್ರ ಗುರುತಿಸಿ ಧ್ವನಿ ಲೇಖಿಸುವುದು, ಸಂಚಾರ ತಿಳಿಸುವುದು ಸಾಧ್ಯವಾಯಿತು' ಎಂದಿದ್ದಾರೆ. ಆದರೆ ಬಹಳಷ್ಟು ಜನ ಭಾಗವತರು ಹತ್ತಿಪ್ಪತ್ತು ರಾಗಗಳಲ್ಲೇ ಎಲ್ಲವನ್ನೂ ಹಾಡಿ ಮುಗಿಸುವ ರೂಢಿಯಿರುವುದು ಕಂಡುಬರುತ್ತದೆ.

ಯಕ್ಷಗಾನವು ರಸಭಾವಗಳನ್ನು ಪ್ರದರ್ಶಿಸಬಲ್ಲ ಒಂದು ಮಾಧ್ಯಮವೆಂಬುದು ಸಿದ್ಧವಾಗಬೇಕಾದರೆ ಪ್ರಸಂಗ ಪದ್ಯಗಳ ರಸಭಾವಗಳನ್ನು ಅರ್ಥವಿಸಿಕೊಂಡು ಅದನ್ನು ಹಾಡುಗಾರಿಕೆಯ ಮೂಲಕ ಪ್ರಕಟಿಸಬೇಕಾಗುತ್ತದೆ.

ಆದ್ದರಿಂದ ಯಕ್ಷಗಾನದ ರಾಗಗಳು ಕರ್ನಾಟಕ ಸಂಗೀತದ ಅಥವಾ ಹಿಂದೂಸ್ಥಾನಿ ಸಂಗೀತದ ರಾಗಗಳಿಗಿಂತ ಭಿನ್ನವಾಗಿರುವ ಒಂದು ಸ್ವತಂತ್ರವಾದ ಶೈಲಿಯೆಂಬುದರಲ್ಲಿ ಅನುಮಾನವಿಲ್ಲ. ಈ ಶೈಲಿಯನ್ನು ಕೇವಲ ಕಲಿಕೆಯ ಮುಖಾಂತರವಾಗಿ ಪಡೆಯಲಾಗದೇ ನಿರಂತರವಾದ ಅಭ್ಯಾಸದ ಮೂಲಕ ಹಿರಿಯರಿಂದ ಕಿರಿಯರು ಪಡೆದು ರೂಢಿಸಿಕೊಳ್ಳುವ ಪದ್ಧತಿಯಿದೆ.

ಈ ಶೈಲಿಯು ಕರ್ನಾಟಕ ಅಥವಾ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನವಲ್ಲ ಎಂಬರ್ಥದಲ್ಲಿ ಇವುಗಳನ್ನು 'ದಾಟ' ಎಂದು ಕರೆಯಲಾಗಿರುವುದಾದರೂ ಶಾಸ್ತ್ರೀಯ ಸಂಗೀತದ ಹಿನ್ನೆಲೆಯಿದ್ದಾಗ ಶೈಲಿಯನ್ನು ಕಾಪಾಡಿಕೊಳ್ಳುವುದೂ ಸಾಧ್ಯವೆಂಬುದು ಯಕ್ಷಗಾನ ಸಂಗೀತದಲ್ಲಿ ಕೃಷಿ ಮಾಡಿದ ಅನುಭವಿಕರ ಅಭಿಮತ.

ಭಾಗವತರು ಕೇವಲ ಹಾಡಿನಿಂದ, ತಾಳದಿಂದ ಮಾತ್ರವಲ್ಲ, ಹಿತಮಿತವಾದ ಸಂಭಾಷಣೆಯ ಮೂಲಕವೂ ರಂಗವನ್ನು ನಿಯಂತ್ರಿಸುವರು. ವೇಷಧಾರಿ / ಅರ್ಥಧಾರಿಗಳ ಸ್ವಗತವನ್ನು ಸ್ಪಷ್ಟಹಾಗೂ ಅರ್ಥ ಪೂರ್ಣಗೊಳಿಸುವ ಕೆಲಸವನ್ನು ಭಾಗವತರ ಸಂವಾದವು ಮಾಡುವುದು.

ಸಮಯಮಿತಿ, ಕಲಾವಿದರ ಕ್ಷಮತೆ, ಪ್ರೇಕ್ಷಕ ನಿರೀಕ್ಷೆ ಮೊದಲಾದವುಗಳಿಗನುಗುಣವಾದ ಪ್ರಸಂಗ ಸಂಪಾದನೆಯಿಂದ ಆರಂಭಿಸಿ, ಕಲಾವಿದರ ಧೋರಣೆ, ಮನೋಲಹರಿಗನುಗುಣವಾಗಿ ಹಾಡಿನ ವಿಧಾನ ಅನುಸರಿಸುವ ತನ್ನ ವಿಶಿಷ್ಟ ಮಂಡನಾ ವಿಧಾನದ ಮೂಲಕ ಪ್ರಸಂಗಕ್ಕೆ ವಿನೂತನವಾದ ಆಶಯ ನೀಡುವ, ಪಾತ್ರಕ್ಕೆ ಹೊಸ ರೂಪ ದೊರಕಿಸುವ ಮುಂತಾಗಿ ಇಡಿಯ 'ಮೇಳಕ್ರಿಯೆ' ಯನ್ನು ಅಚ್ಚುಕಟ್ಟಾಗಿ ಕಲಾತ್ಮಕವಾಗಿ, ಆಕರ್ಷಕವಾಗಿ ಪರಿಣಾಮಗೊಳಿಸಬಲ್ಲವರು



ಭಾಗವತರಾಗಿರುತ್ತಾರೆ. ಕಲಾವಿದರಿಗೆ ಕಥೆ ಪ್ರಸಂಗದ ನಡೆ ಮುಂತಾದವುಗಳ ಪರಿಚಯ ನೀಡುವುದರಿಂದ ತೊಡಗಿ ಅವನ ಪಾತ್ರ ಪಡೆಯಬೇಕಾದ ಆಕೃತಿಯ ಕುರಿತಾಗಿ ಹೊಳಪು ನೀಡುವ ಹೊಣೆಯು ಭಾಗವತರಿಗಿರುತ್ತದೆ. ಪಾತ್ರ ಹಂಚುವ, ನಿರ್ವಹಿಸುವ ಭಾರವೂ ಇವರ ಹೆಗಲೇರಬಹುದು. ಭಾಗವತರಿಗೆ 'ಪ್ರದರ್ಶನ' (ಆಟ ಅಥವಾ ತಾಳಮದ್ದಳೆ) ವನ್ನು ಪರಿಣಾಮಕಾರಿಯಾಗಿಸುವ ಪೂರ್ಣ ಹೊಣೆಗಾರಿಕೆಯಿರುವುದರಿಂದ ಪ್ರತಿಕ್ಷಣವೂ ಅವನ ಗಮನ ವೇಷಧಾರಿ / ಅರ್ಥಧಾರಿಯ ಮೇಲಿರಬೇಕಾಗುತ್ತದೆ. (ಹಿಂದೆ ಹಿಮ್ಮೇಳದವರು ಅಕ್ಷರಶಃ ವೇಷಧಾರಿಗಳ ಹಿಂದೆ ಚಲಿಸುತ್ತಿದ್ದರೆಂಬುದನ್ನು ಇಲ್ಲಿ ನೆನೆಸಿಕೊಳ್ಳಬಹುದು) ಹಾಗೆ ಕಣ್ಣು-ಕಿವಿಗಳನ್ನೆಲ್ಲ ಮುಮ್ಮೇಳದ ಮೇಲಿಡಬೇಕಾದ ಭಾಗವತರಿಗೆ ಪ್ರಸಂಗ ಪದ್ಯ ಕಂಠಪಾಠವಾಗಿರಬೇಕಾದುದು ಅನಿವಾರ್ಯ. ಮಾತ್ರವಲ್ಲ, ಕೆಲವೊಂದು ಸನ್ನಿವೇಶಗಳನ್ನು ಮುಮ್ಮೇಳದವರ ನಡುವೆ ಗೊಂದಲವುಂಟಾದಾಗ ಹಿಂದಿನ ಪದ್ಯ ಮುಂದೆ, ಮುಂದಿನ ಪದ್ಯ ಹಿಂದೆ ಹಾಡುವ ಅಗತ್ಯ ಬೀಳಲೂ ಬಹುದು. ಅಥವಾ ಎಷ್ಟೋ ಸನ್ನಿವೇಶಗಳಲ್ಲಿ ಬೇರೆ ಪ್ರಸಂಗಗಳ ಪದ್ಯವನ್ನು ಸನ್ನಿವೇಶಕ್ಕೆ ತಂದು ಹಾಡುವ ಅಗತ್ಯ ಬಿದ್ದದ್ದೂ ಇದೆ. ಕೆಲವು ಭಾಗವತರಂತೂ ಆಕ್ಷಣಕ್ಕೆ ಪದ್ಯವೊಂದನ್ನು ಕಟ್ಟಿ ಹಾಡಿ ತಮ್ಮ 'ಪ್ರಸಂಗಾವಧಾನ' ಮೆರೆದದ್ದೂ ಇದೆ.

ಹೀಗೆ 'ಅವಧಾನಿ' ಯೂ ಕವಿಯೂ ಏನೆಲ್ಲವೂ ಆಗಬೇಕಾದ ಭಾಗವತರಿಗೆ ತಮ್ಮ ವೈಯಕ್ತಿಕತೆಯ ಪ್ರದರ್ಶನಕ್ಕೆ ಅವಕಾಶ ಸಿಗುವುದು ತುಂಬಾ ಕಡಿಮೆ. ಒಂದೋ ಎರಡೋ 'ಫಗ' ಸಿಕ್ಕರೆ ಅಷ್ಟರಲ್ಲೇ ತಮ್ಮ ಚಾಕಚಕ್ಯತೆ ಮೆರೆದು ಕಾಣಸಬೇಕಾಗುತ್ತದೆ.

ಒಟ್ಟಿನಲ್ಲಿ, ಇಂದು ಯಕ್ಷಗಾನಕ್ಕೆ ನಿರ್ದೇಶಕರು ಬೇಕೆ? ಎಂಬ ಪ್ರಶ್ನೆಗೆ ಭಾಗವತರೇ ಉತ್ತರವಾಗಬೇಕಾದ ಅಗತ್ಯವಿದೆ. ಪರಂಪರಾಗತವಾದ ಅವರ ಸ್ಥಾನ ಮಾನಗಳನ್ನು ಅವರು ಮರಳಿ ಪಡೆಯಬೇಕಾಗಿದೆ. ಹಾಗೆ ಪಡೆಯುವ ಮೂಲಕ 'ಯಕ್ಷಗಾನ' (ಆಟ ಮತ್ತು ತಾಳಮದ್ದಳೆ) ದ ಸೌಂದರ್ಯ, ಸಾಮರ್ಥ್ಯಗಳನ್ನು ಪರಮಾವಧಿ ಪ್ರಮಾಣದಲ್ಲಿ ಪ್ರದರ್ಶಿಸಬಲ್ಲಂತಹ ಕಾರ್ಯಕ್ರಮಗಳು ಮೂಡಿಬರಬೇಕಾಗಿದೆ. ಯಕ್ಷಗಾನ ಸಭಾ ಲಕ್ಷಣದಲ್ಲಿ ಭಾಗವತರಿಗೆ ಆರೋಪಿಸಲಾದ **'ಭಗವದ್ಭಕ್ತಃ ಗರ್ವವರ್ಜಿತಃ ವಾಕ್ಯಪಾಠೀ ತತ್ವನಿರ್ಣಯಃ'** ಮುಂತಾದ ಗುಣ ಲಕ್ಷಣಗಳ ಜೊತೆ ಇನ್ನೂ ಹತ್ತು ಹಲವಾರು ರೀತಿಯ ಸಾಮರ್ಥ್ಯವನ್ನು ಗಳಿಸಿ ಚಂಡೆ-ಮೃದಂಗಗಳ 'ಕ್ಷಮತೆ'ಯನ್ನೂ ಬೆಳೆಸಿ, ಮುಮ್ಮೇಳದವರೆಗೂ ಮಾರ್ಗದರ್ಶನ ನೀಡಿ ನಿಜವಾದ 'ಸೂತ್ರಧಾರ' ರಾಗಿ ಮುಂದಿನ ಪೀಳಿಗೆಗೆ ನಮ್ಮ ಹೆಮ್ಮೆಯ ಕಲೆ ಯಕ್ಷಗಾನವನ್ನು ನೀಡುವಂತಾಗಬೇಕಿದೆ.



# ಅಪ್ಪನ ಮಡಿಲಲ್ಲಿ

**- ತಿಮ್ಮಪ್ಪ ಹೆಗಡೆ, ಬಾಳೆಹದ್ದ**

ನಾನಾಗ ಆರು ವರ್ಷದ ಪೋರ. ಶಿರಸಿಯ ಮಾರಿಕಾಂಬೆಯ ಸನ್ನಿಧಿಯಲ್ಲಿ ಹಿರಿಯ ಕಲಾವಿದರಿಂದ ತಾಳಮದ್ದಲೆ. ಅಖ್ಯಾನ ಕರ್ಣಪರ್ವ. ಅದರಲ್ಲಿಯ ಏನಯ್ಯ ಶಲ್ಯ ಭೂಪದಿಂದಾರಂಭಿಸಿ ನಾಲ್ಕು ಪದಗಳು ನನಗೆ ಬಾಯಿಪಾಠವಾಗಿದ್ದವು. ಅಪ್ಪನ ಮಡಿಲಲ್ಲಿ ಕುಳಿತು ಆ ನಾಲ್ಕು ಪದಗಳನ್ನು ಹಾಡಿದೆ. ದುರ್ಗಪ್ಪನವರ ಮದ್ದಲೆ. ನನಗಾಗ ಆ ಧೈರ್ಯ ಹೇಗೆ ಬಂತು ಎಂದು ಈಗಲೂ ಆಶ್ಚರ್ಯವಾಗುತ್ತದೆ. ಅದು ನನ್ನ ತಿಳುವಳಿಕೆಯ ಭಯ. ಆಗ ಅದು ಭಾಗವತರ ಮಗನಿಗೆ ಸಹಜವಾಗಿತ್ತು. ಅಪ್ಪನ ಮಡಿಲಲ್ಲಿ ಕುಳಿತರೆ ಅಂತಹ ಆತ್ಮವಿಶ್ವಾಸ ಮೂಡುತ್ತಿತ್ತು. ಮನೆಯ ಇದೇ ವಾತಾವರಣ ಯಕ್ಷಗಾನದ ಗಂಧದಿಂದ ತುಂಬಿತ್ತು, ಕಲಿಯುವ ವಿದ್ಯಾರ್ಥಿಗಳು, ಅಪ್ಪನ ಸಹಪಾಠಿಗಳು, ಆಗಾಗ ಬರುತ್ತಿದ್ದ ಹಿರಿಯ ಕಲಾವದರು ಹೀಗೆ ನಿರಂತರವಾಗಿ ಯಕ್ಷಚಿಂತನೆ, ಯಕ್ಷಾಧ್ಯಯನ ನಡೆದೇ ಇತ್ತು. ಅಪ್ಪನ ಗುರುಗಳಾದ ಕಬ್ಬಿನಗದ್ದೆ ಮಹಾಬಲ ಭಾಗವತರು, ತುದಿಮನೆ ಸುಬ್ಬಜ್ಜ ಮನೆಗೆ ಬಂದರೆ ಯಾವುದೇ ಸಮಯದಲ್ಲೂ ಹಾಡು ಆರಂಭವಾಗುತ್ತಿತ್ತು. ಸುಬ್ಬಜ್ಜನ ಮದ್ದಲೆ ಅಪ್ಪನ ಹಾಡು. ನಂತರದ ದಿನಗಳಲ್ಲಿ ಹೊಸ್ತೋಟ ಭಾಗವತರು, ಕೆರೆಮನೆ ಮಹಾಬಲ ಹೆಗಡೆಯವರು ಆಗಾಗ ಬರುತ್ತಿದ್ದರು. ಮರವಂತೆ ನರಸಿಂಹ ದಾಸರು ಮೂರು ವರ್ಷಕಾಲ ನಮ್ಮ ಮನೆಯಲ್ಲಿದ್ದರು. ಅವರಿದ್ದಾಗ ಇಡೀ ದಿನ ರಾಗ ತಾಳಗಳಲ್ಲೇ ಮುಳುಗಿರುತ್ತಿದ್ದರು. ಇಂತಹ ಪರಿಸರದಲ್ಲಿ ಬೆಳೆದ ನನಗೆ ಹಾಡು ಉಸಿರಾಟದಷ್ಟು ಸಹಜವಾಗಿತ್ತು. ಇಂದಿಗೂ ನನ್ನ ಹಾಡುಗಾರಿಕೆ ತೀವ್ರವಾದ ಅಭ್ಯಾಸದಿಂದ ಸಿದ್ಧವಾದದ್ದಲ್ಲ. ಕೇಳಿ ಕೇಳಿಯೇ ಮೈಗೂಡಿದ್ದು. ಆದರೆ ಅಪ್ಪಯ್ಯ ಹಾಗಿರಲಿಲ್ಲ. ಅವನ ದಿನಚರಿ ಎಂದರೆ ಕಲಿಕೆಯ ವೇಳಾಪಟ್ಟಿ ಇದ್ದಂತೆ. ನಸುಕಿನಲ್ಲೆದ್ದು ಶ್ರುತಿಯ ಧ್ಯಾನ. ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳ ಪಠನ. ಹೀಗೆ ಸಾಹಿತ್ಯ ಸಂಗೀತಗಳೆರಡರಲ್ಲೂ ಶ್ರದ್ಧೆ. ಅಭ್ಯಾಸ ಯಕ್ಷಗಾನಕ್ಕೇ ಸೀಮಿತವಲ್ಲ, ಕನ್ನಡದ ಸಂಗಡ ಹಿಂದಿ, ಇಂಗ್ಲೀಷ್ ಭಾಗಗಳನ್ನೂ ಕಲಿಯುವ ಹಂಬಲ. ಅದಕ್ಕಾಗಿ ಶಿಕ್ಷಕರಾದ ಮಹೇಶ ಹಬ್ಬು ಹಾಗೂ ಗಣಪತಿ ಮಾಸ್ತರರನ್ನು ಮನೆಯಲ್ಲಿಯೇ ಕೆಲವು ದಿನ ಉಳಿಸಿಕೊಂಡಿದ್ದರು. ಕೈ ಯಾವುದೇ ಕೆಲಸ ಮಾಡುತ್ತಿರಲಿ ಪಕ್ಕದಲ್ಲಿ ಹಬ್ಬುರವರು ನಿಂತು ಪಾಠ ಮಾಡುತ್ತಿರಬೇಕು. ಅಪ್ಪ ಅದನ್ನು ಕಲಿಯುತ್ತಿರಬೇಕು. ಹಾಗಾಗಿಯೇ ಸಂಗೀತದ ಕುರಿತ ಹಿಂದಿಯ ಪುಸ್ತಕ, ಪತ್ರಿಕೆಗಳು ನಮ್ಮ ಮನೆಗೆ ಬರುವಂತಾದದ್ದು, ಅಂತಹದೊಂದು ಪತ್ರಿಕೆಯನ್ನು ಓದಿ ಸಂಗೀತ ಕಲಿಯಬಹುದು ಎಂಬುದೇ ನಮಗೆಲ್ಲ ಹೊಸ ಸಂಗತಿಯಾಗಿತ್ತು. ನಮಗೇನು, ನಮ್ಮ ಸೀಮೆಗೇ ಹೊಸ ಸಂಗತಿಯಾಗಿತ್ತು. ಅಪ್ಪ



ಹಿಂದಿ ಇಂಗ್ಲೀಷಿನಲ್ಲಿ ಅದೆಷ್ಟು ಸಾಧಿಸಿದ ಎನ್ನುವುದಕ್ಕಿಂತ ಆ ಕಾಲದಲ್ಲಿಯೇ ಕಾಲುಹಾದಿಯನ್ನೇ ನಂಬಿದ ಒಂಟಿಮನೆಯಲ್ಲಿ ಕುಳಿತೂ ಆ ಎಲ್ಲ ಜ್ಞಾನಕ್ಕಾಗಿ ಹಂಬಲಿಸಿದ್ದ ಎನ್ನುವುದು ನನಗೆ ಹೆಮ್ಮೆಯ ಸಂಗತಿ.

ಅಪ್ಪನ ಸಂಗೀತದ ಹುಚ್ಚೂ ಬಾಲ್ಯದ್ದೇ. ಯಾವ ಪೂರ್ವ ಪುಣ್ಯದಿಂದ ಅದು ಅವನ ಕೈಹಿಡಿಯಿತೋ ತಿಳಿಯೆ. ಅದವನ ಬದುಕನ್ನು ಬೆಳಗಿದ ರೀತಿ ಅನನ್ಯ. ನಾನು ಕೇಳಿದಂತೆ ಅಪ್ಪನ ಹನ್ನೊಂದು ಹನ್ನೆರಡನೇ ವಯಸ್ಸಿನಲ್ಲಿಯೇ ಹಾರ್ಮೋನಿಯಂ ಪರಿಚಯವಾಯಿತು. ಹಿತ್ಲಳ್ಳಿಯಲ್ಲಿದ್ದ ಯಾಲಕ್ಕಿ ಕಣಕ್ಕೆ ನೀರು ಹಾಕುತ್ತೇನೆಂದು ತಾಯಿಗೆ ಹೇಳಿ ಹೊರಟರೆ ಹೋದದ್ದು ಸೀದಾ ಶಿರಸಿಯಲ್ಲಿದ್ದ ನಾಟಕ ಕಂಪನಿಯ ತಾಲೀಮಿನ ಮನೆಗೆ. ಅಲ್ಲಿದ್ದ ದೊಡ್ಡ ಪೆಟ್ಟಿಗೆಯ ಮೇಲೆ ಕೈಯಾಡಿಸಿದ ಅನುಭವ. ಶ್ರುತಿ ಬುರುಡೆಯ ಹಿನ್ನೆಲೆಯಲ್ಲಿಯೇ ಹಾಡುವ ರೂಢಿಯಿದ್ದ ಆ ಕಾಲದಲ್ಲಿಯೇ ಹಾರ್ಮೋನಿಯಂನ ಹಂಬಲ ಹತ್ತಿತು. ಅಪ್ಪನಿಗೆ ಮುಂದೆ ಅದೂ ಪೂರ್ಣ ಸಮಾಧಾನ ನೀಡಲಿಲ್ಲ. ಯಾರ ಅನುಕರಣೆ, ಮಾರ್ಗದರ್ಶನವೂ ಇಲ್ಲದೇ ತಂಬೂರದ ಸ್ವರಕ್ಕೆ ಭಾಗವತಿಕೆ ಮಾಡಿದ. ಯಕ್ಷಗಾನಕ್ಕೆ ಇಷ್ಟು ಸಾಕು ಎಂದು ಉದಾಸೀನ ಅವನನ್ನು ಕಾಡಲಿಲ್ಲ. ಸಂಗೀತದ ಎಲ್ಲ ಸಾಧ್ಯತೆಗಳನ್ನು ಯಕ್ಷಗಾನದಲ್ಲಿ ದುಡಿಯುವ ಪ್ರಯತ್ನ ಮಾಡಿದ. ಲಯದೊಡನೆ ಆಡುವ, ಸ್ವರದೊಡನೆ ನಲಿಯುವ ಅಪ್ಪನ ಕ್ರಮ ನಿರಂತರ ಅಭ್ಯಾಸ ಫಲ. ಕಾರ್ಯಕ್ರಮ ನೀಡುವುದಾದರೆ ಪ್ರೇಕ್ಷಕರಿಗೆ ರಂಜನೆಯಾದರೆ ಸಾಲದು. ಸ್ವಂತಕ್ಕೆ ಸಮಾಧಾನವಾಗಬೇಕು. ಅದಕ್ಕಾಗಿ ಪೂರ್ವ ಸಮಾಲೋಚನೆಗೆ ಒತ್ತು. ಪರಸ್ಪರ ಸಮಾನ ತಿಳುವಳಿಕೆ ಇಲ್ಲದಲ್ಲಿ ಹಾಡುವುದೇ ಬೇಡವೆಂಬ ಹಟ. ತುದಿಮನೆ ಸುಬ್ಬಜ್ಜ ತೀರಿಕೊಂಡ ಮೇಲೆ ಹೊಂದಾಣಿಕೆಯ ಮದ್ದಲೆಗಾರರಿಗಾಗಿ ಹುಡುಕಿದ. ಯಾರೂ ಸಿಗದಾಗ ಕಾರ್ಯಕ್ರಮವನ್ನೇ ಬಿಟ್ಟ. ಮುಂದೆ ನಮ್ಮ ಮನೆಯಲ್ಲಿ ಮನೆಯವರಂತೆ ದುಡಿಯುತ್ತಿದ್ದ ಗಣಪಜ್ಜನನ್ನೇ ಹೊಂದಿಸಿಕೊಂಡು ಪದ ಹೇಳಿದ. ಆ ನಂತರ ದುರ್ಗಪ್ಪ ಗುಡಿಗಾರರ ಜೊತೆ ಸಿಕ್ಕಿದ್ದು ಯೋಗ ಎಂದೇ ಹೇಳಬೇಕು. ಅನೇಕರ ಸಂಗಡ ಅಪ್ಪ ಪದ ಹೇಳಿದ್ದಾನಾದರೂ ದುರ್ಗಪ್ಪ ಗುಡಿಗಾರರ ಮದ್ದಲೆಯ ಸಾಥಿ ಇದ್ದಾಗ ಅಪ್ಪನ ಹಾಡುಗಾರಿಕೆಗೆ ಪೂರ್ಣ ವಿಕಾಸ ಸಿಗುತ್ತಿತ್ತೆಂಬುದು ನಮ್ಮೆಲ್ಲರ ಅನುಭವ. ಯಕ್ಷಗಾನದ ಭಾಗವತನೊಬ್ಬ ಮೆಚ್ಚುಗೆಯ ಒತ್ತಾಯಕ್ಕಾಗಿ ಹಾಡಿದ ಹಾಡನ್ನೇ ಮತ್ತೆ ಮತ್ತೆ ಹಾಡಬೇಕಾಗಿ ಬಂದದ್ದು ಅಪ್ಪನ ಯೋಗ್ಯತೆಯನ್ನು ಹೇಳುತ್ತದೆ. ಉದ್ದಾಮ ಪಂಡಿತರಾಗಿದ್ದ ದಿ. ಹಾಸಣಗಿ ಗಣಪತಿ ಭಟ್ಟರು ಅಧ್ಯಕ್ಷರಾಗಿದ್ದ ಅನೇಕ ತಾಳಮದ್ದಲೆಗಳಲ್ಲಿ 'ಭಾಗವತ ಈ ಹಾಡನ್ನು ಮತ್ತೊಮ್ಮೆ ಹಾಡವು' ಎಂಬ ಪ್ರೀತಿಯ ಆಜ್ಞೆಯನ್ನು ಅಪ್ಪ ಪಾಲಿಸಿದ್ದನ್ನು ಕಂಡಿದ್ದೇನೆ. ಆ ಕಾಲದಲ್ಲಿ ಚಪ್ಪಾಳೆ ಹೊಡೆಯುವ ಕ್ರಮ ಅಷ್ಟಾಗಿರಲಿಲ್ಲ. ಪ್ರೇಕ್ಷಕರಲ್ಲಿ ಕುಳಿತ ಹಿರಿಯರು ತಲೆಗೆ ಕಟ್ಟಿದ ಮುಂಡಾಸನ್ನು ಬಿಚ್ಚಿ ಗಾಳಿಯಲ್ಲಿ ತೂರಿ ಹಿಡಿದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಅಪ್ಪನ ಹಾಡಿಗೆ ಅಂತಹ ಪ್ರತಿಕ್ರಿಯೆಗಳು ಆಗಾಗ ಸಿಗುತ್ತಿದ್ದವು. ಬಾಲ್ಯದಲ್ಲಿ



ಅವೆಲ್ಲ ಅಚ್ಚರಿಯ, ಹೆಮ್ಮೆಯ ಸಂಗತಿಗಳಾಗಿದ್ದವು. ನಾನು ಬೆಳೆದಂತೆ ಅಪ್ಪನ ಕೌಶಲದ ಸೂಕ್ಷ್ಮ ತಿಳಿಯತೊಡಗಿತು. ಆದಿತಾಳ ಮಧ್ಯೆ ಏಕತಾಳವಾಗದಂತೆ ವಹಿಸುವ ಎಚ್ಚರಿಕೆ, ಅಷ್ಟತಾಳ ಹದಿನಾಲ್ಕು ಮಾತ್ರೆಯ ಆವೃತ್ತಿಯಲ್ಲಿಯೇ ನಡೆಯುವ ತಾಳದ ಹಿಡಿತ, ಸಾಹಿತ್ಯದ ಭಾವವನ್ನು ರಾಗ, ಲಯಗಳಲ್ಲಿ ಕಟ್ಟಿಕೊಡುವ ರಸಪ್ರಜ್ಞೆ ಇವುಗಳಲ್ಲಿ ಅಪ್ಪ ಅನನ್ಯ. ಎಂದಿಗೂ ಅವನೇ ನನಗೆ ಮಾದರಿ, ಆದರ್ಶ. ಅಪ್ಪ ಆಟಕ್ಕೂ ಭಾಗವತನಾಗಿದ್ದ. ಆದರೆ ವಿಲಂಬಿತ ಲಯದ ಹಾಡುಗಾರಿಕೆಗೆ ರಂಗದಲ್ಲಿ ದುಡಿಯುವ ಕಲಾವಿದರ ಕೊರತೆಯಿಂದಾಗಿ ಮುಂದೆ ತಾಳಮದ್ದಲೆಗೇ ಸೀಮಿತನಾದ. ತಾಳಮದ್ದಲೆಯಲ್ಲಿ ರಸಪ್ರಜ್ಞೆ ಇಲ್ಲದ, ಭಾವ ಸ್ಪಂದನವಿಲ್ಲದ ರೂಕ್ಷ ಅರ್ಥಗಾರಿಕೆಗೆ ಭಾಗವತಿಕೆ ಮಾಡುವುದು ಅಪ್ಪನಿಗೆ ಕಷ್ಟದ ಕೆಲಸ. ಹಾಗಾಗಿ ಶೀಗೇಮನೆ ನಾರಾಯಣ ಹೆಗಡೆಯವರು, ವೆಂಕಟಾಚಲ ಭಟ್ಟರಂತಹ ಭಾವಪೂರ್ಣ ಅರ್ಥಧಾರಿಗಳ ಅನುಪಸ್ಥಿತಿಯಲ್ಲಿ ಹಾಡುವುದಕ್ಕೆ ಹಿಂಜರಿಯುತ್ತಿದ್ದ. ಕಲೆ ಸ್ಪರ್ಧೆಯ ವಿಷಯವಲ್ಲ. ಆನಂದದಿಂದ ಅನುಭವಿಸಬೇಕಾದದ್ದು ಎನ್ನುವುದು ಅವನ ಶ್ರದ್ಧೆ. ಹಾಗಾಗಿಯೇ ಪ್ರಸಿದ್ಧ ಭಾಗವತರ ಸಂಗಡ ಹೆಸರು ಹಾಕಿ ಕಾರ್ಯಕ್ರಮಕ್ಕೆ ಕರೆದಾಗ ಅಲ್ಲಿ ತನ್ನನ್ನು ಹೋಲಿಸಿ ನೋಡುತ್ತಾರೆ ಎನ್ನಿಸಿದರೆ ಹಾಡುವುದಕ್ಕೆ ಹಿಂಜರಿಕೆ. ಅದಕ್ಕೆ ಕಲಿಕೆಯ ಕೊರತೆ ಕಾರಣವಲ್ಲ. ಒಲಿದ ವಿದ್ಯೆಯನ್ನು ಸ್ಪರ್ಧೆಗೊಡ್ಡಬಾರದೆಂಬ ವಿನಯ.

ಕಲೆ ಪ್ರದರ್ಶನದಲ್ಲಿಯೇ ಸಾರ್ಥಕವಾಗುತ್ತದಾದರೂ ಸಾಧನೆ ವೈಯಕ್ತಿಕವಾದುದು. 'ರಾಗಕೋಶ' ಪುಸ್ತಕದಲ್ಲಿ ಸಾವಿರ ಸಾವಿರ ರಾಗಗಳ ವಿವರವಿದೆ. ಆ ಪುಸ್ತಕದಲ್ಲಿ ಅಲ್ಲಲ್ಲಿ ಈ ರಾಗ ಯಕ್ಷಗಾನಕ್ಕೆ ಬಳಸಬಹುದಾದದ್ದು ಎಂಬ ಟಿಪ್ಪಣಿ ಇದೆ. ಆ ರಾಗಗಳನ್ನೆಲ್ಲ ಬಳಸಿದರೆ ಹಾಡಿನ ವೈವಿಧ್ಯದ ವ್ಯಾಪ್ತಿ ಹೆಚ್ಚುತ್ತದೆ. ಯಕ್ಷಗಾನದಲ್ಲಿ ಬಳಕೆಯಾದ ನೂರಾಮೂರು ರಾಗಗಳ ಪಟ್ಟಿಮಾಡಿ ವಿವರ ಬರೆದದ್ದಲ್ಲದೆ ಇಂತಹ ಟಿಪ್ಪಣಿಗಳೂ ಅಪ್ಪನ ಶೋಧ ಗುಣಕ್ಕೆ ಸಾಕ್ಷಿಯಾಗಿವೆ. ಕಲಿಕೆಯ ವ್ರತ ತನಗೊಂದೇ ಅಲ್ಲ ತನ್ನವರೆಲ್ಲ ಕಲಿಯಬೇಕು. ಮನೆಯಲ್ಲಿ ಕೆಲಸಕ್ಕೆ ಬಂದವರಿಗೂ ಕಲಿಸುವ ಕಾಳಜಿ ಅವನದು. ಎಲ್ಲ ವಿದ್ಯೆಗಳನ್ನೂ ಕಲಿಯಬೇಕು. ಅಪ್ಪನ ನಿರೀಕ್ಷೆಯ ಕಲಿಕೆಯನ್ನು ನಾವ್ಯಾರು ಸಾಧಿಸಲಿಲ್ಲ ಎಂಬ ಕೊರಗು ನಮಗೆಲ್ಲ ಇದೆ. ನನ್ನ ಹೈಸ್ಕೂಲ್ ಮುಗಿದ ಮೇಲೆ ಇಂಗ್ಲಿಷ ಕಲಿಕೆಗೆಂದು ನನ್ನನ್ನು ಪ್ರೊ. ಬಿ. ಎಚ್. ಶ್ರೀಧರರಲ್ಲಿ ಕಳಿಸಿದ್ದ. ಮೂರು ದಿನ ಅವರ ಮನೆಗೆ ಹೋದೆ. ನನಗೆ ಮುಂದೆ ಶ್ರೀದರರಲ್ಲಿ ಇಂಗ್ಲಿಷ ಕಲಿಯುವ ಯೋಗ ಒದಗಲಿಲ್ಲ. ನನ್ನ ಅಕ್ಕ ನಾಗವೇಣಿ ದಿನದಲ್ಲಿ ಒಂದಷ್ಟು ಹೊತ್ತು ವಯಲಿನ್ ಕಲಿಯಬೇಕಿತ್ತು. ಒಂದಷ್ಟು ಹೊತ್ತು ತಬಲಾ, ಹಾಡುವುದು, ಹೊಲಿಗೆ ಹೀಗೆ ದಿನವಿಡೀ ಕಲಿಯುವ ವ್ಯವಸ್ಥೆ ಮಾಡಿದ್ದ. ಯಾವ ಕೆಲಸವೂ ತಿಳಿದಿಲ್ಲ ಎಂದಾಗಬಾರದೆಂದು ಗದ್ದೆ ನೆಟ್ಟಿಗೂ ಕೆಲವು ದಿನ ಕಳಿಸಿದ್ದ.

ಅಪ್ಪನ ಬದುಕಿನಲ್ಲಿ ಶಿಸ್ತು, ಸೊಗಸು ಸಹಜವಾಗಿದೆ. ಅದು ಶಾಸನವಾಗಿಲ್ಲ. ಇಸ್ತ್ರಿ ಇಲ್ಲದ ಬಟ್ಟೆ ತೊಡಲಾರ. ಹೆಗಲಿಗಿಟ್ಟ ಶಾಲಿನ ಇಸ್ತ್ರಿ ಕೆಡದಂತೆ ನೋಡಿಕೊಳ್ಳುವ ಕಾಳಜಿ. ಸುಗಂಧ ದ್ರವ್ಯಗಳ



ಬಳಕೆಯೂ ಪ್ರೀತಿಯದೇ. ಬಿಳಿ ಪಂಚೆಯುಟ್ಟು, ಜುಬ್ಬ ಧರಿಸಿ, ಕೋಟು ತೊಟ್ಟು, ಹೆಗಲಿಗೆ ಶಾಲಿಟ್ಟು, ಒಂದು ಕೂದಲೂ ಕದಲದಂತೆ ತಲೆಯನ್ನು ಬಾಚಿಕೊಂಡು ಅಪ್ಪ ಕಾರ್ಯಕ್ರಮಕ್ಕೆ ಸಿದ್ಧನಾದರೆ, ಆಯಿಯ ಮುಖದಲ್ಲೊಂದು ಪ್ರಸನ್ನ ನಗೆ. ಅವನ ಹೂವುಗಳ ಪ್ರೀತಿಯೂ ಅಪಾರವಾದದ್ದು. ಅವನ ಪ್ರಾಯದಲ್ಲಿ ನೂರಿಪ್ಪತ್ತು ಬಗೆಯ ಗುಲಾಬಿ ಗಿಡಗಳನ್ನು ಬೆಳೆದಿದ್ದ. ಬದುಕನ್ನು ಚೆಂದವಾಗಿಸುವ ಎಲ್ಲ ರಸಿಕತೆಗೂ ತೆರೆದ ಮನಸ್ಸು ಅವನದು. ವ್ಯವಹಾರದಲ್ಲಿ ಮಾತ್ರ ಜಾಣನೆನಿಸಿಕೊಳ್ಳಲಾರದಷ್ಟು ಔದಾರ್ಯ. ತಾಳದ ಲೆಕ್ಕಾಚಾರದಲ್ಲಿದ್ದ ನಿಷ್ಠುರತೆ ವ್ಯವಹಾರದಲ್ಲಿ ಬರಲಿಲ್ಲ. ನಿತ್ಯದ ವ್ಯವಹಾರದ ಜಂಜಡದಿಂದ ಅಪ್ಪನನ್ನು ದೂರವಿಟ್ಟು ಅವನ ಸಂಗೀತದ ಉಪಾಸನೆಗೆ ನೆರವಾದವರು ನಮ್ಮ ಮನೆಯ ಕಾಳಜ್ಜ ಮತ್ತು ನನ್ನ ಆಯಿ. ಕಾಳಜ್ಜ (ಕಾಳಿಂಗ ಗಣಪತಿ ಹೆಗಡೆ) ನಮ್ಮ ಮನೆಯ ತೋಟ ಗದ್ದೆಗಳಲ್ಲಿ ದುಡಿದ ಪರಿಯನ್ನು ಶಬ್ದಗಳಲ್ಲಿ ವರ್ಣಿಸುವುದು ಸಾಧ್ಯವಿಲ್ಲ. ಮನೆಗೆ ಬಂದವರನ್ನೆಲ್ಲ ಆದರಿಸಿ ಆತಿಥ್ಯ ಮಾಡಿದ ಆಯಿಯ ತಾಳ್ಮೆ, ಸಹನೆಗಳೂ ಅಪಾರ. ಇಂತಹದೊಂದು ಸಾಂಸಾರಿಕ ಬೆಂಬಲ ಅಪ್ಪನ ಯಕ್ಷ ಸಂಸಾರವನ್ನು ನಡೆಸಿಕೊಟ್ಟಿತು. ಆಯಿಯ ಗರಡಿಯಲ್ಲಿ ಪಳಗಿದ ನನ್ನ ಪತ್ನಿ ಶಾರದಾ ಕೂಡ ಇದನ್ನು ಮುಂದುವರಿಸುತ್ತಿರುವುದು ನನ್ನ ಸೌಭಾಗ್ಯ. ಎಲ್ಲ ವಯಸ್ಸಿನವರನ್ನೂ ನಿರ್ವ್ಯಾಜ ಪ್ರೀತಿಯಿಂದ ಅಪ್ಪಿ ಸ್ವಾಗತಿಸುವ ಅಪ್ಪನ ಭಾವುಕ ವ್ಯಕ್ತಿತ್ವ ವ್ಯಾವಹಾರಿಕ ಸತ್ಯಗಳನ್ನು ಎದುರಿಸಲು ಸಂಕಟಪಡುತ್ತದೆ. ಮನೆ ಬಾಗಿಲಿಗೆ ಬಂದ ಭಿಕ್ಷುಕರನೇಕರಿಗೆ ಭಕ್ತಿಯಿಂದ ಕೈಮುಗಿಯುವ ಅಪ್ಪನ ಶ್ರದ್ಧೆ, ಅಂತರಂಗದ ಆಧ್ಯಾತ್ಮಿಕ ಒಲವು ಅನನ್ಯವಾದದ್ದು. ಉತ್ತಮರ ಕೋಪ ಕ್ಷಣಿಕ ಎನ್ನುವಂತೆ ಅಪ್ಪನ ಸಿಟ್ಟಿನ ಅವಧಿ ತೀರ ಕ್ಷಣಿಕವಾದದ್ದು.

ಇಷ್ಟೆಲ್ಲ ಶಿಸ್ತು ಸೊಗಸುಗಳ ಮಧ್ಯೆಯೇ ವಿಕ್ಷಿಪ್ತತೆಗಳೂ ಇವೆ. ಒಮ್ಮೆ ಕೆರೆಮನೆ ಮಹಾಬಲ ಹೆಗಡೆಯವರು - ಅಪ್ಪ ಮುಂಜಾನೆ ಒಂಬತ್ತು ಗಂಟೆಯಿಂದ ಸಂಜೆ ಏಳು ಗಂಟೆಯವರೆಗೆ ಬಾಳೆಹದ್ದ ಕ್ರಾಸಿನಲ್ಲಿ ಮಾತಾಡುತ್ತ ಕುಳಿತು ಎಲ್ಲ ಬಸ್ಸುಗಳನ್ನೂ ತಪ್ಪಿಸಿಕೊಂಡಿದ್ದರು. ಮಾತಿನ ಭರದಲ್ಲಿ ಬಸ್ಸು ದಾಟಿಹೋದ ಮೇಲೆ ಇಬ್ಬರೂ ಎಚ್ಚರಾಗುತ್ತಿದ್ದರು. ಕಾರ್ಯಕ್ರಮ ಏರ್ಪಡಿಸಿಕೊಂಡವರು ನಂತರ ವಿಶೇಷ ವಾಹನ ಮಾಡಿಕೊಂಡು ಇಬ್ಬರನ್ನೂ ಕರೆದುಕೊಂಡು ಹೋದರು. ಕಲಾವಿದರು ಸಾಮಾನ್ಯವಾಗಿ ತಮ್ಮ ಮಕ್ಕಳೂ ಕಲಾವಿದರಾಗಲಿ ಎಂದು ಬಯಸುವುದಿಲ್ಲ. ಆದರೆ ಅಪ್ಪ ಅದಕ್ಕೆ ವ್ಯತಿರಿಕ್ತ. ನಾನು ಭಾಗವತನಾಗದೆ ಇನ್ನೇನಾಗಿದ್ದರೂ ಅಪ್ಪನಿಗೆ ಇಷ್ಟು ತೃಪ್ತಿ ಇರುತ್ತಿರಲಿಲ್ಲ ಎನ್ನುವುದು ನನಗೆ ಗೊತ್ತಿದೆ. ಸಂಗೀತ ಬದುಕಿನ ಆನಂದವನ್ನು ಹೆಚ್ಚಿಸುತ್ತದೆ ಎಂಬ ಪ್ರೀತಿಯೇ ಅದಕ್ಕೆ ಕಾರಣ. ಬದುಕನ್ನೇ ಹಂಚಿಕೊಂಡವರು ನಾವು. ಯಾವ ಮಾತಿಗೆ ಸಿಟ್ಟು ಮಾಡಿದೆವು, ಯಾವ ಮಾತಿಗೆ ನಕ್ಕೆವು ಎನ್ನುವುದನ್ನು ಲೆಕ್ಕವಿಡುವುದು ಸಾಧ್ಯವಿಲ್ಲ. ಆದರೆ ಇಂಥ ಅಪ್ಪನ ಮಗನಾಗುವುದು ದೈವ ಕರುಣಿಸಿದ ಭಾಗ್ಯ. ಆರಂಭದಿಂದಲೂ ಯಕ್ಷಗಾನದ ಹಿರಿಯರೆಲ್ಲ ಮನೆಯ ಆಪ್ತರು, ಕಿರಿಯರೆಲ್ಲ ನನ್ನ ಸ್ನೇಹಿತರು. ಆದ್ದರಿಂದ ಇಡೀ ಯಕ್ಷಗಾನದ ವಲಯವೇ ನನಗೆ ಅಪ್ಪನ ಮಮತೆಯ ಮಡಿಲು.



# 'ಭಾವ' ತುಂಬುವ ಭಾಗವತರು

**- ನಾ. ಸು. ಭರತನಹಳ್ಳಿ**

ಸಂಪಾದಕರು, 'ಸ್ವರ್ಣವಲ್ಲೀ ಪ್ರಭಾ'

'ಶ್ರೀ ಕೃಷ್ಣ ಹೆಗಡೆ, ಬಾಳೆಹದ್ದ' ಹೀಗೆಂದರೆ ಅನೇಕರಿಗೆ ಹೆಚ್ಚು ಪರಿಚಿತವಾಗದು. 'ಬಾಳೆಹದ್ದ ಭಾಗವತರು' ಅಂತಂದರೇನೇ ಹೆಚ್ಚು ಆಪ್ತವಚನ. ಏಕೆಂದರೆ ಅವರ ಇಡೀ ವ್ಯಕ್ತಿತ್ವವೇ ಆ ಭಾಗವತತ್ವ. ಅದು ಅವರ ಅನನ್ಯತಾಭಾವ. ನನಗಂತೂ ಅವರು 'ಭಾಗವತ ಭಾವ'. ಹಾಗೇ ಅದೆಷ್ಟೋ ಜನಕ್ಕೂ ಕೂಡ. ಅವರ ಒಡನಾಟದೆಡೆ ಸ್ಫುರಿಸುವ 'ಭಾವ' ಸ್ಫುರಣವದು. ರಕ್ತ ಸಂಬಂಧಿಕರ ಭಾವವನ್ನೂ ಮೀರುವ ನೆಂಟಸ್ತನದ 'ಭಾವ'ವೇ ಅವರಲ್ಲಿಯ ಅನುಬಂಧ.

ಈ ಭಾಗವತ ಭಾವನೊಂದಿಗಿನ ನನ್ನ ಒಡನಾಟ ಆ ಪ್ರೇಮಬಂಧನ ಬಹಳ ಕಾಲದ್ದು. ಅಲ್ಲಲ್ಲಿ ಯಕ್ಷಗಾನ ತಾಳಮದ್ದಳೆಗಳಲ್ಲಿ ಭಾಗವತರಾಗಿ ಕಾಣಿಸಿಕೊಳ್ಳುತ್ತಿದ್ದಾಗ ಕಂಡ ಪರಿಚಯ - ನಮಸ್ಕಾರ! ನಮಸ್ಕಾರ! ಓಹೋ ಹೋऽऽ! ಎಂದು ಅವರು. ಹೆಗಲಮೇಲೆ ಕೈಯಿಟ್ಟು ಅಪ್ಪಿಕೊಂಡ ರಸ ನಿಮಿಷಗಳಲ್ಲಿ ಹಾಗೇ ಬೆಸೆದೂ ಬೆಸೆದೂ ಒಡನಾಟಕ್ಕೆ ಸೆಳೆದಿತ್ತು. ಅವರ ಮಗಳು ಚಿ. ನಾಗವೇಣಿಯು ನನ್ನ ಹಿರಿಮಗಳು ಚಿ. ವತ್ಸಲಾಳ ಗೆಳತಿ ಆದಾಗಿನಿಂದಂತೂ ಹೆಚ್ಚು ಸಾಮಿಪ್ಯದ ಭಾವ ಉಂಟಾಗಿತ್ತು.

ಎಷ್ಟೋ ಸಲ ಬಸ್ಸಿನಲ್ಲೇ ಭೇಟಿ. ಪಕ್ಕಕ್ಕೆ ಸ್ಥಳ ನೀಡಿ ಕವಳದ ಸಂಚಿ ಬಿಚ್ಚಿ ಪಾಲ್ಗೊಳಿಸಿ ಉದ್ದಕ್ಕೂ ಮಾತಾಡುತ್ತ ಸಾಗುವುದೇ ಸಂಭ್ರಮ. ಆ ಮಾತೆಲ್ಲವೂ ಯಕ್ಷಗಾನದ ಹಾಡುವಿಕೆಯ ಸುತ್ತ ಸಂಚರಿಸಿ ಅದೇನೋ ರಾಗ-ತಾಳ, ರಾಗಸಂಯೋಜನೆಗಾಗಿ ಅವರಲ್ಲಿ ಮಥಿಸುತ್ತಿದ್ದ ಚಿಂತನಕ್ರಮ ಈ ಎಲ್ಲವೂ ಆ ರಸಘಳಿಗೆಯ ಮಿಲನ ಭಾಗ್ಯ. ಸ್ವತಃ ನಾನು ಅದರಲ್ಲಿ ಅನಭಿಜ್ಞ, ಆದರೆ ಹಾಗೆ ಅವರೊಂದಿಗೆ ಅದೆಷ್ಟೋ ಸಲ ಮಾತುಕತೆಯಿಂದಾಗಿಯೋ, ಅವರ ಯಕ್ಷಗಾನ ಸಹಚರ್ಯರುಗಳು ಭಾಗವತರ ಸಾಧನೆಯ ವಿಶೇಷತೆಯನ್ನು ವಿವರಿಸುವ ಚರ್ಚೆಯನ್ನು ಕೇಳುವುದರಿಂದಾಗಿಯೇ ನನಗೂ ಅದರೊಳಗಿನ ಒಂದಷ್ಟು ಪರಿ ಅರಿವಾಗಿರುವುದನ್ನು ಈಗ ನೆನಪಿಸಿಕೊಂಡರೆ ಭಾಗವತ ಭಾವನ ಪ್ರೀತಿಯ ಸಾಮೀಪ್ಯದ ಬೆಲೆ ಎಷ್ಟು ಎಂಬುದರ ಅರ್ಥವೂ ಹೊರಸೂಸುತ್ತದೆ. ಅವರು ಎಷ್ಟೋ ಸಲ ಭೇಟಿ ಆದಾಗಲೆಲ್ಲಾ 'ಮನೆಗೆ ಒಂದಿನ ಬಾರೋ ಮಾರಾಯಾ' ಎಂದು ಹೆಗಲ ಮೇಲೇ ಕೈಯನ್ನಿಟ್ಟು ನೀಡುತ್ತಿದ್ದ ಅವರ ಆತ್ಮೀಯ ಕರೆಗೆ ನಾನು ಓಗೊಟ್ಟದು ಕೇವಲ ನನ್ನದೊಂದು ಸ್ವಾರ್ಥ ಸಂದರ್ಭದಲ್ಲಿ, ಅದನ್ನು ಸ್ಮರಿಸಲು ನಾಚಿಕೆ, ಕುಬ್ಜತೆ ಅಂತನಿಸಿದರೂ ಆ ಭೇಟಿಯೇ ನನಗೆಂಥ ಹೆಮ್ಮೆದಾಯಕವಾಯ್ತು ಎಂಬುದೇ ಹೆಚ್ಚು ಆವರಿಸಿಕೊಳ್ಳುತ್ತದೆ. ಅವರ ಇಡೀ ವ್ಯಕ್ತಿತ್ವವನ್ನು ದರ್ಶಿಸುವ ದರ್ಪಣವಾಗುತ್ತದೆ.



೧೯೭೩ ರಲ್ಲಿ ಒಂದು ದಿನವದು. ನನ್ನ ೧೧ ವರ್ಷದ ಮಗ ರಾಘವೇಂದ್ರನಿಗೆ ನನ್ನೂರ ಶಾಲೆಯ ಗೌಡ ಮಾಸ್ತರರು 'ವಾಲಿ ವಧೆ' ಯಕ್ಷಗಾನ ಆಟದಲ್ಲಿ ಸುಗ್ರೀವನ ಪಾತ್ರ ಹಾಕಿಸಿದ್ದರು. ಈ ಮಾಸ್ತರರು ಯಕ್ಷಗಾನದ ಹವ್ಯಾಸಿ. ಮಕ್ಕಳಿಗೆ ಪ್ರತಿವರ್ಷ ಒಂದಲ್ಲ ಒಂದು ಯಕ್ಷಗಾನ ಆಟ ಕಲಿಸಿ ಪ್ರದರ್ಶನ ನೀಡುತ್ತಾ ಬಂದಿದ್ದರು. ಆ ವರ್ಷ ಧರ್ಮಾಂಗದ ದಿಗ್ವಿಜಯ, ವಾಲಿವಧೆ ಎಂಬ ಎರಡು ಪ್ರಸಂಗಗಳನ್ನು ಕಲಿಸಿ ವಾಲಿವಧೆಯಲ್ಲಿ ರಾಘವೇಂದ್ರನಿಗೆ ಈ ಪಾತ್ರ. ಆಗಲೇ ಅದು ಪ್ರದರ್ಶನ ಕಂಡು ಪ್ರಶಂಸೆ ಪಡೆದಿತ್ತು. ಅದೇ ವರ್ಷ ಹೊನ್ನಾವರದಲ್ಲಿ ಮೂರು ದಿನಗಳ ಕಾಲ ಯಕ್ಷಗಾನ ಸಮ್ಮೇಳನ. ತುಂಬಾ ಪ್ರತಿಷ್ಠಿತ ಸಮ್ಮೇಳನವದು. ಅದರಲ್ಲಿ ಒಂದು ದಿನ ಈ ಮಾಸ್ತರರ ಮಕ್ಕಳ ಯಕ್ಷಗಾನದ ಪ್ರದರ್ಶನಕ್ಕೂ ಅವಕಾಶ ದೊರಕಿತ್ತು. ವಾಲಿ ವಧೆ ತಂಡವನ್ನು ಕರೆದೊಯ್ಯಲು ನಿಶ್ಚಯಿಸಿ ರಿಹರ್ಸಲ್ ಪ್ರಾರಂಭಗೊಂಡಿತ್ತು, ನನ್ನ ಮಗನಿಗೆ ಮನೆಯಲ್ಲಿಯೇ ಪ್ರತ್ಯೇಕ ತರಬೇತಿ ನೀಡಿಸಬೇಕೆಂಬ ಅಪೇಕ್ಷೆ ಉಂಟಾಯಿತು. ಆಗ ನನ್ನೊಳಗೆ ಸುಳಿದವರು ಪ್ರೀತಿಯ ಬಾಳೆಹದ್ದ ಭಾಗವತರು. ಆದರೆ ಅದೇನು ಸುಲಭದ ಮಾತೇ ? ಕೇಳಿ ನೋಡೋಣವೆಂಬ ಆಸೆ ಹೊತ್ತು ಅವರ ಮನೆಗೆ (ಅದೇ ಪ್ರಥಮ) ಹೋದೆ.

ಅಂದಿನ ಆ ದೃಶ್ಯ. ಆ ಅನುಭವ ಈಗಲೂ ಕಣ್ಣಿಗೆ ಕಟ್ಟುತ್ತದೆ. ಆಗ ಅವರ ಮನೆಯ ಜಗಲಿಯ ಮೇಲೆ ಕಲಾಕೂಟದ್ದೇ ವೈಭವ. ಇಂದು ಯಕ್ಷಗಾನ ಭೀಷ್ಮ ಎಂದು ಖ್ಯಾತರಾಗಿರುವ ಹೊಸ್ತೋಟ ಮಂಜುನಾಥ ಭಾಗವತರೂ ಇದ್ದರು. (ಹೊಸ್ತೋಟ ಭಾಗವತರಿಗೆ ಆಗ ತಮ್ಮ ಕಲಾ ಸಾಧನೆಯ ತಪೋಭೂಮಿಯೇ ಬಾಳೆಹದ್ದ ಭಾಗವತರ ಮನೆಯಾಗಿತ್ತು ಎಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ) ಅವರ ಜೊತೆಗೆ ಇನ್ನಾರೋ ಒಬ್ಬರು ಇದ್ದ ನೆನಪು. ಅದೆಷ್ಟೋ ಹೊತ್ತು ರಾಗ ತಾಳಗಳ ಚರ್ಚೆ, ಅವುಗಳ ಪ್ರತ್ಯಕ್ಷ ನಿರೂಪಣೆ, ಹಾಡು ತಾಳಗಳ ಪ್ರದರ್ಶನ, ಪಿಟೀಲು ನುಡಿಸುವಿಕೆ - ಆ ಕುರಿತು ಚರ್ಚೆ ಹೀಗೆ ಹೊತ್ತು ಹೋಗಿರುವುದೇ ತಿಳಿಯದು. ಆ ರಸಾನುಭವ ಕುಡಿಯುತ್ತಾ ಸಮಯದ ಬಿಡುವು ಲಭಿಸುವ ತನಕವೂ ಕಾದು ಕಾದು ಆನಂತರ ನನ್ನ ಅಳಲನ್ನು ನಿವೇದಿಸಿಕೊಂಡಿದ್ದೆ. ನಾಲ್ಕು ದಿನ ನಮ್ಮ ಮನೆಗೇ ಬಂದು ತರಬೇತುಗೊಳಿಸಲು ಅವರು ಒಪ್ಪಿಕೊಂಡರು. ಅವರ ಸಹೃದಯತೆ, ಕಲಾ ಪ್ರೇಮ, ಆ ಹೃದಯದ ಮಿಡಿತ, ವೈಶಾಲ್ಯತೆ, ಸರಳ ಸಭ್ಯತೆಯ ಸ್ವಭಾವಕ್ಕೆ ಬೇರೆ ವಿಶ್ಲೇಷಣೆಯೇ ಬೇಡ. ಬಿಡುವೇ ಇಲ್ಲದಂತೆ ಮುಳುಗಿರುವ ಅವರು ಅವನ್ನೆಲ್ಲ ಬಿಟ್ಟು ನಮ್ಮ ಮನೆಗೇ ಬಂದು ಮೂರು ನಾಲ್ಕು ದಿನ ತಂಗಿ ನನ್ನ ಮಗನನ್ನು ತಿದ್ದಿ ತೀಡಿ ಸಿದ್ಧಗೊಳಿಸಿದರು. ಅವರ ವ್ಯಕ್ತಿತ್ವದ ಆ ಘನತೆ ಇಡೀ ಕಲಾಲೋಕಕ್ಕೊಂದು ಆದರ್ಶದ ಸಂಗತಿ ಎಂಬುದು ಬಹುಶಃ ಆಗ ನನಗಷ್ಟೇ ಅರ್ಥವಾಗಿರಬಹುದೇನೋ.

ಈ ಘಟನೆ ಅಷ್ಟಕ್ಕೇ ಮುಗಿಯಲಿಲ್ಲ. ನಾನು ಹೀಗೆ ಪ್ರತ್ಯೇಕ ತರಬೇತಿಗೊಳಿಸಿದ್ದರ ವ್ಯತಿರಿಕ್ತ ಪ್ರತಿಕ್ರಿಯೆಯೆಂಬಂತೆ ಹೊನ್ನಾವರ ಸಮ್ಮೇಳನಕ್ಕೆ ಕರೆದೊಯ್ಯುವ ಪ್ರಸಂಗದ ತಂಡ 'ವಾಲಿವಧೆ' ಯದಲ್ಲ, ಧರ್ಮಾಂಗದ ದಿಗ್ವಿಜಯ ಎಂದು ನಿರ್ಧರಿಸಿರುವುದು ತಿಳಿದುಬಂತು.



ಭಾಗವತರನ್ನು ಕರೆಸಿಕೊಂಡು ಶ್ರಮ ನೀಡಿ ಹಿಂಸಿಸಿ ಹೀಗೆ ವ್ಯರ್ಥವಾಯಿತಲ್ಲ ಎಂಬ ಅತಿಯಾದ ದುಃಖ ಹೊತ್ತು ಅವರಲ್ಲಿಗೆ ತೆರಳಿ ವಿಷಯ ತಿಳಿಸಿದೆ. ''ನೀವು ಮಗನನ್ನು ಕರೆದುಕೊಂಡು ಬನ್ನಿ. ಏನು ಮಾಡುವುದೆಂದು ನಾನು ನೋಡಿಕೊಳ್ಳುವೆ'' ಎಂದು ಏನೂ ಆಗಿಲ್ಲವೆಂಬಂತೆ ಒಂದಿನಿತೂ ಖೇದಗೊಳ್ಳದೇ ಕಡ್ಡಿ ಮುರಿದಂತೆ ಹೇಳಿಬಿಟ್ಟರು.

ಆ ಸಮ್ಮೇಳನದಲ್ಲಿ ಅವರೂ ಇದ್ದರು. ನಾನೂ ಮಗನೊಂದಿಗೆ ಮೂರೂ ದಿನವಿದ್ದೆ. ಆ ಎರಡನೆಯ ದಿನ ಮಧ್ಯಾಹ್ನ 'ರಾಗ ರಸ ಭಾವ' ಅಭಿವ್ಯಕ್ತಿ ಪ್ರದರ್ಶನ ಎಂಬ ಒಂದು ಶ್ರೇಷ್ಠ ಗೋಷ್ಠಿ. ಮಲ್ಲಗದ್ದೆ ಗಣೇಶ ಹೆಗಡೆ, ಶಂಭು ಹೆಗಡೆ, ಮಹಾಬಲ ಹೆಗಡೆ, ಸ್ವತಃ ಶಿವರಾಮ ಹೆಗಡೆ ಕೆರೆಮನೆ ಇವರೆಲ್ಲ ವಿವಿಧ ಪದ್ಯಗಳನ್ನು ಭಾಗವತರು ಹಾಡಿದಂತೆ ಅದರಲ್ಲಿಯ ರಸ ಭಾವಾಭಿವ್ಯಕ್ತಿಯನ್ನು ಬಹು ಶಾಸ್ತ್ರೀಯವಾಗಿ ಅದು ಹೇಗಿರಬೇಕೆಂಬುದನ್ನು ಪ್ರದರ್ಶಿಸಿ ತೋರಿಸುತ್ತಲಿದ್ದರು. ಆಗ ಕಾಲಿಗೆ ಗೆಜ್ಜೆ ಮಾತ್ರ ಕಟ್ಟಿಕೊಂಡು ಉಳಿದಂತೆ ಸಾಮಾನ್ಯ ಉಡುಪಿನಲ್ಲಿರುತ್ತಿದ್ದರು.

ಆ ಮಧ್ಯೆ ನಮ್ಮ ಬಾಳೆಹದ್ದ ಭಾಗವತರು ನನ್ನ ಮಗನನ್ನ ಕೈಹಿಡಿದು ಕರೆದೊಯ್ದರು. ಸ್ವಲ್ಪೇ ಸಮಯದಲ್ಲಿ ನನ್ನ ಮಗನಿಗೆ ಕಾಲಿಗೆ ಗೆಜ್ಜೆ ಕಟ್ಟಿಸಿ ರಂಗಕ್ಕೆ ಕರೆತಂದು ತಾವೇ ಸ್ವತಃ ತಾಳ ಹಿಡಿದು ಭಾಗವತಿಕೆಗೆ ಕುಳಿತುಬಿಟ್ಟರು. ಯುವ ಮೃದಂಗ ವಾದಕ ಬಳ್ಕೂರು ಕೃಷ್ಣ ಯಾಜಿ ಮದ್ದಳೆ ಹಿಡಿದರು. ತರಬೇತುಗೊಳಿಸಿದ ಪದ್ಯಗಳಲ್ಲೊಂದಾದ

'ಸೂರ್ಯವಂಶದಾऽऽ ರಾಯರಾಡಿದऽ ಮಾತು ತಪ್ಪರು.........' ಎಂದಿರುವ ಸುಗ್ರೀವನ ಪದ್ಯವನ್ನು ರಾಗವಾಗಿ ಆಲಾಪಗೊಳಿಸಿ, ಪುನಃ ಪುನಃ ಸಲ್ಲನ್ನು ಎತ್ತಗಡೆಗೊಳಿಸಿ ಅವರು ಹಾಡುತ್ತಾ ತಾಳ ಝುಣಿಕಿಸುತ್ತಾ ಹೋದಂತೆ ನನ್ನ ಮಗನೂ ಆ ಆ ಪದ್ಯಗಳಿಗೆ ರಸ ಭಾವ ಅಭಿನಯ (ಮುದ್ರೆ ಸಹಿತ) ಪ್ರದರ್ಶಿಸಿದಾಗ ಇಡೀ ಸಭೆಗೋ ರೋಮಾಂಚನ. ಕರತಾಡನ. ನನಗಂತೂ ಇಡೀ ಜೀವಭಾವ ಪುಳಕಿತ. ಅದು ಬಾಳೆಹದ್ದ ಭಾಗವತರ ಹಾಡುಗಾರಿಕೆಯಲ್ಲಿಯ ವಿಶೇಷ ವೈಖರಿಯ ದರ್ಶನವೂ ಆಗಿತ್ತು. ಮರುದಿನ ಉದಯವಾಣಿಯಲ್ಲಿ ನನ್ನ ಮಗನ ಫೋಟೋ ಸಹಿತ 'ಪುಟಾಣಿಯ ಕಲಾ ಪ್ರದರ್ಶನದ ಮೆರುಗು' ಎಂದು ಬಾಕ್ಸ ಸುದ್ದಿ. ಭಾಗವತರ ಉಲ್ಲೇಖ. ಎಂಥಾ ಹೆಮ್ಮೆ!

ನಮ್ಮ ಬಾಳೆಹದ್ದ ಭಾಗವತರ ತರಬೇತು ಸಾಮರ್ಥ್ಯ ಹಾಗೂ ಅವರಲ್ಲಿ ತುಂಬಿಕೊಂಡಿರುವ ಕುಣಿ-ಕುಣಿದು ಉಕ್ಕಳಿಸುವ ಯಕ್ಷಗಾನ ಕಲಾ ಪ್ರೀತಿ, ಜೊತೆಗೇ ಅದನ್ನು ಅಪ್ಪಿಕೊಂಡಿರುವ ಅವರ ಸರಳ ಸದ್ಭಾವ, ಸ್ನೇಹಭಾವಗಳನ್ನು ನಾವಿಂದೂ ಕಾಣಬಹುದೆಂಬುದಕ್ಕಾಗಿ ಈ ಘಟನೆಯನ್ನು ಸಾಕ್ಷಿಯಾಗಿ ಸ್ಮರಿಸಿಕೊಂಡೆ. ಶ್ರೀಯುತರಿಗೆ ಸಲ್ಲುವ ಅಭಿನಂದನೆ ನಿಜಕ್ಕೂ ಹೆಮ್ಮೆದಾಯಕ. ಅವರಿಗೆ ಇನ್ನೂ ಬಹುಕಾಲ ಆಯುರಾರೋಗ್ಯವನ್ನೂ, ಸಮೂಹ ಬಾಂಧವ್ಯವನ್ನೂ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುವೆ.

ಪುಟ ಪ್ರಾಯೋಜಕರು : **ಶ್ರೀ ಲಕ್ಷ್ಮೀನಾರಾಯಣ ಶಂಭು ಶಾಸ್ತ್ರಿ, ತುಂಬೇಬೀಡು**



# ಯಕ್ಷಗಾನದ ಶಾಸ್ತ್ರೀಯತೆಗೆ ಕೃಷ್ಣ ಭಾಗವತರ ದಾಖಲೆ

**- ಮಹಾಬಲ ಹೆಗಡೆ, ಕೆರೆಮನೆ**

ನಿರೂಪಣೆ : **ಉಷಾ ಐನಕೈ**

ನಾನು ಬಾಳೆಹದ್ದ ಕೃಷ್ಣ ಭಾಗವತರನ್ನು ಪರಿಪೂರ್ಣವಾಗಿ ಬಲ್ಲೆ ಎಂದು ಹೇಳಿಕೊಳ್ಳಲಾರೆ. ಆದರೆ ಅವರನ್ನು ನೋಡಿ ಅವರ ಬಗ್ಗೆ ಕೇಳಿ ಬಲ್ಲವನಾದ್ದರಿಂದ ಕೃಷ್ಣ ಭಾಗವತರ ಸಾಧನೆಯ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಯಕ್ಷಗಾನ ಕಲಾ ಪ್ರಕಾರದಲ್ಲಿ ಭಾಗವತರೊಬ್ಬರು ಸಂಶೋಧನೆ ಮಾಡಿ ಆ ಕಲೆಯ ಔನ್ನತ್ಯಕ್ಕೆ ಪ್ರಯತ್ನಿಸುತ್ತಾರೆಂದರೆ ಅದು ಸ್ವಾಗತಾರ್ಹ ವಿಷಯ.

ಏಕೆಂದರೆ, ಯಕ್ಷಗಾನದಲ್ಲಿ ಪ್ರಮುಖ ಪಾತ್ರವೇ ಭಾಗವತ. ಒಂದರ್ಥದಲ್ಲಿ ಯಕ್ಷಗಾನದ ಸೂತ್ರದಾರನೇ ಭಾಗವತ. ಯಕ್ಷಗಾನ ಕಲೆಯ ಪೂರ್ಣ ಆಕಾರಕ್ಕೆ ಭಾಗವತಿಕೆಯು ಅಂಗೋಪಾಂಗವಿದ್ದಂತೆ. ಹಾಗಾಗಿ ಭಾಗವತಿಕೆಯ ಯಾವುದೇ ಅಂಗ ಊನವಾದರೂ ಆಕಾರ ಅಪೂರ್ಣವಾಗುತ್ತದೆ. ಪಾತ್ರಗಳ ಆಗಮನ, ನಿರ್ಗಮನ, ಮುಕ್ತಾಯ ಹೀಗೆ ಪ್ರತಿಯೊಂದು ಚಲನೆಯೂ ಭಾಗವತರ ಆಣತಿಯಂತೆ ಅಕ್ಷರ ಹಿಡಿತದಲ್ಲಿಯೇ ಇರುತ್ತದೆ. ಒಟ್ಟರ್ಥದಲ್ಲಿ ಭಾಗವತ ತಂಡದ ಸಂಪೂರ್ಣ ಜವಾಬ್ದಾರಿ ಹೊತ್ತ ನಿರ್ವಾಹಕನಿದ್ದಂತೆ. ಈ ಅರಿವು ಭಾಗವತರಲ್ಲಿರಬೇಕು. ನನಗೆ ತಿಳಿದಂತೆ ಅಂತಹ ಸಮರ್ಥರ ಸಾಲಿನಲ್ಲಿ ಬಾಳೆಹದ್ದ ಕೃಷ್ಣ ಭಾಗವತರು ಎದ್ದು ಕಾಣುತ್ತಾರೆ.

ಬಾಳೆಹದ್ದ ಕೃಷ್ಣ ಭಾಗವತರ ರಾಗ ಸಂಶೋಧನೆ ಇನ್ನೊಂದು ಕುತೂಹಲದ ವಿಷಯ. ಏಕೆಂದರೆ ಆಳವಾಗಿ ಅಭ್ಯಾಸ ಮಾಡಿದರೆ ತಿಳಿಯುತ್ತದೆ. ಯಕ್ಷಗಾನವೂ ಕೂಡಾ ಶಾಸ್ತ್ರೀಯ ಚೌಕಟ್ಟಿನಲ್ಲಿಯೇ ಅರಳಿದ ಕಲೆ. ಯಕ್ಷಗಾನ ಜಾನಪದವೋ ಶಾಸ್ತ್ರೀಯವೋ ಎನ್ನುವ ಜಿಜ್ಞಾಸೆ ಇನ್ನೂ ನಡೆಯುತ್ತಿದೆ. ಈ ಕುರಿತು ಒಂದು ಸಮಾಜ ವ್ಯಾಪಿ ಚಿಂತನೆಯೇ ನಡೆಯಬೇಕಿದೆ. ಇದಕ್ಕೆ ಭಾಗವತರ ರಾಗ ಸಂಶೋಧನೆ ನಾಂದಿಯಿದ್ದಂತೆ. ಯಕ್ಷಗಾನದಲ್ಲಿ ಕೃಷ್ಣ ಭಾಗವತರು ಶಾಸ್ತ್ರೀಯ ರಾಗಗಳನ್ನು ಬಳಸಿ ಶುದ್ಧ ಶಾಸ್ತ್ರೀಯವಾಗಿ ಹಾಡಿದವರು. ಅದು ಯಶಸ್ಸನ್ನೂ ಕಂಡಿದೆ. ಹೆಸರಾಂತ ಕಲಾವಿದರಿಂದ ಈ ಪ್ರಯೋಗಕ್ಕೆ ಪ್ರಶಂಸೆಗಳೂ ಸಿಕ್ಕಿವೆ. ಹೀಗೆ ಆಖ್ಯಾನದ ಪಾತ್ರ ಸನ್ನಿವೇಶಗಳಿಗೆ ತಕ್ಕಂತೆ ವಿವಿಧ ರಾಗಗಳಿಗೆ ಅಳವಡಿಸಿ ಹಾಡಿದಾಗ ಪಾತ್ರಗಳ ಭಾವ ಸಂದರ್ಭಗಳ ರಸ ಪೋಷಣೆ ಅದ್ಭುತವಾಗಿ ಮೂಡಿ ಬರುತ್ತದೆ. ಈ ಹಿನ್ನೆಲೆಯಲ್ಲೂ ಕೃಷ್ಣ ಭಾಗವತರು ಶ್ರೇಷ್ಠರು



ಎಂದು ಹೇಳಲೇಬೇಕು.

ಕೃಷ್ಣ ಭಾಗವತರದ್ದು ಮುಖ್ಯವಾಗಿ ಕರ್ನಾಟಕಿ ಶೈಲಿ. ಅವರು ಭಾಗವತಿಕೆಯನ್ನು ಪಾರಂಪರಿಕ ಹಿನ್ನೆಲೆಯಲ್ಲಿ ಸಾಂಪ್ರದಾಯಿಕವಾಗಿ ಅಭ್ಯಾಸ ಮಾಡಿದವರು. ಹಾಗಾಗಿ ಇವರಲ್ಲಿ ಎಲ್ಲೂ ಅನುಕರಣೆಯ ಛಾಯೆ ಇಲ್ಲ. ಸ್ವಂತ ಪ್ರತಿಭೆ ಪರಿಶ್ರಮ ಹಾಡುಗಾರಿಕೆಯ ಶ್ರದ್ಧೆ ಅವರಲ್ಲಿ ಎದ್ದು ಕಾಣುತ್ತದೆ. ಜೊತೆಗೆ ಅವರಿಗೆ ಸಂಪ್ರದಾಯದ ಕುರಿತಾಗಿ ಅಪಾರ ತಿಳುವಳಿಕೆಯೂ ಇದೆ.

ಕೃಷ್ಣ ಭಾಗವತರ ಹಾಡಿನಲ್ಲಿ ಶಾಸ್ತ್ರೀಯತೆಯ ಜೊತೆಗೆ ಸಾಹಿತ್ಯದ ಸ್ಪಷ್ಟತೆ, ರಸ, ಭಾವ ಪೋಷಣೆ ಲಯದ ಮೇಲೆ ನಿಖರವಾದ ಹಿಡಿತ ಕಾಣಬಹುದು. ಪ್ರಾಯಶಃ ಅದಕ್ಕೆ ಮುಖ್ಯ ಕಾರಣ ಅವರ ವಯೋಲಿನ್ ಸಂಗಾತಿ. ತಂತಿ ವಾದ್ಯಗಳಿಗೆ ಸ್ವರ ಕಂಪನಾರ್ಥದ ನೂರಾರು ಸಾಧ್ಯತೆಗಳಿರುತ್ತವೆ. ಇದರಲ್ಲಿ ನಾದಶುದ್ಧಿ, ಸ್ವರ ಶುದ್ಧಿ, ಸ್ವರಗಳ ಸೂಕ್ಷ್ಮಾತಿಸೂಕ್ಷ್ಮ ವಿಸ್ತಾರ ಮುಂತಾದವುಗಳನ್ನೆಲ್ಲ ಕಾಣಬಹುದು. ಹಾಗಾಗಿ ಕೃಷ್ಣ ಭಾಗವತರು ಸ್ವತಃ ವಯೋಲಿನ್ ವಾದಕರಾದ್ದರಿಂದ ಅವರ ಹಾಡುಗಾರಿಕೆಯಲ್ಲಿ ಒಂದು ಆಳವಾದ ನೋಟ ಸಿಗಲು ಸಾಧ್ಯ.

ಭಾಗವತಿಕೆ ಎಂದರೆ ಸುಲಭವಾಗಿ ದಕ್ಕುವ ವಿದ್ಯೆಯಲ್ಲ. ಶ್ರದ್ಧೆ, ಪರಿಶ್ರಮ, ಹೋರಾಟದ ಮನೋಭಾವ ಬೇಕು. ಅನುಕರಣೆಯಿಂದಲೇ ಎಷ್ಟೋ ಜನ ಭಾಗವತರೆನಿಸಿಕೊಂಡಿದ್ದನ್ನು ನಾವು ಕಾಣುತ್ತೇವೆ. ಆದರೆ ಯಕ್ಷಗಾನದಂತಹ ಶಾಸ್ತ್ರೀಯ ಕಲೆಯ ಹಾಡುಗಾರಿಕೆ ಕೇವಲ ಅನುಕರಣೆಯಿಂದ ದಕ್ಕುವ ವಿದ್ಯೆಯಲ್ಲ. ಅನೇಕ ಸಲ ಅನುಕರಣೆ ಅಶಾಸ್ತ್ರೀಯವೇ ಆಗಿರುತ್ತದೆ. ಯಕ್ಷಗಾನದ ಹಾಡುಗಾರಿಕೆ ಸಂಗೀತ, ಲಯ ಹಾಗೂ ಸಾಹಿತ್ಯ ಪ್ರಧಾನವಾದಂತ ವಿದ್ಯೆ. ಇದಕ್ಕೆ ಆ ಮಟ್ಟದ ಸಂಸ್ಕಾರ ಮತ್ತು ಅಭ್ಯಾಸ ಬೇಕೇ ಬೇಕು. ಬಾಳೆಹದ್ದ ಭಾಗವತರನ್ನು ಅಭ್ಯಸಿಸಿದಾಗ ಈ ಎಲ್ಲ ಗುಣಗಳನ್ನು ಅಪ್ಪಟವಾಗಿ ಕಾಣಬಹುದು.

ಯಕ್ಷಗಾನ ಕಲೆ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬಂದಂತಹದು. ಎಲ್ಲರೂ ಸಾಮಾನ್ಯವಾಗಿ ಅನುಸರಿಸಲೇಬೇಕಾದ ಲಿಖಿತ ಸಂವಿಧಾನ ಇದಕ್ಕಿಲ್ಲ. ಹಾಗಾಗಿ ಕಾಲಾಂತರದಲ್ಲಿ ಈ ಕಲೆಯಲ್ಲಿ ಆಗಿ ಹೋಗಿರಬಹುದಾದ ಅಪಭ್ರಂಶತೆಯನ್ನೂ ಸ್ವೀಕರಿಸುವ ಅನಿವಾರ್ಯತೆ ನಮಗೆ ಎದುರಾಗುತ್ತದೆ. ಯಾರಿಗೆ ಯಾವುದನ್ನೂ ಮಾಡಲಾಗುವುದಿಲ್ಲವೋ ಅದೆಲ್ಲವೂ ಅರ್ಥಹೀನ ಎನ್ನುವ ಪಲಾಯನವಾದದ ಕಾಲ ಇದು. ಹಾಗಾಗಿ ಭಾಗವತಿಕೆಯಲ್ಲೂ ಶಾಸ್ತ್ರೀಯವಾಗಿ ಮಂಡಿಸಲಾಗದವರೆಲ್ಲ ಯಕ್ಷಗಾನಕ್ಕೆ ಶಾಸ್ತ್ರೀಯ ಅಷ್ಟು ಸಮಂಜಸವಲ್ಲ ಎಂದು ಜಾರಿಕೊಳ್ಳುತ್ತಾರೆ. ಹೀಗೆ ಮುಂದುವರೆದರೆ ಮುಂದೊಂದು ಕಾಲದಲ್ಲಿ ಯಕ್ಷಗಾನದ ಒಳ್ಳೆಯ ಅಂಶಗಳೆಲ್ಲ ಜಾರಿಹೋಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಕೃಷ್ಣ ಭಾಗವತರ ಪ್ರಯತ್ನಗಳೆಲ್ಲ ದಾಖಲಾಗಬೇಕು. ಇದು ಮುಂದಿನವರಿಗೆ ಮಾರ್ಗದರ್ಶಿಯಾದೀತು.



# ಸತ್ಕೃತಿ

-ಎ. ತಿ. ಶೀಗೇಹಳ್ಳಿ

ಶ್ರೀ ಕೃಷ್ಣ ಭಾಗವತ ಬಾಳೇಹದ್ದ ಇವರನ್ನು ಶ್ರೀ ರಾಜರಾಜೇಶ್ವರಿ ಯಕ್ಷಗಾನ ಸಂಸ್ಥೆ(ರಿ.) ಮಂಚಿಕೇರಿಯವರು ಸನ್ಮಾನಿಸುವ ಒಂದು ಸುಪ್ರಯೋಜಕ ಕಾರ್ಯವನ್ನು ಕೈಗೊಳ್ಳಲಿದ್ದಾರೆ ಎಂಬ ಸುದ್ದಿಯೇ ನಮಗೆಲ್ಲ ಸಂತಸದ ವಿಚಾರ.

ಯಕ್ಷರಂಗದಲ್ಲಿ ಭಾಗವತ ಸೂತ್ರಧಾರ. ಹಳೆಯ ಸಂಸ್ಕೃತ ನಾಟಕಗಳಿಗಿಂತ ಮಿಗಿಲು. ಸಂಸ್ಕೃತ ನಾಟಕಗಳಲ್ಲಿ ಸೂತ್ರಧಾರ ಒಮ್ಮೆಯೋ ಎರಡು ಬಾರಿಯೋ ಬಂದು ಹೋದರೆ ಸೂತ್ರಧಾರತ್ವದ ಕೆಲಸ ಮುಗಿಯುತ್ತಿತ್ತು. ಯಕ್ಷಗಾನದಲ್ಲಿ ರಾತ್ರಿ ಪ್ರಾರಂಭವಾದರೆ ಬೆಳತನಕ ಈ ಸೂತ್ರಧಾರನ ಅತ್ಯವಶ್ಯಕತೆ ಬೇಕೇ ಬೇಕಾಗುತ್ತದೆ. ಭಾಗವತನ ಪದ್ಯಗಳೇ ಕಥೆಯ ಬೆನ್ನೆಲುಬು ಹಾಗೂ ಮುನ್ನಡೆಯೂ. ಹಲಬಗೆಯಿಂದ ನೋಡಿದರೂ ನಿರ್ದೇಶಕನೇ ಭಾಗವತ. ಶಬ್ದಶಃ ಅರ್ಥ ಕಲ್ಪಿಸಿದರೂ ಭಾಗವ - ತಾ. ಅವನು ಭಾಗವ ಕೊಟ್ಟರೇ ಮುಂದೆಲ್ಲ ಸಾಗುವುದು. ಅದು ರಂಗದಲ್ಲೂ, ಪ್ರಸಂಗದಲ್ಲೂ (ತಾಳಮದ್ದಲೆ) ಸಹ.

ಗಣಪತಿ ಸಹಸ್ರನಾಮದಲ್ಲಿ 'ಭಾಗವತಾಯನಮಃ' ಎಂಬುದೊಂದು ಕೀರ್ತಿನಾಮ ಬರುತ್ತದೆ. ಅದು ಗಣಪತಿ ಶಕ್ತಿಯನ್ನವಲಂಬಿಸಿದೆ. ಯಕ್ಷಗಾನದಲ್ಲಿಯೂ ಗಣಪತಿ ಪೂಜೆಯೇ ಪ್ರಾಮುಖ್ಯ ಅಂಶ.

ಮೊದಲೆಲ್ಲ ಭಾಗವತರ ಪಾದಮುಟ್ಟಿ ವಂದಿಸುವ ಸಂಪ್ರದಾಯವಿತ್ತು. ಈಗ ಈ ಸಂಪ್ರದಾಯ 'ಅಳೆಸೀಕು' ಎನ್ನುವಂತಾಗಿದೆ. ಪರಂಪರೆಯನ್ನು ಕಳೆಯುವುದರಲ್ಲಿ ನಾವು ಜಾಣರು.

ಯಕ್ಷಗಾನ ಪಾತ್ರಧಾರಿಗಳೇ ಕಡಿಮೆಯಾಗುತ್ತಿರುವ ಈ ಕಾಲದಲ್ಲಿ ಹೆಚ್ಚು ಶ್ರಮವಿಲ್ಲದೆ ಕಾರ್ಯ ಸಾಗಿಸಬಲ್ಲ ಅರ್ಥಧಾರಿಗಳೂ ಬೆರಳಲ್ಲೆಣಿಸುವ ಮಟ್ಟಕ್ಕೆ ಬಂದ ನೂತನ ಹಾಗೂ ಸೂಕ್ಷ್ಮವಾದ ಈ ದಿನಗಳಲ್ಲಿ ಭಾಗವತರೂ ಅತಿ ಕಡಿಮೆ ಸಿದ್ಧರಾಗುತ್ತಿದ್ದಾರೆನ್ನಲಡ್ಡಿಯಿಲ್ಲ. ಇನ್ನು ಶ್ರೇಷ್ಠಿಗಳಂತೂ ಇಡೀ ಜಿಲ್ಲೆಗೇ ನಾಲ್ಕೈದು ಎನ್ನುವಂತಾದದ್ದು ಒಂದು ಕಲಾ ಪರಂಪರೆಯನ್ನೇ ಕಳೆದು ಹಾಕುವ ಮೋಡಿಯದಾಗಿದೆ.

ಅದರಲ್ಲೂ 'ಯಕ್ಷಗಾನ ಶಾಸ್ತ್ರೀಯ ಕಲೆ ಅಲ್ಲ; ಹೌದು. ಜಾನಪದ ಕಲೆಯಿದು ಹೌದು, ಅಲ್ಲ' ಈ ತಾಕಲಾಟದಲ್ಲಿ ರೂಢಿಯಿಂದಲೇ ಪದ್ಯಗಳನ್ನು ತಾಳ ಲಯಗಳನ್ನು 'ಶ್ರುತಿ' ಎಂಬಂತೆ ಕಿವಿಯಿಂದ ಕೇಳಿ, ಆಟಗಳನ್ನು ನೋಡಿ ರೂಢಿಸಿಕೊಳ್ಳಲು ಅರ್ಥಕ್ಕರ್ಥ ಆಸಕ್ತರು ಹೆದರಿಯೇ ಹಿಂದೆ ಸರಿದಿದ್ದಾರೆ ಎಂದೇ ನನ್ನ ಅನುಭವ.

ರಾಗತಾಳ ಪ್ರಧಾನವೇ, ರಸ ಪ್ರಧಾನವೇ ಎಂಬ ತಾಕಲಾಟದಲ್ಲಿ ಧ್ವನಿಯಿದ್ದವರೂ,



ತುಸು ಬಲ್ಲಾದವರೂ ಅಂಜಿಯೇ ಹಲವರು ಈ ಯಕ್ಷಗಾನದ ಗೋಷ್ಠಿಯೇ ಬೇಡವೆಂದು ಬೇರೆಡೆಗೆ ಸೆಳೆದು ಹೋದವರಿದ್ದಾರೆ. ಈ ಮುಸುಕಿನ ಗುದ್ದಾಟವನ್ನು ಬಿಡಿಸಬಲ್ಲ ಭಾಗವತರಂತೂ ಹತ್ತರೊಳಗೇ ಒಂದು ಎರಡು ಎಂದು ಎಣಿಸುವಷ್ಟು ಇಲ್ಲವೆಂದು ಹೇಳಿದರೆ ಅಚ್ಚರಿಯೇ ಆಗುತ್ತದೆ ಈ ಕಲೆಯ ಉಳಿವಿನ ಬಗೆಗೆ.

ಇಂಥ ಸನ್ನಿವೇಶಗಳಲ್ಲಿ ಯಾರು ದಾರಿ ತೋರಬಲ್ಲರು?

ಮಟ್ಟು ಎಂದರೆ ಏನು? ತಿಟ್ಟು ಎಂದರೆ ಏನು? ಪ್ರಸಂಗ ಪದ್ಯಗಳ ದಾಟಿಯೇ (ಚಾಲ್) ಏಕೆ ಬೇಕು? ಪದ್ಯಗಳಲ್ಲಿ ಲಯ ತಾಳಗಳ ಮುರಿಯುವಿಕೆ ಏಕೆ? ಯಾವಾಗ? ಕೋರೆ ಎಂಬ ವಿಭಾಗ ಯಾಕೆ ಉಪಯೋಗಿಸುತ್ತಾರೆ? ಮುಗಿತಾಯದ ದ್ಯೋತಕವೇನು? ಇವೆಲ್ಲ ಪ್ರಶ್ನೆಗಳೇ, ಉತ್ತರಿಸಬೇಕಾದವುಗಳೇ?

ಭಾಗವತಿಕೆಯ ರಾಗ 'ಕರ್ಣಾಟಕಿ' ಎಂದು ತುಸುವೇ 'ಸರಿಗಮಪದನಿಸ' ವೆಂದು ಬೆರಳಿಡಲು ಬಲ್ಲವರೂ ಸಹ ಈ ಪದ್ಯ ಈ ರಾಗದಲ್ಲಿ ಬರಬೇಕಾದದ್ದು ಎಂದು ಹೇಳುವವರೂ ಅನೇಕ ಮಂದಿ ರಸ್ತೆ ದೀಪವಾಗಿ ನಿಂತಿದ್ದಾರೆ ಈಗಿತ್ತಲಾಗಿ. ಯಕ್ಷಗಾನ ಪದ್ಯ ಭಾವಗಳನ್ನೇ ಲಕ್ಷಿಸಿ ಖಂಡಿತ ಸಾಗಿದೆ, ಸಾಗುತ್ತಿವೆ, ಸಾಗಬೇಕಾದದ್ದು. ರಸವೇ ಇದರ ಜೀವಾಳ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೂ ದಕ್ಷಿಣ ಕನ್ನಡದಲ್ಲೂ (ಹಿಂದೆ) ಪ್ರಸಂಗ (ತಾಳಮದ್ದಲೆ) ಗಳಲ್ಲಿ ಸಹ ಅರ್ಥ ಹೇಳುವವರು ಪದ್ಯಗಳ ಎತ್ತುಗಡೆ ಹಾಗೂ ಹಾವ ಬಾವ ಮಾಡುತ್ತಿದ್ದರೆನ್ನುವುದಕ್ಕೆ ತುಂಬಾ ಸಾಕ್ಷಿಗಳಿವೆ. ಯಕ್ಷಗಾನ ಶ್ರೇಷ್ಠಿಗಳಾದ ಶ್ರೀ ಶೇಣಿಯವರು ತಮ್ಮಲ್ಲೂ ಈ ಹಾವಭಾವವಿತ್ತು ಮೊದಲು ಎಂದೇ ಹೇಳಿದ್ದಾರೆ. ಅದನ್ನು ಕಂಡವರೂ ಇದ್ದಾರೆ. ಈ ಬಗೆಯು ದಕ್ಷಿಣ ಕನ್ನಡದಲ್ಲಿ ಕಳೆದದ್ದು ಮೊದಲು. ದ. ಕನ್ನಡದಿಂದ ಈಗ 25-30 ವರ್ಷಗಳಿಂದ ಬಂದವರು ಆ ಬಗೆಯನ್ನು ಕೇವಲ (ಹಲಬಾರಿ) ಚರ್ಚಾಕೂಟದಂತೆ ಮಾಡಿ ರಸಕಸವಾದ ಸಂದರ್ಭಗಳೂ ಕಡಿಮೆಯೇನಿಲ್ಲ, ಈಗ ಈ ರಸ ಪ್ರಚೋದನೆಗೆ ಅನುವಾಗುವ ಹಾವಭಾವವನ್ನು ಬಿಟ್ಟು ಉ. ಕ. ಜಿಲ್ಲೆಯವರು ಅತ್ತ ಪದ್ಯದ ಅರ್ಥವೂ ಅಲ್ಲ, ಇತ್ತ ರಸ ಪ್ರಚೋದನೆಯೂ ಅಲ್ಲ. ಕೊನೆಗೆ ಮಾತುಗಾರಿಕೆಯ ಮಲ್ಲ ಯುದ್ಧವೂ ಇಲ್ಲ ಎಂಬಲ್ಲಿಗೆ ನಿಂತಿರುವುದು ಕಂಡುಬರುತ್ತಿದೆ. ಹಾಗಾಗಿ ರಂಜನೆ ರಸಗಳನ್ನು ತುಳಿದು ನಿಲ್ಲುವ ಹಂತದಲ್ಲಿದೆ. ಇದು ಸಾಮಾಜಿಕವಾದ ಮಾತು. ಅಪವಾದ ಮಾತಿಗೆ ಇಲ್ಲ ಎಂತಲ್ಲ!

ಇಂಥ ಸಮಸ್ಯೆಗಳಲ್ಲೆಲ್ಲ ಒಂದು ಸರಿಯಾದ ಮ್ಯಾಮ ಬೇಕಾಗಿದೆ. ವಿಚಾರ ಸಂಕಿರಣದ ಅವಶ್ಯಕತೆ ಉ. ಕ. ಜಿಲ್ಲೆಯವರಿಗಂತೂ ಇದ್ದೇ ಇದೆ.

ಮೊದಲು ಒಂದು ಹಳ್ಳಿಯಲ್ಲಿ ಹತ್ತೆಂಟು ಜನ ಈ ಯಕ್ಷಗಾನ ಕಲಾವಿದರು ಇರುತ್ತಿದ್ದರು. ಅವರಲ್ಲೇ ಗುಂಡು ಛಾಪುಗಳನ್ನು ತೋರಿಸಬಲ್ಲ ಮೃದಂಗಕಾರರು ಇರುತ್ತಿದ್ದರು. ಈಗ ಈ ತಾಕಲಾಟದಲ್ಲಿ ಸರಿಯೋ ತಪ್ಪೋ ಎಂಬುದರ ನಿಜವರಿಯದೇ ಹಿಂದೆ ಸರಿದವರೇ ಅನೇಕರಿದ್ದಾರೆ.



ಆದರೆ ರಸಕ್ಕೆ ಯಾವ ಹಂತದಲ್ಲಿಯೂ ಕಡಿಮೆ ಇದ್ದಂತನ್ನಿಸುವುದಿಲ್ಲ. ಭಾಗವಹಿಸಲು ಹಿಂಜರಿಯುತ್ತಿದ್ದಾರೆ. ಏಕೆಂದರೆ ಈ ಜಿಲ್ಲೆಗೆ ಈ ಯಕ್ಷಗಾನವೊಂದೇ ರೂಢಿಯಿಂದಲೂ ಸರ್ವಶಕ್ತಿ ಕಲೆಯೆಂದೇ ಆಗಿತ್ತು.

ಹೀಗಿರುವಾಗ ಯಕ್ಷಗಾನದ ಅನೇಕ ಸಮಸ್ಯೆಗಳಿಗೆ ಉತ್ತರ ಕೊಡಬಲ್ಲ ಶಕ್ತಿ ಬಾಳೆಹದ್ದ ಶ್ರೀ ಕೃಷ್ಣ ಭಾಗವತರಿಗೆ ಇದೆ. ಅನುಭವದಿಂದಲೂ ಘಟ್ಟಿ. ಹಾಗಾಗಿಯೇ ಸ್ವರ್ಣವಲ್ಲೀ ಸಂಸ್ಥಾನಾಧೀಶ್ವರರು 'ಯಕ್ಷಗಾನ ಜ್ಞಾನನಿಧಿ' ಎಂದು ಬಿರುದಿತ್ತುದು.

ಯಕ್ಷಗಾನ ಕಲಾಭೀಷ್ಮ ಎಂದು ಹೆಸರು ಹೊತ್ತ, ಆದಕ್ಕಾಗಿಯೇ ಜೀವನ ಮುಡುಪಿಟ್ಟ ಹೊಸ್ತೋಟ ಮಂಜುನಾಥ ಭಾಗವತರು ಕೂಡ ಶ್ರೀ ಕೃಷ್ಣ ಭಾಗವತರನ್ನು ತುಂಬಾ ಗೌರವಿಸುತ್ತಾರೆ. ಅವರ ಜ್ಞಾನನಿಧಿತ್ವವನ್ನು, ಪ್ರಯೋಗವನ್ನು ಒಪ್ಪಿಕೊಳ್ಳುತ್ತಾರೆ.

ಕೃಷ್ಣ ಭಾಗವತರು ಬಾಲ್ಯದಿಂದಲೇ ಯಕ್ಷಗಾನಕ್ಕೆ ಮನಸೋತವರು. ಆಸಕ್ತಿಗೆ ತಕ್ಕ ಗುರು ಸಿಕ್ಕರು. ಆ ಬಲದಿಂದಲೇ ಮೈಗೂಡಿಡ್ಡ ಯಕ್ಷಗಾನದ ಶೋಧಕ್ಕೂ ಮಾನ ಮಾಡಿದರು. ರಾಗಗಳನ್ನು ಶಾಸ್ತ್ರೀಯ ವಿಭಾಗಕ್ಕೆ ಸಲ್ಲಿಸಲು ಹೊಂದಿಸುವ ಪ್ರಯತ್ನಕ್ಕೆ ಕೈ ಇಟ್ಟರು. ಪ್ರಯತ್ನ ಮುಂದುವರಿದು ಸಾಧನೆಯೇ ಆಯಿತು. ನೂರಾರು ರಾಗಗಳಿಗೆ ಸ್ವರ ಪ್ರಸ್ತಾರ ಹಾಕಿದರು. ಸಂಗಡ ಈ ನಾದದ ಬಲದಿಂದಲೇ ಪಿಟೀಲು ಕೂಡಾ ಯಕ್ಷಗಾನದಲ್ಲಿ ಬಳಸುವ ಪ್ರಯೋಗ ಗೈದರು. ಹೀಗಾಗಿ ಈ ಬಗೆಗೆ ಕೆಲ ವರ್ಷ ರಾಗಗಳ ನಿತ್ಯ ತಾಲೀಮು ಅಹರ್ನಿಶಿ ನಡೆದಿತ್ತು. ಇದು ಸತತ ಪ್ರಯತ್ನ. ಆ ಬಗೆಗೇ ನಿಗಾ, ಹಟ. ಸಾಮಾನ್ಯರ ಭಾಷೆಯಲ್ಲಿ ಯಕ್ಷಗಾನ ಚಟ. ಅಷ್ಟಷ್ಟೂ ಯಕ್ಷಗಾನ ರಾಗ-ತಾಳಗಳ ಬಗೆಗೆ ಸಿದ್ಧಿಯತ್ತ ಸಾಗಿದರು. ಇಲ್ಲೆಲ್ಲ ಮಟ್ಟು 'ಸಭಾಹಿತ' ಎಂದೇ ಆಗಿತ್ತು.

**'ಸಾ ರೇ' ವೀರೋದ್ಭುತೇ ರೌದ್ರೇ । 'ಥ' ಭೀಭತ್ಸ ಭಯಾನಕೇ । ಕಾರ್ಯೇ 'ಗ ನಿ' ತು ಕರುಣೌ । ಹ್ಯಾಸ ಶೃಂಗಾರ ಯೋಃ 'ಮ ಪೌ' ॥'** - ಈ ಪದ್ಯ ಶ್ರುತಿಯಂತೆ ಹಿಂದಿನಿಂದ ಬಂದದ್ದೇ ಹೊರತೂ ಯಾವ ಪುಸ್ತಕದ್ದಲ್ಲೂ ನಾನು ಕಂಡುದಿಲ್ಲ. ಯಾರಾದರೂ ಹಿಂದಿನ ತಲೆಮಾರಿನವರು ಬರೆದಿರಬಹುದು. ಅದು ಪ್ರಕಟವಾಗಿರಲಿಕ್ಕಿಲ್ಲ. ಈ ರಾಗ 'ಸ, ರಿ' ವೀರ, ಅದ್ಭುತ, ರೌದ್ರ ರಸಗಳಲ್ಲಿ ಉಪಯೋಗಕ್ಕೆ ಬರುವ ವಿಧಾನ. ಕಾರ್ಯಗತಿ ಪ್ರಧಾನವಾದ ಕಥಾನಕ ಚಲನೆಗಳಲ್ಲಿ ಬಳಸಲು ಹಾಗೂ ಕರುಣಾ ರಸಗಳಲ್ಲಿ 'ಗ, ನಿ' ಪ್ರಾಮುಖ್ಯ ಸ್ವರ. ಹೀಗೆಲ್ಲ ಸ್ವರದ ವಾದಿ ಸಂವಾದಿಯಂತೆ ತೋರಿರುವುದರಿಂದ ಈ ಯಕ್ಷಗಾನ ಕಂಡಿತ ರಸಾನುಭವಕ್ಕೇ ಪ್ರಾಧಾನ್ಯತೆಯಿತ್ತಿದೆ ಎಂಬುದು ಸ್ಪಷ್ಟ. ಏಕೆಂದರೆ 'ಸರಿಗಮ ಪದನಿಸ' ಬಹುಶಃ ಎಲ್ಲ ರಾಗಗಳಲ್ಲಿ ಬರತಕ್ಕವುಗಳೇ. ಕೆಲವು ಅಪವಾದಗಳು ತುಸುವೇ ರಾಗಗಳಿಗೆ ಇವೆ. ಈ ಪ್ರಯೋಗ ಯಕ್ಷಗಾನದಲ್ಲಿ ಕಂಡುಬಂದಿಲ್ಲ. ಆದರೆ ಪ್ರಧಾನವಾಗಿ ಒಂದು ಯಾ ಎರಡು ಸ್ವರ ಸ್ಥಾಯಿಯನ್ನು ತೋರಿಸಿದ್ದುದರಿಂದ ಈ ಯಕ್ಷಗಾನ ಸಂಗೀತ ಮಟ್ಟಿನಿಂದಲೇ ಗುರುತಿಸುವಾಗ ಸ್ವರಗಳು ಆ ಆ ರಸಗಳನ್ನು ಪ್ರಚೋದಿಸಲು ಮುಖ್ಯ ಬಳಕೆ ಮಾಡುವುದೇ ಅಥವಾ ಸ್ವರದ ಮೇಲೆ ಒತ್ತು



ಕೊಡುವುದೇ ಯೋಗ್ಯವೆಂದು ಬಾಳೆಹದ್ದ ಕೃಷ್ಣ ಭಾಗವತರು ಎತ್ತಿ ಹಿಡಿದಿದ್ದಾರೆನ್ನಿಸುತ್ತದೆ. ಅದನ್ನು ಮೇಲಿನ ಶ್ಲೋಕವೇ ಸಾರುತ್ತದೆ. ಭಾಗವತರು ಸಾಧಿಸಿಯೂ ಇದ್ದಾರೆನ್ನಿಸುತ್ತದೆ. ಸಾಮಾನ್ಯರಿಗೆ ಈ ಶ್ಲೋಕವೇ ಅರಿಯದಿದ್ದಾಗ ಇದರ ಪ್ರಯೋಗಗಳ ಬಗೆಗೆ ಅರಿವಾಗುವುದೆಂತು? ಆಗ, ಭಾಗವತರೇ ಸಾಧಿಸಿದ್ದಾರೆನ್ನಬೇಕು.

ಅದರಲ್ಲೂ ತಾಳ-ಲಯಗಳು ಬಿಗಿಯಾಗಿರುವ, ಮಾತ್ರೆಗಳ ಮೇಲೆ ಲೆಕ್ಕಾಚಾರ ಹಿಡಿಯಬಲ್ಲ ಶಕ್ತರಾದ ಕೃಷ್ಣ ಭಾಗವತರು ಆದಿಯಲ್ಲಿ ಆನಂದ ಭೈರವಿ, ಪಂತುವರಾಳಿ, ನವರೋಜು, ಶಂಕರಾಭರಣ, ಸುರುಟಿ, ಸಾವೇರಿ ಮುಂತಾದ ರಾಗಗಳನ್ನು ಸಭಾಹಿತ ಮಟ್ಟಿನಲ್ಲೇ ಹೇಳುವಾಗ ನಮಗೇ ಮೈಯೆಲ್ಲ ಕಣ್ಣಾಗಿರಬೇಕಾಗುತ್ತದೆಯೆಂಬ ಉಪಮೆ ಸಮದಂಡಿಯೆನ್ನಿಸುತ್ತದೆ. ನಮ್ಮ ಮೈ ಚಲನೆಯಲ್ಲೂ ತಾಳ-ಲಯ ಧುಮು ಧುಮಿಸುತ್ತದೆ. 'ರಾಗ ರಸ - ಪದ ಕಸ' ಎಂದು ರೂಢಮಾತು ಇದೆ. ಆದರಿಲ್ಲಿ ರಾಗವೂ ರಸವೇ, ಪದವೂ ರಸವೇ.

ಯಾವುದೇ ಪದ್ಯದ ಎತ್ತುಗಡೆ ಅವರ ಧ್ವನಿಯಲ್ಲಿ, ಲಯದಲ್ಲಿ, ತಾಳದಲ್ಲಿ ಸ್ಪಷ್ಟ ಕಾಣಿಸುವಂತೆ, ಸ್ವಲ್ಪವೇ ನಿರೀಕ್ಷಣೆ ಅಭ್ಯಾಸ ಇದ್ದವರಿಗೂ ರೋಮಾಂಚನಗೊಳಿಸುತ್ತದೆ. ಕಾರಣ, ನಾನೂ ನಾಲ್ಕಾರು ಅರ್ಥವನ್ನು ಅವರ ಭಾಗವತಿಕೆಯಲ್ಲಿ ಹೇಳುವ ಸೌಭಾಗ್ಯ ಹೊಂದಿದ್ದೆನು.

ನನ್ನ ನೆನಪಿನಲ್ಲಿ ಖಚಿತವಾಗುಳಿದ ಒಂದೆರಡು ಘಟನೆಗಳು ಪ್ರಸಂಗಗಳು 'ಇದು ಸತ್ಸಂಗ' ಎನ್ನಿಸಿವೆ. ಏಕೆಂದರೆ **'ಸಂತೋಷಂ ಜನಯೇತ್ ಪ್ರಾಜ್ಞಃ'** ಸಂಸ್ಕೃತ ಗಾದೆಯಿದೆ.ಪ್ರಾಜ್ಞರ ಒಡನಾಟವು ಸಂತೋಷವನ್ನು ಹುಟ್ಟಿಸುತ್ತದೆ ಎಂದು ಸಾದಾ ಅರ್ಥೈಸಿದ್ದರೂ ಸಾಕು. ಸಜ್ಜನರು, ಸತ್‌ಶೀಲವಂತರು, ಯಕ್ಷಗಾನ ಶ್ರೇಷ್ಠಿಗಳು, ಸದ್ಗ್ರುಹಸ್ಥರು ಆದ ಭಾಗವತರ ಸಾಂಗತ್ಯವು ಸಂತೋಷದ ಸಾಗರವನ್ನೇ ಇತ್ತಿತ್ತು.

'ಕರ್ಣಪರ್ವ'ದಲ್ಲಿ ನನ್ನ ಅರ್ಥ ಕರ್ಣನದಾಗಿತ್ತು. ಕೌರವನ ಪದ್ಯ 'ಭಾನುನಂದನ ಲಾಲಿಸಯ್ಯ'. ಅದನ್ನು ಲಾಲಿಸುತ್ತ ನನ್ನ ಪದ್ಯವನ್ನೇ ನಾನು ಮರೆತು ಆ ಪದ್ಯದ ಸೊಗಸಿನಲ್ಲಿ ಮುಳುಗಿಹೋಗಿದ್ದೆ! 'ಭೂತಳಾಧಿಪನೆ ಕೇಳುವುದು' ನನ್ನ ಅರ್ಥದ ಪದ್ಯವಾಗಿತ್ತು. ಭಾಗವತರು ನನ್ನನ್ನೇ ನೋಡುತ್ತ ನನ್ನ ಅಭಿನಯವನ್ನೂ ತಾಳಗತಿಯ ಮಧ್ಯದಲ್ಲೇ ತೋರಿಸಿಬಿಟ್ಟರು. ಆಗ ನಾನು ಎಚ್ಚರಗೊಂಡೆ.

ತಾಳದ ಬಿಗಿತ, ಲಯದ ಸೆಳೆತ, ಸಾಹಿತ್ಯದ ನಿರುಮ್ಮಳ ನಡೆ, ಅದಕ್ಕೆ ತಕ್ಕ ರಸಪ್ರಜ್ಞೆ, ಸಂಗಡಲೇ ಹಾವಭಾವದ ಸಹಜತೆ ಇವೆಲ್ಲ ಒಂದೇ ವ್ಯಕ್ತಿಯಲ್ಲಿ ಅದರಲ್ಲೂ ಭಾಗವತಿಕೆಯಲ್ಲಿ ಪಾತ್ರಧಾರಿಗೆ ಎಚ್ಚರಿಕೆ ನೀಡುವಲ್ಲಿ ಸಮ್ಮಿಳನವಾಗುವ ಈ ರಸಜೀವ ಸ್ವತಃ ಅವರೇ ಪಾತ್ರವಾದಾಗ ಮಾತ್ರ ಸಾಧ್ಯವಾದೀತು. ಅದು ಸ್ವಯಂ ಪ್ರಭೆ.

ಆ ದಿನ ಇಡೀ ಕರ್ಣ ಪರ್ವದ ಹಲವು ಪದ್ಯಗಳನ್ನು ನಾನು ಅನುಭವಿಸಿದೆ. ಪಾತ್ರದಲ್ಲಿ ಕೂಡ. ಭಾಗವತರೂ ಅನುಭವಿಸಿ ಕರುಣಾರಸದಲ್ಲಿ ದುಃಖ ರಸದಲ್ಲಿ ಎಲ್ಲರನ್ನು ಮುಳುಗಿಸಿದ್ದರು. ಕಣ್ಣೀರಿಟ್ಟಿದ್ದರು. ಇದು ಅಪರೂಪದ ಸ್ಥಿತಿ. ಅವರೂ ಕರ್ಣಪರ್ವದಲ್ಲಿ ಲಯವಾಗಿದ್ದರು.



ಹಾಗೇ ಈಗ ಹತ್ತು ವರ್ಷಗಳ ಹಿಂದೆ ನೆಬ್ಬೂರಿನಲ್ಲೊಂದು ಪ್ರಸಂಗ. ಅದನ್ನು ಬರೆದವರು ಮೊದಲು ನೆಬ್ಬೂರಿನವರೇ ಆಗಿದ್ದು ಈಗ ನಾಯ್ಕನಕೆರೆಯಲ್ಲಿರುವವರೊಬ್ಬರು. ಅದೂ ಹವ್ಯಕಭಾಷೆಯಲ್ಲಿ. 'ಮಾಣಿಮದುವೆ' ಎಂಬ ಪ್ರಸಂಗ ಬರೆದಿದ್ದರು. ಹಲವು ಭಾಗವತರು ಪದ್ಯ ಹೇಳಲು ಒಪ್ಪಲಿಲ್ಲ. ಕಾರಣ ಅದು ಸಾಮಾಜಿಕ ಕಥಾನಕ. ಅಲ್ಲದೆ ಹವ್ಯಕ ಭಾಷೆಯಲ್ಲಿದ್ದದ್ದು ಇನ್ನೊಂದು. ಅರ್ಥ ಹೇಳುವವರು ಅದೇ ಭಾಷೆಯಲ್ಲಿ ಹೇಳಬೇಕಾದದ್ದು. ಅನೇಕರು ಮೂಗು ಮುರಿಯುವಾಗ ತಾನಿದ್ದೇನೆ ಎಂದು ಧೈರ್ಯ ಎತ್ತು ಬಂದಿದ್ದರು. ಅಂದಿನ ಪ್ರಸಂಗದಲ್ಲಿ ಹವ್ಯಕ ಭಾಷೆಯ ಹದ-ಮುದ- ನುಡಿಗಟ್ಟು- ಮಟ್ಟು -ಥಿಟ್ಟು ಎಲ್ಲವನ್ನು ಸಮ್ಮೇಳನಗೊಳಿಸಿ ಎಲ್ಲರನ್ನು ಮುಟ್ಟುವಂತೆ - ತಟ್ಟುವಂತೆ ಹೇಳಿದ ಭಾಗವತರು ಬಾಳೆಹದ್ದದ ಕೃಷ್ಣ ಭಾಗವತರೇ! ಈ ದಾರಿಯಲ್ಲಿ ಮತ್ತೊಬ್ಬರಿಲ್ಲ ಎನ್ನಿಸಿದ್ದು ಸ್ತುತ್ಯ. ದಾಖಲೆಗೇ ಆಧಾರ.

ಅದರಲ್ಲಿ ಓರ್ವ ಗೃಹಿಣಿ, ಮಗನ ತಾಯಿ ಕೆಪ್ಪ ತಿಮ್ಮಕ್ಕನ ಪಾತ್ರ ಹೇಳಿದವ ನಾನು. ಯಾವ ಭಾಗದಲ್ಲೂ ಕನ್ನಡ ಭಾಷೆಗೆ ರಾಗ ತಾಳಕ್ಕೆ ಸಾಹಿತ್ಯ ವಿವರಣೆಗೆ ಭಾವಕ್ಕೆ ತೊಂದರೆಯೇ ಆಗದಂತೆ ಪೂರ್ಣ ಪೋಷಕವಾಗಿದ್ದುದು ಮಹತ್ವಪೂರ್ಣ ಕಾರ್ಯ. ಆಗಲೇ ನನಗನಿಸಿದ್ದು ಇವರು ಅಸಾಮಾನ್ಯರು ಎಂದೇ.

ಎಲ್ಲ ಪ್ರಸಂಗಗಳಲ್ಲೂ ನಮಗೆ ಅನುವಾಗಿದ್ದುದು ಭಾಗವತರ ಧ್ವನಿ ಅತಿ ಎತ್ತರಕ್ಕೆ ಹೋಗದಿದ್ದುದು. ಸಂಗಡ ಧ್ವನಿ ಸೇರಿಸಲು ನಮಗೆ ಅವಕಾಶವಾದದ್ದು. ಅಲ್ಲದೇ ಸ್ವತಃ ಪದ್ಯ ಹೇಳುವಾಗ ಭಾವ ಪ್ರಕಟಣೆ ಅವರೇ ಮಾಡುವಂಥಾದ್ದು. ಹೊಸಬನಾದರೂ ಅವನ ಪದ್ಯವೇ ಎಂಬುದನ್ನು ಕಣ್ಣಲ್ಲೇ ಪ್ರಕಟಿಸಿ ದಾರಿ ಹಿಡಿಸುವುದು. ಈ ಗತಿಗಳೆಲ್ಲ ಸಾಮಾನ್ಯ ಭಾಗವತರಲ್ಲಿ ಸಿಗುವಂಥದ್ದಲ್ಲ. ಹಾಗಾಗಿ ಅವರ ತಾದಾತ್ಮ್ಯತೆಗೆ ನಾವೆಲ್ಲ ಕೃತಜ್ಞರು.

ಕೃಷ್ಣ ಭಾಗವತರು ಅನೇಕ ರಂಗ ಪ್ರಯೋಗಗಳನ್ನೂ ಜರುಗಿಸಿದವರೆಂದು ನನಗೆ ಜಾಲಿಮನೆ ಹೆಗಡೆಯವರಿಂದ ತಿಳಿದುಬಂದದ್ದು. ಐವತ್ತು ವರ್ಷಗಳ ಹಿಂದೆ ರಂಗದಲ್ಲಿ ನಿಂತೇ ಭಾಗವತಿಕೆ ಮಾಡುವುದಿತ್ತು. ಆಗಂತೂ ಕೃಷ್ಣ ಭಾಗವತರು ರಂಗದ ಜೀವಾಳವೇ ಆಗಿರಬೇಕೆಂಬ ಕಲ್ಪನೆ ನನಗೂ ಬಂದಿದೆ. ಕೂತಲ್ಲೇ ಇಷ್ಟು ರಸ ಪ್ರಚೋದಿಸುವವರು ರಂಗಕ್ಕೆ ಹೊಸದಾಗಿ ಕೇಳಬೇಕಾದ್ದೇನಿದೆ.

- ಹೀಗೆ ರಂಗಕ್ಕೂ, ಪ್ರಸಂಗಕ್ಕೂ , ಸಂಗಕ್ಕೂ ಆತಿಥ್ಯದ ರಂಗೇರಿಸುವ ಮಾತಿನಂಗಳಕ್ಕೂ, ವಿಚಾರ ವೇದಿಕೆಗೆ ಬೆಂಬಲಕ್ಕೂ ಸದಾ ತೆರೆದ ಹೃದಯದ ಸದ್ಗೃಹಸ್ಥರ ಗೃಹ ಯಕ್ಷಾನುಗ್ರಹವೇ ಆಗಿದೆ. ಈಗಂತೂ ಅವರ ಸುಪುತ್ರ ತಿಮ್ಮಪ್ಪ ಭಾಗವತರಿಗೂ ಸಸ್ನೇಹಿಯಾದ್ದರಿಂದ 'ಯಕ್ಷಗಾನ' ಎಂದರೇ ಸ್ವಾಗತ, ಸುಸ್ವಾಗತ. ಅಭ್ಯಾಗತರಿಗೆಲ್ಲ ಸಹಮತವೆನ್ನಿಸಿಕೊಳ್ಳುವ ಬಾಳೆಹದ್ದದ ಶ್ರೀ ಕೃಷ್ಣ ಭಾಗವತರಿಗೆ **'ಶತಮಾನಂ ಭವತು'** ಎಂದು ವಿದ್ವನ್ಮಣಿಗಳು, ಹಿರಿಯರು, ಸಕಲ ಯಕ್ಷಗಾನ ಕಲಾವಿದರು ಹಾರೈಸತಕ್ಕುದೇ. ಅದು ಕರ್ತವ್ಯವೇ ಆಗಿದೆ.

ಶ್ರೀ ಭಾಗವತರ ಮಾನವು ಶತಪಟ್ಟು ಹೆಚ್ಚಿಸಲಿ.

ಪುಟ ಪ್ರಾಯೋಜಕರು : **ಶ್ರೀ ಆರ್. ಜಿ. ಭಟ್ಟ, ಇಳೆಗುಂಡಿ**



## ಅಭ್ಯಾಸ-ಸಾಧನೆಗಳಿಂದ ಭಾಗವತಿಕೆಗೆ ಮೆರುಗು ತಂದ

# ಬಾಳೆಹದ್ದ ಭಾಗವತರು

- ಎಂ. ಎನ್. ಹೆಗಡೆ, ಹಳವಳ್ಳಿ, ಯಲ್ಲಾಪುರ

ನಾನು ಯಕ್ಷಗಾನದಲ್ಲಿ ಅಭಿರುಚಿಯನ್ನು ಬೆಳೆಸಿಕೊಳ್ಳುವ ಪ್ರಾರಂಭದ ಹಂತದಲ್ಲಿಯೇ ಬಾಳೆಹದ್ದ ಕೃಷ್ಣ ಹೆಗಡೆಯವರು ಪ್ರಸಿದ್ಧಭಾಗವತರು. ಅವರು ಆಟ ಆಡಿಸಿದ್ದನ್ನುನಾನು ನೋಡಿಲ್ಲ. ಸಿದ್ಧ-ಪ್ರಸಿದ್ಧ ಅರ್ಥಧಾರಿಗಳ ಕೂಟಗಳಲ್ಲಿ ಅವರ ಭಾಗವತಿಕೆಯನ್ನು ಕಂಡಿದ್ದೇನೆ. ಘಟ್ಟದ ಮೇಲಿನ ಯಲ್ಲಾಪುರ, ಶಿರಸಿ, ಸಿದ್ದಾಪುರ ತಾಲೂಕುಗಳ ಶ್ರೇಷ್ಠ ಅರ್ಥಧಾರಿಗಳ ಕೂಟಕ್ಕೆ ಆ ಕಾಲದಲ್ಲಿ ಇವರದೇ ಭಾಗವತಿಕೆ.

ಯಕ್ಷಗಾನದಲ್ಲಿ ''ಭಾಗವತ'' ಸ್ಥಾನ ಬಹಳ ದೊಡ್ಡದು. ಜನಮನ್ನಣೆಗೆ ಪಾತ್ರವಾದದ್ದು. ಆ ಸ್ಥಾನದ ಗೌರವವನ್ನು ತಮ್ಮ ಯೋಗ್ಯತೆಯಿಂದ ಹೆಚ್ಚಿಸಿದವರು ಬಾಳೇಹದ್ದ ಬಾಗವತರು. ಯಕ್ಷಗಾನದಲ್ಲಿ ನೂರಾರು ರಾಗಗಳ ಸ್ಪಷ್ಟ ಪರಿಚಯವಿರುವ ಈಗಿನ ಕೆಲವೇ ಕೆಲವು ಭಾಗವತರಲ್ಲಿ ಇವರು ಪ್ರಥಮರು. ರಾಗ- ತಾಳಗಳ ಅಭ್ಯಾಸ-ಸಾಧನೆಗಳಿಂದ ಭಾಗವತಿಕೆಗೆ ಮೆರುಗು ತಂದವರು. ಭಾಗವತಿಕೆಯ ಕಲಿಕೆಯ ವಿಸ್ತಾರವನ್ನು ಹೆಚ್ಚಿಸಿದವರು. ನಾಲ್ಕು ಪದ ಹೇಳಲು ಕಲಿತ ಮಾತ್ರಕ್ಕೆ ಭಾಗವತನಾಗಲಾರ ಎಂದು ತಿಳಿಯುವಂತೆ ಮಾಡಿದವರು ಇವರು. ಹಳೆಯ ಮಟ್ಟುಗಳ ಸಂಶೋಧನೆ, ಆಟ-ಕೂಟಗಳಲ್ಲಿ ಅವುಗಳ ಸಮರ್ಥ ಬಳಕೆ ಹಾಗೂ ಉತ್ಸಾಹಿಗಳಿಗೆ ಬೋಧನೆ ಇವುಗಳಲ್ಲಿ ಭಾಗವತರು ಅಪಾರ ಪರಿಶ್ರಮವುಳ್ಳವರು.

ಬಾಳೆಹದ್ದ ಕೃಷ್ಣ ಭಾಗವತರದ್ದು ಗೌರವ ವರ್ಣದ ಆಕರ್ಷಕ ವ್ಯಕ್ತಿತ್ವ. ಬಿಳೀ ಪಂಚೆಯುಟ್ಟು, ಆದಕ್ಕೊಪ್ಪುವ ತಿಳಿನೀಲಿ ಅಥವಾ ನಸು ಹಳದಿ ಜುಬ್ಬಾ ತೊಟ್ಟು ವೇದಿಕೆಯಲ್ಲಿ ಕುಳಿತರೆ ಅವರ ಗಾಂಭೀರ್ಯವೇ 'ಭಾಗವತ' ಸ್ಥಾನವನ್ನು ತುಂಬುತ್ತದೆ. ತಮ್ಮ ವಿದ್ಯೆಯನ್ನು ಅವರೆಂದೂ ವೃತ್ತಿಯನ್ನಾಗಿ ಮಾಡಿಕೊಂಡಿಲ್ಲ. ಹವ್ಯಾಸವಾಗಿಟ್ಟುಕೊಂಡೇ ಬೆಳೆದರು. ರಾಗ-ತಾಳಗಳ ಮೇಲೆ ಹಿಡತ ಸಾಧಿಸಿದ್ದ ಅವರ ಹಾಡುಗಾರಿಕೆಯನ್ನು ಕೇಳಲು ಮಾತ್ರವಲ್ಲ, ನೋಡಲೂ ಸಹ ಪ್ರೇಕ್ಷಕರು ಅಪೇಕ್ಷಿಸುತ್ತಿದ್ದರು. ಇಂದಿನ ಅನೇಕ ಭಾಗವತರು ತಾಳ ಸಪ್ಪಳ ಮಾಡದಂತೆ ನಾಜೂಕಿನಿಂದ ಬಳಸುವುದನ್ನು ಕಾಣುತ್ತೇವೆ. ಆದರೆ ಬಾಳೆಹದ್ದ ಭಾಗವತರ ತಾಳವೂ ನುಡಿಯುತ್ತದೆ. ಎತ್ತಗಡೆಯಿಂದ ಮುಕ್ತಾಯದತನಕ ತಾಳದ ವಿವಿಧ ನಡೆಗಳನ್ನು ಅವರು ಖಚಿತ ಪೆಟ್ಟುಗಳ ಮೂಲಕ ಸ್ಪಷ್ಟವಾಗಿ ತೋರಿಸುತ್ತಾರೆ. ಸಾಹಿತ್ಯ ಸ್ಪಷ್ಟತೆ ಅವರ ಇನ್ನೊಂದು ಗುಣ. ಕಥೆಯನ್ನು ಅರಿತು, ಪದ್ಯದ ಅರ್ಥ ತಿಳಿದಾಗ ಮಾತ್ರ ಅವರಂತೆ ಹಾಡಲು ಸಾಧ್ಯ. ಸಾಹಿತ್ಯವನ್ನು ಅವರು ಭಲಸುವ ರೀತಿಯಿಂದಲೇ ಪದ್ಯದ ಅಂತರಂಗದಲ್ಲಿ ಅಡಗಿದ ಬೇರೆ ಬೇರೆ ಹೊಸ ಅರ್ಥಗಳು ಪಾತ್ರಧಾರಿಯ ಮೂಲಕ ಹೊರಬರುತ್ತವೆ. ರಸ-ಭಾವಗಳಿಗೆ ಮಹತ್ವ ಕೊಟ್ಟು ಅವರು ಹಾಡುವ ರೀತಿ ಅನನ್ಯ. ಪಾತ್ರಧಾರಿ ಯಾರೇ ಇರಲಿ, ಅವನನ್ನೇ ಕುರಿತು - ಇದು ನಿನ್ನದೇ ಪದ್ಯ ಎಂದು



ಜ್ಯೋತಿ ಬೆಳಗುತ್ತಿರುವ ಶ್ರೀ ಕೆರೆಮನೆ ಶಂಭು ಹೆಗಡೆ



ಹಿರಿಯ ಸಹಕಾರಿ ಹೀಪನಳ್ಳಿ ಸೀತಾರಾಮ ಹೆಗಡೆಯವರ ಉದ್ಘಾಟನಾ ಭಾಷಣ



ಭಾಗವತರ ಸನ್ಮಾನ ಸಮಾರಂಭದಲ್ಲಿ ಅಭಿಮಾನಿ ವೃಂದ




ಅಧ್ಯಕ್ಷೀಯ ಭಾಷಣ ಮಾಡುತ್ತಿರುವ ಶ್ರೀ ಕೆರೆಮನೆ ಶಂಭು ಹೆಗಡೆ



ಭಾಗವತರು ಹಾಡಿದ ಯಕ್ಷಗಾನ ಪದ್ಯಗಳ ಧ್ವನಿಸುರುಳಿ ಹಾಗೂ ಸಿ.ಡಿ.ಯನ್ನು ಬಿಡುಗಡೆಗೊಳಿಸಿ
ಮಾತನಾಡುತ್ತಿರುವ ಅಂಕೋಲಾ ಕ್ಷೇತ್ರದ ಶಾಸಕ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ



ಸರ್ವರನ್ನೂ ಅಭಿವಂದಿಸಿದ ಭಾಗವತರು



ಭಾಗವತರ ಬಲಗೈ 'ಕಾಳುಮಾವ'



ತಿಳಿಯುವಂತೆ ಮಾಡಿ, ತಾನು ಭಾವ ತನ್ಮಯತೆಯಿಂದ ಹಾಡುವುದರೊಂದಿಗೆ ಆ ಪಾತ್ರಧಾರಿಯೂ ತನ್ನ ಪಾತ್ರಕ್ಕೆ ಜೀವ ತುಂಬುವಂತೆ ಮಾಡುವುದರಲ್ಲಿ ಸಿದ್ಧಹಸ್ತರು. ಹಾಗಾಗಿ ಹೊಸಬರಿಗೂ ಇವರ ಹಿನ್ನೆಲೆ ಪೂರಕವಾಗುತ್ತದೆ. ಹೆದರುವ ಪ್ರಮೇಯವೇ ಇಲ್ಲ. ಭಾಗವತರು ಎಲ್ಲಿಯೂ ಪ್ರಸಂಗ ಬೀಳಲು ಕೊಡುವುದಿಲ್ಲ.

1975-85 ರ ಅವಧಿಯಲ್ಲಿ ಯಲ್ಲಾಪುರದಲ್ಲಿ ನೆನಪಿನಲ್ಲಿ ಉಳಿಯುವಂಥ ಅನೇಕ ತಾಳಮದ್ದಳೆಗಳಾಗಿವೆ. ಹಳೇ ಟಿ. ಎಸ್. ಎಸ್. ಆವಾರದಲ್ಲಿ ನಡೆದ ಕಾರ್ಯಕ್ರಮಗಳ ಪ್ರಮುಖ ಆಕರ್ಷಣೆ ಹಿಮ್ಮೇಳ. ಬಾಳೇಹದ್ದ, ಕಡತೋಕ, ನೆಬ್ಬೂರು ಹಾಗೂ ದುರ್ಗಪ್ಪ, ಶಂಕರ, ಕವಾಳೆ ಇವರುಗಳ ಕಸರತ್ತು. ಮುಮ್ಮೇಳದಲ್ಲಿಯೂ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಘಟಾನುಘಟಿಗಳೇ ಇರುತ್ತಿದ್ದ ಕಾರಣ ಅವೆಲ್ಲ ಅಪರೂಪದ ಕಾರ್ಯಕ್ರಮಗಳು. ಅಂದಿನ ದಿನಗಳಲ್ಲಿ ತಮ್ಮ ಹಾಡುಗಾರಿಕೆ ಮುಗಿದ ಮೇಲೆ ಭಾಗವತ ಬಾಳೆಹದ್ದ ತಮ್ಮ ಪಿಟೀಲು ಹಿಡಿದು ಪದ್ಯಕ್ಕೆ ಸಾಥ ಒದಗಿಸುತ್ತಿದ್ದರು. ಡಾ. ಶಿವರಾಮ ಕಾರಂತರ ಯಕ್ಷರಂಗ ಬಿಟ್ಟರೆ ಹಿಮ್ಮೇಳದಲ್ಲಿ ತಂತಿವಾದ್ಯ ಬಳಸಿದ್ದು ಬೇರೆಲ್ಲಿಯೂ ಇರಲಿಕ್ಕಿಲ್ಲ. ಆದರೆ ಹಿಮ್ಮೇಳದ ಅಬ್ಬರದಲ್ಲಿ ಬಾಳೆಹದ್ದರ ಪಿಟೀಲು ಪ್ರೇಕ್ಷಕರನ್ನು ತಲುಪುತ್ತಿರಲಿಲ್ಲ. ಅದಕ್ಕೆ ಪ್ರತ್ಯೇಕ ಮೈಕ್ ವ್ಯವಸ್ಥೆಯೂ ಇರುತ್ತಿರಲಿಲ್ಲ. ಭಾಗವತರಾದವರು ಪಿಟೀಲಿಗೆ ಪ್ರತ್ಯೇಕ ಕಾಲವನ್ನು ಒದಗಿಸಿಕೊಡುವ ಕ್ರಮವೂ ಇರಲಿಲ್ಲ. ಆದರೂ ಇವರು ಬಿಡದೇ ಅನೇಕ ಸಂದರ್ಭಗಳಲ್ಲಿ ಬೆಳತನಕ ನುಡಿಸುತ್ತಿದ್ದರು. ಸ್ವತಃ ಭಾಗವತರಾಗಿಯೂ ಇನ್ನೊಬ್ಬರ ಪದ್ಯಕ್ಕೆ ಸಾಥ ನೀಡುವ ಸಹೃದಯತೆ ಅವರದ್ದು. ಯಕ್ಷಗಾನದ ಮೇಲಿನ ಅವರ ಶ್ರದ್ಧೆ ಹಾಗೂ ಆ ಕುರಿತು ಅವರ ಬದ್ಧತೆ ಅಂತಹದ್ದು.

ಅರಳಿಮಕ್ಕಿ ದೇವಸ್ಥಾನದಲ್ಲಿ ತಾಳಮದ್ದಲೆ. 'ಪಾದುಕಾ ಪ್ರದಾನ' ಪ್ರಸಂಗ. ಕಾರ್ಯಕ್ರಮದ ಪೂರ್ವದಲ್ಲಿ ಬಾಳೆಹದ್ದರಿಗೆ ಆತ್ಮೀಯ ಸನ್ಮಾನ. ಅಂದು ಅಭಿನಂದನಾ ಭಾಷಣ ಮಾಡಿದ ಕೋವೇಸರ ಮಂಜುನಾಥ ಹೆಗಡೆಯವರು ಭಾಗವತರ ಸಾಧನೆ- ಯಶಸ್ಸು ಇವುಗಳ ಹಿಂದಿರುವ ಅವರ ಶ್ರೀಮತಿಯವರ ತ್ಯಾಗ ಪ್ರೋತ್ಸಾಹಗಳ ಕುರಿತು ಎತ್ತಿ ಆಡಿದ್ದರು. ಆ ದಿನ ಭಾಗವತರು ಹಾಡಿದ "ಸಖಿ ನೀ ಪೇಳಿದ ಮಾತು । ಸಕಲವು ಲೇಸಾಯ್ತು ।......" (ಮಂಥರೆಯೊಡನೆ ಕೈಕೇಯಿಯ ಪದ) ನನ್ನ ನೆನಪಿನಲ್ಲಿ ಇಂದಿಗೂ ಉಳಿದಿದೆ. ಪ್ರಸಂಗದಲ್ಲಿ ಗೌಣವಾದ ಯಾವುದೋ ಇಂಥದ್ದೊಂದು ಪದ್ಯ ಹೊಸ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಇದೇ ಅವರ ಶ್ರೇಷ್ಠತೆ.

ದಿ. ಹಂಡ್ರಮನೆ ಸುಬ್ರಾಯ ಭಟ್ಟರು ಪ್ರಸಂಗಕರ್ತರು. ಅವರ ವೈಕುಂಠ ಸಮಾರಾಧನೆಯಂದು (30-03-1999) ಅವರು ಬರೆದ 'ವೀರ ವಾನರ (ದುಂದುಭಿ ವಧೆ)' ಪ್ರಸಂಗವೇ ಆಗಬೇಕೆಂದು ಮಕ್ಕಳ ಅಪೇಕ್ಷೆ. ಪ್ರಚಲಿತವಲ್ಲದ ಹೊಸ ಪ್ರಸಂಗ. ಋಕ್ಷರಜಸ್ಸು ವಾಲಿ, ಸುಗ್ರೀವನನ್ನು ಪಡೆದ ಕಥೆ. ಬಾಳೆಹದ್ದರು ಲೀಲಾಜಾಲವಾಗಿ ಪ್ರಸಂಗ ನಡೆಸಿದರು. ಕೆಲವು ಪದಗಳಿಗೆ ಪ್ರೇಕ್ಷಕರ ಹರ್ಷೋದ್ಗಾರ. ಅಲ್ಲದೇ ಮುಂಜಾನೆ ದಿ. ಸುಬ್ರಾಯ ಭಟ್ಟರೇ ರಚಿಸಿದ "ಚಂದುಗುಳಿ ಗಣಪತಿ" ಸುಪ್ರಭಾತವನ್ನು ತಮ್ಮ ಮಗ ತಿಮ್ಮಪ್ಪನವರನ್ನು ಜೊತೆ ಮಾಡಿಕೊಂಡು



ಸುಶ್ರಾವ್ಯವಾಗಿ ಅರ್ಥ ಗಂಟೆ ಹಾಡಿದ್ದು ಎಂದೂ ಮರೆಯುವಂಥದ್ದಲ್ಲ. ಅವರ ಅನುಭವ ಅಪಾರವಾದದ್ದು.

ದಿ. ಬಾಲಿಗದ್ದೆ ತಿಮ್ಮಣ್ಣ ಭಟ್ಟರು ಎಲ್ಲರ ಪ್ರಶಂಸೆಗೆ ಪಾತ್ರರಾದ ಪ್ರಸಿದ್ಧ ಅರ್ಥಧಾರಿಗಳು. ಅವರ ವೈಕುಂಠ ಸಮಾರಾಧನೆಯಂದು (ದಿ. 9-12-2001) ಬಾಳೆಹದ್ದರು ತಮಗೆ ಅವರೊಡನೆ ಇದ್ದ ಒಡನಾಟವನ್ನು ನೆನಪಿಸಿಕೊಂಡು ತಮ್ಮ ಇಳಿವಯಸ್ಸನ್ನೂ ಮರೆತು ಮುಖ್ಯ ಭಾಗವತರಾಗಿ ಬಂದಿದ್ದರು. ಅಂದು ಅವರು ಹಾಡಿದ ಪಟ್ಟಾಭಿಷೇಕದ ಪದ್ಯಗಳು ಬಹುಕಾಲ ನೆನಪಿನಲ್ಲಿ ಉಳಿಯುವಂಥವು. ಪಾದುಕಾ ಪ್ರದಾನ, ಪಂಚವಟಿ - ವಾಲಿವಧೆ, ಸಂಧಾನ ಭೀಷ್ಮಾರ್ಜುನ, ಕರ್ಣಪರ್ವ, ರಾಮ ನಿರ್ಯಾಣ, ರುಕ್ಮಾಂಗದ ಚರಿತ್ರೆ, ಸುಧನ್ವಾರ್ಜುನ ಮುಂತಾದ ಪ್ರಸಂಗಗಳಲ್ಲಿ ಅವರ ಭಾಗವತಿಕೆ ಭಾವನಾ ಪ್ರಧಾನ ಹಾಗೂ ಅನನ್ಯ.

ಇಂದಿನ ಕ್ಯಾಸೆಟ್ ಯುಗದಲ್ಲಿ ಅನೇಕರು ಪ್ರಸಿದ್ಧ ಭಾಗವತರ ಛಾಯೆಯಲ್ಲಿ ಹಾಡಿ ಅವರಂತೆ ಆಗಲು ಪ್ರಯತ್ನಿಸುತ್ತಿರುವುದನ್ನು ಕಾಣುತ್ತೇವೆ. ಕೆಲವರಂತೂ ವೇಷ-ಭೂಷಣ, ತಾಳ ಹಿಡಿದು ಕೂಡ್ರುವ ಶೈಲಿಯನ್ನೂ ಅನುಕರಣೆ ಮಾಡುತ್ತಾರೆ. ಆದರೆ ಬಾಳೆಹದ್ದ ಭಾಗವತರು ಯಾರ ಅನುಕರಣೆಗೂ ಸಿಗುವವರಲ್ಲ. ಶಾಸ್ತ್ರೀಯ ಸಂಗೀತದ ಖಚಿತ ಜ್ಞಾನವನ್ನು ಯಕ್ಷಗಾನದಲ್ಲಿ ಸೂಕ್ತವಾಗಿ ಬಳಸಿಕೊಂಡಿದ್ದಾರೆ. ಜೊತೆಯಲ್ಲಿ ಉತ್ತರ ಕನ್ನಡದ ಭಾಗವತಿಕೆಯ ಶೈಲಿಯನ್ನೂ ಉಳಿಸಿಕೊಂಡಿದ್ದಾರೆ. ಬೇರೆಯವರ ಬಗ್ಗೆ ಹಗುರ ಮಾತುಗಳನ್ನಾಡಿಯೇ ತನಗೆಲ್ಲಾ ಗೊತ್ತಿದೆ ಎಂದು ಕಾಣಿಸಿಕೊಳ್ಳುವ ಜಾಯಮಾನ ಇವರದ್ದಲ್ಲ. ಎಲ್ಲಿಯೂ ತಪ್ಪಿಯೂ ಕೂಡ ಸಹಕಲಾವಿದರ ಕುರಿತು ಟೀಕೆ, ಟಿಪ್ಪಣೆ ಮಾಡುವವರಲ್ಲ. ಪ್ರಚಾರದ ಅಪೇಕ್ಷೆ ಇಲ್ಲವೇ ಇಲ್ಲ. ಹವ್ಯಾಸಿಗಳಾಗಿ ಸತತ ಪರಿಶ್ರಮದ ಮೂಲಕ ಕಲಾ ಕ್ಷೇತ್ರದಲ್ಲಿ ಸದಭಿರುಚಿಯ ನಿರ್ಮಾಣ ಮಾಡಿದ್ದಾರೆ. ತಮ್ಮ ಒಬ್ಬನೇ ಮಗ ತಿಮ್ಮಪ್ಪ ಅವರನ್ನೂ ಭಾಗವತರಾಗಲು ಪ್ರೋತ್ಸಾಹಿಸಿದ್ದಾರೆ. ಈ ಎಲ್ಲ ಕಾರಣಗಳಿಂದಾಗಿಯೇ ಬಾಳೆಹದ್ದ ಶ್ರೀ ಕೃಷ್ಣ ಭಾಗವತರು ಎಲ್ಲರೂ ಮೆಚ್ಚುವ-ಒಪ್ಪಿಕೊಳ್ಳುವ ಭಾಗವತರು.

ಎಲ್ಲಕ್ಕಿಂತಲೂ ಮಿಗಿಲಾಗಿ ಅವರೊಬ್ಬ ಅಪ್ಪಟ ಸಜ್ಜನರು. ಅವರ ಸಜ್ಜನಿಕೆ, ಸಹೃದಯತೆ, ಆತ್ಮೀಯತೆಗಳನ್ನು ಗಮನಿಸಿದಾಗ ಅವರು ಈ ಕಾಲದವರೇ ಅಲ್ಲವೇನೋ ಅಂತ ಅನ್ನಿಸುವುದುಂಟು. ಮಾತು ಮಿತ. ಆದರೂ ಯಾವುದೋ ಸ್ನೇಹ ತಂತುವಿನಿಂದ ಹಿರಿ-ಕಿರಿಯರೆಲ್ಲರನ್ನೂ ಬಿಗಿಯಬಲ್ಲ ನೈಪುಣ್ಯ ಅವರಲ್ಲಿದೆ. 'ರಾಧಾಕೃಷ್ಣ'ಕ್ಕೆ ಬಂದವರು ಯಾರೇ ಇರಲಿ. ಅವರ ಎರಡೂ ಕೈಗಳನ್ನು ಹಿಡಿದುಕೊಂಡು, ಇಲ್ಲವೇ ಅವರನ್ನು ತನ್ನ ಕೈಗಳಿಂದ ತಬ್ಬಿ ಹಿಡಿದು ಸ್ವಾಗತಿಸುವ, ಸುಖ-ದುಃಖ ವಿಚಾರಿಸುವ ಅವರ ರೀತಿ ಅನನ್ಯ. ಎಲ್ಲ ಕ್ಷೇತ್ರಗಳ ಕಲಾವಿದರು ಅವರ ಆತಿಥ್ಯವನ್ನು ಸವಿದಿದ್ದಾರೆ. ಧಾರಾಳ-ಒತ್ತಾಯಪೂರ್ವಕ ಸತ್ಕಾರ, ಊಟೋಪಚಾರ ಅವರ ಮನೆಯಲ್ಲಿ ಸದಾ ನಡೆದಿದೆ.

ಚಿಕ್ಕ ಮಗುವಿನ ನಿಷ್ಕಲ್ಮಶ ಮನಸ್ಸು, ಸತತ ಸಾಧನೆ ಹಾಗೂ ಫಲಾಪೇಕ್ಷೆ ಇಲ್ಲದ ಪಾಂಡಿತ್ಯ ಇವೇ ಅವರು ಎಲ್ಲರ ಹೃದಯವನ್ನು ಗೆಲ್ಲುವ ವಿಶಿಷ್ಟವಾದ ಬಾಳೆಹದ್ದ ಶೈಲಿ.



# ಆಕಾಶವಾಣಿ ಧಾರವಾಡ ನಿಲಯದಿಂದ 'ಭಾಗವತ'ರನ್ನು ಸಂದರ್ಶಿಸಿದಾಗ

ಸಂದರ್ಶಕರು - ***ದಿವಾಕರ ಹೆಗಡೆ,***

**ಪ್ರಶ್ನೆ** : ನಿಮಗೆ ಹಾಡಿನಲ್ಲಿ ಆಸಕ್ತಿ ಬರಲು ಕಾರಣ.

**ಭಾಗವತರು** : ಹಾಡು ನಮ್ಮ ಮನೆತನಕ್ಕೇ ಒಲಿದ ವಿದ್ಯೆ. ನನ್ನ ತಂದೆ ಆ ಕಾಲದಲ್ಲಿ ಪ್ರಸಿದ್ಧರಾದ ಬೆಳಗುಂದ್ಲಿ ಭಾಗವತರ ಶಿಷ್ಯ. ಮನೆಯಲ್ಲಿ ಕುಳಿತರೂ ನಿಂತರೂ ಅವರ ಬಾಯಲ್ಲಿ ಯಕ್ಷಗಾನದ ಹಾಡುಗಳು ಇರುತ್ತಿದ್ದವು. ನನ್ನ ಆರನೆಯ ವಯಸ್ಸಿನಲ್ಲಿಯೇ ನಾನು ತಂದೆಯನ್ನು ಕಳೆದುಕೊಂಡೆ. ಆದರೆ ಅವರ ಹಾಡಿನ ಪ್ರೀತಿಯನ್ನ ಉಳಿಸಿಕೊಂಡೆ. ನನ್ನ ತಾಯಿಗೆ ಸಾವಿರಾರು ಹಾಡು ಬರುತ್ತಿತ್ತು. ತಾಯಿಯಿಂದ ಪಡೆದ ಆ ಸಂಸ್ಕಾರ ಬಹಳ ಅಮೂಲ್ಯವಾದದ್ದು. ಆಗ ಸುತ್ತಲಿನ ಸಮಾಜದಲ್ಲಿ ಯಕ್ಷಗಾನವೊಂದೇ ಮನರಂಜನೆಯ ಮಾಧ್ಯಮ. ಭಾಗವತರೆಂದರೆ ಸಾಂಸ್ಕೃತಿಕ ಮುಖಂಡ ಎನ್ನುವಷ್ಟು ಗೌರವ. ಎಲ್ಲ ಸಾಮಾಜಿಕ ಸಮಾರಂಭಗಳಲ್ಲೂ ಭಾಗವತರಿಗೆ ಒಂದು ಗೌರವದ ಸ್ಥಳ ಇರುತ್ತಿತ್ತು. ನನಗೆ ಹಾಡಿನ ಹುಚ್ಚು. ಜನರಿಗೆ ಯಕ್ಷಗಾನದ ಹುಚ್ಚು. ಹೀಗೆ ನಾನು ಯಕ್ಷಗಾನಕ್ಕೆ ಬಂದೆ. ಅದರ ಸಂಗಡವೇ ಬೆಳೆದೆ.

**ಪ್ರಶ್ನೆ** : ಯಕ್ಷಗಾನದಿಂದ ನಿಮ್ಮ ಬದುಕಿಗಾದ ಲಾಭ?

**ಭಾಗವತರು** : ಯಕ್ಷಗಾನ ನನ್ನ ಬದುಕಿಗೆ ಏನು ಕೊಟ್ಟಿದೆ ಎಂದು ಎಣಿಸುವುದಕ್ಕಿಂತ ಏನು ಕೊಟ್ಟಿಲ್ಲ ಎಂಬ ಉದ್ಗಾರವೇ ಸರಿ. ಆ ಕಾಲದಲ್ಲಿ ನಮ್ಮೂರಿನಲ್ಲಿ ಸರಿಯಾದ ಶಾಲೆ ಇಲ್ಲ. ನಮಗೆ ಸಾಹಿತ್ಯದ ಪರಿಚಯವೂ ಯಕ್ಷಗಾನದಿಂದಲೇ. ಅಕ್ಷರದ ಪರಿಚಯವೂ ಯಕ್ಷಗಾನದಿಂದಲೇ. ಸಾಮಾಜಿಕ ಅಭಿವ್ಯಕ್ತಿ ಅಂದರೂ ಯಕ್ಷಗಾನವೇ. ನಾನು ಯಕ್ಷಗಾನದಿಂದ ಸಾಹಿತ್ಯ ಓದಿದೆ. ಪದ, ಬಂಧ, ಲಯ, ತಾಳ ಎಲ್ಲ ಅಭ್ಯಾಸ ಮಾಡಿದೆ. ಪಾತ್ರಧಾರಿಗಳ ಮಾತನ್ನು ಕೇಳುವ, ಅವರ ಸಾಮರ್ಥ್ಯಕ್ಕೆ ಹೊಂದಿ ಕುಣಿಸುವ, ಪಾತ್ರಗಳ ಸ್ವಭಾವಕ್ಕೆ ಹೊಂದಿ ಹಾಡನ್ನು ಬಳಸುವ ಎಲ್ಲವನ್ನೂ ಕಲಿತೆ. ಹಾಗೆ ನೋಡಿದರೆ ನನಗೆ ಒಂದು ಸಾಮಾಜಿಕ ವ್ಯಕ್ತಿತ್ವ ಬಂದಿದ್ದೇ ಯಕ್ಷಗಾನದಿಂದ. ನನಗೆ ಯಕ್ಷಗಾನ ಬದುಕನ್ನೇ ಕೊಟ್ಟಿದೆ.



ಪ್ರಶ್ನೆ : ನಿಮ್ಮ ಸಂಸಾರದ ಬಗ್ಗೆ ಒಂದೆರಡು ಮಾತಿನಲ್ಲಿ ತಿಳಿಸುತ್ತೀರಾ.

ಭಾಗವತರು : ಸಂಸಾರ ಬಿಟ್ಟು ನಾವಿಲ್ಲ. ನಾನು ತಿರುಗಾಟಕ್ಕೆ ಹೋಗಬೇಕು ಅಂದರೆ ನನ್ನ ಬಟ್ಟೆ ಮನೆಯವರೇ ತೊಳೆದು ಇಸ್ತ್ರೀ ಮಾಡಬೇಕು. ಒಂದು ದಿನ ತಡೆದು ಬಂದರೆ ತೋಟಕ್ಕೂ ಅವರೇ ಹೋಗಿ ಬರಬೇಕು. ಯಕ್ಷಗಾನದ ಸ್ನೇಹಿತರು ಯಾವ ಸಮಯದಲ್ಲೇ ಮನೆಗೆ ಬಂದರೂ ಅವರ ಊಟ - ಉಪಚಾರ ಎಲ್ಲ ಮಾಡಬೇಕು. ನನ್ನ ಹಾಡು ಅವರಿಗೂ ಪ್ರೀತಿಯಾದ್ದರಿಂದ ಇಷ್ಟು ಹಾಡಲಿಕ್ಕೆ ಸಾಧ್ಯ ಆಯ್ತು. ಈಗಂತೂ ನನ್ನ ಮಗನೂ ಹಾಡ್ತಾನೆ. ಮೊಮ್ಮಗನೂ ಹಾಡ್ತಾನೆ. ಹಾಡಿನ ಸಂಸಾರದಲ್ಲಿ ನಾನಿದ್ದೇನೆ. ಅಷ್ಟೇ ಅಲ್ಲ ನನ್ನ ಸಂಸಾರವೇ ಒಂದು ಒಳ್ಳೆಯ ಹಾಡು. ಅದರಲ್ಲಿ ಶ್ರುತಿ ತಪ್ಪಿದ್ದು ಲಯ ತಪ್ಪಿದ್ದು ಇಲ್ಲ. ಆ ವಿಷಯದಲ್ಲಿ ದೇವರು ನನಗೇನೂ ಕಡಿಮೆ ಮಾಡಲಿಲ್ಲ.

ಪ್ರಶ್ನೆ : ಹಾಗೆ ನಿಮ್ಮ ಯಕ್ಷ ಸಂಸಾರ ಹೇಗಿದೆ?

ಭಾಗವತರು : ಯಕ್ಷ ಸಂಸಾರನೂ ಚೆನ್ನಾಗಿಯೇ ಇದೆ. ಮೊದಲು ಎಲ್ಲರೂ ನನ್ನ ಸ್ನೇಹಿತರಾಗಿದ್ದರು. ಈಗ ಮಗನ ಸಂಗಡ ಬಂದವರು ನಮಗೂ ಆಪ್ತರಾಗುತ್ತಾರೆ. ಕಲೆ ಸ್ವಲ್ಪ ಸ್ಪರ್ಧೆಯ, ಈರ್ಶೆಯ ರಂಗ ಹೌದು. ಆದರೆ ನಾನು ಯಾರ ಹತ್ತಿರವೂ ಬೇಜಾರ ಮಾಡಿಕೊಂಡವನಲ್ಲ. ಯಾರೂ ನನ್ನ ಹತ್ತಿರ ಜಗಳ ಮಾಡಲಿಲ್ಲ. ನಾನು ಭಾಗವತನಾಗಿದ್ದರಿಂದ ಸಣ್ಣವನಿದ್ದಾಗ ದೊಡ್ಡವರೂ ಮಾತನಾಡಿಸುತ್ತಿದ್ದರು. ಈಗ ಸಣ್ಣವರೂ ಮಾತನಾಡಿಸುತ್ತಾರೆ. ಇದು ನಮಗೆ ಕಲೆ ಕೊಡುವ ಸೌಭಾಗ್ಯ. ಇಲ್ಲ ಅಂದರೆ ಮನೆ ಮಕ್ಕಳು ಮೊಮ್ಮಕ್ಕಳನ್ನೇ ಮಾತನಾಡಿಸಿಕೊಂಡು ಇರಬೇಕಾಗಿತ್ತು. ಈಗ ಸುತ್ತ ಮೂರು ಸೀಮೆಯ ಜನ ಎಲ್ಲ ನನ್ನ ಯಕ್ಷ ಸಂಸಾರದಲ್ಲಿದ್ದಾರೆ.

ಪ್ರಶ್ನೆ : ನಿಮಗೆ ಈಗಲೂ ಹಾಡಬೇಕೆನಿಸುತ್ತದೆಯೆ?

ಭಾಗವತರು : ಹಾಡುವವನಿಗೆ ಹಾಡ್ತಾನೇ ಇರಬೇಕು ಅನ್ನಿಸುತ್ತದೆ. ಆದರೆ ವಯಸ್ಸು ಸಹಕರಿಸುವುದಿಲ್ಲ. ಆದರೆ ಆ ನಾದ ಹೋಗೋದಿಲ್ಲ. ನನ್ನಷ್ಟಕ್ಕೆ ನಾನು ಗುಣುಗಿದರೂ ಅಂತರಂಗದಲ್ಲಿ ಆ ಹಾಡಿನ ಪೂರ್ಣ ಆನಂದವನ್ನು ಅನುಭವಿಸಲಿಕ್ಕಾಗುತ್ತದೆ. ಕಲಾವಿದನಿಗೆ ಸ್ವಂತದ ಸಂತೋಷದ ಸಂಗಡ ತನ್ನ ಕಲೆಯನ್ನು ಕಂಡು ಸಹೃದಯರು ಸಂತೋಷ ಪಡುವುದೂ ಬಹಳ ಮುಖ್ಯ. ಈಗ ಹತ್ತು ಜನರಿಗೆ ಆನಂದ ನೀಡುವ ಅವಕಾಶ - ಅನುಕೂಲ ಇಲ್ಲ ಎಂಬ ಕೊರಗು



ಸಹಜ. ಆದರೆ ಅದಕ್ಕೂ ನನಗೆ ಪರಿಹಾರ ಇದೆ. ನನ್ನ ಮಗ ನನ್ನ ನಿರೀಕ್ಷೆಗೆ ಹಾಡ್ತಾನೆ. ಮೊಮ್ಮಗನ ಸ್ವರ ಚೆನ್ನಾಗಿದೆ. ಹಾಗಾಗಿ ನಾನು ಸುಮ್ಮನಿದ್ದರೂ ಮನೆಯಲ್ಲಿ ಹಾಡಿರ್ತದೆ.

ಪ್ರಶ್ನೆ : ಒಬ್ಬ ಭಾಗವತನ ಕನಿಷ್ಟ ಅರ್ಹತೆ ಏನು?

**ಭಾಗವತರು** : ಬದುಕಿನ ಅನುಭವ ಅದನ್ನೆಲ್ಲ ಕಲಿಸುತ್ತದೆ. ಹತ್ತನೇ ವಯಸ್ಸಿನಲ್ಲಿ ಪದ ಹೇಳುವವನಿಗೆ ಅಭಿಮನ್ಯುವು ಒಂದೇ, ಭೀಷ್ಮನೂ ಒಂದೇ. ಆದರೆ ಅನುಭವ ಬೆಳೆದ ಹಾಗೆ ಮೊಮ್ಮಗನ ಉತ್ಸಾಹ ಏನು? ಅಜ್ಜನ ಆತಂಕ ಏನು? ಅನ್ನೋದು ತಿಳೀತದೆ. ಆಗ ಒಂದೇ ತಾಳದ ಒಂದೇ ರಾಗದ ಎರಡು ಪದ್ಯಗಳನ್ನು ಭಿನ್ನವಾಗಿ ಹೇಳಬೇಕಾಗುತ್ತದೆ. ಮೋಹಿನಿಯನ್ನು ಕಂಡ ಭಸ್ಮಾಸುರನ ಪದಕ್ಕೂ, ಸಂಧಾನದ ಕೃಷ್ಣನ ಪದಕ್ಕೂ ಶಂಕರಾಭರಣ ಅಷ್ಟ ಅಂತಲೇ ಇದೆ. ಆದರೆ ಬಳಸುವವನಿಗೆ ಸಂದರ್ಭದ ಭಾವ ತಿಳಿದಿಲ್ಲವಾದರೆ ಪಾತ್ರದ ಘನತೆಗೆ ಅಪಚಾರವಾಗುತ್ತದೆ. ಆದ್ದರಿಂದ ಭಾಗವತನಿಗೆ ರಾಗ - ತಾಳ ತಿಳಿದರೆ ಸಾಲದು, ಪಾತ್ರ ಪ್ರಸಂಗವೂ ತಿಳಿದಿರಬೇಕು.

ಭೀಷ್ಮ ಪರ್ವ ಪ್ರಸಂಗದಲ್ಲಿ ಧರ್ಮರಾಯನೊಡನೆ ಮಾತಾಡುವ ಭೀಷ್ಮನ ಪದವನ್ನು ಕೇಳಿ ಹಾಡುವರು. ನನ್ನ ಸಂಗಡ ಮದ್ದಲೆ ವಾದನ ನೀಡಿದವರು ಪ್ರಸಿದ್ಧ ಮದ್ದಲೆವಾದಕರಾದಂತಹ ದುರ್ಗಪ್ಪ ಗುಡಿಗಾರರು.

ಪ್ರಶ್ನೆ : ಈ ಇಳಿ ವಯಸ್ಸಿನಲ್ಲಿ ಸಮಯ ಕಳೆಯುವುದು ಕಷ್ಟವಾಗುತ್ತದೆಯೇ?

**ಭಾಗವತರು** : ವಯಸ್ಸು ಆಗ್ತಾ ಇರ್ತದೆ. ಮನಸ್ಸಿಗೆ ಹುಡುಗಾಟಿಕೆ ಬೇಕು. ಮರೆವು, ಉತ್ಸಾಹದ ಕೊರತೆ ಎಲ್ಲ ಇದ್ದಿದ್ದೇ. ನನಗೇನು ಈಗ ತೋಟಕ್ಕೆ ಹೋಗಿ ದುಡಿಯಲೇಬೇಕು ಎನ್ನುವ ಅನಿವಾರ್ಯತೆ ಇಲ್ಲ. ಮತ್ತೆ ನನಗೆ ಸಿಗುವ ಯುವಕ ಮಿತ್ರರಿದ್ದಾರಲ್ಲ, ಅವರನ್ನು ಕಂಡರೆ ಉತ್ಸಾಹ ಬಂದೇ ಬರುತ್ತದೆ. ಕೃಷಿಕರಿಗೆ ಮನೆಯೇ ದೊಡ್ಡದು. ಆ ಕಡೆ ಈ ಕಡೆ ಓಡಾಡಿದರೇ ಸಾಕಷ್ಟು ಹೊತ್ತು ಹೋಗ್ತದೆ. ಕೊಟ್ಟಿಗೆ, ತೋಟ ಅಂತ ಒಂದು ಸಾರೆ ಓಡಾಡಿದರೆ ಒಂದು ಹೊತ್ತೇ ಕಳೆದುಹೋಗ್ತದೆ. ದೇವರ ಪೂಜೆ, ಮಕ್ಕಳ ಮಾತು ಅಂತ ದಿನ ಈಗಲೂ ಹೇಗೆ ಹೋಗ್ತದೆ ಅನ್ನೋದೇ ತಿಳಿಯೋದಿಲ್ಲ. ಎಲೆ ಅಡಿಕೆ ಜಗಿಯೋ ನನಗೆ ದಿನದಲ್ಲಿ ಎರಡು ತಾಸು ಅದಕ್ಕೇ ಹೋಗ್ತದೆ. ಅದೂ ಬಹಳ ವರ್ಷದಿಂದ ನನ್ನ ಸಂಗಡ ಇದೆ.



ಪ್ರಶ್ನೆ : ಕಲೆಯ ವಿಷಯದಲ್ಲಿ ನಿಮ್ಮ ಸಲಹೆ ಏನು?

**ಭಾಗವತರು** : ಕಲೆಯ ವಿಷಯದಲ್ಲಿ ಸಲಹೆ ಕೊಡಲಿಕ್ಕೆ ಬರೋದಿಲ್ಲ. ಅಭ್ಯಾಸ ಮಾಡ್ತೇನೆ ಅಂತ ಬಂದರೆ ಹೇಳಿಕೊಡಬಹುದು. ಶ್ರದ್ಧೆ ಇದ್ದವರು ಅನೇಕರು ನಮ್ಮ ಮನೆಯಲ್ಲಿಯೇ ಇದ್ದು ಕಲಿತು ಹೋಗಿದ್ದಾರೆ. ಕಲಿಬೇಕಾದವರು ಶ್ರದ್ಧೆಯಿಂದ ಕಲೀಬೇಕು. ಕಲೆಯ ಕುರಿತು ಗೌರವ ಬರುವ ಹಾಗೆ ನಡೆದುಕೊಳ್ಳಬೇಕು. ಯಾಕೆಂದರೆ ಜನ ಕಲೆನೂ ನೋಡ್ತಾರೆ. ಕಲಾವಿದನನ್ನು ನೋಡ್ತಾರೆ. ನಮ್ಮ ಶೀಲ ಬಹಳ ಮುಖ್ಯ. ಇಲ್ಲಾ ಅಂದರೆ ಕಲಾವಿದನ ನಡತೆಯಿಂದಾಗಿ ಕಲೆಯೇ ಕೆಟ್ಟದ್ದು ಅನ್ನುವ ತೀರ್ಮಾನಕ್ಕೆ ಬರ್ತಾರೆ. ಹಾಡೋದು ಕುಣಿಯೋದು ಎಲ್ಲ ಆನಂದಕ್ಕಾಗಿ, ಬದುಕಿನಲ್ಲಿ ನಮಗೆ ಎಷ್ಟು ಕಲೆ ಗೊತ್ತಿದೆಯೋ ಆನಂದಕ್ಕೆ ಅಷ್ಟು ಹಾದಿ.

---

**ಇವರ ಅನಿಸಿಕೆ ....**

**ಇರಲಿ ನಮ್ಮಲ್ಲಿಯೇ**
**ಕಹಿ**
**ನೀಡುತ್ತಿರೋಣ ನಾವು**
**ಸಿಹಿ**
**ಎನ್ನುವ ಹಿರಿಯ ಅನು**
**ಭವಿ**
**ಈ ಭಾಗವತ ಹಿರಿಯ**
**ಜೀವಿ**

**ಆದದ್ದು**

**ತಾಯಿಯಿಂದ ಯಕ್ಷಗಾನ**
**ಸಂಸ್ಕಾರ**
**ಹಳತು - ಹೊಸತು ರಾಗ ಲಯ**
**ಸಾಕ್ಷಾತ್ಕಾರ**

**-'ರಾಯ, ಶಿರಸಿ**

---

ಪುಟ ಪ್ರಾಯೋಜಕರು : **ಶ್ರೀ ತಿಮ್ಮಪ್ಪ ಕೃಷ್ಣ ಹೆಗಡೆ, ಗಿರಣಿಮನೆ**



# ಬಾಳೆಹದ್ದ ಭಾಗವತರ ದಾಂಪತ್ಯಗೀತೆ

**- ಜ್ಯೋತಿ ಬೊಮ್ಮನಹಳ್ಳಿ**

ಅದೊಂದು ಮಲೆನಾಡಿನ ಪುಟ್ಟಹಳ್ಳಿ. ಆಗಿನ್ನೂ ನಾಗರಿಕತೆಯ ಸೋಂಕು ತಗುಲುರಲಿಲ್ಲ. ಕಾಲದ ಪರಿವೆಯಿಲ್ಲ. ಅಲ್ಲಿರುವುದೆಲ್ಲ ಸಮೃದ್ಧ ಸಾಂಸ್ಕೃತಿಕ ಬದುಕು, ಯಕ್ಷಗಾನ ಕಲೆಯ ಶ್ರೀಮಂತಿಕೆ, ಪ್ರೀತಿಯ ಆದರಾತಿಥ್ಯ.....

ಅಲ್ಲಿನ ಗದ್ದೆಯ ಬದಿಯ ಹಾದಿಯಲಿ ಸಾಗಿದರೆ ತೋಟದ ಮಧ್ಯದಲ್ಲಿರುವ ಮನೆಯಿಂದ ಯಕ್ಷಗಾನ ಭಾಗವತಿಕೆಯ ಸಂಗೀತವು ಅಲೆ ಅಲೆಯಾಗಿ ತೇಲಿಬರುತ್ತದೆ.

**'ಏನಯ್ಯಾ । ಇಂಥಾದ್ದೇನಯ್ಯ । ಏನಯ್ಯ ನಮ್ಮ ಬರವ ಕಂಡು ನಿನಗೆ ಜ್ಞಾನ ತಪ್ಪಿತೆ....?'** (ಕೃಷ್ಣ ಸಂಧಾನ)

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಆ ಪುಟ್ಟ ಹಳ್ಳಿಯೇ ಬಾಳೇಹದ್ದ. ಆ ಊರಿನಲ್ಲೊಂದೇ ಅಲ್ಲ, ಇಡೀ ಯಕ್ಷಗಾನ ಪ್ರಪಂಚಕ್ಕೇ ಬಾಳೇಹದ್ದ ಭಾಗವತರೆಂದು ಚಿರಪರಿಚಿತರಾಗಿರುವ ಶ್ರೀ ಕೃಷ್ಣ ಹೆಗಡೆಯವರ ಮನೆಯಲ್ಲಿ ದಿನನಿತ್ಯವೂ ಯಕ್ಷಗಾನ ಪ್ರಸಂಗದ ಹಾಡುಗಳು ಗುನುದುನಿಸುತ್ತವೆ. ಅದಕ್ಕೆ ಮೃದಂಗದ ನಾದ ತಾಳದ ಲಯ ದನಿಗೂಡಿಸುತ್ತವೆ.

ಸಿದ್ಧ ಮಾದರಿಯಲ್ಲಿ, ಪ್ರಜ್ಞಾವಂತಿಕೆಯ ಬುದ್ಧಿಮತ್ತೆಯಲ್ಲಿ ಬದುಕಿದವರು ಇವರು. ಆದರೇನಂತೆ, ಪ್ರಕೃತಿದತ್ತ ಅದೇ ಮುಗ್ಧತೆ, ಸಹಜ ಪ್ರೀತಿಯೊಂದಿಗೆ ಬದುಕನ್ನು ಕಟ್ಟಿಕೊಂಡು ತುಂಬು ಜೀವನದ ದಾಂಪತ್ಯ ದೋಣಿಯನ್ನು ಮುನ್ನಡೆಸಿಕೊಂಡು ಬಂದವರಿವರು. ತಮ್ಮ ಜೀವನದುದ್ದಕ್ಕೂ ಯಕ್ಷಗಾನವನ್ನೇ ಬೆನ್ನಿಗಂಟಿಸಿಕೊಂಡು ಬಂದ ಬಾಳೇಹದ್ದ ಕೃಷ್ಣ ಹೆಗಡೆಯವರು, ಸಹಧರ್ಮಿಣಿಯಾಗಿ ಇದ್ದನ್ನೇ ಅನುಸರಿಸಿಕೊಂಡು ಬಂದ ರಾಧಾ, ಸುಮಾರು 52 ವಸಂತಗಳನ್ನು ಮೀರಿ ಪೂರೈಸಿದ ಪರಿಯಿದು.

ಪ್ರಕೃತಿಯ ಸೊಬಗು ಮೈದಾಳಿದ ತಮ್ಮ ಊರಿನಲ್ಲಿಯೇ ನೆಲಸಿ, ಗದ್ದೆ, ತೋಟ ವ್ಯವಸಾಯ ಮಾಡುತ್ತಲೇ ಅವರೊಟ್ಟಿಗೆ ಜೀವನಾಡಿಯಾಗಿ ಬಂದದ್ದು ಯಕ್ಷಗಾನ ಭಾಗವತಿಕೆ ಎಂಬ ಬಳುವಳಿ. ಈಗಿನ ಶಿಕ್ಷಣ ಮಾದರಿಯಲ್ಲಿ ಅಕ್ಷರ ಕಲಿತವರಲ್ಲ. ಸ್ವಾತಂತ್ರ್ಯ ಪೂರ್ವದ ಅಂದಿನ ಆ ದಿನಗಳಲ್ಲಿ ವಿದ್ಯಾಭ್ಯಾಸ ಎಂಬ ಪರಿಭಾಷೆಯು ಶಾಲೆಯ ಕೊಠಡಿಯ ಬದಲಾಗಿ ಮನೆಯಲ್ಲಿಯೇ ಪಾಠ ನಡೆಯುತ್ತಿದ್ದ ಕಾಲ. ಭಾಗವತರೇ ಹೇಳುವಂತೆ, 'ಮಾಸ್ತರರೆಂದರೆ ಬರೇ ಹೊಡ್ಯವ್ರಾಗಿದ್ರು.(ಇದು ಹವ್ಯಕ ಭಾಷೆ). ಹಾಂಗಾಗಿ ಶಾಲೆಗೆ ಹೋಪ್ಲೇ ಹೆದ್ರಿಕೆಯಾಗ್ತಿತ್ತು...'

ಪುಟ ಪ್ರಾಯೋಜಕರು : **ಶ್ರೀ ಸುಬ್ರಹ್ಮಣ್ಯ ತಿ. ಹೆಗಡೆ, ಶಿರನಾಲಾ**



ಬಾಳೇಹದ್ದದ ಮನೆಯಲ್ಲಿ ಯಕ್ಷಗಾನ ಕಲೆಯು ತಲೆಮಾರಿನ ಬಳುವಳಿಯಾಗಿಯೇ ಹರಿದುಬಂದಿತ್ತು. ಹಾಗಾಗಿ ಕೃಷ್ಣಹೆಗಡೆಯವರು ಅಕ್ಷರಾಭ್ಯಾಸ ಮಾಡುವುದಕ್ಕೆ ಮುಂಚೆ ತಮ್ಮ ಏಳೆಳು ವಯಸ್ಸಿನಲ್ಲಿಯೇ ಈ ಪ್ರಭಾವದಿಂದ ಯಕ್ಷಗಾನ ಪ್ರಸಂಗಗಳ ಪದಗಳನ್ನು ಹಾಡಲು ಶುರುಮಾಡಿದ್ದರೆ ಅದು ಸಹಜ. ಅದರ ಸೆಳೆತವು ಕೊಟ್ಟಿಗೆಯಲ್ಲಿ, ಎಲ್ಲೆಂದರಲ್ಲಿ ಅಭ್ಯಾಸ ಮಾಡುವುದಕ್ಕೆ ಹಚ್ಚಬಿಟ್ಟಿತ್ತು ಅವರಿಗೆ.

ಕಬ್ಬಿನಗದ್ದೆ ಮಾಬ್ಲ ಭಾಗವತರ ಬಳಿ ಪ್ರಾರಂಭಿಕ ಗುರುಕಲಿಕೆ. ಹಾಗೆಯೇ ಕಂಪ್ಲಿ ಸುಬ್ರಾಯ ರಾಮಚಂದ್ರ ಹೆಗಡೆಯವರ ಬಳಿ ಗಂಭೀರವಾಗಿ ಆಳವಾಗಿ ಯಕ್ಷಗಾನ ಪ್ರಸಂಗಗಳ ಪದಗಳ ರಾದಸಂಯೋಜನೆಗೊಂಡು ಅಭ್ಯಾಸ. ಅದೇ ಮುಂದೆ ಕೆ. ವಿ. ರಾಜಯ್ಯಂಗಾರ, ಧಾರವಾಡರವರ ಹತ್ತಿರ ವಾಯಲಿನ್ ಕಲಿಯಲು ಪ್ರೇರಣೆ. ಹೀಗೆ ಎಡಬಿಡದೆ ಭಾಗವತಿಕೆಯ ಕರ್ನಾಟಕಿ, ಹಿಂದೂಸ್ತಾನಿ ಸ್ವರ ಸಂಗೀತದ ಎಲ್ಲ ಜ್ಞಾನವನ್ನೂ ಪಡೆದುಕೊಂಡು ಪ್ರಸಿದ್ಧರಾದವರು ಬಾಳೇಹದ್ದ ಭಾಗವತರು.

***ಪರಿಣಯದ ಪ್ರಸಂಗ :***

ಆಗಿನ್ನೂ ಯಕ್ಷಗಾನ ಕಲಾವಿದರಿಗೆ ಹೆಣ್ಣು ಕೊಡಲು ಸ್ವಲ್ಪ ಹಿಂಜರಿಯುವ ಕಾಲ. ಯಾಕೆಂದರೆ ರಾತ್ರಿ ಮನೆ ಬಿಟ್ಟರೆ ಅವರು ತಿರುಗಿ ಬರುವುದು ಮಾರನೆಯ ದಿನ ಬೆಳಕು ಹರಿದ ಮೇಲೆಯೇ. ಇಂತಹ ಪರಿಸ್ಥಿತಿಯಲ್ಲಿ ಪರಸೀಮೆಯ ಕೊಪ್ಪಲತೋಟದ ಹೆಣ್ಣು ನೋಡಲು ಕೃಷ್ಣ ಹೆಗಡೆಯವರ ಸವಾರಿ ಚಿತ್ತೈಸಿತ್ತು. ಇದ್ಯಾವುದರ ಪರಿವೆ ರಾಧಾಳಿಗೆ ಇಲ್ಲ. ಯಾಕೆಂದರೆ ಅವಳಿಗಿನ್ನೂ ಆಗ 13 ರ ಪ್ರಾಯ. ದೇವರಮನೆಯ ಮುಂದೆ ನೆಲ ಸಾರಿಸುತ್ತಿದ್ದ ರಾಧೆಗೆ ಅಜ್ಜನ ಮನೆಯ ಮಾವನ ಕಡೆಯಿಂದ ಬುಲಾವ್ ಬಂತು ತನ್ನನ್ನು ನೋಡಲು ಪರಸೀಮೆಯಿಂದ ಹುಡುಗ ಬಂದಿದ್ದಾನೆ ಎಂದು. ಸೀರೆ ಉಟ್ಟುಕೊಳ್ಳದೇ ಅದೇ ಅಂಗಿ-ರವಿಕೆಯ ಮೇಲಿದ್ದ ರಾಧೆ ರಾಡಿಯ ಕೈ ಮಾತ್ರ ತೊಳೆದು ಒಂದೇ ಓಟಕ್ಕೆ ಅಜ್ಜನ ಮನೆಗೆ ಹಾಜರ್. ಯಕ್ಷಗಾನ ಭಾಗವತರಿಗೆ ರಾಧೆ ಒಪ್ಪಿಗೆಯಾಗಿಬಿಟ್ಟಳು.

ಹಾಲು ಬಣ್ಣದ ದುಂಡನೆಯ ಮುಖದ ಮುಗ್ಧ ಮನಸ್ಸಿನ ರಾಧೆ ಕೃಷ್ಣನ ಸಂಗಾತಿಯಾಗಲು ಹೆಚ್ಚು ಕಾಲ ಬೇಕಾಗಿರಲಿಲ್ಲ. ಬೇಸಿಗೆಯ ಕಾಲದಲ್ಲಿ ನಡೆದ ಆ ಮದುವೆಯ ದಿನವೇ ಯಕ್ಷಗಾನ ಪ್ರಸಂಗ, ಭಾಗವತರದ್ದೇ ಹಾಡು....

ಸಂಸಾರದ ಮೊದ ಮೊದಲ ದಿನಗಳಲ್ಲಿ ರಾಧೆಗೆ ಭಯ, ಅಂಜಿಕೆ, ಸಂಕೋಚ. ಪತಿ ಏನು ಹೇಳಿದರೂ ಒಲ್ಲೆ ಎಂದವಳಲ್ಲ ಅವಳು. ಮನೆಯ ತುಂಬ ಜನ. ಜೊತೆಗೆ ಕೃಷ್ಣ ಹೆಗಡೆ ಕಲಾವಿದ ಸಂಗಾತಿಗಳಿಗೆ ಮಧ್ಯರಾತ್ರಿಯಲ್ಲಿಯೂ ಎದ್ದು ಊಟ ಬಡಿಸಿ ಆತಿಥ್ಯ ಮಾಡಿದಳು ರಾಧೆ. ತಮ್ಮ ಹೆಂಡತಿಯ ಈ ಪ್ರೀತಿಯ ಆದರದ ಬಗ್ಗೆ ಭಾಗವತರಿಗೆ ಬಹಳ ಗೌರವ, ಅಕ್ಕರೆಯ ಭಾವನೆಯಿದೆ.

ಈ ಹಳ್ಳಿಯ ಬದುಕಿನೊಟ್ಟಿಗೆ, ಸಾಂಸ್ಕೃತಿಕ ಕಲೆ, ಯಕ್ಷಗಾನ ಮಿಳಿತವಾಗಿದೆ. ಹಾಗಾಗಿ



ಅಲ್ಲಿನ ದಾಂಪತ್ಯ ಜೀವನವೆಂದರೆ ಕೇವಲ ಗಂಡ, ಹೆಂಡತಿಯರಿಗಷ್ಟೇ ವೈಯಕ್ತಿಕ ನೆಲೆಯಲ್ಲಿ ಸೀಮಿತವಾಗಿರುವುದಿಲ್ಲ. ಬಾಳೆಹದ್ದ ಭಾಗವತರ ದಾಂಪತ್ಯ ಜೀವನವೂ ಇದಕ್ಕೆ ಹೊರತಾಗಿರಲಿಲ್ಲ.

ಸಾರಿಗೆ ಸಂಪರ್ಕವಿಲ್ಲದ ಕಾಲವದು. ಆದರೆ ಯಕ್ಷಗಾನದ ಚಟ, ಹುಚ್ಚು ಕೇಳಬೇಕಲ್ಲ. ಚಕ್ಕಡಿಯ ಮೇಲೆ, ಒಮ್ಮೊಮ್ಮೆ ಕಾಲ್ನಡಿಗೆಯಲ್ಲಿಯೂ ಬಯಲಾಟದ ಆಟಕ್ಕೆ ಭಾಗವತಿಕೆ ಮಾಡಲು ಹೋಗಿದ್ದುಂಟು. ಆಗ ಇಡೀ ಮನೆಯ ಕುಟುಂಬದ ಜವಾಬ್ದಾರಿ ರಾಧೆಯ ಮೇಲೆ ಅಷ್ಟೇ ಏಕೆ, ಹೊಸ್ತೋಟ ಮಂಜುನಾಥ ಭಾಗವತರೂ ಸೇರಿದಂತೆ ಅನೇಕ ಕಲಾವಿದರು ಬೆಳೆದದ್ದು ಇವರ ಮನೆಯಲ್ಲಿಯೇ. ಹೀಗಿದ್ದರೂ ಕೂಡ ರಾಧೆಯು ಒಂದು ದಿನವೂ ಬೇಸರಿಸಿಲ್ಲ. ಅದೇ ನಗುಮುಖ, ಸಂತೋಷದೊಂದಿಗೆ ಪತಿಯ ಸಮೇತ ಎಲ್ಲರನ್ನೂ ಚೆನ್ನಾಗಿ ನೋಡಿಕೊಂಡಿದ್ದಾರೆ. ಯಕ್ಷಗಾನ ಪ್ರಸಂಗದ ಪದ್ಯಗಳನ್ನು ಅದರ ಭಾವಕ್ಕೆ, ರಾಗಕ್ಕೆ ತಕ್ಕಹಾಗೆ ಕೇಳಬೇಕೆಂದರೆ ಬಾಳೆಹದ್ದ ಭಾಗವತರು ಹಾಡುವುದನ್ನು ಆಲಿಸಬೇಕು.

**''ಅತ್ತಿಯ ಮರಗಳಿರಾ। ಅಲ್ಲಿರುವಂಥ। ಮುತ್ತಿನ ಗಿಣಗಳಿರಾ। ಅತ್ತೆಯ ಮಗನ ಕಂಡರೆ ಇತ್ತಾ ಬರಹೇಳಿ...''** ಇಂತಹ ಶೃಂಗಾರರಸದ ಪದ್ಯದಿಂದ ಹಿಡಿದು, ಎಲ್ಲ ರಸ ಭಾವಗಳನ್ನರಿತು, ಪ್ರಸಂಗಕ್ಕೆ ಪದ್ಯ ಹಾಡುವುದು ಕೃಷ್ಣ ಹೆಗಡೆಯವರ ವೈಶಿಷ್ಟ್ಯ. ಜೊತೆಗೆ ಕಲೆಗಿಂತ ಮನುಷ್ಯ ದೊಡ್ಡವನಲ್ಲ. ಯಕ್ಷಗಾನದಲ್ಲಿ ವೇಷಧಾರಿಗಳಿಂದ ಹಿಡಿದು, ಮೃದಂಗ, ಚಂಡೆ ಭಾಗವತಿಕೆ ಹೀಗೆ ಎಲ್ಲರಿಗೂ ಅವಿನಾಭಾವ ಸಂಬಂಧ ಇರಬೇಕೆನ್ನುವುದು ಅವರ ತಾತ್ವಿಕ ಚಿಂತನೆ.

ಪ್ರಸಿದ್ಧಿಯ ಬೆನ್ನಹಿಂದೆ ಹೋಗದೆ ಪ್ರಚಾರಕ್ಕೆ, ಪ್ರಶಸ್ತಿಗೆ ಬೇಡದ ಆ ಬಾಳೆಹದ್ದ ಭಾಗವತರು, ತಾಳಮದ್ದಲೆಯಲ್ಲಿ ಗದೆ, ಬಿಲ್ಲು, ಬಾಣ ಇವುಗಳನ್ನಿರಿಸಿಕೊಂಡೇ ಅರ್ಥ ಹೇಳುವುದು, ಮೈಸೂರಿನ ದಸರಾ ಕಾರ್ಯಕ್ರಮದಲ್ಲಿ ಅವಧಿಗಿಂತ ಮೊದಲೇ ಯಕ್ಷಗಾನ ಪ್ರಸಂಗ ಮುಗಿದಾಗ ಮಂಗಳ ಪದ್ಯವನ್ನೇ ಹೆಚ್ಚು ವಿಸ್ತಾರಗೊಳಿಸಿದ್ದು ಹೀಗೆ ತಮ್ಮ ಈ ಕಲೆಯ ಜೀವನದಲ್ಲಿ ಹಾದುಹೋದ ಘಟನೆಯ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತದೆ. ಬಾಳೆಹದ್ದ ಭಾಗವತರು ರಾಧೆಯ, ತುಂಬು ದಾಂಪತ್ಯ ಜೀವನದಲ್ಲಿ ನಾಗವೇಣಿ, ಮಾದೇವಿ, ಮಗ ತಿಮ್ಮಪ್ಪ ಇವರೊಟ್ಟಿಗೆ ಮೊಮ್ಮಕ್ಕಳೂ ಸೇರಿದ್ದಾರೆ. ಮಗನೂ ಕೂಡ ಅವರು ನಡೆದು ಬಂದ ಭಾಗವತಿಕೆಯ ಹಾದಿಯಲ್ಲಿಯೇ ಎತ್ತರಕ್ಕೆ ಸಾಗಿದ್ದಾರೆ. ಪರಸ್ಪರರ ಮುಗ್ಧತೆಯ ಪ್ರೀತಿ, ಅರಿವಿನ ಅನುಭವದಲ್ಲಿ ಸಾಗಿದ ಈ ಹಿರಿಯ ಜೋಡಿಗೆ ಮಾತು - ಮೌನ ಮೀರಿದ ಭಾವನೆಯೇ ಸಾಮರಸ್ಯದ ಬೆಸುಗೆಯಾಗಿದೆ.

ಆ ಮನೆಯಲ್ಲಿ ಇನ್ನೂ ತಾಳದ ಸದ್ದಿದೆ. ಮದ್ದಳೆ, ಚಂಡೆಯ ನಾದವಿದೆ. ಯಕ್ಷಗಾನ ಪ್ರಸಂಗದ ಪದ್ಯಗಳ ಜೀವಂತಿಕೆಯಾಗಿ ತಂದೆ - ಮಗನ ಸ್ವರಗಳಲ್ಲಿ ಉಲಿಯುತ್ತಿದೆ.

**'ಬಂದಾನೋ ದೇವರ ದೇವ**

**ನೊಂದ ಭಕ್ತರ ಕಾದ'**

ಪುಟ ಪ್ರಾಯೋಜಕರು : **ಶ್ರೀ ಗೋಪಾಲ ರಾ. ಭಟ್ಟ**



# ಭಾಗವತರ ಪರಿಚಯ - ಒಂದು ಶುಭ ಸಂಕೇತ

*- ಶೇಣಿ ಗೋಪಾಲಕೃಷ್ಣ ಭಟ್ಟ*

ನನ್ನ ಮತ್ತು ಕೃಷ್ಣ ಭಾಗವತರ ಪರಿಚಯ ಸಾಮಾನ್ಯ 25-30 ವರ್ಷಗಳ ಹಳೆಯದು ಎಂದು ಹೇಳಬಹುದು. ನಾನು ಉತ್ತರ ಕನ್ನಡಕ್ಕೆ ಆಗಾಗ ತಾಳಮದ್ದಲೆ, ಹರಿಕಥೆಗೆ ಬರುವಾಗ ಹಿಮ್ಮೇಳದಲ್ಲಿ ವಾಯಲಿನ್ ವಾದಕರಾಗಿ ಪರಿಚಯ. ಇಲ್ಲಿಯ ಅನೇಕ ತಾಳಮದ್ದಲೆಗಳಲ್ಲಿ ಅವರು ಭಾಗವತರಾಗಿಯೂ ಇದ್ದರು.

ಯಕ್ಷಗಾನಕ್ಕೆ ಒಂದು ಸಮಗ್ರ ಕಾಯಕಲ್ಪವಾಗಬೇಕೆಂಬ ವಿಚಾರ ನನಗೆ ಭಾಗವತರಂಥವರ ಪರಿಚಯ ಒಂದು ಶುಭ ಸಂಕೇತವಾಗಿತ್ತು. ಯಕ್ಷಗಾನದ ತೆಂಕು - ಬಡಗುಗಳ ಪ್ರಭೇದದ ಒಳಮರ್ಮವನ್ನು ತಿಳಿದವರು ಬಹಳ ವಿರಳ. ಹಾಗೆ ಸಮಗ್ರವಾದ ತಿಳುವಳಿಕೆ ಇರುವುದು ಕೃಷ್ಣ ಭಾಗವತರಂತಹ ಕೆಲವೇ ಕೆಲವು ಜನರಲ್ಲಿ ಮಾತ್ರ.

ಒಮ್ಮೆ ಕೃಷ್ಣ ಭಾಗವತರು ಯಕ್ಷಗಾನ ತಾಳಮದ್ದಲೆಗಳಲ್ಲಿ ಗಣಪತಿ ಪೂಜೆಯಿಂದ ತೊಡಗಿದಾಗ ಆಗ ಅವರು ಬಳಸಿದ ರಾಗ - ತಾಳಾದಿಗಳ ಕುರಿತಾಗಿ ನನ್ನಲ್ಲಿ ಕುತೂಹಲ ಉಂಟಾಯಿತು. ಕಾರ್ಯಕ್ರಮದ ನಂತರ ವಿಶ್ರಾಂತಿ ಗೃಹದಲ್ಲಿ ಸಮಾಲೋಚನೆಗೆ ತೊಡಗಿದಾಗ ತೆಂಕು-ಬಡಗುಗಳ ರಾಗ, ತಾಳ, ಮಟ್ಟು, ಶೈಲಿ ಮುಂತಾದವುಗಳ ಕುರಿತು ಚರ್ಚಿಸಲಾಯಿತು. ಆ ಕುರಿತಾಗಿ ಗ್ರಂಥ ನಿರ್ಮಾಣ ಮಾಡಬೇಕೆಂದೂ ನಿರ್ಣಯವಾಗಿತ್ತು. ಆದರೆ ಕಾರಣಾಂತರದಿಂದ ಅದು ಮುಂದುವರಿಯಲೇ ಇಲ್ಲ. ಇನ್ನಾದರೂ ಇಂಥ ಸಂಸ್ಥೆಯವರು ಆ ಕುರಿತಾಗಿ ಲಕ್ಷ್ಯ ವಹಿಸಿ ಅಂಥ ಅಧ್ಯಯನಕ್ಕೆ ಯೋಗ್ಯ ಗ್ರಂಥವನ್ನು ಹೊರತರಲಿ ಎಂದು ಹಾರೈಕೆ. ಭಾಗವತರ ಈ ಸಂಮಾನ ಕಾರ್ಯಕ್ರಮ ಯಶಸ್ವಿಯಾಗಲಿ, ಸಹೃದಯ ಭಾವತರಿಗೆ ಭಗವಂತ ಆಯುಷ್ಯ, ಆರೋಗ್ಯ ಆನಂದಾದಿಗಳನ್ನು ಕರುಣಿಸಲಿ.

(ವೃದ್ಧಾಪ್ಯ ಶಾರೀರಿಕ ತೊಂದರೆಯ ಕಾರಣದಿಂದ ಉಪಸ್ಥಿತನಿರಲು ಅಶಕ್ಯ. ಮೇಲಿನ ಮಸಕು ಮಸಕು ನೆನಪನ್ನೂ ಸಹ ನನ್ನ ಪ್ರಿಯರಲ್ಲಿ ಹೇಳಿ ಬರೆಸಿದ್ದೇನೆ. ತಪ್ಪುಗ್ರಹಿಕೆ ಅನ್ಯಥಾ ಸಲ್ಲದು.)



# ನಾ ಕಂಡಂತೆ ಬಾಳೇಹದ್ದ ಭಾಗವತರು

**- ರಾಜೇಶ ಭಟ್ಟ, ಬೆಳಗುಂದ್ಲಿ**

ಅವಿರತ ಮಹಾಗಣಪತಿಯ ಸೇವಾತತ್ಪರರಾಗಿ ಕಂಡದ್ದನ್ನು ಕಂಡಂತೆ ದೃಢವಾಗಿ, ಅಷ್ಟೇ ಸ್ಫುಟವಾಗಿ, ಯಾವುದೇ ವಿಷಯವನ್ನಾದರೂ ನಿಖರವಾಗಿ ಹೇಳುವ, ಸಹೃದಯಿ ಭಾಗವತರದ್ದು ನಿರ್ಮಲವಾದ ಮನಸ್ಸು. ''ಯಕ್ಷಗಾನ ಜ್ಞಾನನಿಧಿ'' ಎಂದು ಬಿರುದಾಂಕಿತವನ್ನು ಶ್ರೀಗಳವರಿಂದ ಪಡೆದ ಅವರು ನಿಜಕ್ಕೂ ಯಕ್ಷಗಾನದಲ್ಲೂ, ಯಕ್ಷಗಾನ ಆಸಕ್ತರಿಗೂ, ವಿದ್ಯಾರ್ಥಿಗಳಿಗೂ ಒಂದು ದೊಡ್ಡ ನಿಧಿಯೇ ಆಗಿದ್ದಾರೆ. ಯಾಕೆಂದರೆ ಯಕ್ಷಗಾನದಲ್ಲಿ ಯಾವುದೇ ಪದ್ಯಕ್ಕಾದರೂ, ಭಾವಪರವಶತೆಯಿಂದ ಅದರಲ್ಲೇ ತನ್ಮಯರಾಗಿ, ಲಯಬದ್ಧರಾಗಿ ಹಾಡುವ ಕಲೆ ಎಲ್ಲರಿಗೂ ಬರುವುದು ಅಸಾಧ್ಯ. ಅದಲ್ಲದೇ ಶಾಸ್ತ್ರೀಯವಾಗಿ ಎಲ್ಲ ರಾಗಗಳ ಪರಿಚಯ, ಅದನ್ನು ಅಷ್ಟೇ ಶಾಸ್ತ್ರೀಯವಾಗಿ ಬಳಸುವಿಕೆ, ಅದಲ್ಲದೇ ಹಾಡುವ ಪದ್ಯದ ಛಂದಸ್ಸು, ವೃತ್ತ, ಅಲಂಕಾರ ಎಲ್ಲವನ್ನೂ ತಿಳಿದು ಹಾಡುವ ಕಲಾವಿದರು ಬಹಳ ವಿರಳ. **''ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ತಸ್ಯ ಶಾಸ್ತ್ರ ಕಿಂ ಕರಿಷ್ಯತಿ ?''** ಎಂಬ ವಾಕ್ಯದಂತೆ ಸ್ವಯಂ ಆಚರಣೆ, ಪ್ರಜ್ಞೆ ಇಲ್ಲದಿದ್ದರೆ ಶಾಸ್ತ್ರ ತಾನೆ ಏನು ಮಾಡಲು ಸಾಧ್ಯ ? ಆದರೆ ಭಾಗವತರು ಹಾಗಲ್ಲ. ಸ್ವಯಂ ಪ್ರಜ್ಞಾವಂತರು. ಆಚರಣೆಯಲ್ಲೂ ಇಟ್ಟುಕೊಂಡವರು. ಈ ಇಳಿವಯಸ್ಸಿನಲ್ಲಿಯೂ ಪ್ರಾತಃಕಾಲ 5 ಗಂಟೆಗೆ ಎದ್ದು ರಾಗಗಳ ಆಲಾಪನ, ವಾಯೋಲಿನ್ ನುಡಿಸುವುದು ಇದೆಲ್ಲ ಅವರ ನಿಷ್ಠೆಯನ್ನು ಎತ್ತಿ ತೋರಿಸುತ್ತದೆ. ಇಷ್ಟಲ್ಲದೇ ಪ್ರಾಪಂಚಿಕವಾಗಿಯೂ ಇನ್ನೊಬ್ಬರಿಗೆ ನೋವನ್ನುಂಟು ಮಾಡದೇ ಅನ್ಯರ ನೋವು, ನಲಿವಿನಲ್ಲಿ ತಾವೂ ಭಾಗಿಯಾಗುವಿಕೆ, ಅವರ ಸರಳ ವ್ಯಕ್ತಿತ್ವವನ್ನು ಪ್ರಕಟಗೊಳಿಸುತ್ತವೆ. ''ಪರೋಪಕಾರಾಯ ವಹಂತಿ ನದ್ಯಃ । ಪರೋಪಕಾರಾರ್ಥಂ ಇದಂ ಶರೀರಂ'' ಎಂಬಂತೆ ಅವರಿಂದ ಅನೇಕ ರೀತಿಯಲ್ಲಿ ಉಪಕಾರ ಪಡೆದವರು ಬಹಳ. ನಾನು ಅವರ ಶಿಷ್ಯನಾಗಿ ಯಕ್ಷಗಾನದಲ್ಲಿ ಎಷ್ಟು ಸಾಧನೆ ಮಾಡಿದ್ದೇನೆ ಎನ್ನುವುದಕ್ಕಿಂತ ಜೀವನದಲ್ಲಿ ಕಲಿಯಬೇಕಾದ ಅನೇಕ ತಿಳುವಳಿಕೆ, ಸದ್ಗುಣಗಳನ್ನು ಅವರಿಂದ, ಅವರ ಮನೆಯವರಿಂದ ಪಡೆದುಕೊಂಡಿದ್ದೇನೆ. ''ನಾರಿಯ ಮೊಗವು ನಗುತಿರೆ ನಂದನವನವದುವೇ ತನ್ನ ಗುಡಿಸಲು'' ಎಂಬ ನುಡಿಯಂತೆ ಅವರ ಧರ್ಮಪತ್ನಿಯವರೂ ಎಲ್ಲ ವಿಷಯದಲ್ಲೂ ಭಾಗವತರಿಗೆ ಸಹಧರ್ಮಿಣಿಯಾಗಿ ಅನುಸರಿಸಿ ಬಂದವರು. ಹೀಗೆ ಎಲ್ಲ ರೀತಿಯಿಂದ ಸಜ್ಜನರೂ, ಸಂಭಾವಿತರೂ, ಸಾಧಕರೂ ಆದ ಬಾಳೇಹದ್ದ ಕೃಷ್ಣ ಭಾಗವತರಿಗೆ ಸನ್ಮಾನ ನಡೆಯುತ್ತಿರುವುದು ಆ ಕುರಿತು ''ಭಾಗವತ'' ಸ್ಮರಣ ಸಂಚಿಕೆ ಹೊರತರುತ್ತಿರುವುದು ನಿಜಕ್ಕೂ ಶ್ಲಾಘನೀಯ. ಶ್ರೀಗಳವರು ನೆರವೇರಿಸುತ್ತಿರುವ ಈ ಸನ್ಮಾನದಿಂದ ಅವರಿಗೆ ಆಯುಷ್ಯ,

ಪುಟ ಪ್ರಾಯೋಜಕರು : **ಶ್ರೀ ಟಿ. ಎಸ್. ಹೆಗಡೆ, ಶೀಗೆಮನೆ**



ಆರೋಗ್ಯ, ಆನಂದಗಳು ಉಂಟಾಗಿ ಭಾಗವತರು ಶತಾಯುಷಿಗಳಾಗಿ, ಯಕ್ಷರಂಗದ ಕಲಾನಿಧಿಯಾಗಿರಲೆಂದು ಉಪಾಸನಾ ಸಾನ್ನಿಧ್ಯ ಶ್ರೀ ಲಕ್ಷ್ಮೀನಾರಾಯಣನು ಅನುಗ್ರಹಿಸಲೆಂದು ಪ್ರಾರ್ಥಿಸುವೆ.

ಕಳೆದ ಶತಮಾನದಲ್ಲಿ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳು ಪ್ರಚಾರಗೊಂಡ ನಂತರ (ಯಕ್ಷಗಾನದ) ಹಾಡುಗಾರಿಕೆಯಲ್ಲಿ ಸ್ವರದ ಖಚಿತತೆ ಹಾಗೂ ರಾಗಗಳ ತಿಳುವಳಿಕೆಯ ಬಗೆಗೆ ಅನೇಕ ಭಾಗವತರ ಗಮನ ಹರಿದು ಅನೇಕ ಭಾಗವತರು ಸಂಗೀತದ ಜ್ಞಾನವನ್ನು ಮಾಡಿಕೊಂಡರು. ಬಾಳೆಹದ್ದದ ಶ್ರೀ ಕೃಷ್ಣ ಭಾಗವತರು ಈಗ ಆರವತ್ತು ವರ್ಷಗಳ ಹಿಂದೆ ತಾವು ಅಭ್ಯಾಸ ಮಾಡಿದ ಪದ್ಧತಿಯನ್ನು ನೆನಪಿಸಿಕೊಳ್ಳುತ್ತ ತಾವು 'ರಾಗಗಳನ್ನು 'ಆ' ಕಾರದ ಮೂಲಕ ಅಭ್ಯಾಸ ಮಾಡಿ ರಾಗಗಳಲ್ಲಿ ತುಂಡು ಪದ್ಯಗಳನ್ನು (ಸ್ತುತಿ ಪದ್ಯಗಳು) ಕಲಿತು ನಂತರ ಅವೇ ರಾಗಗಳಲ್ಲಿ ಕಥೆಯನ್ನು ನಡೆಸಲು ತೊಡಗಿದೆ' ಎನ್ನುತ್ತಾರೆ. ಅವರು ನಂತರ ಸಂಗೀತದ ಹೆಚ್ಚಿನ ಅಭ್ಯಾಸ ಮಾಡಿಕೊಂಡಿದ್ದಲ್ಲದೆ ವಯೋಲಿನ್ ನುಡಿಸಲು ಕಲಿತರು. ಸಂಗೀತದ ಅಭ್ಯಾಸವು ತಮ್ಮ ಯಕ್ಷಗಾನ ಶೈಲಿಯ ಹಾಡುಗಾರಿಕೆಯ ಮೇಲೆ ಯಾವ ದುಷ್ಪರಿಣಾಮವನ್ನೂ ಬೀರಲಿಲ್ಲ ಎನ್ನುವ ಅವರು ಸಂಗೀತದ ಜ್ಞಾನ ಹೊಂದಿ ರಾಗಗಳನ್ನು ಬಳಸಿ ಯಕ್ಷಗಾನ ಶೈಲಿಯನ್ನು ಚೆನ್ನಾಗಿ ಉಳಿಸಿಕೊಂಡು ಬಂದವರಾಗಿದ್ದಾರೆ. ಇವರ ಪುತ್ರ ಯುವ ಭಾಗವತರಾದ ಶ್ರೀ ತಿಮ್ಮಪ್ಪ ಭಾಗವತರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಅಪ್ರಕಟಿತ ಪಿ. ಎಚ್. ಡಿ. ಮಹಾಪ್ರಬಂಧ (ಪುಟ ಸಂಖ್ಯೆ 87)

**ಶಾಂತಾರಾಮ ತಿಮ್ಮಪ್ಪ ಹೆಗಡೆ, ಕನೇನಹಳ್ಳಿ**



**ಶ್ರೀ ನರಸಿಂಹ ಭಟ್ಟ, ಹಂಡ್ರಮನೆ**

ರಾಯಸಂ ದ ಮದ್ದಲೆ ವಾದಕರು



**ಶ್ರೀ ಆರ್. ಎಸ್. ಹೆಗಡೆ, ತುದಿಮನೆ, ಕಂಪ್ಲಿ**

ಶ್ರೀ ಕೃಷ್ಣ ಭಾಗವತ ಸಮ್ಮಾನ ಸಮಿತಿ ಉಪಾಧ್ಯಕ್ಷರು

ಪುಟ ಪ್ರಾಯೋಜಕರು : **ಶ್ರೀ ಗಿರೀಶ ರಾಮಚಂದ್ರ, ಭಟ್ಟ, ಕೋನಾಳ**



# ಗತಿಸಿದ ಹಲವು ಹಿರಿಯ ಕಲಾವಿದರು

ಪ್ರಸ್ತಾವನೆ : ಈ ಭಾಗದಲ್ಲಿ ಭಾಗವತಿಕೆಯಲ್ಲಿ ಭಾಗವಹಿಸಿದ ನಮ್ಮ ಪ್ರದೇಶದ ಹಲವು ಕಲಾವಿದರ ಕಿರು ಪರಿಚಯ ಕೊಡಲಾಗಿದೆ. ಅಂದ ಮಾತ್ರಕ್ಕೆ ಇಲ್ಲಿಯ ಸಮಗ್ರತೆಯನ್ನು ಇದು ಸೂಚಿಸುವುದಿಲ್ಲ. ಪುಟಗಳ ಮಿತಿ, ಭಾಗವತರು ಹೇಳುವಾಗ, ಕಾಲವು ಹಿಂದೆ ಮುಂದೆ ಆಗಿದ್ದೂ ಇರುವುದಕ್ಕೆ, ಅನೇಕ ಸಾರೆ ಅವರೇ ಒಪ್ಪಿಕೊಳ್ಳುವಂತೆ ವಯಸ್ಸಿನ ಕಾರಣದಿಂದಾದ ಮರೆವು, ಹಾಗೂ ಲೇಖನ ಸಿದ್ಧಪಡಿಸಿದ ನಮ್ಮ ಮಿತಿ, ಮುಂತಾದವುಗಳಿಂದ ಅನೇಕ ತಪ್ಪುಗಳು ಇರಬಹುದು. ಅಲ್ಲದೆ, ಅವಶ್ಯವಾಗಿ ಉಲ್ಲೇಖಿಸುವಂಥಹದು ಬಿಟ್ಟು ಹೋಗಿ , ವರ್ಜ್ಯವಾಗಿದ್ದರೆ ಚೆನ್ನಿತ್ತು ಎನ್ನುವುದು ಉಳಿದುಕೊಂಡಿರಬಹುದು. ಸಹೃದಯ ಓದುಗರು ಅವನ್ನೆಲ್ಲ ಕ್ಷಮಿಸಬೇಕಾಗಿ ವಿನಂತಿಸುತ್ತೇವೆ.

★★★

ಸುಮಾರು ಎರಡು ದಶಕಗಳಿಗೂ ಮಿಕ್ಕಿ ಭರತನಹಳ್ಳಿ ಸೀಮೆ ಮೇಳದ ಭಾಗವತರು ಅವರಾಗಿದ್ದರು. ಈ ಅವಧಿಯಲ್ಲಿ ಅವರು ಕುಣಿಸಿದ ನಟರು ಅದೆಷ್ಟೋ. ಇದಲ್ಲದೆ, ದೂರದ ತ್ಯಾಗಲಿ, ಗೊರನಮನೆ, ಅಚವೆ, ಗೋಕರ್ಣ ಮೊದಲಾದ ಊರುಗಳಿಗೆ ಹತ್ತಿರದ 'ತಾಳಮದ್ದಳೆ' ಗೆಂದು ಭಾಗವಹಿಸಿದವರು. ಯಲ್ಲಾಪುರ ತಾಲೂಕಿನಲ್ಲಂತೂ ಸರಿಯೇ ಸರಿ. ಶಿರಸಿ, ಬೆಂಗಳೂರು, ಮೈಸೂರು ಮೊದಲಾದ ಕಡೆಗೂ ಭಾಗವತಿಕೆ ಮಾಡಿದವರು. ಹೀಗಾಗಿ ಅವರು ಹೆಸರಿಸಿದ ವ್ಯಕ್ತಿಗಳನ್ನೆಲ್ಲವನ್ನೂ ದಾಖಲಿಸಲು ಸಾಧ್ಯವಾಗಲಿಲ್ಲ.

ಸುಮಾರು ಇಂದಿಗೆ ನೂರು ವರ್ಷಗಳ ಹಿಂದೆ ಇಲ್ಲಿ ಪ್ರಸಿದ್ಧರಾದವರಲ್ಲಿ ಮಂಚೀಕೇರಿ ಮಾಣಿ ಎಂದು ಪ್ರಸಿದ್ಧಿ ಪಡೆದ ದಿ. ಹಾಸ್ಯಗಾರ ಭಟ್ಟರು, ಹಿತ್ಲಳ್ಳಿ ಮಾಣಿ ಎಂದು ಪ್ರಸಿದ್ಧಿ ಪಡೆದ ದಿ. ಅನಂತ ಹೆಗಡೆಯವರು. ಇಂದು ತಾಳ ಸೂತ್ರದಂತೆ ಕೈ ಪೆಟ್ಟನ್ನು ಒಂದು ಮಾತ್ರೆಯಲ್ಲಿ ಎಂಟು ಭಾಗಗಳನ್ನಾಗಿಸಿ ಹೊಡೆಯುವುದೂ ಅನೇಕರಿಗೆ ಸಾಧ್ಯವಾಗುತ್ತಿಲ್ಲ. ಆದರೆ ದಿ. ಹಾಸ್ಯಗಾರಜ್ಜ ಅಷ್ಟು ಪೆಟ್ಟುಗಳನ್ನು ಹಾರುವ ಮೂಲಕವೇ ಕುಣಿದು ತೋರಿಸುತ್ತಿದ್ದನಂತೆ. ಅವರ ನರಸಿಂಹನ ವೇಷವು ಪ್ರಸಿದ್ಧವಾಗಿತ್ತಂತೆ. ಆಲವಾಡದ ಗಣಪತಿ ಹೆಗಡೆಯವರದು ಹಿರಣ್ಯ ಕಶಿಪು. ಇವನದು ನರಸಿಂಹ. ಮೈಮೇಲೆ ಬರುವುದೂ ಇದ್ದಿತಂತೆ. ಸುಬ್ಬಣ್ಣ ( ಭಾಗವತರ ಗುರು) ನಿಗೆ ನೃತ್ಯವನ್ನು ಕಲಿಸಿದವ ಇದೇ ಅಜ್ಜನೆಂದು ಸುಬ್ಬಣ್ಣನವರೇ ಹೇಳಿದ್ದರು. ಭಾಗವತರು ಹದಿನೆಂಟು - ಇಪ್ಪತ್ತು ವರ್ಷ ಮೇಳದಲ್ಲಿ ಭಾಗವತರಾಗಿ ಕೆಲಸ ಮಾಡಿದವರು. ಈಗಲೂ ಅವರ ಮನೆಯಲ್ಲಿಯೇ ಇರುವ ಎಂಭತ್ತೈದು ವರ್ಷ ವಯಸ್ಸಿನ ಕಾಳೂಮಾವ ಕಾನಗೋಡ ಗಣೇಶ, ಬಾಳೇಜಡ್ಡಿ ಅಜ್ಜ. ಅವನ ಮಗ ಜಾಲೆಮನೆ ದಿ. ದೇವೇಂದ್ರ ಹೆಗಡೆಯವರು , ಹಿತ್ಲಳ್ಳಿ

ಪುಟ ಪ್ರಾಯೋಜಕರು : **ಶ್ರೀ ಗಣಪತಿ ರಾ. ಹೆಗಡೆ, ಶಶಿಮನೆ**



ಅನಂತ ಭಟ್ಟರು, ಕೇರಮನೆ ಗಣಪತಿ ಹೆಗಡೆ, ರಾಮಜ್ಜನ ಮನೆ ಕೃಷ್ಣಜ್ಜ; ಹಳ್ಳಿಗದ್ದೆ ದಿ. ಪರಮೇಶ್ವರ ಹೆಗಡೆ, ಅಣ್ಣಯ್ಯ ಹೆಗಡೆ (ಇವರು ಮೂಲತಃ ಮೆಣಸೆಯವರು) ದಿ. ಗಣಪತಿ ಹೆಗಡೆ, ಭಟ್ರಕೇರಿ, ಕಾಶೀಮಠದ ಸುಬ್ರಾಯ ಭಟ್ಟರು, ಕುಂದರಗಿ ದಿ. ಮಹಾದೇವ ಹೆಗಡೆ, ಹಾಸ್ಯಗಾರ ಗೋವಿಂದ ಭಟ್ಟರು, ಹಳಕಾರ ಅಜ್ಜ, ಗೋವಿಂದ ಹೆಗಡೆಯವರು ಕನೇನಹಳ್ಳಿ, ವಾಡಿಗಾರ ತಿಮ್ಮಪ್ಪ ಹೆಗಡೆ ಗೋರ್ಸಗದ್ದೆ, ಕಲ್ಲಳ್ಳಿ ಭಾಗವತ , ಹಿತ್ಲಳ್ಳಿ ವಿಶ್ವೇಶ್ವರ ಹೆಗಡೆ, ಮೊಟ್ಟೆಪಾಲು ವೆಂಕಟ್ರಮಣ ಭಟ್ರು, ಜವಳೆಮಾವ, ನರಸಿಂಹ ಭಟ್ರು, ಜವಳೆಕೆರೆ, ಷಣ್ಣಣ್ಣ ಭಾಗವತ ಸಿಂಬ್ಳಗಾರು, ಇವರುಗಳು ಭಾಗವತರ ನೆನಪಿನಂಗಳದ ರಂಗ ನಟರು. ಭಾಗವತಿಕೆಯಲ್ಲಿ ಅವರ ಮೊದಲ ಗುರು ದಿ|| ಕಬ್ಬಿನಗದ್ದೆ ಮಹಾಬಲ ಭಾಗವತರು, ಮಳಿಗೆಮನೆ ರಾಮಕೃಷ್ಣ ಹೆಗಡೆಯವರು, ಶ್ರೀ ವೆಂಕಟ್ರಮಣ ಹೆಗಡೆ, ಗೋರ್ಸಗದ್ದೆ, ದಿ. ಕಾಶಿಮಠದ ಸುಬ್ಬಾ ಭಟ್ಟರು. ಹಾಗೂ ಮಾಳದ ಭಾಗವತರೆಂದೇ ಪ್ರಸಿದ್ಧರಾದ , ಮೂವತ್ತು ಪ್ರಸಂಗಗಳು ಬಾಯಿ ಪಾಠ ಬರುತ್ತಿದ್ದ ಗೋಣಸರಮನೆ ಪರಮಜ್ಜ, ಇವರ ಮನೆತನದವರಾದ, ಬೆಳಗುಂದ್ಲಿ ಭಾಗೋತಜ್ಜ, ಅಡಕಳ್ಳಿ ಭಾಗವತರು, ಚಾರಗಲ್ ಭಾಗವತರು, ಮಣ್ಣತ್ತಿ ಭಾಗವತರು ನಾಗ ಭಾಗವತರು, ಗುಡ್ನಮನೆ ರಾಮ ಭಾಗವತರು, ಹಕ್ಕಿಮನೆ ನಾರಾಯಣ ಹೆಗಡೆಯವರು, ಇವರುಗಳನ್ನು ನೆನಪಿಸುವ ಭಾಗವತರು ಆಟದ ಮ್ಯಾನೇಜರಿಕೆಯಲ್ಲಿ ನಿಪುಣರಾದ ಶ್ರೀ ನರಸಿಂಹ ಹೆಗಡೆ ಹಿತ್ಲಳ್ಳಿಯವರನ್ನು , ತಾಳಮದ್ದಳೆ ಅರ್ಥಧಾರಿಗಳಾದ, ದಿ|| ಹಾಸಣಗಿ ಗಣಪತಿ ಭಟ್ಟ , ಮಹಾಬಲೇಶ್ವರ ಹೆಗಡೆ, ಗೋರ್ಸಗದ್ದೆ, ಮಳಗಿಮನೆ ಸುಬ್ರಾಯ ಹೆಗಡೆ, ನಾರಾಯಣ ಹೆಗಡೆ ಬಾತನಳ್ಳಿ, ನಾರಾಯಣ ಹೆಗಡೆ, ಶೀಗೇಮನೆ, ದಿ. ವೆಂಕಟಾಚಲ ಭಟ್ಟರು, ದಂಟಕಲ್ ಪಟೇಲರು, ಹಸ್ರಗೋಡ ಲಕ್ಷ್ಮೀನಾರಾಯಣ ಹೆಗಡೆಯವರು, ಕೆರೆಕೈ ಕೃಷ್ಣ ಭಟ್ಟರು, ಮಂಜುನಾಥ ಹೆಗಡೆಯವರು, ಶ್ರೀ ರಾಮಚಂದ್ರ ಹೆಗಡೆ, ಶೀಗೇಮನೆ, ಬೈಲಕೇರಿ ಪರಮೇಶ್ವರ ಭಟ್ಟರು, ಬರವಣೆ ಮಾಸ್ತರರು, ಶ್ರೀ ರಾಮಕೃಷ್ಣ ಭಟ್ಟರು ಬೈಲಕೇರಿ, ಹಲವಳ್ಳಿಯ ನರಸಿಂಹ ಹೆಗಡೆ, ಹುಲಿಮನೆ ಪರಮೇಶ್ವರ ಶಾಸ್ತ್ರಿಗಳು, ಮುತ್ತುಮುರುಡು ಸುಬ್ರಾಯ ಹೆಗಡೆ, ಬುಳ್ಳಿ ಮಹಾಬಲೇಶ್ವರ ಹೆಗಡೆ , ಮುಂತಾದವರನ್ನು ಈಗಲೂ ನೆನಪು ಮಾಡಿಕೊಳ್ಳುತ್ತಾರೆ. ಹೆಚ್ಚು ವಯಸ್ಸಾಗದೆ ಅಕಾಲದಲ್ಲಿ ಮೃತಪಟ್ಟ , ಮದ್ದಲೆ ವಾದಕರಾದ, ಕುಪ್ಪಯ್ಯ ಹೆಗಡೆಯವರು ಕನೇನಹಳ್ಳಿ, ಗಣಪತಿ ಹೆಗಡೆ (ಕಂಪ್ಲಿ) ಯಡಹಳ್ಳಿ, ರಾಮಕೃಷ್ಣ ಹೆಗಡೆ ಮಳಗಿಮನೆ ಇವರನ್ನು ಮತ್ತು ಶ್ರೇಷ್ಠ ಮದ್ದಲೆವಾದಕರಾದ ಶ್ರೀ ದುರ್ಗಪ್ಪ ಗುಡಿಗಾರ, ಶ್ರೀ ಶಂಕರ ಭಾಗವತ ಯಲ್ಲಾಪುರ ಇವರನ್ನು ಆಗಾಗ ನೆನಪಿಸುತ್ತಾರೆ. ಇವರಲ್ಲಿ ನಮ್ಮ ಮಿತಿಗೆ ಒಳಪಟ್ಟು ಕೆಲವರ ಬಗ್ಗೆ ಪರಿಚಯಾತ್ಮಕ ಲೇಖನಗಳನ್ನು ಬರೆದಿದ್ದೇವೆ. ತಪ್ಪುಗಳನ್ನು ಮನ್ನಿಸಿ ಒಪ್ಪುಗಳನ್ನು ಗ್ರಹಿಸಬೇಕೆಂಬ ಆಶಯ ನಮ್ಮದು.

ಪುಟ ಪ್ರಾಯೋಜಕರು : **ಶ್ರೀ ನರಸಿಂಹ ಸತ್ಯ ಭಟ್ಟ, ತಟ್ಟೀಸರ**



# ಕಬ್ಬಿನಗದ್ದೆ ಮಾಬ್ಲ ಭಾಗವತರು

ಸಹ್ಯಾದ್ರಿಯ ಕಾಡು ಯಕ್ಷಗಾನದ ಬೀಡೂ ಹೌದು. ಕರಾವಳಿಯಂತೆ ಜನದಟ್ಟಣೆ ಈ ಕಾಡಿನಲ್ಲಿ ಮೊದಲೆಲ್ಲ ಇಲ್ಲವಾಗಿತ್ತು. ಪೇಟೆ ಪಟ್ಟಣ ಹಾಗೂ ಪರ ಊರುಗಳಿಗೆ ಸಂಪರ್ಕದ ಕೊರತೆಯೂ ಸಾಕಷ್ಟಿತ್ತು. ಆದರೂ ಈ ಕಾಡಿನಲ್ಲಿಯೇ ತಲತಲಾಂತರದಿಂದ ವಾಸಿಸುತ್ತಿದ್ದ ಜನರು ತಮ್ಮ ತಮ್ಮೊಳಗೆ ಸಂಪರ್ಕ ಸಾಧಿಸಿಕೊಂಡಿದ್ದರು. ಈ ಕಾಡುಗಳಲ್ಲಿ ಹಾಗೂ ಕರಾವಳಿಗಳಲ್ಲಿ ವಾಸಿಸುವ ಜನಗಳನ್ನು ಬೆಸೆಯುತ್ತಿತ್ತು ಯಕ್ಷಗಾನ.

ಯಲ್ಲಾಪುರ ತಾಲೂಕಿನಲ್ಲಿ ಯಕ್ಷಗಾನ ಕಲೆ ಎಂದಿನಿಂದ ಇತ್ತು? ಯಾವಾಗ ಪ್ರವರ್ಧಮಾನದಲ್ಲಿತ್ತು? ಇಲ್ಲಿನ ಕಲಾವಿದರ ಜೀವನ ಹೇಗಿತ್ತೆಂಬುದು ಅನೇಕ ಸಂಶೋಧನಕಾರರಿಗೆ, ಸಂಶೋಧನ ವಿಷಯಗಳಾಗಬಹುದು. ನನಗೆ ಅಚ್ಚರಿಯಾಗಿ ಕಾಣುವ ಅಂಶವೆಂದರೆ ಈ ಯಲ್ಲಾಪುರದಲ್ಲಿ ವಾಸಿಸುವ ಜನರು ಯಕ್ಷಗಾನವನ್ನು ತಮ್ಮ ಜೀವನದ ಒಂದು ಭಾಗವನ್ನಾಗಿಯೇ ಸ್ವೀಕರಿಸಿದ್ದರು; ಇಂದಿಗೂ ಇದೇ ಗುಣ ಮುಂದುವರಿದಿದೆ ಎಂಬುದು. ಭಾಗವತಿಕೆಯನ್ನು ಕಲಿತು, ಭಾಗವತರೆಂದೇ ಅಡ್ಡಹೆಸರು (Surname) ಇದ್ದ ಅದೆಷ್ಟೋ ಕುಟುಂಬಗಳು ಯಲ್ಲಾಪುರ ತಾಲೂಕಿನಲ್ಲಿ ಇಂದು ನಮಗೆ ಕಾಣಸಿಗುತ್ತವೆ. ಇಲ್ಲಿನ ಪ್ರಾಚೀನ ದೇವಾಲಯವಾದ ಗೋಪಾಲಕೃಷ್ಣ ದೇವರು ಅಣಲಗಾರ ಇದರ ಹೆಸರಿನಲ್ಲಿ ಈಗಲೂ ಒಂದು ಮೇಳವಿದೆ. ಈಗ ಇದರ ಕರ್ಣಧಾರತ್ವವನ್ನು ಜವಳೇಕೆರೆ ಶ್ರೀ ನರಸಿಂಹ ಭಟ್ಟರು ಹೊತ್ತಿದ್ದಾರೆ. ಇವರ ತಂದೆ ಜವಳೇಅಜ್ಜ. ಹೆಸರುವಾಸಿಯಾದ ವೇಷಧಾರಿ. ಮೊಟ್ಟೆಪಾಲ ವೆಂಕಟ್ರಮಣ ಭಟ್ಟರು, ಕೃಷ್ಣ ಕರ್ಣ ಮುಂತಾದ ಪಾತ್ರಗಳನ್ನು ಮಾಡುವುದರಲ್ಲಿ ಎತ್ತಿದ ಕೈಯಾಗಿದ್ದರು. ಇಂಥವರನ್ನು ತಮ್ಮ ಭಾಗವತಿಕೆಯಿಂದ, ಮದ್ದಲೆಯಿಂದ, ಬಿಡ್ತಿಗೆಗಳಿಂದ ಕುಣಿಸಿದ ಖ್ಯಾತಿ ಕಬ್ಬಿನಗದ್ದೆ ಮಾಬ್ಲ ಭಾಗವತರದು. ಅವರು ಶ್ರೀ ಕೃಷ್ಣ ಭಾಗವತರಿಗೆ ಪ್ರಾಥಮಿಕವಾಗಿ ಭಾಗವತಿಕೆ ಕಲಿಸಿದ ಕಲಾ ಗುರುಗಳು.

ಮಹಾಬಲ ವೆಂಕಟ ಭಾಗವತರು ಹುಟ್ಟಿದ್ದು ಪ್ರಾಯಶಃ 1901 ನೇ ಇಸ್ವಿ. ಹುಟ್ಟಿದ ಊರು ನಂದೊಳ್ಳಿಯ ಹತ್ತಿರದ ದೇವರಗದ್ದೆ. ಸ್ವರ್ಣವಲ್ಲೀ ಮಠದಲ್ಲಿ ಇಂದಿಗೂ ತಾಳ ಸೇವೆ ಇವರ ವಂಶದವರಿಂದಲೇ ನಡೆಯುತ್ತದೆ. ಆಗಿನ ಕಾಲದಲ್ಲಿ ಸ್ವಂತ ಪರಿಶ್ರಮದಿಂದಲೇ ತೋಟಗಾರಿಕೆಯನ್ನು ಮಾಡಿಕೊಳ್ಳಬೇಕಾಗಿತ್ತು. ಭಾಗವತಿಕೆಗೆಂದು ಮರ್ಯಾದೆಗೆ ಕೊಡುವುದು ಎರಡು ಕಾಯಿ ಮಾತ್ರ. ಮೇಳದವರಿಗೆ ಕೊಡುವ ಹಣ ಏನೇನೂ ಸಾಕಾಗುತ್ತಿರಲಿಲ್ಲ. ಕವಡಿಕೆರೆಯಲ್ಲಿ ಪ್ರತಿ ವರ್ಷ ಆಟಕ್ಕೆಂದು ಹೋಗುವ ಕಲಾವಿದರೊಬ್ಬರು, ಇಷ್ಟು ಕಡಿಮೆ ಹಣ



ಕೊಟ್ಟರೆ ನಾವು ಮುಂದಿನ ವರ್ಷ ಬರುವುದಿಲ್ಲ ಎಂದು ಹೇಳಿದವರು, ಮರುವರ್ಷವೇ ಕೈಲಾಸವಾಸಿಗಳಾಗಿ ಬಿಟ್ಟರೆಂದೂ ಆ ರೀತಿಯಲ್ಲಿ ಅವರ ಮಾತೂ ಉಳಿದು, ದೇವರ ಸೇವೆಯೂ ನಿರಾತಂಕವಾಗಿ ಆಯಿತೆಂದು ಹಿರಿಯರು ಹೇಳಿದ್ದನ್ನು ನಾನು ಕೇಳಿದ್ದೇನೆ. ಇಂಥ ಸಂದರ್ಭದಲ್ಲಿ ಭಾಗವತಿಕೆಯನ್ನು ಶೇಡಿಜಡ್ಡಿ ನಾಗ ಭಾಗವತರ ಸಂಗಡ, ಗುಡ್ನಮನೆ ರಾಮ ಭಾಗವತರಲ್ಲಿ ಕಲಿತವರು ಮಾಬ್ಲ ಭಾಗವತರು. ಇವರು ಅಣ್ಣ, ತಮ್ಮಂದಿರು ಮೂರು ಜನ. 1923 ರಲ್ಲಿ ಕಬ್ಬಿನಗದ್ದೆಗೆ ಬಂದವರಾಗಿರಬಹುದೆಂದು, ಸಾಂದರ್ಭಿಕ ದಾಖಲೆಗಳಿಂದ ಊಹಿಸಬಹುದು. ಹುತ್ಕಂಡ ಕಬ್ಬಿನಗದ್ದೆಯಲ್ಲಿ ಇವರಿಗೆ ಮೊದಲಿದ್ದುದು ಒಂದೆಕರೆ ಜಾಗ, ನಂತರ 1960ರ ಸುಮಾರಿಗೆ ಮತ್ತೂ 35 ಗುಂಟೆ ಜಾಗ ಮಂಜೂರಿಯಾಗಿತ್ತು. (ಇಂದಿಗೂ ಅವರ ಅಳಿಯನಿಗೆ ಅಷ್ಟೇ ಜಮೀನಿದೆ).

ಗೋಳಿಗದ್ದೆ ರಾಮಣ್ಣನೆಂದು ಪರಿಚಿತರಾದ ರಾಮಚಂದ್ರ ಭಾಗವತರು. ಇವರ ತಮ್ಮ ನಾಗ ಭಾಗವತರ ಮಗ. ಇವರ ವಂಶದವರೆಲ್ಲ ದಂತಳಿಗೆ, ಶಿಸ್ತುಮುಡಿ, ಮೋಗದ್ದೆ, ತಾರೀಮನೆ, ಹೆಬ್ಬಾರಮನೆ, ಮೊದಲಾದ ಕಡೆ ಜೀವನ ನಿರ್ವಹಣೆಗಾಗಿ ಚದುರಿ ಹೋದರು. ಇವರ ವಂಶದ ಒಂದು ಕವಲು, ಅಣಲೇಸರ, ಕಂಚನಳ್ಳಿಗೂ ಬಂತು. ದಿ. ನರಸಿಂಹ ಭಾಗವತರು ಅಣಲೇಸರಕ್ಕೆ ಬಂದವರು.

ಇವರ ಮಗಳಿಗೆ ತಮ್ಮ ಅಜ್ಜಿ ಅಕ್ಕಮ್ಮನ ಹೆಸರನ್ನೇ ಇಟ್ಟಿದ್ದರು. ಒಬ್ಬಳೇ ಮಗಳಾದ ಇವಳು 1990 ನೇ ಇಸ್ವಿಯ ಸುಮಾರು ಮೃತಪಟ್ಟಳೆಂದು ಅವಳ ಗಂಡ ನರಸಿಂಹ ಭಟ್ಟರು ಹೇಳುತ್ತಾರೆ.

ಅಣಲಗಾರ ಗೋಪಾಲಕೃಷ್ಣ ಸೇವೆ ಮೇಳ, ಭರತನಹಳ್ಳಿ ಸೀಮೆಮೇಳ ಹಾಗೂ ಹೊನ್ನೆಗದ್ದೆ ಮೇಳಗಳಲ್ಲಿ ದುಡಿದ ಇವರು ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಗೆ ಮಾಸಾಶನಕ್ಕೆಂದು ಅರ್ಜಿಯನ್ನು ಹಾಕಿದ್ದರು. (30-10-1981) ಆಗಿನ ತಾಲೂಕಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಆರ್. ಎನ್. ಹೆಗಡೆ ಗೋರ್ಸಗದ್ದೆ ಮತ್ತು ಶಾಸಕಿ ಶ್ರೀಮತಿ ಅನಸೂಯಾ ಶರ್ಮ ಇವರುಗಳ ಶಿಫಾರಸ್ಸಿನೊಂದಿಗೆ ಅರ್ಜಿಯನ್ನು ಕಳಿಸಿದ ಬಗ್ಗೆ ದಾಖಲೆ ಇದೆ. ಆದರೆ ಅದು ಅರಣ್ಯರೋದನವಾದದ್ದು ಈಗ ಇತಿಹಾಸ.

ಇವರು ಸಾಯುವವರೆಗೂ (1985) ಬಾಳೆಹದ್ದಕ್ಕೂ ಹಾಗೂ ಅಣಲೇಸರಕ್ಕೆ ಹೋಗಿ ಬಂದು ಮಾಡುತ್ತಿದ್ದರು. ಕೃಷ್ಣ ಭಾಗವತರು ನೆನಪಿಸುವ ಹಾಗೆ, ಜೋಗಭಟ್ರಕೇರಿ ಮಾಬ್ಲ ಹೆಗಡೆಯವರು ಬಾಳೆಹದ್ದಕ್ಕೆ ಅವರನ್ನು ಪ್ರಥಮವಾಗಿ ಕರೆದುಕೊಂಡು ಬಂದವರು. ಪ್ರಾಥಮಿಕ ಅಭ್ಯಾಸ ಅವರಲ್ಲಿ ಆಯಿತು. ಪ್ರಾಯಶಃ ನಾಟಿರಾಗ ಅವರಲ್ಲಿ ಕಲಿತದ್ದೆಂದು ಇವರ ನೆನಪು.



ಬಾಳೆಹದ್ದ ಭಾಗವತರು ಪ್ರತಿವರ್ಷವೂ ಮಹಾಬಲ ಭಾಗವತರಿರುವ ತನಕ, 3-4 ಬಾರಿ ಬರುತ್ತಿದ್ದರು ಹಾಗೂ ರಾತ್ರಿಯಿಡಿ, ಕೃಷ್ಣ ಭಾಗವತರ ಹಾಡು ಮಾಬ್ಲ ಭಾಗವತರ ಮದ್ದಲೆ ನಾದ ಕೇಳುತ್ತಿದ್ದೆವೆಂದೂ ಅವರ ಅಳಿಯ ನೆನಪಿಸಿಕೊಳ್ಳುತ್ತಾರೆ. ಇವರ ಬಾಳು ಯಕ್ಷಗಾನಕ್ಕಾಗಿಯೇ ಮೀಸಲಾಗಿದ್ದರೂ, ಇವರಿಗೊಂದು ಅನುಕೂಲ ಮಾಡಿಕೊಡುವ ಅವಕಾಶ ಸರಕಾರ ಮಾಡಲಿಲ್ಲ. ಆದರೆ, ಬಾಳೆಹದ್ದದ ಭಾಗವತರು, ಅಣಲೇಸರದ ಭಾಗವತರ ಮೊಮ್ಮಕ್ಕಳು, ತಮ್ಮ ಮನೆಯಿಂದ ಅಡಿಕೆ ಬೀಜ ಕೊಟ್ಟು ಇದೀಗ, ಅರ್ಧ ಎಕರೆಯಷ್ಟಾದರೂ ತೋಟ ತಯಾರಾಗಲು ಕಾರಣರಾಗಿದ್ದಾರೆ. ಮಾಬ್ಲ ಭಾಗವತರ ಮೊಮ್ಮಕ್ಕಳು ಆರ್ಥಿಕ ದುಸ್ಥಿತಿಯಿಂದ ಚೇತರಿಸಿಕೊಳ್ಳುತ್ತಿದ್ದಾರೆ.

### ಬಹುಮುಖ ಪ್ರತಿಭೆಯ

## ತುದಿಮನೆ ಸುಬ್ಬಣ್ಣ

ಬಾಳೆಹದ್ದ ಭಾಗವತರ ಹೆಸರಿನ ಸಂಗಡವೇ ಕೇಳಿಬರುವ ಮತ್ತೊಂದು ಹೆಸರೆಂದರೆ ತುದಿಮನೆ ಸುಬ್ಬಣ್ಣನವರದು. ಅವರು ನಮ್ಮನ್ನಗಲಿ 35 ವರ್ಷಗಳಾದವು. (ಮರಣ: 27-06-1970) ಸಾಯುವಾಗ ಅವರಿಗೆ 57-58 ವರ್ಷ ವಯಸ್ಸಾಗಿದ್ದಿರಬಹುದು. ಆದರೆ ಎಳೆಯ ವಯಸ್ಸಿನಲ್ಲಿಯೇ ಯಕ್ಷಗಾನದ ಎಲ್ಲ ಅಂಗಗಳನ್ನು ಕಲಿತು ಅವುಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದವರು ಅವರಾಗಿದ್ದರು.

ತುದಿಮನೆ (ಕಂಪ್ಲಿ) ರಾಮಚಂದ್ರ ಹೆಗಡೆಯವರ ಏಕಮಾತ್ರ ಪುತ್ರ. ಒಬ್ಬಳು ತಂಗಿ ಬೆಳ್ಳತ್ತೆ ಮಹಾದೇವಿ ಇನ್ನೂ ಇದ್ದಾರೆ. ಅವರಿಗೆ ಎಂಭತ್ತಾರು ವರ್ಷ ವಯಸ್ಸು. ಹನ್ನೆರಡನೆಯ ವಯಸ್ಸಿನಲ್ಲಿಯೇ ರುದ್ರಾ ಚಮೆ ಸಹಿತ ದೇವರಪೂಜಾ ಮಂತ್ರವನ್ನು ಕಲಿತ ಸುಬ್ಬಣ್ಣ ಮೊದಲು ಅಭ್ಯಸಿಸಿದ್ದು ಭಾಗವತಿಕೆಯನ್ನ. ಆಗಿನ ಕಾಲದ ಪ್ರಸಿದ್ಧ ಭಾಗವತರಾಗಿದ್ದ ಗುಡ್ನಮನೆ ರಾಮ ಭಾಗವತರ ಹತ್ತಿರ ಭಾಗವತಿಕೆಯನ್ನು ಕಲಿತರು. ಮೊದಲಿನ ಕಾಲದಲ್ಲಿ ಭಾಗವತ, ಮೃದಂಗಕಾರರಿಗೆಲ್ಲ ಮದ್ದಳೆ, ಬಾಗವತಿಕೆ, ನಟನೆ ಎಲ್ಲವೂ ಬಂದೇ ಬರುತ್ತಿತ್ತು. ಸಂದರ್ಭ ಒದಗಿದಾಗ ಯಾರು ಬೇಕಾದರೂ ಕೊರತೆಯಾದ ಭಾಗವನ್ನು ತುಂಬಬಹುದಿತ್ತು. ಭಾಗವತಿಕೆಯ ನಂತರ ಮದ್ದಳೆ ಕಲಿತಿದ್ದು ಸ್ವರ್ಣವಲ್ಲೀ ಮಠದ ವಾದ್ಯದ ಮೇಳದವರಾದ ಬಡಿಯಾ ಭಂಡಾರಿಯವರ ಹತ್ತಿರ. ಇವರು ಕುಣಿತ, ನೃತ್ಯ ಕಲಿತಿದ್ದು 'ಮಂಚಿಕೇರಿ ಮಾಣಿ' ಎಂದೇ ಸುಮಾರು ಒಂದು ನೂರು ವರ್ಷಗಳ ಹಿಂದೆ ಪ್ರಸಿದ್ಧರಾಗಿದ್ದ 'ಹಾಸ್ಯಗಾರಜ್ಜ'ನವರಲ್ಲಿ. ಎತ್ತರವೂ ಅಲ್ಲದ, ಕುಳ್ಳರೂ ಅಲ್ಲದ,

ಪುಟ ಪ್ರಾಯೋಜಕರು : **ಶ್ರೀ ಗಜಾನನ ಗಣಪತಿ ಭಟ್ಟ, ಅರಳಿಮಕ್ಕಿ**



ದಪ್ಪ ಅಥವಾ ತೆಳ್ಳಗಿನ ವ್ಯಕ್ತಿಗಳೂ ಅಲ್ಲದ ಕಟ್ಟುಮಸ್ತಾದ ಆಳು ಸುಬ್ಬಣ್ಣನವರು. ಅವರ ಬದುಕಿನ ಕೊನೆಯ ವರ್ಷಗಳಲ್ಲಿ ಎರಡರಿಂದ ಮೂರು ತಾಸು ದೇವರ ಪೂಜೆಯನ್ನು ಮಾಡುತ್ತಿದ್ದರು. ಎಲ್ಲಿಗೆ ಹೋದರೂ ಆ ನಿಯಮವನ್ನು ತಪ್ಪುತ್ತಿರಲಿಲ್ಲ. ಜೂನ್ ತಿಂಗಳಿನಲ್ಲಿ (1970) ಒಂದು ದಿನ ಅಳಿಯನ (ಭಾವನಕೊಪ್ಪದ ವೆಂಕಟ್ರಮಣ ಭಟ್ಟ) ಮನೆಗೆ ಹಲಸಿನ ಹಣ್ಣಿನ ಕಡುಬನ್ನು ತಿನ್ನಲು ಹೋದವರಿಗೆ ಅಸ್ವಸ್ಥತೆ ಉಂಟಾಯಿತು. ಡಾಕ್ಟರರಲ್ಲಿಗೆ ಹೋಗಿ ಗುಣಮುಖರಾದರು. ಮರುದಿನ ರಾತ್ರೆ ಉಮಚಿಗೆ ರಾಜ ಹೆಗಡೆಯವರು ಬಂದಿದ್ದರು. ರಾತ್ರಿ ಊಟವಾದ ನಂತರ ಹಾಸಿಗೆಗಳನ್ನು ಬಿಡಿಸಿಕೊಂಡು ಅವುಗಳ ಮೇಲೆ ಇಬ್ಬರೂ ಕುಳಿತುಕೊಂಡರು. ಆಗ ಸುಬ್ಬಣ್ಣ ''ರಾಜ ಭಾವ, ನಿನ್ನೆ ಎಂತಾ ಆತು ಗೊತ್ತಿದ್ದೋ'' ಎನ್ನುವಷ್ಟರಲ್ಲಿಂದು ಸಲ ತೇಕು ಬಂತು. ರಾಜ ಹೆಗಡೆಯವರು, 'ಸುಬ್ಬಣ್ಣ ಏನಾತೋ, ಏನಾತೋ' ಎಂದು ಕೇಳುವಷ್ಟರಲ್ಲಿ ಇನ್ನೊಂದು ಸಾರೆ ತೇಕು ಬಂತು. ಅವರ ಅವತಾರ ಸಮಾಪ್ತಿಯಾಯಿತು. ಅವರ ಮರಣದ ನಂತರ ಆರೇಳು ವರ್ಷ ಬಾಳೆಹದ್ದದವರು ಭಾಗವತಿಕೆಯನ್ನೇ ಮಾಡಲಿಲ್ಲ ಎಂದರೂ ತಪ್ಪಿಲ್ಲ.

ಸುಬ್ಬಣ್ಣನವರ ತಾಳದ ಮೇಲಿನ ಹಿಡಿತ ಅದ್ಭುತ. ಅದಕ್ಕಿಂತಲೂ ಅವರು ಮೇಳದ ಅರ್ಥವನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಯಕ್ಷಗಾನದಲ್ಲಿ ಭಾಗವತ, ಮದ್ದಲೆಕಾರ ಮತ್ತು ನಟ ಇವರೆಲ್ಲ ಹೊಂದಿಕೊಂಡರೆ ಅದು ಮೇಳ. ಇವರಲ್ಲಿ ಯಾರೊಬ್ಬರು ತಪ್ಪು ಮಾಡಿದರೂ ರಸಾಭಾಸವಾಗುತ್ತದೆ. ನಟರು ತಪ್ಪು ಹೆಜ್ಜೆ ಹಾಕಿದರೂ ಸಾಮಾನ್ಯ ಪ್ರೇಕ್ಷಕರಿಗೆ ಗೊತ್ತಾಗದ ಹಾಗೆ ಮದ್ದಲೆಯನ್ನು ಅವರ 'ಕುಣಿತಕ್ಕೆ ಸರಿಯಾಗಿ ಹೊಂದಿಸಿ ಬಾರಿಸುವುದರಲ್ಲಿ ಸುಬ್ಬಣ್ಣನವರದು ಎತ್ತಿದ ಕೈ. ಇನ್ನೊಬ್ಬರ ಮರ್ಯಾದೆ ತೆಗೆಯುವುದು ಅವರ ಕೆಲಸವೇ ಅಲ್ಲ. ತಪ್ಪು ಮಾಡಿದವರನ್ನು ಏಕಾಂತದಲ್ಲಿ ಕರೆದು ಪುನಃ ಆ ತಪ್ಪನ್ನೆಸಗದಂತೆ ಮಾಡುತ್ತಿದ್ದರು.

ಸುಬ್ಬಣ್ಣನವರಲ್ಲಿ ಭಾಗವತಿಕೆಯನ್ನು ಕಲಿತವರಲ್ಲಿ ಕೃಷ್ಣ ಭಾಗವತರು ಪ್ರಸಿದ್ಧರು. ನಡೆದುಕೊಂಡು ಹೋಗುವ ಕಾಲದಲ್ಲೂ ಇವರಿಬ್ಬರ ಜೋಡಿ ಪ್ರಸಿದ್ಧವಾಗಿತ್ತು. ಗೋರನಮನೆ, ಶಿರಸಿ, ಬೆಂಗಳೂರು, ಮೈಸೂರು, ತ್ಯಾಗಲಿ, ಗೋಕರ್ಣದವರೆಗೂ ಇವರ ಜೋಡಿಯನ್ನು ಕರೆಸುತ್ತಿದ್ದರು. ಸುಬ್ಬಣ್ಣನವರು 'ಓದು ಒಕ್ಕಾಲು ಬುದ್ಧಿ ಮುಕ್ಕಾಲು' ಎನ್ನುವ ಗಾದೆಯನ್ನು ಕರಗತ ಮಾಡಿಕೊಂಡವರು. ತಾನು ಕಲಿತದ್ದಕ್ಕೆ ಆಧಾರವೇನೆಂದು ಶೋಧಿಸುತ್ತಿದ್ದರು. ಹಾಗಾಗಿಯೇ, ಯಾವುದೇ ಹೊಸ ಮದ್ದಲೆಕಾರ ಬಾರಿಸಿದ ಬಿಡ್ತಿಗೆಯನ್ನು ಅವರು ತಕ್ಷಣ ಬಾರಿಸಿ ತೋರಿಸುತ್ತಿದ್ದರಂತೆ. ಮದ್ದಲೆಯನ್ನು ಹಿಂದಿಟ್ಟುಕೊಂಡು ರುದ್ರ ಮಂತ್ರ ಬಾರಿಸಿದವರೆಂದು ಪ್ರತೀತಿ ಇತ್ತು. ಯಾರಾದರೂ ಮದ್ದಲೆಗಾರರು ಚೆನ್ನಾಗಿ ಬಾರಿಸಿದರೆ, 'ಅವಂದು ಸುಬ್ಬಣ್ಣನ ಕೈಯೇ' ಅನ್ನುವಷ್ಟರ ಮಟ್ಟಿಗೆ ಸುಬ್ಬಣ್ಣ ಪ್ರಸಿದ್ಧರಾಗಿದ್ದರು.

ಸುಬ್ಬಣ್ಣನವರು ಹಿತ್ಲಳ್ಳಿಯ ಗಣಪತಿ ಹೆಗಡೆಕಟ್ಟೆ ಎಂಬುವವರಿಗೆ ಭಾಗವತಿಕೆಯನ್ನು



ಕಲಿಸಿದ್ದರಂತೆ. ಅವರು ಉತ್ತಮ ಭಾಗವತರಾಗಿ ರೂಪುಗೊಳ್ಳುತ್ತಿದ್ದಂತೆಯೇ ದೈವೀ ದುರ್ವಿಪಾಕದಿಂದ ಹುಚ್ಚು ಹಿಡಿದು ಮಡಿದರು. ಹಾಗಾಗಿಯೇ ಬಾಳೆಹದ್ದದ ಭಾಗವತರಿಗೆ ಕಲಿಸಲು ಸುಬ್ಬಣ್ಣನವರಿಗೆ ಪೂರ್ತಿ ಮನಸ್ಸಿರಲಿಲ್ಲ. 'ನೀನು ಒಬ್ಬನೇ ಮಗ. ತಂದೆಯಂತೂ ಸಣ್ಣ ವಯಸ್ಸಿನಲ್ಲಿಯೇ ಮೃತ ಪಟ್ಟಿದ್ದಾನೆ. ನಿನಗೇನಾದರೂ ಹೆಚ್ಚು ಕಡಿಮೆ ಆದರೆ ಹೇಗೆ?' ಎಂದು ಕೃಷ್ಣ ಭಾಗವತರನ್ನು ಕೇಳಿದರಂತೆ. ಅದಕ್ಕೆ ಅವರು, 'ಆಗುವುದನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ನಿನಗೆ ಬರುವುದನ್ನು ನನಗೆ ಹೇಳಿಕೊಡು' ಎಂದರಂತೆ.

ತಬಲಾ ನುಡಿಸುವುದನ್ನು ಅಭ್ಯಸಿಸಿದ್ದ ಸುಬ್ಬಣ್ಣನವರು ಅನೇಕ ಸಾರೆ ಹಿಂದೂಸ್ಥಾನೀ ಸಂಗೀತದ ಹಾಡುಗಳಿಗೆ ತಬಲಾ ಸಾಥ ನೀಡಿದ್ದರು. ಚುರುಕುಮತಿಯ ಅವರಿಗೆ ಪರಬೋಧನಾ ಶಕ್ತಿ ಚೆನ್ನಾಗಿ ಇತ್ತು. ಅವರಿಗೆ ಬರುವ ಮದ್ದಲೆಯನ್ನು ಯಾರೂ ಸರಿಯಾಗಿ ಕಲಿಯಲಿಲ್ಲ. ಮಳಗಿಮನೆ ದಿ. ರಾಮಕೃಷ್ಣ ಹೆಗಡೆಯವರು ಕಲಿತಿದ್ದರು. ಅವರ ಅನಾಮಿಕ ಬೆರಳೊಂದು ಸ್ವರವನ್ನು ಸರಿಯಾಗಿ ನುಡಿಸುವುದಿಲ್ಲವಾಗಿತ್ತು. ಹಾಗಾಗಿ ' ನೀನು ಅತ್ಯುತ್ತಮ ಮದ್ದಲೆವಾದಕನಾಗಲು ಸಾಧ್ಯವಿಲ್ಲವೆಂದಿದ್ದರಂತೆ. ಇದರ ಫಲವಾಗಿ ರಾಮಕೃಷ್ಣ ಹೆಗಡೆಯವರು ಯಕ್ಷಗಾನ ನೃತ್ಯವನ್ನು ಅವರಲ್ಲಿಯೇ ಕಲಿಯತೊಡಗಿದರು. ಸುಬ್ಬಣ್ಣನವರು ಕುಣಿತ ಕಲಿಸುವ ಹೊಣೆಗಾರಿಕೆಯನ್ನು ತಾವಾಗಿಯೇ ತೆಗೆದುಕೊಂಡರು. ನಮಗೆ ಅವರು ನೃತ್ಯ ಪಟುಗಳೆಂಬುದು ಗೊತ್ತೇ ಇರಲಿಲ್ಲ. ಆದರೆ ಅವರಂತೆ ಕಲಿಸಲು ಯಾರಿಗೂ ಸಾಧ್ಯವಿಲ್ಲವೆಂಬುದು ಇಂದಿಗೂ ನನ್ನ ಖಚಿತವಾದ ಅಭಿಪ್ರಾಯ. ಅವರು ಬಿನ್‌ಡ್ರೆಸ್ಸಿನಲ್ಲಿ (ಕೇವಲ ಧೋತರದ ಬಳಲುಗಚ್ಚೆ) ತೈದವನ್ನು ಪ್ರವೇಶ ಕುಣಿತ ಕುಣಿಯುತ್ತಿದ್ದರೆ ಅದೊಂದು ನಯನ ಮನೋಹರವಾದ ದೃಶ್ಯವಾಗಿರುತ್ತಿತ್ತು. 'ತಾ' ಎಂದರೆ ಸಂಪೂರ್ಣ ಪಾದವನ್ನು ಊರಬೇಕು. 'ತೈ' ಗೆ ತುದಿಯ ಪಾದ ಮಾತ್ರ ನೆಲಕ್ಕೆ ತಾಗಿಸಬೇಕು, 'ಧಿ' ಗೆ ಹಿಮ್ಮಡವನ್ನು ಹೊಡೆಯಬೇಕು. 'ತರಿಕಿಟ' ಕ್ಕೆ ಪಾದಗಳನ್ನು ಹಿಂದೆ ಮುಂದೆ ಮಾಡಬೇಕು. ಇತ್ಯಾದಿಯಾಗಿ ಎಷ್ಟು ಮನಮುಟ್ಟುವಂತೆ ಕಲಿಸುತ್ತಿದ್ದರೆಂದರೆ, ಅದು ನಮಗೆ ಮರೆಯುತ್ತಲೇ ಇರಲಿಲ್ಲ, ಅವರ ಭಾಗವತಿಕೆಯನ್ನು ನಾನು ಕೇಳಿದ್ದೇನೆ. ಶಾಸ್ತ್ರೋಕ್ತ ಭಾಗವತಿಕೆ ಅವರದು. ಹಾಡುವಾಗ ಮುಖಕಿವುಚುವ ರೂಢಿಯೇ ಇರಲಿಲ್ಲ. ಶಿರನಾಲೆಯಲ್ಲಿ ಕೃಷ್ಣಸಂಧಾನ ಪ್ರಸಂಗ. ಬಾಳೆಹದ್ದದ ಭಾಗವತರು ಬರಬೇಕಿತ್ತು. ರಾತ್ರಿ ಹತ್ತು ಗಂಟೆಯಾದರೂ, ಅವರು ಅಲ್ಲಿಗೆ ಬರಲಿಲ್ಲ. ಮೂವತ್ತೇಳು ವರ್ಷಗಳ ಹಿಂದೆ ನಡೆದ ಈ ಘಟನೆ. ಶಿರನಾಲೆಗೆ ಹೋಗುವವರು ಯಾರಾದರೂ ಸಿಗಬಹುದೆಂದು ಭಾಗವತರು ಒಬ್ಬರೇ ಮಂಚಿಕೇರಿಗೆ ಬಂದಿದ್ದರು. ಆದರೆ ಅಂದು ಅವರಿಗೆ ಶಿರ್ನಾಲೆಯವರೆಗೆ ಹೋಗುವವರು ಯಾರೂ ಸಿಗಲಿಲ್ಲ. ರಾತ್ರಿ ಹತ್ತು ಘಂಟೆಯ ನಂತರ ಪ್ರಾಯಃಶ ಶಿರ್ನಾಲೆಯ ಜಾಗರ (ತಾಳಮದ್ದಲೆ) ರದ್ದಾಗಿದೆಯೆಂದು ಭಾವಿಸಿ ಮಾಳಕೊಪ್ಪದ ವಿಶ್ವೇಶ್ವರ ಭಟ್ಟರ ಮನೆಗೆ ಹೋದರಂತೆ. ಶಿರ್ನಾಲೆಯಲ್ಲಿ ಮಂಚಿಕೇರಿಯವರೆಗೆ



ಯಾರನ್ನಾದರೂ ಸೈಕಲ್ ಕೊಟ್ಟು ಕಳಿಸುವ ಪ್ರಸ್ತಾಪ ಬಂದಿತ್ತು. ಆದರೆ ಅದು ಬೇಡ. ಭಾಗವತಿಕೆಗೆ ಹೇಳಿಯಾದ ಮೇಲೆ ಅವರು ಬಂದೇ ಬರುತ್ತಾರೆ. ಇಲ್ಲವಾದರೆ ಇಲ್ಲವೆಂದು ಬಂದವರಲ್ಲಿ ಒಬ್ಬ ಪ್ರಮುಖರು ಹೇಳಿದರು. ಹಾಗಾಗಿ ಅಂದಿನ ಭಾಗವತಿಕೆಯನ್ನು ಸುಬ್ಬಣ್ಣ ಮತ್ತು ಹಾಗೆ ಹೇಳಿದ ಆ ಪ್ರಮುಖರು ಕೂಡಿ ಮಾಡಿ ಮುಗಿಸಿದರು. ಆದರೆ ಸುಬ್ಬಣ್ಣನವರ ಭಾಗವತಿಕೆ ಬಲು ಸುಂದರವಾಗಿತ್ತು. ಯಾರೋ ವಿನೋದ ಮಾಡಿದರು- 'ಈ ರೀತಿಯ ಭಾಗವತಿಕೆಯನ್ನು ಮೂರು ಹಗಲು ಮೂರು ರಾತ್ರಿ ಮಾಡಿದರೂ ಸುಬ್ಬಣ್ಣನಿಗೆ ತ್ರಾಸಾಗೋದಿಲ್ಲ'. ನಟನಾದವನು ಮಧ್ಯ ಮಧ್ಯದಲ್ಲಿ ಹಾಡಲು ಹಾಗೂ ಪದದ ಎತ್ತಂಗಡೆ ಮಾಡಲಿಕ್ಕಾದರೂ ರಾಗಗಳ ಅಭ್ಯಾಸ ಮಾಡಬೇಕೆಂಬುದು ಸುಬ್ಬಣ್ಣನವರ ಖಚಿತ ನಿಲುವಾಗಿತ್ತು. ಕಿರೀಟದ ಕುಣಿತದ ರೀತಿಯೇ ಬೇರೆ, ಪೊಗಡೆ (ಇಂದಿನ ಕೇದಗೆ ಮುಂದಲೆ ಹಾಗೂ ಮುಂಡಾಸ) ಕುಣಿತದ ರೀತಿಯೇ ಬೇರೆ ಎಂದು ಕುಣಿದು ತೋರಿಸುತ್ತಿದ್ದರು. ಯಕ್ಷರಂಗದ ಧ್ರುವತಾರೆ ದಿ. ಪಿ. ವಿ. ಹಾಸ್ಯಗಾರರು ನಮ್ಮ ಮನೆಯಲ್ಲಿಯೇ ಸುಬ್ಬಣ್ಣನವರ ಕುಣಿತ, ಹಾಡುಗಳನ್ನು ಕೇಳಿ, ತಾನೂ ಕಲಿಯಲು ಮಳೆಗಾಲದಲ್ಲಿ ಬರುತ್ತೇನೆಂದು ಅವರನ್ನು ಕೇಳಿಕೊಂಡಿದ್ದರು. ಆದರೆ ದೈವೀ ಸಂಕಲ್ಪ ಬೇರೆ ಇತ್ತು.

ಸುಬ್ಬಣ್ಣ ಹಾಗೂ ಬಾಳೆಹದ್ದ ಭಾಗವತರು ಅನೇಕ ಕಡೆ ಹೋಗಿದ್ದನ್ನು ಪ್ರಸ್ತಾಪಿಸಿದ್ದೇವೆ. ಅವುಗಳಲ್ಲಿ ಒಂದೆರಡರ ಬಗ್ಗೆ ಬರೆಯುತ್ತೇನೆ.

ಭಾಗವತರು- ಸುಬ್ಬಣ್ಣ, ಗೋಕರ್ಣದ ಪುರಾಣಿಕರ ಮನೆಗೆ ಹೋಗಿದ್ದರಂತೆ. ಸುಬ್ಬಣ್ಣ ಎಲ್ಲಿ ಹೋಗುವುದಿದ್ದರೂ ತಮ್ಮ ಶಿಷ್ಯ ಕೃಷ್ಣ ಭಾಗವತರನ್ನು ಕರೆದುಕೊಂಡು ಹೋಗುವುದು ರೂಢಿ. ರಾತ್ರೆ ಹತ್ತು - ಹನ್ನೊಂದು ಗಂಟೆಯ ಹೊತ್ತಿಗೆ ಇವರುಗಳು ಮಲಗಲು ತಯಾರಿ ನಡೆಸುತ್ತಿರುವಾಗ ಇಬ್ಬರು ಪುರಾಣಿಕರ ಮನೆಗೆ ಬಂದರು. ಬಂದವರೆ ಸುಬ್ಬಣ್ಣನವರನ್ನು ಕಂಡು ಕೈ ಮುಗಿದು. 'ನಮ್ ಮರ್ಯಾದೆ ವೊಳಸೋ, ಘಟ್ಟದಮೇಲಿನ್ ಒಬ್ಬ ಭಾಗೋತ್ರು ಬಂದೀರು. ಇಷ್ಟ್ ಹೊತ್ನೊಳ್ಗೆ ಒಂಭತ್ತು ಜನ ಮೃದಂಗ ಬಾರ್ಸ್ಪೌರು ಸೋತ್ ಹೋಜ. ನಂಗ್ಳ ಮರ್ಯಾದೆ ವೊಳಿಸಿ' ಎಂದು ಪುನಃ ಅವರನ್ನು ಬೇಡಿದರು.

ಸುಬ್ಬಣ್ಣನವರು ಒಪ್ಪಿ ಭಾಗವತರನ್ನೂ ಕರೆದುಕೊಂಡು ತಾಳಮದ್ದಳೆ ನಡೆಯುವ ಸ್ಥಳಕ್ಕೆ ಹೋದರು. ಅಲ್ಲಿಗೆ ಬಂದವರು ಇವರ ಪರಿಚಯದ ಭಾಗವತರೇ ಆಗಿದ್ದರು. ಆದರೆ ಸುಬ್ಬಣ್ಣನವರು ಬೇಕೆಂದೇ ಮೊದಲು ಅವರನ್ನು ಮಾತನಾಡಿಸಲಿಲ್ಲ. ಅವರನ್ನು ಅಡಕಳ್ಳಿ ಭಾಗವತರೆಂದೇ ಎಲ್ಲರೂ ಕರೆಯುತ್ತಿದ್ದರು. ಅವರ ತಾಳ ಬಹುಗಟ್ಟಿಯಾಗಿತ್ತು. ಏಕತಾಳದಲ್ಲಿ ಅವರು ತಾಳದ ಘಾತವನ್ನು ಮೂರು ಮಾತ್ರೆಗೆ ಹೊಡೆದ ನಂತರ ಎರಡಾವರ್ತ ಮುಗಿದ ಮೇಲೆ, ಮುಂದಿನ ಆವರ್ತದ ಮೊದಲ ಮಾತ್ರೆಗೆ ಮತ್ತೊಂದು ತಾಳದ ಘಾತವನ್ನು ತೋರಿಸುತ್ತಿದ್ದರು. ಮದ್ದಲೆವಾದಕರಿಗೆ ಇದರ ಗುಟ್ಟು ಗೊತ್ತಾಗುತ್ತಿರಲಿಲ್ಲ. 'ತಿರಕಿಟಥಾಂ ಬಾರಿಸಲು



ಬರದೇ ಇದ್ದ ಮದ್ದಲೆವಾದಕ, ಹೂ ಬೇರೆ ವಾದಕನನ್ನುಕರೆದುಕೊಂಡು ಬನ್ನಿ' ಎಂದು ಹೇಳುತ್ತಿದ್ದರು. ಆ ದಿನ ಆದದ್ದು ಹೀಗೆಯೆ. ಒಂಬತ್ತು ಮದ್ದಲೆಗಾರರು ಬಿಟ್ಟ ನಂತರ ಹತ್ತನೆಯವರು ಸುಬ್ಬಣ್ಣನವರು. ಅಡಕಳ್ಳಿ ಭಾಗವತರ ವೈಶಿಷ್ಟ್ಯವೆಂದರೆ ಅವರು ತಮ್ಮ ಮುಖವನ್ನು ಎಡಕ್ಕೆ ತಿರುಗಿಸಿಕೊಂಡು ತಾಳ ಕುಟ್ಟುತ್ತಿದ್ದರು. ಸುಬ್ಬಣ್ಣನವರು ತಮ್ಮ ಮುಖವನ್ನು ಬಲಕ್ಕೆ ತಿರುಗಿಸಿಕೊಂಡೇ ಮೃದಂಗ ಬಾರಿಸುತ್ತಿದ್ದರು. ಭಾಗವತರ ಬಲಕ್ಕೆ ಮೃದಂಗಕಾರ ಕುಳಿತುಕೊಳ್ಳುವುದು ಪರಂಪರೆಯಾಗಿದ್ದರಿಂದ ಅವರು ಇವರ ಮುಖ ನೋಡಲಿಲ್ಲ. ಸುಬ್ಬಣ್ಣನವರು ಬೇಕೆಂದೇ ನೋಡಲಿಲ್ಲ. ಇವರು ಕುಳಿತುಕೊಂಡಮೇಲೂ, ಭಾಗವತರು ಅದೇ ಗತ್ತನ್ನು ಉಪಯೋಗಿಸಿದರು. ಆದರೆ ಸುಬ್ಬಣ್ಣನವರಿಗೆ ಅದು ಮೊದಲೇ ಗೊತ್ತಿದ್ದುದರಿಂದ ಸಲೀಸಾಗಿ ಮದ್ದಲೆ ಬಾರಿಸಿದರು. ತಾವು ಅನೇಕ ಸಾರೆ ಕೇಳಿದ ಮದ್ದಲೆಯ ನಾದ ಇದು ಎಂದು ಭಾಗವತರು ಬಲಕ್ಕೆ ಮುಖ ತಿರುಗಿಸಿದರು. ಸುಬ್ಬಣ್ಣನವರು ಎಡಕ್ಕೆ ತಮ್ಮ ಮುಖ ತಿರುಗಿಸಿದರು. ಭಾಗವತರು 'ಓಹೋ! ನೀನೋ!' ಎಂದರು. ಸುಬ್ಬಣ್ಣ 'ಹೌದು, ಅನೇಯ ಹೌದು'. 'ಮಾಣಿ ಬಂದೀನೋ' (ಮಾಣಿ ಎಂದು ಕೃಷ್ಣ ಭಾಗವತರಿಗೆ ಅಡಕಳ್ಳಿ ಭಾಗವತರು ಕರೆಯುತ್ತಿದ್ದರು) 'ಹಂಗಾರೆ ಅವೆ ಇನ್ಮೇಲೆ ಭಾಗೋತ್ಗಿ ಮಾಡ್ಲಿ'. ಆ ರಾತ್ರೆ ಸುಬ್ಬಣ್ಣ ಮತ್ತು ಭಾಗವತರ ಜೋಡಿ, ನೆರೆದಿದ್ದ ತಾಳಮದ್ದಳೆಯ ಪ್ರೇಕ್ಷಕರನ್ನು ರಂಜಿಸಿತು.

ಆಗ ಅನೇಕ ಕಡೆಗಳಲ್ಲಿ ಪದದ (ಯಕ್ಷಗಾನ ತರಬೇತಿ) ಶಾಲೆಗಳಿದ್ದವು. ಮುಂದಿನ ಪೀಳಿಗೆಯವರು ಕಲಿಯಬೇಕೆಂಬ ಆಶಯದಂದ ಕಾನಗೋಡಿನಲ್ಲಿ ಒಂದು ಪದದ ಶಾಲೆ ಪ್ರಾರಂಭವಾಯಿತು. ಸುಬ್ಬಣ್ಣನವರು ಮತ್ತು ದಿ. ಜಾಲೆಮನೆ ಹೆಗಡೆಯವರು ಕಲಿಸಿದ ಶಾಲೆ ಅದು. ಸುಬ್ಬಣ್ಣನವರಿಗೆ ಮೇಳವೆಂದರೆ ಹೇಗಿರಬೇಕೆಂಬ ಅರಿವು ಸಂಪೂರ್ಣವಾಗಿತ್ತು. ಆಟ ಕೆಡದಂತೆ ಅನೇಕ ವೇಳೆ ನಟರ ಕುಣಿತಕ್ಕೆ ತಕ್ಕಂತೆ ಮದ್ದಲೆ ಬಾರಿಸುತ್ತಿದ್ದರು. ಹಾಗಾಗಿ ನಟರು ತಾಳ ತಪ್ಪಿದರೂ ಪ್ರೇಕ್ಷಕರಿಗೆ ಗೊತ್ತಾಗುತ್ತಿರಲಿಲ್ಲ. ಇವರ ಪದದ ಶಾಲೆಯಲ್ಲಿ ಕಲಿತ ಯುವಕರೊಡನೆ ಸೇರಿ ಕಾನಗೋಡಿನಲ್ಲಿ ದ್ರೌಪದಿ ಪ್ರತಾಪ ಯಕ್ಷಗಾನ ಆಟ ನಡೆಯಿತು. ಆಗತಾನೆ ಕಲಿತವರೊಬ್ಬರದು 'ಸುಭದ್ರೆ'. ಜಾಲೀಮನೆ ಹೆಗಡೆಯವರು ಕೃಷ್ಣ. ಸುಭದ್ರೆ ದ್ರೌಪದಿಯಿಂದ ಸೋತು ಹೋದ ನಂತರ ನಿರ್ಗಮಿಸುವ ಅಣ್ಣ ಕೃಷ್ಣನನ್ನು ನಾರದರ ಮೂಲಕ ಕರೆಯಿಸುತ್ತಾಳೆ. ಕೃಷ್ಣ ಬಂದಾಗ ಅವನನ್ನು ಸ್ತುತಿಸಿ ''ಧುರದಿ ಸೋಲಿಸಿದಳು ನೊಂದೆ। ನರಕಸೂದನ।। ಭರದೊಳವಳ ಶೌರ್ಯ ನಿಲಿಸು ದುರಿತಭೇದನ।।'' ಎಂದು ಭಾಗವತರು ಹಾಡಬೇಕಾಗಿದೆ. ಬಾಳೆಹದ್ದ ಭಾಗವತರೇ ಅಂದಿನ ಪ್ರಸಂಗದ ಭಾಗವತರು. ಸುಬ್ಬಣ್ಣನವರೇ ಮದ್ದಲೆಗಾರರು. ಸಾಮಾನ್ಯವಾಗಿ ಯಕ್ಷಗಾನದಲ್ಲಿ ಸಂಭಾಷಣಾ ರೂಪದ ಪದ್ಯಗಳಲ್ಲಿ ಸಂಬಂಧಪಟ್ಟ ಪಾತ್ರಧಾರಿ ಮಾತ್ರ ನರ್ತಿಸುತ್ತಾನೆ. ಕೃಷ್ಣನಂಥ ಪಾತ್ರ ಮಾಡುವವರು ಕೆಲವೊಮ್ಮೆ



ಎದುರು ಪಾತ್ರದ ಸಂಗಡವೂ ಅವರ ಪದ್ಯಗಳ ತುದಿಯಲ್ಲಿ ನರ್ತಿಸುವ ರೂಢಿಯೂ ಇದೆ. ಆದಿನ ಜಾಲೀಮನೆ ಹೆಗಡೆಯವರು ಸುಭದ್ರೆಯ ಪದ್ಯದ ತುದಿಯಲ್ಲಿ ಕುಣಿಯತೊಡಗಿದರು. ಅವರ ಅತ್ಯಂತ ಖಚಿತವಾದ ಲಯ. ಅವರಿಗೆ ತಾಳದ ಮೇಲೆ ಹಿಡಿತ ಅಪಾರವಾಗಿತ್ತು. ಬಿಡ್ತಿಗೆಯ ತುದಿಯಲ್ಲಿ 'ತೈಕುತಾಂ, ತೈ ಧೈ ತೈಯ್ಯ, ಧಾ' ಎಂದು ಬರುತ್ತಿತ್ತು. ಧಾ ಮುಂದಿನ ಆವೃತ್ತದ ಮೊದಲ ಮಾತ್ರೆ. ಇದಕ್ಕೆ ಕಾಲನ್ನು ಇಡುವುದು ಸಂಪ್ರದಾಯ. ಆದರೆ ಸುಭದ್ರೆ ತೈಯಕ್ಕೇ ಕಾಲನ್ನು ಇಟ್ಟಳು. ಕೃಷ್ಣನ ಕಾಲು ಎತ್ತಿದ್ದು ಹಾಗೆಯೇ ಉಳಿಯಿತು. ಹೆಗಡೆಯವರಿಗೆ ಸಿಟ್ಟು ಬಂತು . ತನ್ನದು ತಪ್ಪಾದರೆ, ಕಾಲು ಕಡಿದುಕೊಳ್ಳುತ್ತೇನೆ. ಇಲ್ಲ ಇಲ್ಲೇ ಉರುಲು ಹಾಕಿಕೊಳ್ಳುತ್ತೇನೆಂದು ಹೇಳಿ ವೇಷವನ್ನೇ ಬಿಚ್ಚಲಿಲ್ಲ. ಮಗ ತ್ರಿಯಂಬಕ ಹೆಗಡೆಯವರಿಗೆ ಅಲ್ಲಿಯೇ ಕುಳಿತುಕೊಳ್ಳ ಹೇಳಿದರು. ಉಳಿದವರು ವೇಷ ಬಿಚ್ಚಿದರೂ, ಜಾಲೀ ಹೆಗಡೆಯವರು ಯಾಕೆ ಬರಲಿಲ್ಲ ಎಂದು ನೋಡಿದರೆ ಅವರು ಕೋಪಿಸಿಕೊಂಡು ಕುಳಿತಿದ್ದಾರೆ. ಸುಬ್ಬಣ್ಣನವರು ಬಂದರು. ಕೋಪದ ಕಾರಣ ಗೊತ್ತಾಯಿತು. 'ಅಲ್ಲೋ ಜಾಲೇ ಭಾವ, ನೀ ಇನ್ನೂ ಎಂತಾ ಹೆಸ್ರ ತಗಲೋದಿದ್ದೋ? ಅಂವ ಕಾಲಿಟ್ಟ, ಆನು ಹಾಂಗಾಗಿ ಡುಂ ಗುಡಿಸಿದೆ. ನಿಂದು ಸರಿ ಇತ್ತು, ಆದ್ರೆ ಇನ್ನೊಂದು ಸರ್ತಿ ಡುಂ ಗುಡಿಸಿದರೆ ಅಂವ ಕುಣಿಯಲ್ಲೆ ಹಣ್ಕತಾ. ಎಷ್ಟು ಪಂಚೇಂದ್ರಿಯ ಹೊಡ್ಯೊ ಆನು, ನಾವೇ ಕಲ್‌ಸಿದ ಮಾಣಿ ಅಲ್ದನೋ, ಯಂದು ತಪ್ಪಾತು ಹೇಳೀ ಹೇಳವನ; ಸ್ವಲ್ಪ ವಿಚಾರ ಮಾಡು; ಅಂವ ತಾಳ ತಪ್ದ ಹೇಳಿ ಜನಕ್ಕೆ ಗೊತ್ತಾದ್ರೆ, ನಮಗೇ ಅವ್‌ಮಾನಲ್ದನೋ' ಆಗ ಜಾಲೀಮನೆ ಹೆಗಡೆಯವರಿಗೆ ಹೊಳೆಯಿತು. 'ಓಹೋ ಹೀಂಗಾಯ್ದನೋ, ಯೆನ್ಗೆ ಗೊತ್ತೆ ಆಯಿದ್ಲೆ. ಹೋಗ್ಲಿ ಬಿಡು' ಎಂದರು, ನಂತರ ವೇಷ ಬಿಚ್ಚಿದರು.

ಸುಬ್ಬಣ್ಣನವರು ಸೂಕ್ಷ್ಮತೆಯಿಂದ ಎಲ್ಲವನ್ನು ಗಮನಿಸುತ್ತಿದ್ದರು. ಯಕ್ಷಗಾನ ಆಟ ವ್ಯವಸ್ಥಿತವಾಗಿ ಆಗಬೇಕೆಂಬ ಏಕ ಮಾತ್ರ ಕಾರಣದಿಂದ ಯಾವತ್ತೂ ಮೀಸೆಯನ್ನು ತೆಗೆಯದ ನಟರ ಮೀಸೆ ಬೋಳಿಸಿ, ಭೀಷ್ಮ ವಿಜಯದ ಅಂಬಿಕೆ, ಅಂಬಾಲಿಕೆಯರ ಪಾತ್ರ ಮಾಡಿಸಿದ್ದಿದೆ. ಇಂಥವರನ್ನು ಬಹುಕಾಲ ಬಾಳಗೊಡದ ವಿಧಿಗೆ ಏನನ್ನಬೇಕೋ ನನಗಂತೂ ತಿಳಿಯದು. ಆದರೆ, ಅವರಿರುವ ತನಕ ಯಕ್ಷಗಾನ ಕಲೆ ನಮ್ಮಲ್ಲಿ ಜನ ಮನ್ನಣೆ ಗಳಿಸಿಕೊಂಡೇ ಇತ್ತು. ಅವರ ನೆನಪು ನಮಗಂತೂ ಎಂದೂ ಮಾಸಲು ಸಾಧ್ಯವೇ ಇಲ್ಲ.

## ಭಾಗವತರು ನೆನಪಿಸಿಕೊಳ್ಳುವ ನಾರಾಯಣ ಹೆಗಡೆ, ಶೀಗೇಮನೆ

ಬಾಳೇಹದ್ದ ಕೃಷ್ಣ ಭಾಗವತರು ಕಂಡ ಶ್ರೇಷ್ಠ ಅರ್ಥದಾರಿಗಳಲ್ಲಿ ಶೀಗೇಮನೆ ದಿ. ನಾರಾಯಣ ಸುಬ್ರಾಯ ಹೆಗಡೆ ಒಬ್ಬರಾಗಿದ್ದರು. ಭರತನಹಳ್ಳಿ ಸೀಮೆಯ ಶೀಗೇಮನೆ



ಎಂಬ ಸಣ್ಣ ಹಳ್ಳಿಯಲ್ಲಿ ಹುಟ್ಟಿದ ಇವರು ಆ ಕಾಲದಲ್ಲಿ ಓದಿದ್ದು ಕನ್ನಡ ಆರನೆಯ ತರಗತಿಯವರೆಗೆ ಮಾತ್ರ. ಆದರೆ ಓದುವ ಹವ್ಯಾಸ ಅಪಾರವಾಗಿತ್ತು. ಸದಾ ರಾಮಾಯಣ - ಮಹಾಭಾರತ ಗ್ರಂಥಗಳ ಜೊತೆಗೆ ಕಾದಂಬರಿ, ಕತೆ, ಕವನ ಇತ್ಯಾದಿಗಳನ್ನೂ ಓದುವ, ತಿಳಿದುಕೊಳ್ಳುವ ಹಂಬಲ ಹಾಗೂ ಉತ್ತಮ ಗ್ರಂಥ, ಪುಸ್ತಕಗಳನ್ನು ಸಂಗ್ರಹಿಸುವ ಆಸಕ್ತಿಯನ್ನೂ ಬೆಳೆಸಿಕೊಂಡವರಾಗಿದ್ದರು. ಅವರಲ್ಲಿರುವ ಕನಿಷ್ಟ 10 ರಿಂದ 12 ವಿಧದ ವಿವಿಧ ರಾಮಾಯಣ- ಮಹಾಭಾರತ ಪುಸ್ತಕಗಳ ಸಂಗ್ರಹವೇ ಒಂದು ಗ್ರಂಥಾಲಯವಿದ್ದಂತೆ ಭಾಸವಾಗುತ್ತಿತ್ತು.

ಮೊದಲು ಸಂಗೀತ ನಾಟಕಗಳಲ್ಲಿ ಪಾತ್ರ ಮಾಡುವ ಮೂಲಕ ಕಲಾರಂಗಕ್ಕೆ ಪ್ರವೇಶ. ಅದರಲ್ಲಿಯೂ ಅವರ ಟಿಪ್ಪೂಸುಲ್ತಾನ ನಾಟಕದ 'ಟಿಪ್ಪೂಸುಲ್ತಾನ' ನ ಪಾತ್ರ ಅದ್ಭುತ. ಆಗಿನ ಕಂಪನಿ ನಾಟಕದ ಪಾತ್ರಧಾರಿಗಳೂ ಕೂಡ ಶ್ರೀಯುತರ ಟಿಪ್ಪುಸುಲ್ತಾನ ಪಾತ್ರ ನೋಡಿ ಬೆರಗಾಗಿದ್ದರು. ಅವರು ಸ್ವರದ ಏರಿಳಿತ, ಭಾವನಾತ್ಮಕತೆ ಮತ್ತು ಪಾತ್ರದಲ್ಲಿಯ ತಲ್ಲೀನತೆಗಳಿಗೆ ಹೆಚ್ಚಿನ ಗಮನ ನೀಡುತ್ತಿದ್ದರು.

ಯಕ್ಷಗಾನ ತಾಳಮದ್ದಳೆಯ ಅರ್ಥಧಾರಿಗಳಾಗಿ ಪ್ರವೇಶಿಸಿದ್ದು ಆಕಸ್ಮಿಕ. ಇದಕ್ಕೆ ಮೂಲ ಗುರು ಭಾಮನಕೊಪ್ಪದ ಶ್ರೀ ಗಣಪತಿ ಭಟ್ಟರು. ಅವರೂ ಕೂಡಾ ಆ ಕಾಲದ ಉತ್ತಮ ಅರ್ಥಧಾರಿಗಳು. ಇವರ ಮಧುರ ವಾಣಿಯನ್ನು ಕೇಳಿ ಸುಮಾರು 21-22 ನೇ ವರ್ಷದಲ್ಲಿ ಯಕ್ಷಗಾನ ತಾಳಮದ್ದಳೆಯ ಅರ್ಥವನ್ನು ಹೇಳುವುದಕ್ಕೆ ಪ್ರಾರಂಭಿಸಿದರು.

ಸಂಕದಗುಂಡಿಯ ಶ್ರೀ ಗೋಪಾಲ ಭಟ್ಟರ ಮನೆಯ ಅನಂತನ ಚತುರ್ದಶಿಯಂದು ಪ್ರಥಮವಾಗಿ ಅರ್ಥಗಾರಿಕೆ ಪ್ರಾರಂಭ. ನಂತರದಲ್ಲಿ ಅವರ ಮಾತಿನ ಮೋಡಿ ಪಾತ್ರದ ಔಚಿತ್ಯ, ತನ್ನದೇ ಆದ ಶೈಲಿಯಿಂದ ಒಬ್ಬ ಶ್ರೇಷ್ಠ ತಾಳಮದ್ದಳೆ ಅರ್ಥಧಾರಿಗಳಾಗಿ ಯಕ್ಷಗಾನ ಕ್ಷೇತ್ರದಲ್ಲಿ ಕಾಣಿಸಿಕೊಂಡರು.

ಆಗ ಅರಸಾಪುರದ ದೇವಸ್ಥಾನದಲ್ಲಿ ಏಕಾದಶೀ ತಾಳಮದ್ದಳೆ ಕೂಟ ಸದಾ ನಡೆಯುತ್ತಿತ್ತು. ಅರಸಾಪುರದ ದಿ. ವೆಂಕಟ್ರಮಣ ಹೆಗಡೆ ಹಾಗೂ ದೇವಸ್ಥಾನದ ಗಣಪತಿ ಭಟ್ಟರು ಇವರನ್ನು ಆಹ್ವಾನಿಸುತ್ತಿದ್ದರು. ಅವರೂ ಮೂಲತಃ ಯಕ್ಷಗಾನದ ಅರ್ಥಧಾರಿಗಳೇ ಆಗಿದ್ದರು. ಆದ್ದರಿಂದ ನಾರಾಯಣ ಹೆಗಡೆಯವರಿಗೆ ಕಲಿಯಲು ಒಳ್ಳೆಯ ಅವಕಾಶವೂ ಉತ್ತಮ ಮಾರ್ಗದರ್ಶನವೂ ಲಭಿಸಿತು. ಭಾಗವತಿಕೆಗೆ ಕಡತೋಕಾ ಶ್ರೀ ಮಂಜುನಾಥ ಭಾಗವತರು ಅರಸಾಪುರಕ್ಕೆ ಖಾಯಂ ಬರುವವರು. ಇವರ ಮಾತುಗಾರಿಕಯನ್ನು ಕೇಳಿ ಎಷ್ಟೋ ಸಂದರ್ಭದಲ್ಲಿ ಅವರೂ ಕೂಡಾ ಭಾವಪರವಶರಾದದ್ದೂ ಇತ್ತು.

ಆ ಸಮಯದಲ್ಲಿಯೇ ಶ್ರೀ ಕೃಷ್ಣ ಭಾಗವತ ಬಾಳೇಹದ್ದರವರು ಶ್ರೇಷ್ಠ ಭಾಗವತರಾಗಿ,



ಎದುರು ಪಾತ್ರದ ಸಂಗಡವೂ ಅವರ ಪದ್ಯಗಳ ತುದಿಯಲ್ಲಿ ನರ್ತಿಸುವ ರೂಢಿಯೂ ಇದೆ. ಆದಿನ ಜಾಲೀಮನೆ ಹೆಗಡೆಯವರು ಸುಭದ್ರೆಯ ಪದ್ಯದ ತುದಿಯಲ್ಲಿ ಕುಣಿಯತೊಡಗಿದರು. ಅವರ ಅತ್ಯಂತ ಖಚಿತವಾದ ಲಯ. ಅವರಿಗೆ ತಾಳದ ಮೇಲೆ ಹಿಡಿತ ಅಪಾರವಾಗಿತ್ತು. ಬಿಡ್ತಿಗೆಯ ತುದಿಯಲ್ಲಿ 'ತೈಕುತಾಂ, ತೈ ಧೈ ತೈಯ್ಯ, ಧಾ' ಎಂದು ಬರುತ್ತಿತ್ತು. ಧಾ ಮುಂದಿನ ಅವ್ರತ್ತದ ಮೊದಲ ಮಾತ್ರೆ. ಇದಕ್ಕೆ ಕಾಲನ್ನು ಇಡುವುದು ಸಂಪ್ರದಾಯ. ಆದರೆ ಸುಭದ್ರೆ ತೈಯಕ್ಕೇ ಕಾಲನ್ನು ಇಟ್ಟಳು. ಕೃಷ್ಣನ ಕಾಲು ಎತ್ತಿದ್ದು ಹಾಗೆಯೇ ಉಳಿಯಿತು. ಹೆಗಡೆಯವರಿಗೆ ಸಿಟ್ಟು ಬಂತು . ತನ್ನದು ತಪ್ಪಾದರೆ, ಕಾಲು ಕಡಿದುಕೊಳ್ಳುತ್ತೇನೆ. ಇಲ್ಲ ಇಲ್ಲೇ ಉರುಲು ಹಾಕಿಕೊಳ್ಳುತ್ತೇನೆಂದು ಹೇಳಿ ವೇಷವನ್ನೇ ಬಿಚ್ಚಲಿಲ್ಲ. ಮಗ ತ್ರಿಯಂಬಕ ಹೆಗಡೆಯವರಿಗೆ ಅಲ್ಲಿಯೇ ಕುಳಿತುಕೊಳ್ಳ ಹೇಳಿದರು. ಉಳಿದವರು ವೇಷ ಬಿಚ್ಚಿದರೂ, ಜಾಲೀ ಹೆಗಡೆಯವರು ಯಾಕೆ ಬರಲಿಲ್ಲ ಎಂದು ನೋಡಿದರೆ ಅವರು ಕೋಪಿಸಿಕೊಂಡು ಕುಳಿತಿದ್ದಾರೆ. ಸುಬ್ಬಣ್ಣನವರು ಬಂದರು. ಕೋಪದ ಕಾರಣ ಗೊತ್ತಾಯಿತು. 'ಅಲ್ಲೋ ಜಾಲೇ ಭಾವ, ನೀ ಇನ್ನೂ ಎಂತಾ ಹೆಸ್ರ ತಗಳೋದಿದ್ದೋ? ಅಂವ ಕಾಲಿಟ್ಟ, ಆನು ಹಾಂಗಾಗಿ ಡುಂ ಗುಡಿಸಿದೆ. ನಿಂದು ಸರಿ ಇತ್ತು, ಆದ್ರೆ ಇನ್ನೊಂದು ಸರ್ತಿ ಡುಂ ಗುಡಿಸಿದರೆ ಅಂವ ಕುಣಿಯಲ್ಲೆ ಹಣ್ಣತಾ. ಎಷ್ಟು ಪಂಚೇಂದ್ರಿಯ ಹೊಡ್ಯೊ ಆನು, ನಾವೇ ಕಲ್‌ಸಿದ ಮಾಣಿ ಅಲ್ದನೋ, ಯಂದು ತಪ್ಪಾತು ಹೇಳೀ ಹೇಳವನ; ಸ್ವಲ್ಪ ವಿಚಾರ ಮಾಡು; ಅಂವ ತಾಳ ತಪ್ದ ಹೇಳಿ ಜನಕ್ಕೆ ಗೊತ್ತಾದ್ರೆ, ನಮಗೇ ಅವ್‌ಮಾನಲ್ದನೋ' ಆಗ ಜಾಲೀಮನೆ ಹೆಗಡೆಯವರಿಗೆ ಹೊಳೆಯಿತು. 'ಓಹೋ ಹೀಂಗಾಯ್ದನೋ, ಯೆನ್ಗೆ ಗೊತ್ತೆ ಆಯಿದ್ಲೆ. ಹೋಗ್ಲಿ ಬಿಡು' ಎಂದರು, ನಂತರ ವೇಷ ಬಿಚ್ಚಿದರು.

ಸುಬ್ಬಣ್ಣನವರು ಸೂಕ್ಷ್ಮತೆಯಿಂದ ಎಲ್ಲವನ್ನು ಗಮನಿಸುತ್ತಿದ್ದರು. ಯಕ್ಷಗಾನ ಆಟ ವ್ಯವಸ್ಥಿತವಾಗಿ ಆಗಬೇಕೆಂಬ ಏಕ ಮಾತ್ರ ಕಾರಣದಿಂದ ಯಾವತ್ತೂ ಮೀಸೆಯನ್ನು ತೆಗೆಯದ ನಟರ ಮೀಸೆ ಬೋಳಿಸಿ, ಭೀಷ್ಮ ವಿಜಯದ ಅಂಬಿಕೆ, ಅಂಬಾಲಿಕೆಯರ ಪಾತ್ರ ಮಾಡಿಸಿದ್ದಿದೆ. ಇಂಥವರನ್ನು ಬಹುಕಾಲ ಬಾಳಗೊಡದ ವಿಧಿಗೆ ಏನನ್ನಬೇಕೋ ನನಗಂತೂ ತಿಳಿಯದು. ಆದರೆ, ಅವರಿರುವ ತನಕ ಯಕ್ಷಗಾನ ಕಲೆ ನಮ್ಮಲ್ಲಿ ಜನ ಮನ್ನಣೆ ಗಳಿಸಿಕೊಂಡೇ ಇತ್ತು. ಅವರ ನೆನಪು ನಮಗಂತೂ ಎಂದೂ ಮಾಸಲು ಸಾಧ್ಯವೇ ಇಲ್ಲ.

## ಭಾಗವತರು ನೆನಪಿಸಿಕೊಳ್ಳುವ ನಾರಾಯಣ ಹೆಗಡೆ, ಶೀಗೇಮನೆ

ಬಾಳೇಹದ್ದ ಕೃಷ್ಣ ಭಾಗವತರು ಕಂಡ ಶ್ರೇಷ್ಠ ಅರ್ಥದಾರಿಗಳಲ್ಲಿ ಶೀಗೇಮನೆ ದಿ. ನಾರಾಯಣ ಸುಬ್ರಾಯ ಹೆಗಡೆ ಒಬ್ಬರಾಗಿದ್ದರು. ಭರತನಹಳ್ಳಿ ಸೀಮೆಯ ಶೀಗೇಮನೆ

ಪುಟ ಪ್ರಾಯೋಜಕರು : **ಶ್ರೀ ಜಿ. ಕೆ. ಹೆಗಡೆ, ಬೆಳಗುಂದ್ಲಿ**



ಎಂಬ ಸಣ್ಣ ಹಳ್ಳಿಯಲ್ಲಿ ಹುಟ್ಟಿದ ಇವರು ಆ ಕಾಲದಲ್ಲಿ ಓದಿದ್ದು ಕನ್ನಡ ಆರನೆಯ ತರಗತಿಯವರೆಗೆ ಮಾತ್ರ. ಆದರೆ ಓದುವ ಹವ್ಯಾಸ ಅಪಾರವಾಗಿತ್ತು. ಸದಾ ರಾಮಾಯಣ - ಮಹಾಭಾರತ ಗ್ರಂಥಗಳ ಜೊತೆಗೆ ಕಾದಂಬರಿ, ಕತೆ, ಕವನ ಇತ್ಯಾದಿಗಳನ್ನೂ ಓದುವ, ತಿಳಿದುಕೊಳ್ಳುವ ಹಂಬಲ ಹಾಗೂ ಉತ್ತಮ ಗ್ರಂಥ, ಪುಸ್ತಕಗಳನ್ನು ಸಂಗ್ರಹಿಸುವ ಆಸಕ್ತಿಯನ್ನೂ ಬೆಳೆಸಿಕೊಂಡವರಾಗಿದ್ದರು. ಅವರಲ್ಲಿರುವ ಕನಿಷ್ಟ 10 ರಿಂದ 12 ವಿಧದ ವಿವಿಧ ರಾಮಾಯಣ- ಮಹಾಭಾರತ ಪುಸ್ತಕಗಳ ಸಂಗ್ರಹವೇ ಒಂದು ಗ್ರಂಥಾಲಯವಿದ್ದಂತೆ ಭಾಸವಾಗುತ್ತಿತ್ತು.

ಮೊದಲು ಸಂಗೀತ ನಾಟಕಗಳಲ್ಲಿ ಪಾತ್ರ ಮಾಡುವ ಮೂಲಕ ಕಲಾರಂಗಕ್ಕೆ ಪ್ರವೇಶ. ಅದರಲ್ಲಿಯೂ ಅವರ ಟಿಪ್ಪೂಸುಲ್ತಾನ ನಾಟಕದ 'ಟಿಪ್ಪೂಸುಲ್ತಾನ' ನ ಪಾತ್ರ ಅದ್ಭುತ. ಆಗಿನ ಕಂಪನಿ ನಾಟಕದ ಪಾತ್ರಧಾರಿಗಳೂ ಕೂಡ ಶ್ರೀಯುತರ ಟಿಪ್ಪುಸುಲ್ತಾನ ಪಾತ್ರ ನೋಡಿ ಬೆರಗಾಗಿದ್ದರು. ಅವರು ಸ್ವರದ ಏರಿಳಿತ, ಭಾವನಾತ್ಮಕತೆ ಮತ್ತು ಪಾತ್ರದಲ್ಲಿಯ ತಲ್ಲೀನತೆಗಳಿಗೆ ಹೆಚ್ಚಿನ ಗಮನ ನೀಡುತ್ತಿದ್ದರು.

ಯಕ್ಷಗಾನ ತಾಳಮದ್ದಳೆಯ ಅರ್ಥಧಾರಿಗಳಾಗಿ ಪ್ರವೇಶಿಸಿದ್ದು ಆಕಸ್ಮಿಕ. ಇದಕ್ಕೆ ಮೂಲ ಗುರು ಭಾಮನಕೊಪ್ಪದ ಶ್ರೀ ಗಣಪತಿ ಭಟ್ಟರು. ಅವರೂ ಕೂಡಾ ಆ ಕಾಲದ ಉತ್ತಮ ಅರ್ಥಧಾರಿಗಳು. ಇವರ ಮಧುರ ವಾಣಿಯನ್ನು ಕೇಳಿ ಸುಮಾರು 21-22 ನೇ ವರ್ಷದಲ್ಲಿ ಯಕ್ಷಗಾನ ತಾಳಮದ್ದಳೆಯ ಅರ್ಥವನ್ನು ಹೇಳುವುದಕ್ಕೆ ಪ್ರಾರಂಭಿಸಿದರು.

ಸಂಕದಗುಂಡಿಯ ಶ್ರೀ ಗೋಪಾಲ ಭಟ್ಟರ ಮನೆಯ ಅನಂತನ ಚತುರ್ದಶಿಯಂದು ಪ್ರಥಮವಾಗಿ ಅರ್ಥಗಾರಿಕೆ ಪ್ರಾರಂಭ. ನಂತರದಲ್ಲಿ ಅವರ ಮಾತಿನ ಮೋಡಿ ಪಾತ್ರದ ಔಚಿತ್ಯ, ತನ್ನದೇ ಆದ ಶೈಲಿಯಿಂದ ಒಬ್ಬ ಶ್ರೇಷ್ಠ ತಾಳಮದ್ದಳೆ ಅರ್ಥಧಾರಿಗಳಾಗಿ ಯಕ್ಷಗಾನ ಕ್ಷೇತ್ರದಲ್ಲಿ ಕಾಣಿಸಿಕೊಂಡರು.

ಆಗ ಅರಸಾಪುರದ ದೇವಸ್ಥಾನದಲ್ಲಿ ಏಕಾದಶೀ ತಾಳಮದ್ದಳೆ ಕೂಟ ಸದಾ ನಡೆಯುತ್ತಿತ್ತು. ಅರಸಾಪುರದ ದಿ. ವೆಂಕಟ್ರಮಣ ಹೆಗಡೆ ಹಾಗೂ ದೇವಸ್ಥಾನದ ಗಣಪತಿ ಭಟ್ಟರು ಇವರನ್ನು ಆಹ್ವಾನಿಸುತ್ತಿದ್ದರು. ಅವರೂ ಮೂಲತಃ ಯಕ್ಷಗಾನದ ಅರ್ಥಧಾರಿಗಳೇ ಆಗಿದ್ದರು. ಆದ್ದರಿಂದ ನಾರಾಯಣ ಹೆಗಡೆಯವರಿಗೆ ಕಲಿಯಲು ಒಳ್ಳೆಯ ಅವಕಾಶವೂ ಉತ್ತಮ ಮಾರ್ಗದರ್ಶನವೂ ಲಭಿಸಿತು. ಭಾಗವತಿಕೆಗೆ ಕಡತೋಕಾ ಶ್ರೀ ಮಂಜುನಾಥ ಭಾಗವತರು ಅರಸಾಪುರಕ್ಕೆ ಖಾಯಂ ಬರುವವರು. ಇವರ ಮಾತುಗಾರಿಕಯನ್ನು ಕೇಳಿ ಎಷ್ಟೋ ಸಂದರ್ಭದಲ್ಲಿ ಅವರೂ ಕೂಡಾ ಭಾವಪರವಶರಾದದ್ದೂ ಇತ್ತು.

ಆ ಸಮಯದಲ್ಲಿಯೇ ಶ್ರೀ ಕೃಷ್ಣ ಭಾಗವತ ಬಾಳೇಹದ್ದರವರು ಶ್ರೇಷ್ಠ ಭಾಗವತರಾಗಿ,



ಶ್ರೀ ನಾರಾಯಣ ಹೆಗಡೆ ಶೀಗೇಮನೆಯವರು ಉತ್ತಮ ಅರ್ಥಧಾರಿಗಳಾಗಿ ರಂಗದ ಮೇಲೆ ಕಾಣಿಸಿಕೊಂಡು ಹೊಸ ಯುಗವನ್ನೇ ಪ್ರಾರಂಭಿಸಿದರು.

ಒಬ್ಬ ಭಾಗವತರು ಪಾತ್ರದ ಭಾವನೆಗಳನ್ನು ತಿಳಿದು ಯಾವ ಭಾವದಲ್ಲಿ ಪದ್ಯ ಹೇಳಬೇಕೆನ್ನುವುದನ್ನು ಊಹಿಸಿ ಆ ಸಂದರ್ಭಕ್ಕೆ ತಕ್ಕಂತೆ ಹೇಳಿದರೆ, ಅದಕ್ಕನುಗುಣವಾದ ಶೈಲಿ, ಭಾವನೆಯಲ್ಲಿಯೇ ಅರ್ಥವನ್ನು ಹೇಳುವುದರಲ್ಲಿ ನಾರಾಯಣ ಹೆಗಡೆಯವರದು ಎತ್ತಿದ ಕೈ. ಶ್ರೀಯುತರ ಕರ್ಣಪರ್ವದ ಕರ್ಣ, ಭೀಷ್ಮಾರ್ಜುನದ ಭೀಷ್ಮ, ಸುಭದ್ರಾ ರಾಯಬಾರದ ಸುಭದ್ರೆ, ನಿರ್ಯಾಣದ ರಾಮ ಮುಂತಾದ ಪಾತ್ರಗಳು ಸದಾ ಇನ್ನೂ ಶ್ರೀ ಕೃಷ್ಣ ಭಾಗವತರಲ್ಲಿ ಅಂದಿನ ನೆನಪನ್ನೇ ತರಿಸುತ್ತಿವೆ.

ಒಮ್ಮೆ ಕೋಟೆಮನೆ ಗಣೇಶ ಚತುರ್ಥಿ ಹಬ್ಬದ ತಾಳಮದ್ದಳೆಯ ಸಂದರ್ಭ. ಜಿಲ್ಲೆಯ ವಿವಿದೆಡೆಯಿಂದ ಶ್ರೇಷ್ಠ ವಿದ್ವಾಂಸರ ಆಗಮನವಾಗಿತ್ತು. ಅಂದು 'ಶ್ರೀ ಕೃಷ್ಣ ರಾಯಭಾರ' ಎಂಬ ಆಖ್ಯಾನ. ನಾರಾಯಣ ಹೆಗಡೆಯವರಿಗೆ ಆ ಪ್ರಸಂಗದಲ್ಲಿ 'ಕುಂತಿ'ಯ ಪಾತ್ರ. ಇವರಿಗೆ ಆಹ್ವಾನವೂ ಹಾಗೆಯೇ ಯಾವುದಾದರೂ ಸಣ್ಣ ಪುಟ್ಟ ಬಿದ್ದ ಪಾತ್ರ ಮಾಡಲು ಬರಬೇಕು. ಈ ಸಂದರ್ಭದಲ್ಲಿ ಕುಂತಿಗೆ ಕೇವಲ ಎರಡೇ ಪದಗಳ ಅವಕಾಶ. ಆದರೂ ಆ ಪಾತ್ರಕ್ಕೆ ಎಷ್ಟು ವಿಧವಾದ ಜೀವ ತುಂಬಿದ್ದರೆಂದರೆ, ಸಭೆಯಲ್ಲಿ ಸೇರಿದ್ದ ಪ್ರತಿಯೊಬ್ಬರೂ ಮನ ಮಿಡಿಯುವಂತೆ, ಅಶ್ರುಧಾರೆ ಹರಿಯುವಂತೆ, ಆ ಪಾತ್ರದ ಚೌಕಟ್ಟಿನಲ್ಲಿಯೇ ಜೀವಂತ ಕುಂತಿಯೇ ತಾನು ಎಂಬಂತೆ ಅರ್ಥ ಹೇಳಿದರು. ಜೊತೆಗೆ ಅಂದಿನ ಸಭಾಧ್ಯಕ್ಷರಾದ ವೇ. ಮೂ. ಗಣಪತಿ ಭಟ್ಟ ಹಾಸಣಗಿಯವರು ಇವರ ಪಾತ್ರದ ಚಿತ್ರಣವನ್ನು ಹಾಡಿ ಹೊಗಳಿದರು.

ಇನ್ನೊಂದು ಸಂದರ್ಭದಲ್ಲಿ ಹೊಸತೋಟದಲ್ಲಿ ಕರ್ಣಪರ್ವ ತಾಳಮದ್ದಳೆ. ಶ್ರೀಯುತರೇ ಕರ್ಣ. ಬಾಳೇಹದ್ದ ಭಾಗವತರದ್ದೇ ಪದ್ಯ. ಎಂತಹ ಅದ್ಭುತವಾದ ಕಲೆ ಎಂದು ಅಂದಿನ ಸಭೆಗೆ ಆಗಮಿಸಿದ್ದ ಆ ಕಾಲದ ಶ್ರೇಷ್ಠ ಸಮಾಜ ಸುಧಾರಕರೂ, ಸ್ವಾತಂತ್ರ್ಯ ಹೋರಾಟಗಾರರೂ ಆದ ಶ್ರೀ ಕೊಠಾರಿಯವರಿಂದ ಪ್ರಶಂಸೆ. ಇಷ್ಟೇ ಅಲ್ಲ ಈ ಜೋಡಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೂ ಕರೆದೊಯ್ದು ತಾಳಮದ್ದಳೆಯನ್ನು ಮಾಡಿಸಿ ಇವರನ್ನು ಕೊಠಾರಿಯವರು ಪರಿಚಯಿಸಿದರು.

ಒಮ್ಮೆ ಯಲ್ಲಾಪುರದ ಡಿ. ಎಫ್. ಓ. ಆಫೀಸಿನಲ್ಲಿ ಸುಭದ್ರಾ ರಾಯಭಾರ ಪ್ರಸಂಗ. ಅಂದಿನ ಪದ್ಯಗಳನ್ನೂ, ಶ್ರೀ ನಾರಾಯಣ ಹೆಗಡೆಯವರ ಸುಭದ್ರೆಯ ಅರ್ಥಗಾರಿಕೆಯನ್ನೂ ಕೇಳಿದ ಮಾನ್ಯ ಡಿ. ಎಫ್. ಓ. ರವರು ಶ್ರೀ ಕೃಷ್ಣ ಭಾಗವತರಿಗೆ ಉದ್ದಂಡ ನಮಸ್ಕಾರವನ್ನು ಮಾಡಿ ಇಂತಹ ಉತ್ತಮವಾದ ಮೇಳ (ಟೀಮು)ವನ್ನ ನಾನೆಂದೂ ನೋಡಿದ್ದೇ ಇಲ್ಲ ಎಂದು ಉದ್ಗರಿಸಿದರಂತೆ.



ಹೀಗೆಯೇ ಪಟ್ಟಿ ಮಾಡಿ ಹೇಳುತ್ತಾ ಹೋದರೆ ಒಂದೇ ಎರಡೇ, ಹತ್ತಾರು ಸಂದರ್ಭಗಳನ್ನು ಶ್ರೀ ನಾರಾಯಣ ಹೆಗಡೆಯವರ ಕುರಿತಾಗಿ ಹೇಳಬಹುದು. ಇವರು ಮನೆಯಲ್ಲಿಯೇ ಸತತವಾಗಿ ಅಭ್ಯಾಸ ಮಾಡುತ್ತಿದ್ದರು. ಯಾವುದೇ ಹೊತ್ತಿರಲಿ, ಸ್ವಲ್ಪ ಸಮಯವಿದೆ ಅಂತಾದರೆ ಓದುವುದೇ ಅವರ ಪ್ರವೃತ್ತಿಯಾಗಿತ್ತು. ಆದ್ದರಿಂದ ಅವರು ತಮ್ಮ ನಿರರ್ಗಳ ಮಾತು, ಮೇಲ್ಮಟ್ಟದ ಶಬ್ದ ಪ್ರಯೋಗ, ಸುಲಭವಾದ ವಾಕ್ಯ ಜೋಡಣೆ ಇವುಗಳಿಂದ ಯಾವುದೇ ಪ್ರಸಂಗದ ಯಾವುದೇ ಪಾತ್ರವನ್ನು ನಿರ್ವಹಿಸಿದರೂ ಸುಲಲಿತವಾಗಿ ಜನಮನ ಮುಟ್ಟುತ್ತಿದ್ದರು. ಘನ ವಿದ್ವಾಂಸರೇ ಎದುರು ಅರ್ಥಧಾರಿಯಾಗಿದ್ದರೂ ಅವರೂ ಕೂಡಾ ಇವರ ಮಾತಿನ ಭಾವನೆಯ ಓಘಕ್ಕೆ ಸೈ ಎನ್ನಲೇಬೇಕು. ನಾರಾಯಣ ಹೆಗಡೆಯವರ ಹಾವಭಾವ, ಆಂಗಿಕ ಲಕ್ಷಣ, ಸ್ವರ ಇವೆಲ್ಲ ಒಂದಕ್ಕೊಂದು ಪೂರಕವಾಗಿ ಆ ಪಾತ್ರವೇ ತಾನು ಎಂದು ತಿಳಿದು ಅರ್ಥ ಹೇಳುವ ಇನ್ನೊಬ್ಬರನ್ನು ನಾವು ಕಾಣಲಾರೆವೇನೋ ಎಂಬುದನ್ನು ಸ್ವತಃ ಭಾಗವತರೇ ಬಾಯ್ತುಂಬಿ ಹೇಳುತ್ತಾರೆ. ಕೆಲವು ಪದ್ಯಗಳನ್ನು ಹೇಳುವಾಗಂತೂ ಇಂದೂ ಅವರ ನೆನಪು ಕಾಡುತ್ತದೆಯೆಂಬ ದುಃಖ ಭಾಗವತರದು.

ಯಕ್ಷಗಾನ ತಾಳಮದ್ದಳೆಯ ಪಾತ್ರಗಳಿಗೆ ತನ್ನದೇ ಆದ ಛಾಪು, ಔಚಿತ್ಯ, ಘನತೆಯನ್ನು ತುಂಬಿದ ವ್ಯಕ್ತಿ ದಿ. ನಾರಾಯಣ ಹೆಗಡೆಯವರಾದರೆ, ಅಷ್ಟೇ ಶಕ್ತಿಶಾಲಿಯಾಗಿ ಶ್ರೀ ಕೃಷ್ಣ ಭಾಗವತರವರ ರಸವತ್ತಾದ ಪದ್ಯಗಳು; ಯಾವ ಸಂದರ್ಭದಲ್ಲಿಯೂ ಅರ್ಥ ಕೆಡದಂತೆ ಸಾಹಿತ್ಯ ವಿಂಗಡಿಸಿ ಪದ್ಯ ಹೇಳುವ ಶೈಲಿ, ತಾಳ, ಲಯ, ರಾಗಗಳ ಶುದ್ಧ ಸಂಯೋಜನೆ ಇವುಗಳ ಸವಿಯನ್ನು ಉಣಬಡಿಸಿದ ಆ ಕಾಲ ಶ್ರೇಷ್ಠ ಕಾಲ ಎಂಬುದು ನಾರಾಯಣ ಹೆಗಡೆಯವರ ಸಹೋದರರಾದ ಶ್ರೀ ಆರ್. ಎಸ್. ಹೆಗಡೆಯವರ ಸ್ಪಷ್ಟ ಅಭಿಪ್ರಾಯ.

ಶ್ರೀಯುತರು ಯಲ್ಲಾಪುರ ತಾಲೂಕಾ ಬೋರ್ಡಿನ ಸದಸ್ಯರಾದ ಸಮಯವೇ ಅವರ ಜೀವನದ ಉಚ್ಛ್ರಾಯ ಸ್ಥಿತಿ ಎಂದು ಹೇಳಬಹುದು. ಕೆಲವು ಶಾಲಾ ಮಕ್ಕಳಿಗೂ ಅರ್ಥ ಹೇಳುವುದನ್ನು ಕಲಿಸಲು ಪ್ರಯತ್ನಿಸಿದ್ದುಂಟು. ಆದರೆ ಅದಾವುದೂ ಮುಂದೆ ರಂಗಕ್ಕೆ ಬಂದು ವಿಶೇಷ ಯಶಸ್ಸು ಪಡೆಯದೇ ಹೋಯಿತು. ಸ್ವಂತ ಬದುಕಿನಲ್ಲಿಯೂ ನಲಿವಿಗಿಂತ ನೋವನ್ನೇ ಹೆಚ್ಚು ಕಂಡಿದ್ದರು. ಬಹಳ ಕಷ್ಟದ ದಿನಗಳನ್ನು ಕಳೆದ ಅವರು ಇಂದು ನಮ್ಮೊಡನಿಲ್ಲದಿದ್ದರೂ ಇಂದಿಗೂ ಎಂದಿಗೂ ಎಂದೆಂದಿಗೂ ಯಕ್ಷಗಾನ ಅರ್ಥಧಾರಿಯಾಗಿ ಮಾತ್ರ ಜೀವಂತವಾಗಿಯೇ ಇದ್ದಾರೆನ್ನಬಹುದು.

## ಯಕ್ಷರಂಗದಲ್ಲೂ ಹೆಸರು ಮಾಡಿದ ದಿ. ಹಾಸಣಗಿ ಗಣಪತಿ ಭಟ್ಟರು

ಉತ್ತರ ಕನ್ನಡದ ಹಳೆಯ ತಲೆಮಾರಿನ ಜನಕ್ಕೆಲ್ಲ ಗೊತ್ತಿದ್ದ ವ್ಯಕ್ತಿ ಎಂದರೆ ದಿ. ಹಾಸಣಗಿ ಗಣಪತಿ ಭಟ್ಟರು. ಬದುಕಿನುದ್ದಕ್ಕೂ ವಿವಿಧ ಕ್ಷೇತ್ರಗಳಲ್ಲಿ ಮಿಂಚಿ ಮರೆಯಾದವರು ಅವರು.



ಲಕ್ಷ್ಮೀಪುತ್ರರಾಗಿಯೂ, ಸರಸ್ವತಿಯ ಅನುಗ್ರಹವನ್ನೂ ಪಡೆದವರು. ಕ್ರೀಡೆ, ಕೃಷಿ, ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ಸಹಕಾರ, ಮುಂತಾದ ಹಲವು ರಂಗಗಳಲ್ಲಿ ಅವರು ಅಧಿಕಾರಯುತವಾಗಿ ಮಾತಾಡಬಲ್ಲವರಾಗಿದ್ದರು. ಮದುವೆಯ ಮನೆಯ ಕನ್ಯಾ ಸಮರ್ಪಣೆಯೇ ಇರಲಿ, ಮಂತ್ರಿ ಮಹೋದಯರು, ಆಗಮಿಸಿದ ಸಭೆಯೇ ಇರಲಿ, ಯಾವುದೇ ಕಲಾ ಗೋಷ್ಠಿಯೇ ಆಗಲಿ, ಹಬ್ಬ ಹರಿದಿನಗಳಲ್ಲಿ ಔತಣಕೂಟದಲ್ಲಿಯ ಪಾಲ್ಗೊಳ್ಳುವಿಕೆಯೇ ಆಗಲಿ, ಆ ಆ ಸಂದರ್ಭಗಳಲ್ಲಿ ಅವರು ಆಡುವ ಮಾತುಗಳನ್ನು ಕೇಳುವುದೆಂದರೆ ಕಿವಿಗೊಂದು ಹಬ್ಬ. ಅವರ ಸಂಪೂರ್ಣ ವ್ಯಕ್ತಿತ್ವವನ್ನು ಈ ಲೇಖನದಲ್ಲಿ ಕಾಣಿಸುವುದು ಪ್ರಸ್ತುತವೂ ಅಲ್ಲ. ನನ್ನ ಉದ್ದೇಶವೂ ಅಲ್ಲ. ಅವರ ಬದುಕಿನ ಅರವತ್ತು ವರ್ಷಗಳ ನಂತರ, ಷಷ್ಟಬ್ದಿ ಸಮಾರಂಭವನ್ನು ಸಾರ್ವಜನಿಕವಾಗಿ ಆಚರಿಸಿ, ಆಗಿನ ಕಾಲದಲ್ಲಿ ಹಮ್ಮಿಣಿಯನ್ನು ಅರ್ಪಿಸಿ, ಅವರ ಬಗ್ಗೆಯೇ ಸಂಭಾವನಾ ಗ್ರಂಥ ''ಸಂಪ್ರೀತಿ'' ಯನ್ನು ಪ್ರಕಟಿಸಿಯಾಗಿದೆ. (1965) ಶಿವರಾಮ ಕಾರಂತರಂಥ ನಿರ್ಭಿಡೆಯ ಸಾಹಿತ್ಯ ಲೋಕದ ದಿಗ್ಗಜರು ದಿ. ಗಣಪತಿ ಭಟ್ಟರನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಅವರ ಆಪ್ತವರ್ಗದವರಾಗಿದ್ದರು.

ಹಾಸಣಗಿ ಭಟ್ಟರು ಹುಟ್ಟಿದ್ದು ಪ್ರಾಯಶಃ 1906ರಲ್ಲಿ. ಅವರು ಸೂರ್ಯನಾರಾಯಣ ದೇವಸ್ಥಾನದ ಅರ್ಚಕಮನೆತನದವರು. ಸುಮಾರು 400 ವರ್ಷಗಳ ಹಿಂದೆ, ಕುಮಟಾ ತಾಲೂಕಿನ ಬೆತ್ತಗೇರಿಯಿಂದ ಬಂದ ಕುಟುಂಬ ಇವರದೆಂದು ಹೇಳುತ್ತಾರೆ. ಇಂದಿಗೂ ಹಾಸಣಗಿಯ ಕೇರಿಯಲ್ಲೇ ಅವರ ಮನೆ ಇದೆ. ಅವರ ಪುತ್ರ ಆರ್. ಜಿ. ಭಟ್ಟರೂ ಶಾಂತ ಸ್ವಭಾವದ ವ್ಯಕ್ತಿಗಳು. ಜನಪ್ರಿಯರು. ಅವರು ಆಗಿದ್ದು ಹಲಸಿನಕೊಪ್ಪದಲ್ಲಿ ವಾಸವಾಗಿದ್ದಾರೆ. ಗಣಪತಿ ಭಟ್ಟರು ಶಾಲೆ ಓದಿದ್ದು ಕಡಿಮೆ. ಸಂಸ್ಕೃತ ಅಭ್ಯಾಸ ತಕ್ಕಮಟ್ಟಿಗೆ ಆಗಿತ್ತು. ಆದರೆ ಅವರು ರಾಶಿ ರಾಶಿ ಪುಸ್ತಕಗಳನ್ನು ಅಧ್ಯಯನ ಮಾಡಿದ್ದರಿಂದ ಹಾಗೂ ಉತ್ತಮ ಚಿಂತಕರೂ ಆದ ಕಾರಣ, ವಾಗ್ಮೀ ಎಂದೇ ಹೆಸರು ಮಾಡಿದರು.

ಆಗಿನ ಕಾಲದಲ್ಲಿ ಯಕ್ಷಗಾನ ಎಲ್ಲರ ಬದುಕಿನ ಒಂಗು ಅಂಗವಾಗಿತ್ತು. ಆಟ ಎಂದರೆ ಯಕ್ಷಗಾನ ಆಟ ಎಂದೇ ಅರ್ಥವಾಗಿತ್ತು. ತಾಳಮದ್ದಳೆಗೆ ಜಾಗರ, ಪ್ರಸಂಗ ಎಂದೆಲ್ಲಾ ಕರೆಯುತ್ತಿದ್ದರು. ಅವರಿಗಿಂತ ವಯಸ್ಸಿನಲ್ಲಿ ಸ್ವಲ್ಪ ಚಿಕ್ಕವರಾದರೂ ಚಿಂತನ, ಓದು, ಪ್ರತಿಭೆಗಳಲ್ಲೆಲ್ಲ ಇವರಿಗೆ ಸರಿಸಾಟಿಯಾದ ದಿ. ಗೋಪಾಲಕೃಷ್ಣ ಭಟ್ಟರು (ಇವರು ಕೆಳಗಿನ ಮಂಚಿಕೇರಿಯ ದಿ. ಹಾಸ್ಯಗಾರ ರಾಮಚಂದ್ರ ಭಟ್ಟರ ಪುತ್ರ ) ಯಕ್ಷಗಾನ ತಾಳಮದ್ದಳೆಗಳಲ್ಲಿ ಇವರ ಸಮಜೋಡಿಯಾಗಿದ್ದರಂತೆ. ಸುಮಾರು 60 ವರ್ಷಗಳ ಹಿಂದೆ ಬೆದೆಹಕ್ಕಲಿನಲ್ಲಿ ಭೀಷ್ಮಾರ್ಜುನ ಪ್ರಸಂಗದಲ್ಲಿ ದಿ. ಭಟ್ಟರ ಕೌರವ ಹಾಗೂ ಗೋಪಾಲಕೃಷ್ಣ ಭಟ್ಟರ ಭೀಷ್ಮ ಬಹು ಚೆನ್ನಾದ ಜೋಡಿ ಆಗಿತ್ತೆಂದು ತೀರ ಹಳಬರು ನೆನಪು ಮಾಡಿಕೊಳ್ಳುತ್ತಾರೆ.



ಹರೆಯದಲ್ಲಿರುವಾಗಲೇ ಗೋಪಾಲಕೃಷ್ಣ ಭಟ್ಟರು ಮರಣ ಹೊಂದಿದ ನಂತರ ಯಕ್ಷಗಾನದಲ್ಲಿ ಶ್ರೇಷ್ಠ ಅರ್ಥದಾರಿಗಳಾದ ದಿ. ರಾಜಾರಾಮ ಮಾಸ್ತರರು ಇವರದು ಜೋಡಿ ಪ್ರಾರಂಭವಾಯಿತು. ಅವರ ಗರಡಿಯಲ್ಲಿಯೇ ತಯಾರಾದ ಸುಬ್ರಾಯ ಹೆಗಡೆ ಮಳಗಿಮನೆ, ಮಹಾಬಲೇಶ್ವರ ಹೆಗಡೆ, ಗೋರ್ಸಗದ್ದೆ ಇವರು ಭಟ್ಟರೊಡನೆ ಜೋಡಿ ಪಾತ್ರ ಮಾಡುತ್ತಿದ್ದರು.

ಹಾಸಣಗಿಯಲ್ಲೊಮ್ಮೆ ಕರ್ಣಪರ್ವ, ರಾಜಾರಾಮ ಮಾಸ್ತರರ ಕರ್ಣ, ಮಹಾಬಲೇಶ್ವರ ಹೆಗಡೆಯವರ ಕೌರವ, ಭಟ್ಟರದು ಶಲ್ಯ. ಕೌರವ ಶಲ್ಯನನ್ನು ಕರ್ಣ ಸಾರಥ್ಯಕ್ಕೆ ಒಪ್ಪಿಸಲು ಶಲ್ಯನ ಬಿಡದಿಗೆ ಹೋಗುತ್ತಾನೆ. ಕರ್ಣನಿಗೆ ತಾನು ಏನಾದರೂ ಸಾರಥ ಮಾಡುವುದಿಲ್ಲ ಎಂದು ಖಡಾ ಖಂಡಿತವಾಗಿ ಕುಳಿತು ಬಿಟ್ಟರು ಭಟ್ಟರು. ಅವರನ್ನು ವಾದದಲ್ಲಿ ಗೆದ್ದು ಒಪ್ಪಿಸುವುದು ಅಸಾಧ್ಯವಾದ ಮಾತಾಗಿತ್ತು. ಕೌರವ ಹೇಳಿದ 'ನೀನು ಬರದೆ ಇದ್ದರೆ ಕಟ್ಟಿಹಾಕಿಕೊಂಡು ರಥದ ಮೇಲೆ ಕೂಡ್ರಿಸುತ್ತೇನೆ' ಆಗ ಇವರಿಗೆ ಭಾಗವತರು ಸೂಚನೆ ಕೊಟ್ಟರಂತೆ. ಕಥೆಯಂತೆ ಪ್ರಸಂಗ ಸಾಗುವುದಾದರೆ ಶಲ್ಯ ಸಾರಥ್ಯಕ್ಕೆ ಒಪ್ಪಲೇಬೇಕು. ಇಲ್ಲವಾದರೆ ಪ್ರಸಂಗ ಮುಂದಕ್ಕೆ ಹೋಗುವುದೇ ಇಲ್ಲ. ಆಗ ಇವರು ಕೌರವನಿಗೆ ತಕ್ಷಣ ಹೇಳಿದರು - 'ನಿನಗೆ ನಾನು ಹೊಸದಾಗಿ ಕಟ್ಟುಬಿದ್ದಿಲ್ಲ ಈ ಮೊದಲೇ ಕಟ್ಟಿಹಾಕಿದ್ದೀಯಾ. ನಿನ್ನ ಉಪಚಾರಗಳಿಂದ, ಹಿಂದು ಮುಂದಿನ ವಿಚಾರಗಳನ್ನು ಮಾಡದೆ ನಿನ್ನಂಥವನನ್ನು ಒಪ್ಪಿ ಬಂದಿದ್ದೇನಲ್ಲ. ಈಗ ಹಿಂತಿರುಗುವವನಲ್ಲ. ಕರ್ಣ ಸಾರಥ್ಯ ಮಾಡುತ್ತೇನೆ. ಆದರೆ ನಿನ್ನ ಸಲುವಾಗಿ ಈ ಕ್ಷುಲ್ಲಕ ಕೆಲಸ ಮಾಡ ಹೊರಟ ನನ್ನ ಮಾತನ್ನು ಕರ್ಣ ನಡೆಸುವ ತನಕ ನಾನು ಅವನ ರಥದಲ್ಲಿರುತ್ತೇನೆಂದು ಪ್ರಸಂಗದ ವಾತಾವರಣವನ್ನು ತಿಳಿಯಾಗಿಸಿದರು.

ಯಾವ ಪ್ರಸಂಗದಲ್ಲಿಯೇ ಆದರೂ ಒಂದೇ ಪದ್ಯಕ್ಕೆ ಇಡೀ ರಾಮಾಯಣ, ಭಾರತ, ಭಾಗವತದ ಕತೆಗಳನ್ನೆಲ್ಲ ಸಂಪೂರ್ಣವಾಗಿ ಹೇಳುವ ಸಾಮರ್ಥ್ಯವಿತ್ತು. ಆದರೆ ಪ್ರಸಂಗ ಚೆನ್ನಾಗಿ ನಡೆಯಬೇಕಾದರೆ ಎದುರಾಳಿಗಳು ಮಾತನಾಡಬೇಕು. ಭಾಗವತ ಪದ್ಯಗಳನ್ನು ಹಾಡಬೇಕು. ಇದೆಲ್ಲ ಗೊತ್ತಿದ್ದುದರಿಂದ, ಬಾಳೆಹದ್ದದ ಭಾಗವತರು ಭಾಗವತಿಕೆ ಮಾಡುವಾಗ 'ಭಾಗೋತಾ ಕೆಲ ಕೆಲವು ಸಂದರ್ಭದಲ್ಲಿ ಅನು ಮಾತನ್ನ ನಿಲುಗಡೆಮಾಡ್ತೆ. ಆಗ, ನೀನು ನೋಡ್ಕಂಡು ಪದ್ಯಾ ಎತ್‌ಬಿಡು' ಎಂದು ಸೂಚನೆಯನ್ನು ನೀಡುತ್ತಿದ್ದರಂತೆ.

ಸಾಮಾನ್ಯವಾಗಿ ದಕ್ಷಿಣ ಕನ್ನಡದವರು ಸಂಭಾಷಣೆಗೆ ಮೇಲು ಎಂದು ಹೆಸರು ಮಾಡಿಯಾಗಿದ್ದಾರೆ. ಶೇಣಿ, ಸಾಮಗರು ತಾಳಮದ್ದಳೆಗೆ ಬಂದರೆ ಒಂದು ತಾಸಿಗೆ 5 ರಿಂದ ಆರು ಪದ್ಯಗಳು ಸಾಕು. ಆದರೆ ಈ ವಿಷಯದಲ್ಲಿ ದಾಖಲೆ ಮಾಡಿದವರು ದಿ. ಹಾಸಣಗಿ ಗಣಪತಿ ಭಟ್ಟರು ಎಂಬುದು ಅನೇಕರಿಗೆ ಗೊತ್ತಿಲ್ಲ. ಬಹುತೇಕವಾಗಿ ಈ ಘಟನೆ ನಡೆದಿದ್ದು ಕೆಳಗಿನ ಮಂಚಿಕೇರಿಯಲ್ಲಿರಬೇಕು. ಕೃಷ್ಣನಾಗಿ ದಿ. ಗೋಪಾಲಕೃಷ್ಣ ಭಟ್ಟರು, ದುರ್ಯೋದನನಾಗಿ ದಿ.



ಗಣಪತಿ ಭಟ್ಟರು, ಸಂಧಾನದ 'ಚರಣಾಬ್ಜದೆಡೆಯಲ್ಲಿ ನರನು ಕರಮುಗಿದು' ಈ ಪದ್ಯದಿಂದ ಪ್ರಾರಂಭವಾದ ತಾಳಮದ್ದಳೆ 'ಹರಿಯೆ ನೀ ಪಾಂಡವರ ಪಕ್ಷವೇ ಹೊರತು ನಮ್ಮೊಳಗಾಗುವೆಯ' ಈ ಪದ್ಯಕ್ಕೆ ಮುಕ್ತಾಯಗೊಂಡಿತು. ಏಕೆಂದರೆ, ಕೇವಲ ಇಷ್ಟೇ ಪದ್ಯಗಳಿಗೆ ರಾತ್ರಿ ಕಳೆದು ಬೆಳಗಾಗಿತ್ತು.

ಇನ್ನೊಂದು ಸಾರೆ ಕೃಷ್ಣ ಸಂಧಾನದಲ್ಲಿ ಇವರದು ಕೃಷ್ಣ. ಅವನು ಉಂಡು ಮಲಗಿದ್ದಾನೆ. ಕೌರವನು ಅರಸುಗಳ್ ತಾವೆಂದು ಮೌಳಿಯ ಬಳಿಯಲ್ಲಿ ಕುಳಿತಿದ್ದಾನೆ. ಆದ್ದರಿಂದ ಕೃಷ್ಣ ಮೊದಲು ನೋಡಿದ್ದು ಅರ್ಜುನನ್ನು. ನಂತರ ಕೌರವನನ್ನು ನೋಡಿದ್ದು. ಅವನನ್ನು ನೋಡಿದ ಕೂಡಲೇ ಅವನ ಮೇಲೆ ವಾಗ್ದಾಳಿಯನ್ನೇ ಆರಂಭಿಸಿದರು. 'ಕೌರವಾ ಎಷ್ಟು ದಿನದಿಂದ ಇಂಥ ಸಂದರ್ಭಕ್ಕಾಗಿ ಕಾಯುತ್ತಿದ್ದೆ? ನೀನು ನನ್ನ ಬೀಯಗ. ದ್ವಾರಕೆಯ ಜನಗಳಿಗೆಲ್ಲ ನೀನೇ ಮೊದಲು ಬಂದಿದ್ದು ಗೊತ್ತಿದೆ. ಆದರೆ ನೀನು ಕುಳಿತುಕೊಂಡಿದ್ದು ನನಗೆ ಕಾಣದ ಹಾಗೆ. ಊಟವಾಗಿ ಮಲಗಿದ ನನ್ನ ಕೋಣೆಗೆ ನೇರವಾಗಿ ಬಂದಿದ್ದೀಯಲ್ಲ. ಏನು ಕಾರಣ. ಮಧ್ಯಾಹ್ನದಲ್ಲಿ ಅತಿಥಿಗಳಿಗೆ ಊಟ ಹಾಕಿಸುವುದರಲ್ಲಿ ಸಂತೋಷ ಪಡುವುದನ್ನು ಬಿಟ್ಟು, ನೀನೇ ಊಟ ಮಾಡಿ ಮಲಗಿದ್ದೀಯಲ್ಲಾ ಎಂದು ನಿಂದಿಸಲೆಂದು ಈ ಅವೇಳೆಯಲ್ಲಿ ಬಂದೆಯಾ? ಒಂದು ವೇಳೆ ನೀವಿಬ್ಬರು ನನ್ನ ಸಹಾಯವನ್ನು ಯಾಚಿಸಲೆಂದು ಬಂದಿದ್ದಿದ್ದರೆ ಕ್ಷತ್ರಿಯ ಪದ್ಧತಿಯಂತೆ ಯಾರಿಗೆ ಮೊದಲು ಸಹಾಯ ಹಸ್ತವನ್ನು ನೀಡಬೇಕು? ನೀನು ಮೊದಲು ಬಂದಿದ್ದರೂ, ನನಗೇಕೆ ಕಾಣಿಸಿಕೊಳ್ಳಲಿಲ್ಲ? ಅರ್ಜುನನನ್ನೇ ನಾನು ಯಾಕೆ ಮೊದಲು ನೋಡುವಂತೆ ಮಾಡಿದೆ?' ಕೌರವ ಪಾತ್ರಧಾರಿಗೆ ಕೋಪಬಂತು. ಯಾವ ಹೊಲೆಯ ಇದಕ್ಕೆ ಅರ್ಥ ಹೇಳ್ತಾನೆಂದು ಎದ್ದು ಹೊರಟೇಬಿಟ್ಟರು.

ಅವರು ಕೊನೆ ಕೊನೆಯಲ್ಲಿ ಬಹುತೇಕ ತಾಳಮದ್ದಳೆಗಳಿಗೆ ಹೋಗುತ್ತಿದ್ದರೂ ಅಲ್ಲಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಬಿಡುತ್ತಿದ್ದರು. ಏಕೆಂದರೆ, ಅವರು ಅಧ್ಯಕ್ಷರಾಗಿ ಆ ಆ ಪ್ರಸಂಗಗಳ ಪ್ರತಿಯೊಂದು ಪಾತ್ರ ಹೇಗಿತ್ತು, ಹೇಗಿರಬೇಕಿತ್ತು? ಎಲ್ಲವನ್ನೂ ಕೂಲಂಕುಷವಾಗಿ ವಿಮರ್ಶೆ ಮಾಡಲಿಕ್ಕೆ ಅನುಕೂಲವಾಗುತ್ತಿತ್ತು. ಒಂದೇ ಪಾತ್ರವನ್ನು ನಿರ್ವಹಿಸಿದರೆ, ಆ ಪಾತ್ರ ಮಾತ್ರ ಹೊಸ ಹೊಸ ಚಿತ್ರಣವನ್ನು ನೀಡಲು ಸಾಧ್ಯ ಎಂದೇ ಸಂಘಟಕರು ಈ ಉಪಾಯ ಮಾಡುತ್ತಿದ್ದರು. ಎಷ್ಟೋ ಸಾರೆ ಅವರು ಹಾಸಿಗೆಯಲ್ಲಿ ಮಲಗಿಕೊಂಡೇ ಅರ್ಥಧಾರಿಗಳ ಮಾತನ್ನು ಆಲಿಸುತ್ತಿದ್ದರು. ಭೀಷ್ಮಾರ್ಜುನ ಪ್ರಸಂಗದಲ್ಲಿ ಕೌರವ ಭೀಷ್ಮರಿಬ್ಬರಿಗೂ ಎದುರಾಳಿಗಳನ್ನು ಕಟ್ಟಿ ಹಾಕುವ ಮಾತುಗಳನ್ನು ಹೇಳಿಕೊಟ್ಟಿದ್ದು ನಮಗೆ ನೆನಪಿದೆ.

ಅಧ್ಯಾತ್ಮದ ಸಾಧನೆಯನ್ನು ಸತತವಾಗಿ ಮಾಡುತ್ತಿದ್ದ ಅವರು ಭಗವದ್ಗೀತೆಯನ್ನು ಆಳವಾಗಿ ಅಭ್ಯಸಿಸಿದವರು. ಅಷ್ಟೇ ಸರಳವಾಗಿ ಲೌಕಿಕ ಉದಾಹರಣೆಗಳಿಂದ ಜನರಿಗೆ ತಲುಪುವಂತೆ ಮಾಡುತ್ತಿದ್ದರು. ಹಾಸಣಗಿಯಲ್ಲಿ ಅವರು ಅವಸಾನ ಕಾಲದ ಭೀಷ್ಮನಾಗಿ ಧರ್ಮರಾಜನಿಗೆ ತನ್ನ



ಉಳಿದೆಲ್ಲ ಮೊಮ್ಮಕ್ಕಳಿಗೆ ಹೇಳಿದ ಉಪದೇಶ ಅತ್ಯಂತ ಅಮೂಲ್ಯವಾದುದಾಗಿತ್ತು. ಇಂಥವರು ಎಷ್ಟು ಕಾಲವಿದ್ದರೂ ನಮಗೇ ಲಾಭವೇ ಆಗುತ್ತಲಿತ್ತು. ಆದರೆ 1970 ನೇ ಇಸ್ವಿಯ ನವೆಂಬರೆ 11 ರಂದು ದೈವಾಧೀನರಾದರು. ಅವರು ನಮ್ಮನ್ನಗಲಿ 34 ವರ್ಷಗಳು ಕಳೆದರೂ, ಅವರ ನೆನಪು ಸದಾ ಹಸಿರಾಗಿಯೇ ಇದೆ. ಇದಕ್ಕೆ ಕಾರಣ ಅವರ ವ್ಯಕ್ತಿತ್ವ.

## ರಂಗಗಳಲ್ಲೂ ಕೈಯಾಡಿಸಿದ ಸರ್ವಾಸಕ್ತ

# ಮಳಗೆಮನೆ ಸುಬ್ರಾಯ ಹೆಗಡೆಯವರು

ದಿ. ಸುಬ್ರಾಯ ಹೆಗಡೆಯವರ ಸಂಪೂರ್ಣ ಪರಿಚಯ ಇರುವವರಿಗೆ ಈ ಶೀರ್ಷಿಕೆ ಸರಿ ಎಂದು ಎನ್ನಿಸದಿರದು. ಇಂದು ಬೃಹದಾಕಾರವಾಗಿ ಬೆಳೆದು ನಿಂತ ಹಾಸಣಗಿ ಸೇವಾ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷರು, ರಾಜರಾಜೇಶ್ವರಿ ವಿದ್ಯಾ ಸಂಸ್ಥೆಯ ಪ್ರಥಮ ಗೌರವ ಕಾರ್ಯದರ್ಶಿಗಳು, ಯಕ್ಷಗಾನ ತಾಳಮದ್ದಳೆಯಲ್ಲಿ ಅರ್ಥಧಾರಿಗಳಾಗಿ ಮೆರೆದವರು. ನಾಟಕ ಪಾತ್ರಗಳನ್ನು ನಿರ್ವಹಿಸಿ ಉತ್ತಮ ಅಭಿನಯ ಪಟುವೆಂದು ಹೊಗಳಿಸಿಕೊಂಡವರು. ಊರಿನ ಅನೇಕ ಪಂಚಾಯಿಕೆಗಳನ್ನು ಸುಧಾರಿಸಿದವರು. ಭರತನಹಳ್ಳಿ ಸೀಮಾ ಮೇಳದ ಮ್ಯಾನೇಜರ ಆಗಿ ಕೆಲಸ ನಿರ್ವಹಿಸಿದವರು. ಇಷ್ಟಲ್ಲದೇ ಮೇಳ ಕಟ್ಟುತ್ತೇನೆಂದು ಛಲತೊಟ್ಟು ಯಕ್ಷಗಾನ ಮೇಳ ಕಟ್ಟಿದವರು, ಹೀಗೆ ಪಟ್ಟಿ ಮಾಡುತ್ತ ಹೋದರೆ ಅವರು ಎಲ್ಲವೂ ಹೌದು. ಅವರು ಚಿಕ್ಕವರಿರುವಾಗ, ಹಾಸಣಗಿ ಗಣಪತಿ ಭಟ್ಟರ (ಆಗಿನ ಕಾಲದಲ್ಲಿ ಭರತನಹಳ್ಳಿ ಸೀಮೆಯ ಅನಭಿಷಿಕ್ತ ದೊರೆಗಳು) ಮನೆಯಲ್ಲಿ ಹಾರ್ಮೋನಿಯಂ ಕಲಿಯಲು ಇದ್ದರಂತೆ. ಇವರ ತಂದೆ ಮಳಗಿಮನೆ ರಾಮಕೃಷ್ಣ ಹೆಗಡೆಯವರು. ಯಕ್ಷಗಾನ ಭಾಗವತರಾಗಿದ್ದವರು. ಅವರ ಮನೆಯ ಅನಂತನ ಚತುರ್ದಶಿಯ ರಾತ್ರೆ, ವರ್ಷಂಪ್ರತಿ ಜಾಗರ (ತಾಳಮದ್ದಳೆ) ವಾಗುತ್ತಿತ್ತು. ಇವರಿಗೆ ನಾಲ್ವರು ಗಂಡು ಮಕ್ಕಳು, ಐವರು ಹೆಣ್ಣು ಮಕ್ಕಳು. ಗಂಡು ಮಕ್ಕಳಲ್ಲಿ ಭಾಗವತಿಕೆಯನ್ನು ಕಲಿತ ಶ್ರೀ ಗಜಾನನ ಹೆಗಡೆಯವರೊಬ್ಬರೆ ಮನೆಯಲ್ಲಿದ್ದಾರೆ. ಅವರ ಹಿರಿಯ ಮಗ ರಾಮಕೃಷ್ಣ ಮದ್ದಲೆ ಕಲಿತಿದ್ದರು. ವೇಷ ಮಾಡುತ್ತಿದ್ದರು. ಆದರೆ ಅಕಾಲಿಕವಾಗಿ ಸತ್ತರು. 1914 ನೇ ಇಸ್ವಿಯಲ್ಲಿ ಹುಟ್ಟಿದ ಇವರು ಮೃತಪಟ್ಟಿದ್ದು 1990 ನೇ ಇಸ್ವಿಯಲ್ಲಿ. ರಾಜಕೀಯವಾಗಿಯೂ ತಾಲೂಕಾ ಬೋರ್ಡ್ ಸದಸ್ಯರಾಗಿದ್ದರು. ತುರ್ತು ಪರಿಸ್ಥಿತಿಯಲ್ಲಿ ಜೈಲಿಗೂ ಹೋಗಿ ಬಂದವರು. ಸ್ವಾತಂತ್ರ್ಯ ಹೋರಾಟಗಾರರು; ದಿ. ರಾಮಕೃಷ್ಣ ಹೆಗಡೆ, ದೊಡ್ಮನೆಯವರ ಕಟ್ಟಾ ಬೆಂಬಲಿಗರು.

ಸುಬ್ರಾಯ ಹೆಗಡೆಯವರು ಕರ್ಣಪರ್ವದ ಶಲ್ಯ, ಭೀಷ್ಮಾರ್ಜುನರ ಭೀಷ್ಮ, ಸಂಧಾನದ



ವಿದುರ, ಸೀತಾಪಹಾರದ ಜಟಾಯು, ಸುಭದ್ರಾ ಕಲ್ಯಾಣದ ಬಲರಾಮ, ಸಂಧಾನದ ದ್ರೌಪದಿ ಹೀಗೆ ವಿಧವಿಧದ ಪಾತ್ರಗಳ ಅರ್ಥವನ್ನು ಯಕ್ಷಗಾನರಂಗದಲ್ಲಿ ಹೇಳಿ, ಹೆಸರು ಮಾಡಿದವರು. ಯಕ್ಷಗಾನದಲ್ಲಿ ಅರ್ಥಗಾರಿಕೆ ಹೇಗಿರಬೇಕೆಂಬುದಕ್ಕೆ ಆದರ್ಶಪ್ರಾಯರು. ಗೋಕರ್ಣದ ದಿ. ರಾಜಾರಾಮ ಮಾಸ್ತರರು ಇಲ್ಲಿಯ ಜನಕ್ಕೆ ಆದರ್ಶಪ್ರಾಯರು. ಅವರು, ಹಾಸಣಗಿ ಶಾಲೆಗೆ ಮಾಸ್ತರರಾಗಿ 1920ರಲ್ಲಿ ಬಂದಾಗ ಅವರಿಂದ ಅರ್ಥಗಾರಿಕೆಯನ್ನು ಕಲಿತವರಲ್ಲಿ ಸುಬ್ರಾಯ ಹೆಗಡೆಯವರೂ ಒಬ್ಬರು.

ದಿ. ಹಾಸಣಗಿ ಗಣಪತಿ ಭಟ್ಟರು ರಾಜಾರಾಮ ಮಾಸ್ತರರ ಜೋಡಿ ಹೆಸರುವಾಸಿಯಾಗಿತ್ತು. ಗೋಕರ್ಣದಿಂದಲೂ, ಬರವಣಿ ಮಾಸ್ತರರು, ಬೈಲಕೇರಿ ಪರಮೇಶ್ವರ ಭಟ್ಟರು ಮುಂತಾದವರು ಅರ್ಥದಾರಿಗಳಾಗಿ ಬರುತ್ತಿದ್ದರು. ಮೊದಲಿನ ಕಾಲದವರಿಗೆ ಯಕ್ಷಗಾನ ಬಗ್ಗೆಯೇ ಪ್ರೀತಿಯಿತ್ತೇ ವಿನಃ ವ್ಯಕ್ತಿ ಪೂಜೆ ಇರುತ್ತಲೇ ಇರಲಿಲ್ಲ. ಪಾತ್ರಕ್ಕೆ ನ್ಯಾಯವನ್ನು ಒದಗಿಸುವ ಪ್ರಯತ್ನವನ್ನು ಪ್ರತಿಯೊಬ್ಬರೂ ಮಾಡುತ್ತಿದ್ದರು. ಹಾಗೆ ಅಂತ ಒಬ್ಬರನ್ನೊಬ್ಬರು ಚುಚ್ಚುವುದೂ ಇದ್ದಿಲ್ಲವೆಂತಲ್ಲ.

ಮಳಗಿಮನೆ ಹೆಗಡೆಯವರು ಸಿಟ್ಟಿನ ಸನ್ನಿವೇಶವನ್ನು ತುಂಬ ಸಹಜವಾಗಿ ಅಭಿನಯಿಸುತ್ತಿದ್ದರು. ಉಳಿದವರಿಗಿಂತ ಪಾತ್ರವನ್ನು ಭಿನ್ನವಾಗಿ ಅರ್ಥೈಸುವ ಪ್ರಯತ್ನ ಮಾಡುತ್ತಿದ್ದರು. ಶಲ್ಯನಾಗಿ ಅವರು ಕರ್ಣಪರ್ವದಲ್ಲಿ ಗಿರಣಿಮನೆಯಲ್ಲಿ ಅಭಿನಯಿಸಿದ್ದು ಇನ್ನೂ ಹಸಿಹಸಿಯಾಗಿ ನೆನಪಿದೆ. ನಮಗೆ ಕಥೆ ಸರಿಯಾಗಿ ಗೊತ್ತಿರಲಿಲ್ಲವಾಗಿತ್ತು. ಮಹಾಬಲೇಶ್ವರ ಹೆಗಡೆಯವರ ಕೌರವ. ರಾತ್ರೆ ಶಲ್ಯನ ಮನೆಗೆ ಸಾರಥ್ಯಕ್ಕಾಗಿ ಒಪ್ಪಿಸಲು ಬಂದ ಸನ್ನಿವೇಶ. ''ನಿನ್ನ ಸಂಕಟವನ್ನು ಪರಿಹರಿಸುವ ಸತ್ವ ಎನಗುಂಟು ಕೇಳು'' ಎಂದು ದಾರ್ಷ್ಟ್ಯದಿಂದ ಕೇಳುತ್ತಿದ್ದರು. ತಾನೂ ಒಬ್ಬ ರಾಜ. ಆದ್ದರಿಂದ ತನ್ನ ಬಳಿ ಪ್ರಾರ್ಥಿಸಲು ಬಂದವನಿಗೆ ತನ್ನ ಸಾಮರ್ಥ್ಯ ಎಷ್ಟಿದೆ ಎಂಬುದನ್ನು ತೋರಿಸಲೆಂದೇ ಬೇಕಾದದ್ದನ್ನು ಕೇಳು ಎಂದರು. ಆಗ ಕರ್ಣನಿಗೆ ಸಾರಥಿಯಾಗು ಎಂದ ಕೂಡಲೇ ಶಲ್ಯನಿಗೆ ಸಿಟ್ಟು ಬಂತು. ''ಕುಲಗೆಡಕ ಅವ. ಅವನಿಗೆ ನಾನು ಸಾರಥ್ಯ ಮಾಡುವುದೇ'' ಎಂದು ಕೋಪಿಸಿಕೊಂಡೇ ಹೇಳಿದರು. ಅಂತೂ ಕೌರವ ಶಲ್ಯನನ್ನು ಒಪ್ಪಿಸಿಯಾಯಿತು. ಮುಂದೆ, ಕರ್ಣ - ಶಲ್ಯರ ವಾಗ್ವಾದ ಪ್ರಾರಂಭವಾಯಿತು. 'ಕರ್ಣ' ಶೀಗೇಮನೆ ನಾರಾಯಣ ಹೆಗಡೆಯವರದು. ಅರ್ಜುನನ್ನು ತೋರಿಸಿರಿ. ಹೊನ್ನಕೊಡುತ್ತೇನೆಂದು ಸೇನೆಯವರಿಗೆಲ್ಲ ಕರ್ಣ ಹೇಳುತ್ತಿರುವಾಗ ಶಲ್ಯನು ''ನಿನಗೆ ನರನ ತೋರ್ಪವಿತ್ತ ಎನಗೆ ಕೊಡಲು ಬೇಡ, ಅವನ ಕೊಡುವೆನೆನುವ ಪೌರುಷವನು ಬಿಡು ಬಿಡೆನಜನೆ'' ಈ ಪದ್ಯದಿಂದ ಶುರುವಾಯಿತು; ವಾಗ್ವಾದ. ನಮಗೆ ಕರ್ಣ, ಶಲ್ಯರು ವಾದ ಪ್ರತಿವಾದ ಮಾಡಿಕೊಳ್ಳುವ ಸಂದರ್ಭ ಗೊತ್ತೇ ಇರಲಿಲ್ಲ. ಕೊನೆಯಲ್ಲಿ ರಥದಿಂದ ಇಳಿದು ಹೊರಟ ಶಲ್ಯನನ್ನು ಕತ್ತಿಯಿಂದ ಕಡಿಯ



ಹೊರಟ ಕರ್ಣ, ,ನಾವು ನಿಜವಾಗಿ ಇವರೀರ್ವರಲ್ಲಿ ವೈಮನಸ್ಸುವಿದ್ದುದರಿಂದಲೇ ಹೀಗೆ ಪ್ರಸಂಗವನ್ನು ತಿರುಗಿಸಿದ್ದಾರೆಂದುಕೊಂಡೆವು. ಅಷ್ಟರಲ್ಲಿ ಕೌರವ ಬಂದು ''ಭಳಿರೆ ಸಹಸಿಗರಹುದು ...'' ಎಂದು ಇಬ್ಬರನ್ನು ಸಮಾಧಾನಪಡಿಸುತ್ತಾನೆ. ಆಗ ಶಲ್ಯ ''ನಿನ್ನಯ ಬಿಳಿನಗೆಗೆ ಸಿಲುಕಿ ..'' ಪದ್ಯದ ಅರ್ಥವನ್ನು ಎಷ್ಟು ಚೆನ್ನಾಗಿ ಸಹಜವಾಗಿ ಹೇಳಿದರೆಂದರೆ ನಾವು ನಿಜವಾಗಿಯೂ ಶಲ್ಯನ ಬಗ್ಗೆ ಮರುಕ ಪಟ್ಟೆವು. ಅಂತೂ ಕೌರವ ಬಂದಿದ್ದಕ್ಕೆ ಪ್ರಸಂಗ ಸೌಹಾರ್ದಯುತವಾಗಿ ಬಗೆಹರಿಯಿತು ಎಂದುಕೊಂಡೆವು. ಈ ರೀತಿ ಮನಮುಟ್ಟುವಂತೆ ಕೃಷ್ಣಸಂಧಾನದ ದ್ರೌಪದಿಯನ್ನು ಗೋರ್ಸಗದ್ದೆಯಲ್ಲಿ ಹೇಳಿದ್ದು ನನಗೆ ನೆನಪಿದೆ. ಆಗ ರಾಜಾರಾಮ ಮಾಸ್ತರರ ಭೀಮ. ದ್ರೌಪದಿಯ ದುಃಖವನ್ನು ಮತ್ತು ಕೊನೆಯಲ್ಲಿ ರೋಷವನ್ನು ಚೆನ್ನಾಗಿ ಪ್ರಕಟಿಸಿದ್ದರು ಮಳಗಿಮನೆ ಹೆಗಡೆಯವರು. ಭೀಷ್ಮಾರ್ಜುನದ ಭೀಷ್ಮನ ಪಾತ್ರವೂ ಅವರದು ಚೆನ್ನಾಗಿಯೇ ಆಗುತ್ತಿತ್ತು. ಆದರೆ ಕರ್ಣನಂಥ ಪಾತ್ರ ಬಹುಶಃ ಅಷ್ಟೆಲ್ಲ ಪ್ರಭಾವಶಾಲಿಯಾಗಿರುತ್ತಿರಲಿಲ್ಲ. ಎಲ್ಲ ಬಗೆಯ ಪಾತ್ರಗಳನ್ನು ಅವರು ಮಾಡಲು ಯಾಕೆ ಸಾಧ್ಯವಾಯಿತೆಂದರೆ ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದ ಅನುಭವ. ಪದ್ಮಿನಿ ನಾಟಕದ ಅಲ್ಲಾಉದ್ದೀನ, ರುಕ್ಮಿಣಿ ನಾಟಕದ ಉದಯನ ಈ ಪಾತ್ರಗಳ ಉಪಯೋಗವನ್ನು ಯಕ್ಷಗಾನದಲ್ಲಿ ಚೆನ್ನಾಗಿ ಮಾಡಿಕೊಂಡಿದ್ದರು. ಕಳಚೆಯಲ್ಲಿ ಕೃಷ್ಣಸಂಧಾನ ಶೀಗೇಮನೆಯವರದು ಕೃಷ್ಣ, ಹಸ್ರಗೋಡು ಲಕ್ಷ್ಮೀನಾರಾಯಣ ಹೆಗಡೆಯವರದು ಕೌರವ, ಮಳಗಿಮನೆಯವರದು ವಿದುರ. ಕೃಷ್ಣನನ್ನು ಕಂಡಾಗಿನ ವಿದುರನ ಭಕ್ತಿಭಾವ ಇವರು ಬಳಸುವ ಸರಳ ಭಾಷೆಯಿಂದಾಗಿ ಜನರ ಮನ ತಟ್ಟಿತ್ತು. ಕುಲವಿಹೀನನು ವಿದುರ ಗೋವಳನು ನಿಮಗಿಬ್ಬರಿಗೆ ಜೊತೆ ಸರಿ ಎಂದು ಮಾತಿನಲ್ಲಿ ಚುಚ್ಚಿದಾಗ ಎಲ್ಲಿತ್ತೋ ಆವೇಶದ ಸಿಟ್ಟು! ಹೆಡೆ ತುಳಿದ ಕಾಳಿಂಗ ಸರ್ಪ ಎದುರುಕಡೆ ನಿಂತು ಭುಸುಗುಟ್ಟುವಂತೆ, ಮೊಣಕಾಲನ್ನು ಮಾತ್ರ ವಾರಿ ''ಎಲವೋ ಕೌರವ ಮದ ಗರ್ವದಿ'' ಎಂಬಿತ್ಯಾದಿ ಪದ್ಯಗಳನ್ನು ಏರು ಸ್ವರದಲ್ಲಿ ಹೇಳಿದ್ದನ್ನು, ಅಷ್ಟೇ ದುಃಖದಲ್ಲಿ , ''ನಿನ್ನತಲೆಕಾಯಬೇಕೆಂದು ಇಟ್ಟ ಬಿಲ್ಲನ್ನು ಮುರಿಯುತ್ತೇನೆಂದು'' ಹೇಳಿ ಬಿಲ್ಲನ್ನು ಮುರಿದಿದ್ದ ಅಭಿನಯವನ್ನು ನಿಜವಾಗಿ ಮರೆಯಲು ಸಾಧ್ಯವಿಲ್ಲ.

ಮಳಗಿಮನೆ ಹೆಗಡೆಯವರದು ಉತ್ತಮ ಕೃಷಿಯೂ ಹೌದು. ಸುಮಾರು 4.5 ಎಕರೆ ತೋಟಕ್ಕೆ 70 ಕ್ವಿಂಟಲ್ ಅಡಿಕೆ , 13 ಕ್ವಿಂಟಲ್ ಕಾಳು ಮೆಣಸು ಬೆಳೆದು ತೋರಿಸಿದವರು. ಅವರ ಸಂಗಡ ನಾವೆಲ್ಲ ಭತ್ತದ ಬೆಳೆಯನ್ನು ವೀಕ್ಷಿಸಲು, ಅಡಿಕೆ ತೋಟದ ಮಾದರಿ ಹೇಗಿರಬೇಕೆಂಬುದನ್ನು ತಿಳಿದುಕೊಳ್ಳಲು ಹೋಗುತ್ತಿದ್ದೆವು.

ಇವರ ಕೊನೆಯ ದಿನಗಳು ಅಷ್ಟೊಂದು ಸುಖಕರವಾಗಿರಲಿಲ್ಲ. ಆದರೂ ಇವರು ಮಾಡಿದ ಕಾರ್ಯಗಳ ಋಣ ಸಮಾಜಕ್ಕಿದೆ ಎಂದೇ ನಮ್ಮ ನಂಬಿಕೆ.

ಮಳಗಿಮನೆ ಹೆಗಡೆಯವರದು ನೀಳವಾದ ಸಣಕಲು ವ್ಯಕ್ತಿತ್ವ. ಅಪ್ಪಟ ಖಾದಿಧಾರಿಗಳಾದ



ಇವರು ಅಪ್ರತಿಮ ಧೈರ್ಯಶಾಲಿಗಳು. ಯಾವ ಸಂದರ್ಭದಲ್ಲಿಯೂ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿಲ್ಲವಾಗಿತ್ತು. ಇತರರನ್ನು ಬಯ್ಯುವುದರಿಂದ ಹಿಡಿದು, ಹೊಗಳುವವರೆಗೆ ಇವರು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ತುಂಬಾ ಶ್ರದ್ಧೆಯಿತ್ತು ಇವರಿಗೆ.

## ಪ್ರೇಕ್ಷಕರನ್ನು ರಂಜಿಸಿದ್ದ
## *ಗೋರ್ಸಗದ್ದೆ ಮಹಾಬಲೇಶ್ವರ ಹೆಗಡೆಯವರು*

ಹಳ್ಳಿಯ ವ್ಯಾಪಾರಿಗಳೂ, ವಿವಾದಗಳನ್ನು ಬಗೆಹರಿಸಲು ಪಂಚಾಯತಿಗೆಗೆ ಕರೆಯಲು ಅತ್ಯಂತ ಸೂಕ್ತ ವ್ಯಕ್ತಿಯೂ ಆದ ಇವರನ್ನು ನೋಡಿದ ಕೂಡಲೇ ಇವರೊಬ್ಬ ಕಲಾವಿದರೆಂದು ಹೇಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬೇಸಿಗೆಯ ಸುಡು ಬಿಸಿಲಿನಲ್ಲಿಯೂ ಕರೇ ಕೋಟು, ಧೋತರ, ಖಾಕಿ ನಮೂನೆಯ ಟೊಪ್ಪಿ ಗೋರ್ಸಗದ್ದೆ ಮಹಾಬಲೇಶ್ವರ ಹೆಗಡೆಯವರ ದಿರುಸು. ನಮ್ಮ ಭಾಗದಲ್ಲಿ ಗೋರ್ಸಗದ್ದೆಯ ಮನೆತನ ಅತ್ಯಂತ ಸುಸಂಸ್ಕೃತವಾದ ಮನೆತನವೆಂದು ಪ್ರಸಿದ್ಧಿ ಇದೆ. ಈ ಮನೆತನದಲ್ಲಿ ಜನಿಸಿದ ಪ್ರತಿಯೊಬ್ಬರಲ್ಲೂ ಕಲಾವಿದನಿರುತ್ತಿದ್ದ. ಈಗಲೂ ಆ ಮಾತು ಸತ್ಯ. ಸಾಧಾರಣವಾಗಿ ಎಲ್ಲರೂ ಚೆನ್ನಾಗಿ ಹಾಡಬಲ್ಲರು. ಪ್ರಸಿದ್ಧ ಹಿಂದುಸ್ಥಾನಿ ಗಾಯಕ ಶ್ರೀ ಗಣಪತಿ ಭಟ್ಟ ಹಾಸಣಗಿ (ಇವರು ದತ್ತಕಕ್ಕೆ ಹೋದವರು) ಇವರು ಶ್ರೀ ಮಹಾಎಲೇಶ್ವರ ಹೆಗಡೆಯವರ ತಮ್ಮ ವೆಂಕಟ್ರಮಣ ಹೆಗಡೆ (ಇವರೂ ಭಾಗವತಿಕೆ ಮಾಡುತ್ತಿದ್ದರು) ಯವರ ಪುತ್ರ.

ಇಂಥ ಸುಸಂಸ್ಕೃತ ಮನೆತನದಲ್ಲಿ ಜನಿಸಿದವರು ಮಹಾಬಲೇಶ್ವರ ಹೆಗಡೆಯವರು. ಅವರ ಅಣ್ಣ ರಾಮಚಂದ್ರ ಹೆಗಡೆಯವರಿಗೆ ಜನರು ಧರ್ಮರಾಜನೆಂದೇ ಕರೆಯುತ್ತಿದ್ದರು. ನಾಟಕ ಮಾಡಲಿಕ್ಕೂ, ಯಕ್ಷಗಾನದಲ್ಲಿ ಅರ್ಥ ಹೇಳಲಿಕ್ಕೂ ಹಿರಿಯರ ಪ್ರೋತ್ಸಾಹವಿತ್ತು. ಮಳಿಗೆ ಹೆಗಡೆಯವರಿಗಿಂತ ಕೇವಲ ನಾಲ್ಕು ವರ್ಷ ಕಿರಿಯವರಾದ ಇವರೂ, ಶ್ರೀ ರಾಜಾರಾಮ ಮಾಸ್ತರರ ಗರಡಿಯಲ್ಲಿ ಪಳಗಿದವರೇ.

ಯಕ್ಷಗಾನದಲ್ಲಿ ಕೌರವನ ಅರ್ಥಕ್ಕೆ ಹೆಸರುವಾಸಿಯಾಗಿದ್ದ ಇವರ ಬೇರೆ ಪಾತ್ರವನ್ನು ನೋಡಿದ ನೆನಪು ನನಗಿಲ್ಲ. ಕೃಷ್ಣ ಸಂಧಾನದಲ್ಲಿ ಕೌರವ, ಭೀಷ್ಮಾರ್ಜುನದಲ್ಲಿ ಕೌರವ, ಕರ್ಣಪರ್ವದಲ್ಲಿಯೂ ಕೌರವ. ಇವರಿಗಿದ್ದ ಭಾವಪ್ರಕಟಣಾ ಸಾಮರ್ಥ್ಯ ಬಹುಶಃ ಬೇರೆ ಯಾರಲ್ಲೂ ಕಾಣಸಿಗಲಿಕ್ಕಿಲ್ಲ.

ನೋಡಲು ಗಂಭೀರವಾಗಿ ಕಂಡರೂ, ಸಮಯ ಸಂದರ್ಭ ನೋಡಿ ಬೇಕಾದಷ್ಟು



ಶ್ರೀ ಶ್ರೀಗಳವರಿಂದ 'ಫಲ ತಾಂಬೂಲ' ಸ್ವೀಕರಿಸುತ್ತಿರುವ ಭಾಗವತ ದಂಪತಿಗಳು



ಭಾಗವತರಿಗೆ ಶಾಲು ಹೊದೆಸಿ, ಉಂಗುರ ತೊಡಿಸಿ ಆಶೀರ್ವದಿಸುತ್ತಿರುವ ಶ್ರೀ ಶ್ರೀಗಳು



ಸಚಿವ ಶ್ರೀ ಬಸವರಾಜ ಹೊರಟ್ಟಿಯವರಿಂದ ಭಾಗವತರು ಸನ್ಮಾನ ಸ್ವೀಕರಿಸುತ್ತಿರುವುದು



ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯ ಅಧ್ಯಕ್ಷ
ಶ್ರೀ ಶಂಭು ಹೆಗಡೆ, ಕೆರೆಮನೆಯವರು ಭಾಗವತರನ್ನು ಸನ್ಮಾನಿಸುತ್ತಿರುವುದು



ಉಡಿ ತುಂಬುತ್ತಿರುವ ಮಕ್ಕಳಾದ
ಶ್ರೀಮತಿ ನಾಗವೇಣಿ ಶ್ರೀಪಾದ ಹಾಗೂ ಶ್ರೀಮತಿ ಮಹಾದೇವಿ ವೆಂಕಟ್ರಮಣ



ಬಲ್ಲಿರೇನೈ 'ಭಾಗವತ' ರ ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಿ
ಮಾತನಾಡುತ್ತಿರುವ ಶ್ರೀ ವಿ. ಟಿ. ಹೆಗಡೆ, ಶೀಗೇಹಳ್ಳಿ




ಉಡುಪಿಯಲ್ಲಿ ಡಾ॥ ಬಿ. ಬಿ. ಶೆಟ್ಟಿ ಸಂಸ್ಕರಣ ಸಮಾರಂಭದ
ಹಿಮ್ಮೇಳ ವೈಭವ'ದಲ್ಲಿ ಭಾಗವತರು (ಮಧ್ಯದಲ್ಲಿ)



ಭಾಗವತ ಕುಟುಂಬದ ಅಭ್ಯುದಯ ಬಯಸಿ ವೈದಿಕರಿಂದ ಗಣಹವನ - ಪೂರ್ಣಾಹುತಿ ದೃಶ್ಯ



ವಿನೋದವನ್ನು ಮಾಡಬಲ್ಲವರು ಇವರಾಗಿದ್ದರು. ಪಂಚಾಯತಿಕೆಗಳಲ್ಲಿ ಮಾತ್ರ ಇವರು ಎಲೆ ಅಡಿಕೆಯನ್ನು ಬಾಯಲ್ಲಿಟ್ಟುಕೊಂಡು ತಾಸೆರಡು ತಾಸು ಇರುತ್ತಿದ್ದರು. ಆದರೆ ಕೊನೆಯ ನಿರ್ಣಯ ಇವರದೇ. ಅಷ್ಟೊಂದು ತೂಕದ ವ್ಯಕ್ತಿತ್ವ ಇವರದು.

ಪದ್ಮಿನಿ ನಾಟಕದಲ್ಲಿ ಕಿರಣರಾಯ, ರುಕ್ಮಿಣಿ ನಾಟಕದಲ್ಲಿ ಶಿಶುಪಾಲ ಇವರು ನಟಿಸಿದ ಶ್ರೇಷ್ಠ ನಾಟಕ ಪಾತ್ರಗಳು. ಇವೆರಡೂ ಯಕ್ಷಗಾನದ ತಾಳಮದ್ದಳೆಗೆ ತುಂಬ ಸಹಕಾರಿಯಾಗಿರಬೇಕೆಂದು ನನ್ನ ಅನಿಸಿಕೆ.

ಇವರಿಗೆ ತಾಳದ ಮೇಲೂ ಹಿಡಿತವಿತ್ತು. ಎಲ್ಲಕ್ಕಿಂತ ಸ್ವರಾನುಕೂಲ ತುಂಬಾ ಇತ್ತು. ಬಾಳೆಹದ್ದದ ಭಾಗವತರು ಹೇಳುವಂತೆ 'ಮಾಬ್ಲೇಶ್ವರ ಭಾವ ಅರ್ಥ ಹೇಳ್ಲಿಕ್ಕೆ ಹತ್ತದ್ರೆ ಶ್ರುತಿ ಹುಡ್ಕೋ ಕೆಲ್ಸಿಲ್ಲೆ.' ಭಾಗವತರು ಹಾಡುವ ಶ್ರುತಿಗೇ ಇವರು ಅರ್ಥವನ್ನು ಹೇಳುತ್ತಿದ್ದರು. ಕರ್ಣಪರ್ವದ ಕೌರವ ಎಷ್ಟು ಪ್ರಸಿದ್ಧಿಯಾಗಿತ್ತೆಂದರೆ, ಆ ಕೌರವನ ಪಾತ್ರ ಎಂಥ ಸಂದರ್ಭದಲ್ಲಿಯೂ ಇವರಿಗೇ ಮೀಸಲಾಗಿತ್ತು. 'ಯಾತಕೋಸುಗ ಮೌನವಿಡಿದು ಬಳಲುವಿರಿನ್ನು' ಈ ಪದ್ಧತಿಯಿಂದ ನಾವು ನೋಡಿದ ದಾನಶೂರಕರ್ಣ ಪ್ರಸಂಗದ ತಾಳಮದ್ದಳೆ ಪ್ರಾರಂಭವಾಗುತ್ತಿತ್ತು. 'ಹಾ ವಿಧಿಯೇ ಈ ಪರಿಯಾಗಿ ಮುನಿಯುತ್ತಿರುವೆಯಾ, ನಿನ್ನ ಒಲುಮೆಯ ಆಘಾತವನ್ನು ಈ ದೀನನು ಸಹಿಸುವದೆಂತು' ಎಂಬುದಾಗಿ ಮಹಾಬಲೇಶ್ವರ ಹೆಗಡೆಯವರು ಕೌರವನ ಪೀಠಿಕೆಯನ್ನು ಪ್ರಾರಂಭಿಸಿದರೆಂದರೆ, ಸಭೆ ಒಮ್ಮೆಲೆ ನೀರವವಾಗಿ ಅವರ ಮಾತುಗಳನ್ನೇ ಆಲಿಸುತ್ತಿತ್ತು. ಮುಂದೆ ಶಲ್ಯನನ್ನು ಒಡಂಬಡಿಸುವ ಕೌರವನ ರೀತಿ ಬಹು ಸುಂದರವಾಗಿತ್ತು. ಕರ್ಣ ಸಾರಥ್ಯವನ್ನು ಮಾಡುವದಿಲ್ಲವೆಂದು ಪಟ್ಟು ಹಿಡಿದ ಶಲ್ಯನನ್ನು ಅವನ ಮಾತಿನಲ್ಲಿಯೇ ಕಟ್ಟಿಹಾಕಿ ಅವನನ್ನು ಒಪ್ಪಿಸುವ ರೀತಿ ಎಷ್ಟೋ ಪಂಚಾಯತಿಕೆಗಳಲ್ಲಿ ಜನರನ್ನು ಒಪ್ಪಿಸಲು ಸಹಾಯವಾಗಿರಲಿಕ್ಕೆ ಸಾಕು. ಮುಂದೆ, ಕರ್ಣ , ಶಲ್ಯರು ವಾಗ್ವಾದ ಮಾಡುತ್ತ ಶಲ್ಯನು ರಥದಿಂದಿಳಿದು ಹೊರಟಾಗ ಕರ್ಣ ಅವನನ್ನು ಕತ್ತಿಯಿಂದ ಹೊಡೆಯಲುದ್ಯುಕ್ತನಾಗುತ್ತಾನೆ. ಆಗ 'ಭಳಿರೆ ಸಾಹಸಿಗಳಹುದು' ಎಂಬ ಪದ್ಯವನ್ನು ಕವಿ ಬಹುಶಃ ಮುಂದೊಂದು ಕಾಲದಲ್ಲಿ ಮಹಾಬಲೇಶ್ವರ ಹೆಗಡೆ ಎನ್ನುವರು ಈ ಪಾತ್ರ ಮಾಡುವವರಿದ್ದಾರೆಂದೇ ಬರೆದಿರಲಿಕ್ಕೆ ಸಾಕು ಎಂಬಂತೆ ಭಾವವನ್ನು ಪ್ರಕಟಿಸುತ್ತ, ಸಂಭಾಷಣೆಯನ್ನು ಹೆಣೆಯುತ್ತಿದ್ದರು. ಪಾತ್ರಕ್ಕೆ ಜೀವವನ್ನು ತುಂಬುವುದು ಇವರ ವೈಶಿಷ್ಟ್ಯ. ಭೀಷ್ಮಾರ್ಜುನ ಪ್ರಸಂಗದ ಕೌರವ ಇದಕ್ಕಿಂತ ಭಿನ್ನವಾದದ್ದು. ಈ ಪ್ರಸಂಗದಲ್ಲಿಯೂ ಸಾಮಾನ್ಯವಾಗಿ ಇವರ ಕೌರವ ಪೀಠಿಕೆಯಿಂದಲೇ ಪ್ರಸಂಗದ ಪ್ರಾರಂಭ. ಈ ಪ್ರಸಂಗದ ಕೌರವ ತನ್ನ ಮುತ್ಸದ್ದಿತನವನ್ನು ಮೆರೆಯುತ್ತಾನೆ. ಪಾಂಡವರ ಶಿಬಿರಕ್ಕಾಗಿ ಹೋಗುತ್ತಿರುವ ಮಾವ ಶಲ್ಯನನ್ನು ಅವನಿಗೆ ಬೇಕಾದ ಉಪಚಾರ ಮಾಡಿ ತನ್ನೆಡೆಗೆ ಸೆಳೆದುಕೊಳ್ಳುತ್ತಾನೆ. ಆದರೆ, ರಾತ್ರಿಯ ಸಭೆಯಲ್ಲಿ 'ಯಾರು ಸೇನಾಧೀಶರಿಹರು ನಮ್ಮಯ



ಬಲದಿ' ಎಂದು ಶಲ್ಯನನ್ನು ಕೇಳುತ್ತಾನೆ. ಆಗ ಶಲ್ಯನಿಗೆ ತನ್ನನ್ನು ಸೇನಾಧಿಪತಿಯನ್ನಾಗಿ ಮಾಡು ಎನ್ನುವುದು ಕಷ್ಟವಾಗುತ್ತದೆ. ಅವನೇ ಭೀಷ್ಮನು ಸೇನಾಧಿಪತಿಯಾಗಲಿಕ್ಕೆ ಸಮರ್ಥನೆಂದು ಹೇಳುತ್ತಾನೆ. ಮುಂದೆ ಕೌರವನು ಭೀಷ್ಮನೆಡೆಗೆ ಅಜ್ಜನ ಬಳಿ ತೆರಳುವ ಮೊಮ್ಮಗನ ರೀತಿಯಲ್ಲಿಯೇ ಮಿತ ಪರಿವಾರದೊಂದಿಗೆ ಹೋಗಿ ಭೀಷ್ಮನಲ್ಲಿಗೆ ಓರ್ವನೇ ತೆರಳುತ್ತಾನೆ. ಭೀಷ್ಮ ಅವನಿಗೆ ಬುದ್ಧಿವಾದ ಹೇಳತೊಡಗುತ್ತಾನೆ. ಆಗ ಕೌರವ ಚಾಣಾಕ್ಷತನದಲ್ಲಿ ಉತ್ತರಿಸಬೇಕಾಗುತ್ತದೆ. ಕೃಷ್ಣನು ಅರಣ್ಯದಲ್ಲಿ ಪಾಂಡವರನ್ನು ರಕ್ಷಣೆ ಏಕೆ ಮಾಡಲಿಲ್ಲವೆಂಬುದನ್ನಾಗಲಿ ;'ಕೆಟ್ಟವನು ನಾನೀಗಳು ತತ್ವಗಳನೆಷ್ಟು ಬೋಧಿಸೆ ಜಗದೊಳು ಪುಟ್ಟಿಕೊಂಡಿಹ ಮನುಜನು' ಎಂದೆಲ್ಲ ಹೇಳಬೇಕಾದರೆ ಮಹಾಬಲೇಶ್ವರ ಹೆಗಡೆಯವರ ಮುತ್ಸದ್ದಿತನ ಎದ್ದು ಕಾಣುತ್ತಿತ್ತು. ಹಿಂದೆ ಆಗಿದ್ದು ಆಗಿ ಹೋಯ್ತು, ಈಗ ಮುಂದೇನು ಎಂದು ಅವರು ಕೇಳುವ ರೀತಿ ಭೀಷ್ಮನಿಗೆ ಕೂಡ ಕಷ್ಟವಾಗುತ್ತಿತ್ತು. 'ಬಿಡದೆ ಖಾಡಾ ಖಾಡಿ ಹಳಚುವೆನು' ಎಂಬಲ್ಲಿ, ಅವರು ವೀರರಸವನ್ನು ಪ್ರಕಟಿಸಿ, 'ಕಡು ಮಮತೆಯಿರಲವರ ಸೇರಿಕೊಂಬುವುದೀಗ' ಎಂಬಲ್ಲಿ ರೌದ್ರದ ಛಾಯೆಯನ್ನು ಕಾಣಿಸುತ್ತಿದ್ದರು.

ಇತರರ ಧ್ವನಿ ಮತ್ತು ಶೈಲಿಯನ್ನು ಅನುಕರಿಸುವ ಕಲೆ ಅವರಿಗೆ ಸಾಧಿಸಿತ್ತು. ಅವರ ಮನೆತನದವರೊಬ್ಬರು, ರಾಮಚಂದ್ರ ಹೆಗಡೆಯವರು ಕೃಷ್ಣಸಂಧಾನದಲ್ಲಿ ಧರ್ಮರಾಜನ ಪಾತ್ರ ಮಾಡಿದಾಗ ಕೃಷ್ಣನ ಪಾತ್ರ ವಹಿಸಿಕೊಂಡು 'ಧರ್ಮರಾಯಾ ಕಂಬಾರಕಟ್ಟಿನಲ್ಲಿ ನೀನು ಕಬ್ಬು ಮಾಡಿದ್ದೀಯೆ' (ರಾಮಚಂದ್ರ ಹೆಗಡೆಯವರು ಅವರ ಹೊಲವಿದ್ದ ತಾಣ ಕಂಬಾರಕಟ್ಟಿನಲ್ಲಿ ಕಬ್ಬನ್ನು ಹಾಕಿದ್ದರು) ಅದಕ್ಕ ಸರಿಯಾಗಿ ಗೊಬ್ರ, ನೀರು ಎಲ್ಲವೂ ಕೊಟ್ರೆ ಮಾತ್ರ ಬೆಳೆ ಸರಿಯಾಗಿರುತ್ತದೆ. ಇಲ್ದೆ ಹೋದ್ರೇ ಏನು ಪ್ರಯೋಜನ, ಏನು? ಎಂದು ಹೇಳುತ್ತಿದ್ದರಂತೆ. ಮಾತುಗಳನ್ನು ಅವರದೇ ಶೈಲಿಯಲ್ಲಿ ಬಹು ಚೆನ್ನಾಗಿ ಹೇಳಿ ಕುಳಿತವರನ್ನು ಚೆನ್ನಾಗಿ ನಗಿಸುತ್ತಿದ್ದರು ಮಹಾಬಲೇಶ್ವರ ಹೆಗಡೆಯವರು. ಇನ್ನೊಬ್ಬರು ಹಿರಿಯರು ಧರ್ಮರಾಜನ ಪಾತ್ರ ಮಾಡಿಕೊಂಡು, 'ಅಂಡಾಡದಲ್ಲಿ ಪಿಂಡಾಂಡವನ್ನು ಮಾಡಿ ಬ್ರಹ್ಮಾಂಡಲ್ಲಿಡುವ ಓ ದೇವಾ' ಎಂಬುದನ್ನು ತಮ್ಮ ಬೊಚ್ಚುಬಾಯಿಯಿಂದ ಹೇಳುತ್ತಿದ್ದರಂತೆ. ಅದನ್ನು ಇವರು ಅದೇ ಸ್ವರದಲ್ಲಿ ಇವರ ಬಾಯಲ್ಲಿ ಹಲ್ಲಿದ್ದರೂ, ಬೊಚ್ಚು ಬಾಯಿ ಮಾಡಿಕೊಂಡು ಹೇಳುತ್ತಿದ್ದರಂತೆ. ಕುಳಿತವರೆಲ್ಲ ಹೊಟ್ಟೆ ಹುಣ್ಣಾಗುವಂತೆ ನಗೆಯಾಡುತ್ತಿದ್ದರು. ಶ್ರೀಮಂತ ಬಡವರೆಂಬ ಭೇದ ಇವರಿಗಿತ್ತಿಲ್ಲ.

ಮೊದಲ ಪತ್ನಿಯಲ್ಲಿ ಓರ್ವರು ಚಂದ್ರಶೇಖರ ಹಾಗೂ ದ್ವಿತೀಯ ಪತ್ನಿ ಗೌರಿಯವರಲ್ಲಿ ಮೂವರು ಅನಂತ, ಜನಾರ್ದನ ಹಾಗೂ ರಾಮಕೃಷ್ಣ ಗಂಡು ಮಕ್ಕಳು.

ಮಗಳು ನಾಗವೇಣಿ (ಇವಳೂ ನಮ್ಮಲ್ಲಿಯ ಉತ್ತಮ ಪ್ರತಿಭೆಗಳಲ್ಲಿ ಒಬ್ಬರಾದ ಶ್ರೀ ಜಿ. ಎನ್. ಶಾಸ್ತ್ರಿಯವರ ಪತ್ನಿ) ಇದ್ದಾರೆ. ಇವರು ನಮ್ಮನ್ನಗಲಿದ್ದು 1992ರಲ್ಲಿ. ಆದರೆ ಅವರು ಬಿಟ್ಟು ಹೋದ ಸಿಹಿ ಪ್ರಸಂಗಗಳು ಮಾತ್ರ ಸದಾ ನಮ್ಮೊಡನಿವೆ.



## ಅನಕ್ಷರಸ್ಥನಾದರೂ ಅಪ್ರತಿಮ ಕಲಾವಿದ

# ರಾಮಜ್ಜನ ಮನೆ ಕೃಷ್ಣಜ್ಜ

ಹಿತ್ಲಳ್ಳಿ , ಈ ಭಾಗದಲ್ಲಿ ಹೆಚ್ಚು ಮನೆಗಳನ್ನು ಹೊಂದಿರುವ ಊರು. ಇಲ್ಲಿಯ ಗ್ರಾಮ ದೇವರು ಶ್ರೀ ಲಕ್ಷ್ಮೀನರಸಿಂಹ ದೇವರು. ಇಂದು ಹಿತ್ಲಳ್ಳಿ ಊರವರೇ ಗಣೇಶಪಾಲದವರೆಗೂ ಹರಡಿಕೊಂಡು ತಮ್ಮ ಮನೆ ಮಾಡಿಕೊಂಡಿದ್ದಾರೆ. ಅಲ್ಲಿ ಹುಟ್ಟಿದವರ ಆಳುತನವೂ ದೊಡ್ಡದೇ. ಯಕ್ಷಗಾನ ಕಲೆಯ ಮೇಲಿನ ಆಸಕ್ತಿಯೂ ಹೆಚ್ಚಿನದೇ. ಜಾಲಿಮನೆ ದೇವೇಂದ್ರ ಹೆಗಡೆಯವರ ಸಮಕಾಲೀನರಲ್ಲಿ ಅನೇಕರು ಉತ್ತಮ ನಟರಾಗಿ ರಂಗದ ಮೇಲೆ ಮಿಂಚಿ ಹೋದರು. ಅಂಥವರಲ್ಲಿ ರಾಮಜ್ಜನ ಮನೆ ಕೃಷ್ಣಜ್ಜನೂ ಒಬ್ಬ. ಒಂದು ಕಾಲದಲ್ಲಿ ಭರತನಹಳ್ಳಿ ಸೀಮಯಲ್ಲಿ ಹಿತ್ಲಳ್ಳಿ ಮೇಳ, ಮಂಚಿಕೇರಿ ಮೇಳ ಎಂಬೆರಡು ಮೇಳಗಳು ಆಗಿ ಹೋದವು. ಕೃಷ್ಣಜ್ಜ ಹಿತ್ಲಳ್ಳಿ ಮೇಳದಲ್ಲಿ ಹಾಗೂ ಭರತನಹಳ್ಳಿ ಸೀಮೆ ಮೇಳದಲ್ಲಿ ಪಾತ್ರ ಮಾಡಿದವರು. ನಾವು ಪಾತ್ರ ಮಾಡಲು ಪ್ರಾರಂಭಿಸಿದಾಗ ಎರಡು ವರ್ಷ ನಮ್ಮ ಪ್ರದರ್ಶನಗಳನ್ನು ನೋಡಿದ್ದರು ಅವರು. ಕೋರೆತಾಳದ ಮಾತ್ರೆ ಏಳು ಎಂಬುದನ್ನು ನಿಖರವಾಗಿ ಕುಣಿದು ನಮಗೆ ತೋರಿಸಿಕೊಟ್ಟವರು ಅವರು. ತಾ$_5$ಽ$_6$ಽ$_7$ । ದ$_1$ಽ$_2$ ನ$_3$ ಕ$_4$ । ತಾ$_4$ಽ$_6$ಽ$_7$ । ಧೇ$_1$ಽ$_2$ ನ$_3$ಕ$_4$ ತ$_5$ಕ$_6$ಽ$_7$ ॥ ಎಂದು ಆವೃತ್ತದ ಅರ್ಧದಿಂದ ಕುಣಿತ ಪ್ರಾರಂಭವಾಗುತ್ತದೆಂದು ಕೈಯಲ್ಲಿ ಪೆಟ್ಟು ಹಾಕಿ ತೋರಿಸಿದ್ದರು. ಅನಕ್ಷರಸ್ತರಾದರೂ, ಪ್ರಸಂಗಗಳ ಪದ್ಯಗಳು ಬಾಯಿ ಪಾಠ ಇದ್ದವು. ಇವರು ಎಲ್ಲ ಬಗೆಯ ಪಾತ್ರಗಳನ್ನು ಮಾಡುತ್ತಿದ್ದರೂ ಹೆಸರು ಪಡದ ಪಾತ್ರಗಳು. ದ್ರೋಣ, ಕರ್ಣ, ಶಲ್ಯ, ಸಾಲ್ವ, ಕೀಚಕ ಹಾಗೂ ಮಂಥರೆ.

ಸುಮಾರು ಆರವತ್ತು ವರ್ಷಗಳ ಹಿಂದೆ ಮಂಚಿಕೇರಿಯಲ್ಲಿ ಪ್ರಸಿದ್ಧ ಜೋಡಿಗಳಾದವು. ಅದನ್ನು ನೋಡಿದವರು ಇಂದಿಗೂ ಆ ದಿನವನ್ನು ನೆನಪು ಮಾಡಿಕೊಳ್ಳುತ್ತಾರೆ.

ಆಲವಾಡದ ಗಣಪತಿ ಹೆಗಡೆಯವರ ಮನೆ ಮುಂದೆ, ಭರತನಹಳ್ಳಿ ಸೀಮೆ ಮೇಳ ಆಟ. ಆ ದಿನ ಆಖ್ಯಾನ 'ಅಭಿಮನ್ಯು ಕಾಳಗ'. ಅದರಲ್ಲಿ ಇವರ ದ್ರೋಣ ಪಾತ್ರ ಅತ್ಯದ್ಭುತವಾಗಿತ್ತಂತೆ. ಇವರು, ಮಂಚಿಕೇರಿಯಲ್ಲಿ ಕರ್ಣಪರ್ವ ಆಟ ನಡೆದಾಗ , ಕರ್ಣನು ನೆನಪುಳಿಯುವಂತೆ ಮಾಡಿದ್ದರಂತೆ. ಸೇನಾಧಿಪತ್ಯ ವಹಿಸಿಕೊಂಡ ಮೊದಲ ದಿನ ಕೌರವನು ಧರ್ಮರಾಜನಿಂದ ಸೋತು ಹೋಗಿದ್ದಾನೆ. ಆ ದಿನ ಸಂಜೆ ಕೌರವನು ಕರ್ಣನೊಡನೆ 'ಭಾನುನಂದನ ಲಾಲಿಸಯ್ಯ ... ನಮಗೆ ಯುದ್ಧದಿ ಗೆಲುವಿಲ್ಲ...' ಎಂದು ತನ್ನಳಲನ್ನು ತೋಡಿಕೊಂಡಾಗ, ಕರ್ಣ ಹೇಳುತ್ತಾನೆ - 'ಭೂತಳಾಧಿಪನೆ ಕೇಳವರು ಚೆಲ್ವ ಸೂತನ ಬಲದಿಂದ ವಿಜಯ ಪೊಂದುವರು ಸೂತ



ಪ್ರೌಢನೋರ್ವನಿರಲು ವೈರಿ ವ್ರತವ ಸದೆ ಬಡಿವೆ ತಾನೇನಲು... ಎನ್ನ ಕೈಗೊದಗುವ ಜಾಣ...' ಈ ಪದ್ಯಗಳನ್ನು ಅವರು ಅದ್ಭುತವಾಗಿ ಅಭಿನಯಿಸಿದ್ದರಂತೆ.

ಕೀಚಕ ಅಕ್ಕನ ಸಭೆಯನ್ನು ಪ್ರವೇಶಿಸಿದಾಗ ಆ ಸಭೆಯಲ್ಲಿ ಸೈರಂಧ್ರಿ ವೇಷದ ದ್ರೌಪದಿಯನ್ನು ಕಂಡು ಮನಸೋಲುತ್ತಾನೆ. ಆಗ ಕೀಚಕನ ಪದ್ಯ - 'ಇವಳ್ಯಾವ ಲೋಕದ ಸತಿಯೋ '' ಎಂದು ಪ್ರಾರಂಭವಾಗುತ್ತದೆ. ತದನಂತರ 'ರತಿಯ ಸೌಂದರ್ಯವಂತಿರಲಿ......' ಹಾಗೂ 'ಇವಳಂಗ ಸಂಗ ವೈಭವವ ..' ಇವಿಷ್ಟು ಪದ್ಯಗಳನ್ನು ಅವರಂತೆ ಅಭಿನಯಿಸುವುದು ಬೇರೆಯವರಿಂದ ಸಾದ್ಯವಿಲ್ಲವೆನ್ನುವಷ್ಟು ಪ್ರಸಿದ್ದಿಯನ್ನು ಪಡೆದಿದ್ದರು.

ಇವರ ಇನ್ನೊಂದು ಪಾತ್ರ ಮಂಥರೆ (ಪಾದುಕಾ ಪಟ್ಟಾಭಿಷೇಕ ) ಅತ್ಯಂತ ಪ್ರಸಿದ್ಧವಾದದ್ದು. ಕೈಕೆಯಿಗೆ ''ರಾಮನಿಗೆ ಪಟ್ಟವಂತೆ, ಇದನ್ನ ಹೇಗೆ ಸೈರಿಸುತ್ತಿಯೇ'' ಎಂದು ಮಂಥರೆ ಕೇಳಿದಾಗ ಕೈಕೇಯಿ ಅವಳನ್ನು ಬೈದು ಭಂಗಿಸುತ್ತಾಳೆ. ಆಗ, ಮಂಥರೆ ತಾನು ಏನೆಲ್ಲ ಉಪಾಯವನ್ನು ಮಾಡಬೇಕು ಎಂಬುದನ್ನು ಅವರು ಹೇಳುವ ರೀತಿಯನ್ನು ತ್ರಿಯಂಬಕ ಹೆಗಡೆಯವರು ಕಣ್ಣಿಗೆ ಕಟ್ಟುವಂತೆ ವರ್ಣಿಸಿದಾಗ ಎಷ್ಟೋ ವರ್ಷಗಳ ನಂತರ ಕುವೆಂಪುರವರು ಬರೆದ 'ರಾಮಾಯಣ ದರ್ಶನಂ' ದ ಮಂಥರೆಯ ಮಾತುಗಳಿಗೆ ಹೋಲುತ್ತದೆಂದು ನನಗೆ ಅನ್ನಿಸಿತು. ಸಾಲ್ವನು ಅಂಬೆಯನ್ನು ಕಂಡು ಮಾತನಾಡಿಸುವ ರೀತಿಯೂ ಬಹು ಸುಂದರವಾಗಿತ್ತೆಂದು ನೋಡಿದವರು ಹೇಳುತ್ತಾರೆ. ಕರ್ಣ ಸೇನಾಧಿಪತ್ಯದ ಎರಡನೆ ದಿನ. ಕರ್ಣನು ಶಲ್ಯ ತನಗೆ ಸಾರಥಿಯಾಗಿ ದೊರಕಿದನೆಂದು ಹುರುಪಿನಲ್ಲಿದ್ದಾನೆ. ಅರ್ಜುನನನ್ನು ತೋರಿಸಿದವರಿಗೆ ಹೊನ್ನು ಕೊಡುವೆಯೆನ್ನುತ್ತಾನೆ. ಆಗ ಸಾರಥ್ಯವಹಿಸಿದ ಶಲ್ಯನು ತನ್ನ ಮಾತುಗಳಿಂದ ಕರ್ಣನನ್ನು ಚುಚ್ಚುತ್ತಾನೆ. 'ನಿನಗೆ ನರನ ತೋರ್ಪ। ವಿತ್ತ ಎನಗೆ ಕೊಡಲು ಬೇಡ ಅವನ ಕೊಲುವೆನೆನುವ ಪೌರುಷವನು ಬಿಡುಬಿಡನಜನೆ!' ಹೀಗೆ ಅವರ ವಾಗ್ವಾದ ಪ್ರಾರಂಭವಾಗುತ್ತದೆ. ಈ ಭಾಗವನ್ನು ಅತ್ಯಂತ ಪರಿಣಾಮಕಾರಿಯಾಗಿ ಕೃಷ್ಣಜ್ಜ ಅಭಿನಯಿಸುತ್ತಿದ್ದರು ಎಂದು ನೋಡಿ ಆಸ್ವಾದಿಸಿದವರು ಹೇಳುತ್ತಾರೆ. ಅವರಿಗೆ ಮಕ್ಕಳಿದ್ದಾರೆ, ಮೊಮ್ಮಕ್ಕಳಿದ್ದಾರೆ. ಆದರೆ ಅವರ ಕಾಲದ ನಂತರ ನಮ್ಮ ಭಾಗದಲ್ಲಿಯೇ ಯಕ್ಷಗಾನ ಕುಂಠಿತವಾಗುತ್ತ ಬಂತು. ಇನ್ನುಮೇಲೆ ಅದಕ್ಕೆ ಮರಳಿ ಮೊದಲಿನಂತೆ ಬೆಲೆ ಬರುವುದೋ ಹೇಗೆಂಬುದನ್ನು ಕಾದು ನೋಡಬೇಕಷ್ಟೆ.

## ಯಕ್ಷರಂಗದ ಪ್ರಾಜ್ಞ ವಿಶ್ವೇಶ್ವರ ಹೆಗಡೆ, ಹಿತ್ಲಳ್ಳಿ

ಇವರು ಸ್ವಂತವಾಗಿಯೇ ಓದಿ ಪಂಡಿತರಾದರೇ ಅಥವಾ ಕ್ರಮವಾದ ಅಭ್ಯಾಸವಾಗಿತ್ತೆ ಎಂಬ ಪರಿಚಯ ಇರುವವರು ಇಂದು ಸಿಕ್ಕುವುದಿಲ್ಲ. ಆಗ ಇವರ ವೈಶಿಷ್ಟ್ಯ ಎಂದರೆ, ಮಹಾಭಾರತ,



ರಾಮಾಯಣ, ಭಾಗವತದ ಕಥಾನಕಗಳೆಲ್ಲ ಇವರ ಬಾಯಲ್ಲಿಯೇ ಇರುತ್ತಿದ್ದವು ಎಂದು ಕೃಷ್ಣ ಭಾಗವತರು ಸ್ಮರಿಸುತ್ತಾರೆ. ಜಾಲಿಮನೆ ದೇವೇಂದ್ರ ಹೆಗಡೆಯವರಿಗಿಂತ ಸುಮಾರು ಹತ್ತು - ಹನ್ನೆರಡು ವರ್ಷಗಳಷ್ಟು ವಯಸ್ಸಿನಲ್ಲಿ ದೊಡ್ಡವರು. ಇವರ ಹಿರಿ ಅಣ್ಣನ ಮಗಳೆ ದೇವೇಂದ್ರ ಹೆಗಡೆಯವರ ಮೊದಲ ಮಡದಿ. ಇವರು ಪ್ರಸಂಗದ ಕಥೆಗಳನ್ನು ನಡೆಸಲು ತುಂಬ ಸಮರ್ಥರಾಗಿದ್ದರು. ಆದ್ದರಿಂದಲೇ ನಾರದ, ಧರ್ಮರಾಯ, ಋಷಿಯ ಪಾತ್ರ ಮಾಡುವುದೇ ಹೆಚ್ಚಾಗಿತ್ತಂತೆ. ಮೊದಲಿನ ಕಾಲದಲ್ಲಿ ರಾತ್ರಿ ಎಂಟು ಗಂಟೆಗೆಲ್ಲ ಆಟ ಪ್ರಾರಂಭವಾಗಿದ್ದು ಇತ್ತಂತೆ. ಅಂಥ ಸಂದರ್ಭಗಳಲ್ಲಿ ಪ್ರಸಂಗವು ಬೇಗನೇ ಮುಗಿದು ರಾತ್ರಿಯೇ ಇನ್ನು ಉಳಿದೀತು ಎಂಬ ಅಳುಕು ಇದ್ದರೆ ಇವರು ತಮ್ಮ ಪಾತ್ರವನ್ನು ಸಾಕಷ್ಟು ಹಿಗ್ಗಿಸಿ ಬೆಳಗು ಮಾಡುವ ಹೊಣೆಯನ್ನು ಹೊರುತ್ತಿದ್ದರಂತೆ. ಇವರು ಮಾಡುವ ಪಾತ್ರಗಳೂ ಅದಕ್ಕೆ ಪೋಷಕವಾಗಿರುತ್ತಿದ್ದವು. ರಂಗದಲ್ಲಿ ಇವರ ಎದುರು ಪಾತ್ರಧಾರಿಗಳು ತಪ್ಪಿನಡೆದರೆ, ಅದು ಗೊತ್ತಾಗದಂತೆ ತಮ್ಮ ಮಾತಿನ ಜಾಣ್ಮೆಯಿಂದ ತುಂಬುತ್ತಿದ್ದರಂತೆ. ರಾತ್ರಿಯ ಆಟ ಮುಗಿದು ಬೆಳಗಾದಾಗ ವೇಷಗಳನ್ನು ಬಿಚ್ಚುವಾಗ, ವಾತ್ಸಲ್ಯದಿಂದ, ತಪ್ಪು ಮಾಡಿದವರನ್ನು ಬರಮಾಡಿಕೊಂಡು ಅವರ ತಪ್ಪುಗಳನ್ನು ತಿದ್ದುತ್ತಿದ್ದರಂತೆ. ಕೃಷ್ಣ ಭಾಗವತರಿಗಿಂತ ಸುಮಾರು ಐವತ್ತು ವರ್ಷ ಹಿರಿಯರಾದರೂ ತೀರ ಚಿಕ್ಕವರಾದ ಇವರಿಗೆ, 'ಭಾಗವತರೆ ನಮಸ್ಕಾರ' ಎಂದು ಹೇಳಿಯೇ ರಂಗಕ್ಕೆ ಹೋಗುವಷ್ಟು ಸೌಜನ್ಯಶಾಲಿಗಳಾಗಿದ್ದರು ಎಂಬುದು ಇವರ ಹೆಗ್ಗಳಿಕೆ. ಇವರಿಗೆ ಗಂಡು ಸಂತಾನ ಇರಲಿಲ್ಲ. ಒಬ್ಬ ಮಗಳು ಪಾರ್ವತಿ, - ತುಂಬೇಬೀಡಿನ ಸುಬ್ರಾಯ ಶಾಸ್ತ್ರಿಗಳಿಗೆ ಕೊಟ್ಟು ಮದುವೆ ಮಾಡಿದ್ದರು. ಇವರು ಕಾಲವಾಗಿಯೇ ಐವತ್ತು ವರ್ಷಗಳಾಗಿರಬಹುದು ಈಗ. ಇಂಥವರ ಆಶೀರ್ವಾದದಿಂದ ಮುಂದಿನ ಪೀಳಿಗೆ ಯಕ್ಷರಂಗಕ್ಕೆ ಪಾದಾರ್ಪಣೆ ಮಾಡಲೆಂಬುದು ನಮ್ಮ ಆಶಯ.

## ಮೇಲಿನ ಘಟ್ಟಕ್ಕೇ ಹೆಸರಾದ

# ಕಾಶೀಮಠ ಸುಬ್ಬಾ ಭಟ್ಟರು

ಅವರದು ಸುಂದರ ಕಾಯವಲ್ಲ. ಆಳ್ತನ ಎತ್ತರವಿಲ್ಲ. ದನಿ ಮಾತ್ರ ಸುಶ್ರಾವ್ಯ. ತ್ರಿಯಂಬಕ ಹೆಗಡೆಯವರು ಈ ಭಾಗದಲ್ಲಿ ಎರಡು ಕುಟುಂಬಗಳನ್ನು ಗುರುತಿಸಿದ್ದಾರೆ. ಗೊರ್ಸಗದ್ದೆಮನೆತನದ ಗಂಡು ಮತ್ತು ಹೆಣ್ಣು ಮಕ್ಕಳ ಪೀಳಿಗೆಯುವರಿಗೆ ಹಾಗೂ ಕಾಶೀಮಠದ ಹೆಣ್ಣು -ಗಂಡು ಸಂತತಿಯವರಿಗೆ ಕಲಾ ಸರಸ್ವತಿ ಒಲಿದಿದ್ದಾಳೆ. ಧ್ವನಿ ತೆಗೆದರೆ ಅದು ಶ್ರುತಿಯಲ್ಲಿರುತ್ತದೆ. ಕೇಳಲು ಇಂಪು. ಕಾಶೀಮಠದ ಸುಬ್ಬಾ ಭಟ್ಟರ ಪದ್ಯ ಬಹುಸೊಗಸಾದದ್ದು; ಅಷ್ಟೇ ಪ್ರಭಾವಶಾಲಿಯಾದದ್ದು



ಇವರ ಮಾತೂ ಕೂಡ.

ಸುಬ್ಬಾ ಭಟ್ಟರ ಹೆಸರು ಸುಬ್ರಾಯನೆಂದಾದರೂ ವಾಡಿಕೆಯಲ್ಲಿ ಕರೆಯುವುದು ಸುಬ್ಬಾ ಭಟ್ಟರೆಂದೇ. ಗೊರ್ಸಗದ್ದೆಯಲ್ಲಿರುವ ಕಾಶೀಮಠದ ಗಣಪತಿ ದೇವಾಲಯದ ಅರ್ಚಕರ ಮನೆತನದವರು ಇವರು. ಇವರ ತಂದೆಯ ನಾಲ್ಕನೇ ಮಗನಾಗಿ ಹುಟ್ಟಿದ ಇವರಿಗೆ ಯಕ್ಷಗಾನ ಪರಿಸರ ಸುತ್ತಲೂ ಇದ್ದುದಕ್ಕೆ ಅದರತ್ತ ಒಲವು ಮೂಡಿತು. ಇವರು ಹುಟ್ಟಿದ್ದು ಪ್ರಾಯಶಃ 1915 ನೇ ಇಸವಿ.

ಸಣ್ಣ ವಯಸ್ಸಿಗೇ ಬಣ್ಣ ಬಳಿಯಲು ಪ್ರಾರಂಭಿಸಿದ ಇವರು ಅಕ್ಷರ ಅಕ್ಷರಕ್ಕೂ ಅಭಿನಯಸುವ ಸಾಮರ್ಥ್ಯವಿದ್ದವರು. 'ಶಾಂತಾಕಾರಂ ಭುಜಗಶಯನಂ' ಪದ್ಯವನ್ನು ಅಭಿನಯಕ್ಕಾಗಿಯೂ ಆಯ್ಕೆ ಮಾಡಿಕೊಂಡಿದ್ದರಂತೆ. ಇವರ ಮೊದಲ ಗುರು ಗೋವಿಂದಜ್ಜ. ಮುಂದೆ ಕಲಿಸುವಾಗಲೂ ಈ ಶ್ಲೋಕವನ್ನೇ ಅಭಿನಯಕ್ಕೆಂದು ಸುಬ್ಬಾ ಭಟ್ಟರು ಆಯ್ಕೆ ಮಾಡಿಕೊಂಡಿದ್ದರು. ಮೊದಲು ಪಾತ್ರ ಮಾಡಿದ್ದು ಹೆಣ್ಣು ವೇಷ. ಆದರೆ ಇವರಿಗೆ ಸ್ತ್ರೀ ಪಾತ್ರ ಎಳ್ಳಷ್ಟೂ ಒಪ್ಪುತ್ತಿರಲಿಲ್ಲ. ಹಾಗಾಗಿ ಎಲ್ಲರೂ ಪರಿಹಾಸ್ಯ ಮಾಡಿ -''ನೀನು ಆಟ ಕುಣಿಯುವುದೇ ಬೇಡ''-ಎಂದರಂತೆ. ತದನಂತರ ಒಮ್ಮಿಂದೊಮ್ಮೆಗೆ ಕಾಣೆಯಾದ ಇವರು ಪ್ರಕಟವಾದದ್ದು ಐದಾರು ವರ್ಷಗಳ ನಂತರ. ಈ ಅವಧಿಯಲ್ಲಿ ಇಂದಿಗೂ ಹಳಬರ ನೆನಪಿನಂಗಳದಲ್ಲಿ ಸ್ಪಷ್ಟವಾಗಿರುವ ಮೊಟ್ಟೆಪಾಲ ದಿ. ವೆಂಕಟ್ರಮಣ ಭಟ್ಟರಲ್ಲಿ ವಿವಿಧ ಬಗೆಯ ಪಾತ್ರಗಳನ್ನು ಮಾಡುವ ರೀತಿಯನ್ನು ಕಲಿತರು

ಇವರು ಮಂಚಿಕೇರಿ ಭಾಗದ ಜನಗಳಿಗೆ ಕಾಣಿಸಿಕೊಂಡಿದ್ದೇ 1949 ರ ಸುಮಾರಿಗೆ. ಆಗ ಜೋಡಾಟದ ದಿನ. ಮಹಾಬಲೇಶ್ವರ ಶೆಟ್ಟರು ಮತ್ತು ಶ್ರೀನಿವಾಸ ಪೋಕಳೆಯವರ ಅಂಗಡಿಗಳ ಮಧ್ಯೆ ಯಲ್ಲಾಪುರದ ಮೇಳದ ಆಟ. ಅಂದಿನ ಪ್ರಸಂಗ ''ವಾಲಿ-ಸುಗ್ರೀವ ಕಾಳಗ'' ಹಾಗೂ ''ಲಂಕಾದಹನ'' ಸುಬ್ಬಾ ಭಟ್ಟರದು ರಾಮ. ಸ್ವಲ್ಪ ದೂರದಲ್ಲಿ ಅಭಿಮನ್ಯು ಕಾಳಗ. ಅಭಿಮನ್ಯು ರಂಗಕ್ಕೆ ಬಂದ ಎಂದಾದ ಕೂಡಲೇ ಈ ಕಡೆ ಧಡ ಧಡ ಬರುತ್ತಿದ್ದರಂತೆ. ನಂತರ ಆ ಕಡೆ ರಂಗಕ್ಕೆ ಬಂದನೆಂದಾದರೆ, ಇಲ್ಲಿಂದ ಅಲ್ಲಿಗೆ ಜನ ಹೋಗುತ್ತಿದ್ದರಂತೆ. ಆಮೇಲೆ ಕೊಂಡದಕುಳಿ ರಾಮ ಹೆಗಡೆಯವರ ಒಡನಾಟ. ಇವರು ಮೂಡ್ಕಣಿ ಮೇಳದಲ್ಲಿ ಪಾತ್ರ ಮಾಡುತ್ತಿದ್ದರಂತೆ.

ಇವರು ''ಭಕ್ತಪ್ರಲ್ಹಾದ'' ನ ಪಾತ್ರ ಬಹುಚೆನ್ನಾಗಿ ಮಾಡುತ್ತಿದ್ದರಂತೆ. ಈ ಪಾತ್ರ ವಹಿಸಿದಾಗ ಬಹುಮಾನ ಬರದೇ ಇದ್ದ ಸಂದರ್ಭಗಳೇ ಕಡಿಮೆ ಎಂದು ಬಲ್ಲವರು ಹೇಳುತ್ತಾರೆ.

ಉಳಿದ ಪಾತ್ರಧಾರಿಗಳೆಲ್ಲ ಎತ್ತರದ ಆಳುಗಳಾದರೂ ನಮ್ಮ ಮನಸ್ಸಿನಲ್ಲಿ ಹೆಚ್ಚು ಪ್ರಭಾವ ಮೂಡಿಸಿದ್ದು ಅವರ ಪಾತ್ರವೇ.

ಇವರ ಇನ್ನೊಂದು ಪಾತ್ರ ''ಸುಧನ್ವಾರ್ಜುನ'' ದ ಸುಧನ್ವನನ್ನು ಮಂಚಿಕೇರಿಯಲ್ಲಿ



ನೋಡಿದ್ದೇನೆ. ಆಗಲೇ ವಯಸ್ಸು 43-44 ವರ್ಷ ಆಗಿದ್ದಿರಬಹುದು. ಕುಳ್ಳನೆಯ ಆಳು. ರಂಗದ ಮೇಲೆ ಅವರು ಲವಲವಿಕೆಯಿಂದ ಇರುವುದನ್ನು ನೋಡಿದವರಿಗೆ ಸುಧನ್ವನ ವೇಷಧಾರಿಗೆ ವಯಸ್ಸು 25 ವರ್ಷಕ್ಕಿಂತ ಹೆಚ್ಚಾಗಲಿಕ್ಕಿಲ್ಲ ಎಂದೆನಿಸಿತು. ಹಂಸಧ್ವಜನು, 'ಸುಧನ್ವನನ್ನು ಕೈಕಟ್ಟಿ ತನ್ನಿ' ಎಂದು ತನ್ನ ಭಟರಿಗೆ ಆಜ್ಞಾಪಿಸಿದ ನಂತರ ಅವರು ಸುಧನ್ವನನ್ನು ಸಭೆಗೆ ಎಳೆದುಕೊಂಡು ಬರುತ್ತಾರೆ. ಕುದಿಯುತ್ತಿರುವ ಎಣ್ಣೆಯ ಕೊಪ್ಪರಿಗೆಗೆ ಹಂಸಧ್ವಜ ನೂಕಿಸುತ್ತಾನೆ. ತೈಲಕೊಪ್ಪರಿಗೆಯಲ್ಲಿ ನಿಂತು ಇವರು ದೇವರನ್ನು ಭಕ್ತಿಯಿಂದ ಸ್ತುತಿಸುವಾಗ ಸಭಿಕರು ಆ ಭಾವಾವೇಶದ ಕಡಲಿನಲ್ಲಿ ಮುಳುಗಿ ಹೋದ ನೆನಪು ಹಚ್ಚಹಸುರಾಗಿದೆ.

ಅವರು ಉತ್ತಮ ತಾಳ ಮದ್ದಳೆ ಅರ್ಥಧಾರಿಗಳೂ ಹೌದು. ಭಾಗವತಿಕೆಯನ್ನು ಮಾಡಬಲ್ಲವರಾಗಿದ್ದರು. ರಾತ್ರಿಯಿಡೀ ಆಟವಾಗುವಾಗ ಸುಮಾರು ಇನ್ನೂರು ಇನ್ನೂರೈವತ್ತು ಪದ್ಯಗಳನ್ನು ಭಾಗವತರು ಹೇಳಬೇಕಾಗುತ್ತಿತ್ತು. ಆದ ಕಾರಣ ಅರ್ಧ ರಾತ್ರಿ ಕೃಷ್ಣ ಭಾಗವತರು ಪದ್ಯ ಹೇಳಿದರೆ ಮಿಕ್ಕುಳಿದ ಅರ್ಧರಾತ್ರಿ ಇವರು ಭಾಗವತಿಕೆ ಮಾಡುತ್ತಿದ್ದರು.

ಆರ್ಥಿಕವಾಗಿ ಸಾಕಷ್ಟು ಸಂಕಷ್ಟವನ್ನು ಅನುಭವಿಸಿದವರು ಇವರು. ಕಾಶೀಮಠದ ಮನೆ ಮಾರಿ ಹೋಯಿತಾದರೂ . ಜೀವಿತದ ಕೊನೆಗಾಲದಲ್ಲಿ ಶಾನವಳ್ಳಿಯಲ್ಲಿ ಜಮೀನು-ಮನೆ ಮಾಡಿಕೊಂಡಿದ್ದರು. ಕೆಲವೊಮ್ಮೆ ಪದದ ಶಾಲೆಯನ್ನು ನಡೆಸಿ ಹಲವರನ್ನು ಯಕ್ಷನಟರನ್ನಾಗಿಸಿ ಮಾಡಿದ ಸಂದರ್ಭ ಉಂಟು. ಒಂದು ಸಾರೆ ಯಾವುದೋ ಪ್ರಸಂಗದ ಪದ್ಯಗಳೆಲ್ಲವನ್ನೂ ತಮ್ಮ ಶಿಷ್ಯಂದಿರಿಗೆ ಕೇವಲ ರೂಪಕ ಮತ್ತು ಏಕ ತಾಳಗಳಲ್ಲಿ ಕಲಿಸಿದ್ದರಂತೆ. ಕೃಷ್ಣ ಭಾಗವತರನ್ನು ಭಾಗವತಿಕೆಗೆ ಆಹ್ವಾನಿಸಿದ್ದರಂತೆ. ಅವರನ್ನು ಕಂಡು ತಾನು ಕಲಿಸಿದ್ದು ಎರಡೇ ತಾಳಗಳು. ಅವುಗಳಲ್ಲಿಯೇ ಪದ್ಯಗಳನ್ನು ಹೇಳಬೇಕು ಎಂದು ಭಿನ್ನವಿಸಿಕೊಂಡರಂತೆ. ಅವರ ಜೀವನ ಮುಳ್ಳಿನ ಹಾಸಿಗೆಯದಾದರೂ 1970ರ ಸುಮಾರಿಗೆ ನಾವು ಯಕ್ಷಗಾನ ಕಲಿಯಲು ಉತ್ಸುಕತೆ ತೋರಿದಾಗ ತಿಂಗಳುಗಟ್ಟಲೆ ಉಳಿದು ನಮಗೆ ಅಭಿನಯದ ಮರ್ಮವನ್ನು ತಿಳಿಸಿಕೊಟ್ಟಿದ್ದರು. ಮಾಗಧ ವಧೆಯಲ್ಲಿ ಮಾಗಧನ ಪ್ರಾರಂಭದ ಪದ್ಯ ''ಭೂಪ ಕೇಳಾಬಳಿಕ ಮಾಗಧ। ಭೂಪ ಯೌವನವಂತನಾಗಿಹೆ ಉಮಾಪತಿಯ ತಪದಿಂದ ಮೆಚ್ಚಿಸಿ ಪಡೆದ ಮೂವರವ। ದ್ವೀಪ ಸಪ್ತಕದೊಳಗೆ ಮಲೆತಮ । ಹೀಪತಿಗಳನು ತಂದು ಬಂಧಿಸಿ । ಆ ಪರಾಕ್ರಮ ಉರು ಸಂತಸದೊಳೆಸೆಯುತಿರ್ದ ॥'' ಈ ಪದ್ಯವನ್ನು ಎಷ್ಟು ಅದ್ಭುತವಾಗಿ ಹೇಳಿಕೊಂಡು ಅಭಿನಯಿಸಿ ತೋರಿಸುತ್ತಿದ್ದರೆಂದರೆ ಅವರು ಉಟ್ಟಿದ್ದು ಪಂಚೆಯಲ್ಲ; ತೊಟ್ಟಿದ್ದು ಸಾಮಾನ್ಯ ಅಂಗಿಯಲ್ಲ; ರಾಜವೇಷ ತೊಟ್ಟು ಕಿರೀಟ ಧರಿಸಿದ ಜರಾಸಂಧನೇ ಎದುರಿಗೆ ನಿಂತಂತಾಗುತ್ತಿತ್ತು. ಇಂದು ಹಳಬರಲ್ಲೂ ಕಾಣಸಿಗದ ಒಂದು ವಿಧದ ಕುಣಿತವನ್ನು ನಮಗೆ ಅವರೇ ಕಲಿಸಿದ್ದು. ಬಲಪಾದವನ್ನು ಸಂಪೂರ್ಣವಾಗಿ ಊರಿ ಎಡಪಾದದ ತುದಿಯನ್ನು ಮಾತ್ರ ತಿರುಗಿಸುವದು. ಹೀಗೆ ರಂಗವನ್ನು



ಒಂದು ಸುತ್ತು ಹಾಕುವದು. ನಟನಿಗೆ ನೋವನ್ನುಂಟು ಮಾಡುತ್ತಿದ್ದರೂ ನೋಟಕರಿಗೆ ಆನಂದವನ್ನು ಕೊಡುತ್ತದೆ.

ಅವರ ವೇಷವನ್ನು ಕೊನೆಯ ಬಾರಿ ನಾವೆಲ್ಲ ನೋಡಿದ್ದು 1987 ರಲ್ಲಿ. ಸುಬ್ರಾಯ ಭಟ್ಟರು ಕಾಶೀಮಠದ ಸನ್ಮಾನ ಸಮಿತಿಯೊಂದು ರಚನೆಯಾಯಿತು. ಆಗ ಸಮಿತಿಯ ಅಧ್ಯಕ್ಷರು ದಿ. ರಾ. ಭ. ಹಾಸಣಗಿಯವರು. (ಇವರು 'ಯಕ್ಷನಾಟಕಗಳು ' ಪುಸ್ತಕ ಬರೆದವರು. ಯಕ್ಷಗಾನದ ಬಗ್ಗೆ ತುಂಬ ತಿಳುವಳಿಕೆ ಹೊಂದಿದ್ದರು ; ವಿದ್ವಾಂಸರು) ಆ ಹೊತ್ತಿಗೆ ಮಂಚಿಕೇರಿಯ ಸಭಾಭವನ ಸಿದ್ಧವಾಗಿತ್ತು. ಸುಬ್ಬಾ ಭಟ್ಟರಿಗೆ ಸನ್ಮಾನ ಮಾಡಲು ಬಂದವರು ಯಕ್ಷ ರಂಗದ 'ಮಹಾಬಲ' ಕೆರೆಮನೆ ಮಹಾಬಲ ಹೆಗಡೆಯವರು, ಈ ಸಮಾರಂಭದ ಅಧ್ಯಕ್ಷರು ಶ್ರೀ ಬಿ. ಎಚ್. ಶ್ರೀಧರರು. ಸುಬ್ಬಾ ಭಟ್ಟರ ಶಿಷ್ಯರಿಂದ ' ಮಾಗಧ ವಧೆ ಪ್ರಸಂಗ' (ದಿ. ಕುಂದರಗಿ ಮಹಾದೇವ ಹೆಗಡೆ- ಧರ್ಮರಾಜ, ದಿ. ರಾಮಕೃಷ್ಣ ಹೆಗಡೆ, ಮಳಗಿನಮನೆ - ಕೃಷ್ಣ, ಜಿ. ಟಿ. ಭಟ್ಟ - ಮಾಗಧ, ಭಾಗವತ- ಗಜಾನನ ಹೆಗಡೆ, ಮಳಗಿನಮನೆ) ಅಭಿನಯಿಸಲ್ಪಟ್ಟಿತು. (ಮಹಾದೇವ ಹೆಗಡೆಯವರು ಧರ್ಮರಾಜನ ಪಾತ್ರದಲ್ಲಿ 'ಇನಿತು ಘನವೇ ಕೃಷ್ಣ ಯಾಗಕೆ........ ಭಾಮಿನಿಗೆ' ಸಭಿಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡಿದ್ದನ್ನು ನಾವು ಇಲ್ಲಿ ನೆನಪಿಸಬಹುದು) ಆಟಕ್ಕೆ ಅಂದಿನ ಮುಖ್ಯ ಆಕರ್ಷಣೆ ಎರಡನೆಯ ಪ್ರಸಂಗ. 'ಭೀಷ್ಮಾರ್ಜುನ ' ಭೀಷ್ಮ - ಸುಬ್ಬಾ ಭಟ್ಟರು , ಕೃಷ್ಣ - ಡಿ. ಜಿ. ಹೆಗಡೆ, ಉಡುಪಿ, ಅರ್ಜುನ- ದಿ. ಪಿ. ವಿ. ಹಾಸ್ಯಗಾರ ಕರ್ಕಿ. ಆ ಪ್ರಸಂಗಕ್ಕೆ ಬಾಳೆಹದ್ದದ ಕೃಷ್ಣ ಭಾಗವತ ಮತ್ತು ತಿಮ್ಮಪ್ಪ ಭಾಗವತರ ಭಾಗವತಿಕೆ. ಪಿ. ವಿ. ಹಾಸ್ಯಗಾರರು ಡಿ. ಜಿ. ಹೆಗಡೆ ಇಬ್ಬರೂ ಶ್ರೇಷ್ಠ ಅಭಿನಯ ತೋರಿದರೂ ಭೀಷ್ಮನ ಅಭಿನಯ ಅವರನ್ನು ಮೀರಿಸಿತ್ತು. 'ಚಿನುಮಯನೆ ಲಾಲಿಪುದು' ಎಂದು ಕೃಷ್ಣನನ್ನು ಕಂಡಾಗ, 'ಪಂಕಜಾಕ್ಷ ಭೇದವೇಕೋ ಕಿಂಕರನಲ್ಲವೇ ನಾನು' ಎಂದು ಕೃಷ್ಣನನ್ನು ನಗುತ್ತಲೇ ದೂರುವಾಗ, ಇವೆಲ್ಲಕ್ಕಿಂತ ಹೆಚ್ಚಾಗಿ ಚಕ್ರ ಹಿಡಿದು ಕೃಷ್ಣ ಬಂದು ಭೀಷ್ಮನನ್ನು ಕೊಲ್ಲುತ್ತೇನೆಂದಾಗ ಭೀಷ್ಮ ಅವನನ್ನು ಸ್ತುತಿಸುವ ಪದ್ಯ ' ಅಕ್ಷಯಾತ್ಮನೇ ಕೇಶವ। ಸುರನರ ಭುಜಗ ಪಕ್ಷಿ ವಂದಿತ ಮಾಧವ...... , ಧರಣಿ ನಿನ್ನಯ ಪಾದವು' ಈ ಪದ್ಯಗಳಿಗೆ ಅವರು ಅಭಿನಯಿಸಿ ತಮ್ಮ ಸಂಗಡ ಪ್ರೇಕ್ಷಕರನ್ನು ದ್ವಾಪರಯುಗದಲ್ಲಿ ನಡೆದ ಮಹಾಭಾರತ ಯುದ್ಧದ ತಾಣ ಕುರುಕ್ಷೇತ್ರಕ್ಕೇ ಕರೆದೊಯ್ದಿದ್ದರು. ಮದ್ದಲೆ ಬಾರಿಸಿದ ಸೋಂದಾದ ಚಂದ್ರಶೇಖರ ಭಂಡಾರಿ ನಿಬ್ಬೆರಗಾಗಿ 'ಇದು ಕಸುಬು' ಎಂದು ಉದ್ಗರಿಸಿದ್ದು ನನಗೆ ಎಂದಿಗೂ ಮರೆಯುವುದಿಲ್ಲ. ಕಣ್ಣಿನಲ್ಲಿ, ಮಾತಿನಲ್ಲಿ, ಅಂಗಾಂಗಗಳ ಚಲನೆಯಲ್ಲಿ ನವರಸಗಳನ್ನು ಹೊರಹೊಮ್ಮಿಸುವ ಶಕ್ತಿ ಅವರಿಗಿತ್ತು.

ಸಾವಿರದ ಒಂಬೈನೂರ ತೊಂಭತ್ತೂರನೇ ಇಸವಿ. ಆಗ ಭಾದ್ರಪದ ಮಾಸ. ಶುಕ್ಲ ಪಕ್ಷ, ತ್ರಯೋದಶಿಯೋ, ಚತುರ್ದಶಿಯೋ ಇರಬೇಕು. ಅವರ ಆತ್ಮ ಪರಮಾತ್ಮನಲ್ಲಿ ಲೀನವಾಯಿತು. ಅವರನ್ನು ನೆನಪಿಸುವುದು, ಅವರ ಕಿರಿಯ ಒಡನಾಡಿಗಳಾದ ಶ್ರೀಕೃಷ್ಣ ಭಾಗವತರ ಸನ್ಮಾನ



ಸಮಾರಂಭದ ಈ ಶುಭ ಸಂದರ್ಭದಲ್ಲಿ ಯುಕ್ತ ಎಂದು ನನ್ನನಿಸಿಕೆ. ನಮಗೆ ಅವರ ಅಭಿನಯ ಸಾಮರ್ಥ್ಯವನ್ನು ದೇವರು ಕರುಣಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

## 'ಕುಣಿತಕ್ಕೆ ಪ್ರಶಸ್ತ'

# ದಿ. ಜಾಲಿಮನೆ ದೇವೇಂದ್ರ, ಹೆಗಡೆಯವರು

ನಾವೆಲ್ಲ ಸಣ್ಣವರಿರುವಾಗ, ಮದುವೆ , ಮುಂಜಿ , ಮುಂತಾದ ಸಮಾರಂಭಗಳಲ್ಲಿ ಯಾವನಾದರೊಬ್ಬ ಚೆನ್ನಾಗಿ ಅಲಂಕಾರ ಮಾಡಿಕೊಂಡು ಬಂದರೆ, 'ಬಂತು ಜಾಲೀಮನೆಯವನ ವೇಷ ' ಎನ್ನುತ್ತಿದ್ದರು. ನಮಗೆಲ್ಲ ಅವರು ಜಾಲೀಮನೆ ಅಜ್ಜ. ಅವರು ವೇಷ ಕಟ್ಟುವುದೇ ಅಷ್ಟೊಂದು ಸೊಗಸಾಗಿರುತ್ತಿತ್ತು.

ಹಿತ್ಲಳ್ಳಿ ಅನಂತ ಹೆಗಡೆಯವರ ನಂತರ ಅಷ್ಟು ಸೊಗಸಾಗಿ ಪೊಗಡೆ ಕಟ್ಟುವವರು ಜಾಲೀಮನೆ ದೇವೇಂದ್ರ, ಹೆಗಡೆಯವರಾಗಿದ್ದರು.

ಅವರು ಅಣ್ಣ ತಮ್ಮಂದಿರು ಇಬ್ಬರು. ತಮ್ಮ ವೆಂಕಟ್ರಮಣ ಹೆಗಡೆಯವರು. ಇವರ ಪಿತ್ರಾರ್ಜಿತ ಆಸ್ತಿ ಎರಡೆಕೆರೆ ಅಡಿಕೆ ತೋಟವಾದರೂ, ಸ್ವಂತ ಪರಿಶ್ರಮದಿಂದ 18 ಎಕರೆ ತೋಟ ಮಾಡಿದವರು. ವ್ಯಾಪಾರವನ್ನು ಮಾಡುತ್ತಿದ್ದ ಅವರು ಊರ ಜನರಿಗೆ ಅನುಕೂಲವಾಗಲೆಂದು 1292ರಲ್ಲಿ ಸಹಕಾರಿ ಸಂಘವನ್ನು ಸ್ಥಾಪಿಸಿ 1965 ರವರೆಗೂ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು.

ಎಷ್ಟೋ ಕಲಾವಿದರಿಗೆ ಪೂರ್ವಜರ ಪರಂಪರೆ ಇರುತ್ತದೆ. ಮನೆಯಲ್ಲಿ ಹಿರಿಯರಿಂದಲೇ ಕಿರಿಯರಿಗೆ ಆಟಗ್ಗೆ ಆಸಕ್ತಿ ಮೂಡಿ ಅದನ್ನು ಮುಂದುವರಿಸುತ್ತಾರೆ. ಆದರೆ ಇವರದು ಹಾಗಲ್ಲ. ಇವರಿಗೆ ಯಕ್ಷಗಾನವನ್ನು ಕಲಿಯಬೇಕೆಂಬ ಹಂಬಲ ಹದಿನಾರನೇ ವಯಸ್ಸಿನಲ್ಲಿ ಉಂಟಾಯಿತು. ಆಗಿನ ಕಾಲದ ಪ್ರಸಿದ್ಧ ಭಾಗವತರಾದ ಬೆಳಗುಂದ್ಲಿ ಭಾಗವತ ಹೆಗಡೆಯವರು ಬಕ್ಕಳದಲ್ಲಿ (ಯಕ್ಷಗಾನ ) ಪದದ ಶಾಲೆ ನಡೆಸುತ್ತಿದ್ದರು. ಅಲ್ಲಿ ಇವರು ಯಕ್ಷಗಾನ ಕಲಿತರು. ಮೊದಲು ಸ್ತ್ರೀ ಪಾತ್ರ (ಮೀನಾಕ್ಷಿ ಕಲ್ಯಾಣದ ಮೀನಾಕ್ಷಿ) ಮಾಡಿದ್ದರಂತೆ. ಆದರೆ ಅದು ಅವರ ದೊಡ್ಡ ಆಳ್ತನಕ್ಕೆ ಸರಿ ಹೊಂದುವುದಿಲ್ಲವೆಂದು ಅವರ ಗುರುಗಳೇ (ಬೆಳಗುಂದ್ಲಿ ಭಾಗೋತಜ್ಜ) ಸ್ತ್ರೀವೇಷ ಮಾಡುವುದು ಬೇಡ ಎಂದರಂತೆ. ಇವರು ಅನಕ್ಷರಸ್ತರೇನಲ್ಲ, 4 ನೇ ವರ್ಗದವರೆಗೆ ಹಾಸಣಗಿ ಶಾಲೆಯಲ್ಲಿ ಕಲಿತವರಂತೆ. ನಂತರ ಶಿರಸಿಯಲ್ಲಿ ಆರು ತಿಂಗಳ ಇಂಗ್ಲೀಷ್ ವಿದ್ಯಾಭ್ಯಾಸ, ಕೊನೆಯಲ್ಲಿ ಮನೆಯ ಹೊಣೆಗಾರಿಕೆ ಹೊರುವ ಸಲುವಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದರಂತೆ.

ಪುಟ ಪ್ರಾಯೋಜಕರು : **ಶ್ರೀ ಕೃಷ್ಣ ನಾರಾಯಣ ಹೆಗಡೆ, ಮಾಳಕೊಪ್ಪ**



ಹಾಗೆಯೇ ಇವರ ಹನ್ನೊಂದನೇ ವಯಸ್ಸಿನಲ್ಲಿ ಮೊದಲ ಮದುವೆ. ಕೈ ಹಿಡಿದ ಸತಿ ಮಹಾದೇವಿ. ತ್ರಯಂಬಕ ಹೆಗಡೆಯವರು ಅವಳ ಕುವರ. ಅವಳ ಕಾಲವಾದ ನಂತರ ಮರು ಮದುವೆ. ಗೋಪಿ ದ್ವಿತೀಯ ಮಡದಿ. ಇವಳಲ್ಲಿ ಮಹಾಬಲೇಶ್ವರ, ಗಣೇಶ, ಭಾಸ್ಕರ ಹಾಗೂ ಗೋಪಾಲರು ಮಕ್ಕಳು. ಮೂವರು ಹೆಣ್ಣು ಮಕ್ಕಳು.

ತಾಳ ಮತ್ತು ಲಯದ ಹಿಡಿತವನ್ನು ಸಾಧಿಸಿದ್ದ ಅವರು ಹಾವ, ಭಾವವನ್ನು ತೋರಿಸುವುದರಲ್ಲಿ ಎತ್ತಿದ ಕೈಯಾಗಿದ್ದರು. ರಾಮಾಶ್ವಮೇಧದ 'ದಮನ'ನ ಪಾತ್ರದಿಂದ ಇವರ ಪುರುಷವೇಷದ ಪ್ರಾರಂಭ. ಈ ಆಟ ನಡೆದದ್ದು ಭರಣಿಯಲ್ಲಿ. ಮೇಳದ ಕೆಲಸಗಾರರು ಹೊತ್ತಿದ್ದ ಮಂಚದ ಮೇಲೆ ಅಡಿಕೆ ಸೋಗೆಯ ಹಿಲಾಲು ಬೆಳಕಿನಲ್ಲಿ ಇವರ ಅಬ್ಬರದ ಕುಣಿತ. ನೆರೆದಿದ್ದ ಪ್ರೇಕ್ಷಕರನ್ನು ಮೊದಲ ಪ್ರವೇಶಕ್ಕೇ ಆಕರ್ಷಿಸಿಬಿಟ್ಟರು. ಅಲ್ಲಿಂದ ಮುಂದೆ ಇವರ ಯಕ್ಷಗಾನದ ಜೀವನ ರಾಜ ವೈಭವದಲ್ಲಿಯೇ ಸಾಗಿತು. ಇವರು ಅಂಬಾಪ್ರಸಾದಿತ ಯಕ್ಷಗಾನ ಮಂಡಳಿಯನ್ನು ಸ್ಥಾಪಿಸಿ, ಅನೇಕ ಕಡೆ ಆಟಗಳನ್ನು ಆಡಿದ್ದರು. ಮಳಗಿಮನೆ ಸುಬ್ರಾಯ ಹೆಗಡೆಯವರು ಇದರ ಮ್ಯಾನೇಜರರು. ಪ್ರಸಂಗಗಳಲ್ಲಿ ಪ್ರಮುಖ ವೇಷ ಇವರದೇ. ಭೀಷ್ಮ, ಶಬರ, ಸುಧನ್ವ, ಕರ್ಣ, ಕೀಚಕ, ವಿದ್ಯುನ್ಮತಿ ಕಲ್ಯಾಣದ ಚಿತ್ರಕೇತು, ಮಾಗಧ, ರಾಮ, ಭಕ್ತ ವಿಜಯದ ಭೀಮ, ಕೃಷ್ಣ ಹೀಗೆ ಎಲ್ಲ ಬಗೆಯ ಪಾತ್ರಗಳಲ್ಲೂ ಮೆರೆದವರಾಗಿದ್ದರು.

ಮಂಚಿಕೇರಿಯಲ್ಲಿ ಆದ ಜೋಡಾಟದಲ್ಲಿ ಅಭಿಮನ್ಯು ಕಾಳಗದ ಅಭಿಮನ್ಯುವಾಗಿ, ಆ ಪ್ರಸಂಗವನ್ನು ನೋಡಿದವರಿಗೆ, ಸಾಯುವವರೆಗೂ ಮರೆಯದ ಹಾಗೆ ತಮ್ಮ ಛಾಪನ್ನ ಮೂಡಿಸಿದ್ದರು. ಆರುಜನ ಕೈಯಲ್ಲಿ ಕೈಯಿಟ್ಟು ವೃತ್ತಾಕಾರವಾಗಿ ನಿಂತು ಕುಣಿಯುತ್ತಿದ್ದರೆ, ಇವರು ಒಬ್ಬ ನಟನ ಹೆಗಲೇರಿ, ಅಲ್ಲಿಂದಲೇ ಇನ್ನೊಬ್ಬನ ಹೆಗಲಿಗೆ ದಾಟುತ್ತ ಕೊನೆಯಲ್ಲಿ ಚಕ್ರವ್ಯೂಹದಲ್ಲಿ ಧುಮುಕುವ ದೃಶ್ಯ ಇನ್ನ್ಯಾರಿಂದಲೂ ಕಾಣಸಿಕ್ಕಿಲ್ಲವೆಂದೇ ಅದನ್ನು ನೋಡಿದವರ ಅಭಿಪ್ರಾಯ. ಇವರ ಪಾತ್ರ ಬಂದಕೂಡಲೇ ಪ್ರೇಕ್ಷಕವರ್ಗ ಅದನ್ನು ನೋಡಲು ಇತ್ತ ಕಡೆ ಬರುತ್ತಿದ್ದಂತೆ (ಆಟಗಳು ನಡೆದ ರಂಗಸ್ಥಳಗಳ ಅಂತರ 50 ಮೀಟರ್ ಇರಬಹುದೋ ಏನೋ) ಚಿಕ್ಕೊತ್ತಿಯಲ್ಲೊಮ್ಮೆ ಇವರದು ಕಂಸನ ಪಾತ್ರ. ಮನೆಗೆ ಬರುವಷ್ಟರಲ್ಲಿ ಇವರ ಮಡದಿಗೆ ಗರ್ಭಪಾತವಾಗಿ ಶಿಶು ಸತ್ತು ಹೋಯಿತು. ಅಂದಿನಿಂದ ತಮ್ಮ ಜೀವಿತದ ಕೊನೆಯವರೆಗೂ ಕಂಸನ ಪಾತ್ರವನ್ನು ಮಾತ್ರ ಮಾಡಲಿಲ್ಲ. ಇವರ ಪಾತ್ರಗಳು ಎಲ್ಲವೂ ಮೆಚ್ಚುವಂಥಹದೇ.

ಪ್ರಾಯಶಃ ಅವರಷ್ಟು ಪ್ರತಿಭೆ, ಜ್ಞಾನ ಇದ್ದವರು ನಮಗಂತೂ ಯಾರೂ ಕಾಣುವುದಿಲ್ಲ. ಆದಕ್ಕಾಗಿಯೇ ಅವರು ಕಥಾ ನಾಯಕನ ಪಾತ್ರವನ್ನೇ ಮಾಡುವ ಪ್ರಸಂಗ ಬರುತ್ತಿತ್ತು. ತುಂಬೇಬೀಡಿನಲ್ಲಿ ದೇವರ ಸಂಪ್ರೋಕ್ಷಣ ದೇವಕಾರ್ಯ. ಅದೇ ದಿನ ಇವರ ಭಾವ ವೆಂಕೂ ಭಟ್ಟರ ವಧೂ ಗ್ರಹಪ್ರವೇಶ ಸಮಾರಂಭ. ಆದ್ದರಿಂದ ಆ ದೇವಕಾರ್ಯದ ದಿನ ಯಕ್ಷಗಾನ



ಭೀಷ್ಮವಿಜಯ ಪ್ರಸಂಗವಿದ್ದರೂ ತಾನು ಬರಲಿಕ್ಕಾಗುವುದಿಲ್ಲವೆಂದು ತಿಳಿಸಿದ್ದರು. ಮಧ್ಯಾಹ್ನ ಮೇಲೆ ಬಂದ ನೆಂಟರಿಷ್ಟರು ಇವರಿಗೆ ಬುದ್ಧಿಹೇಳಿದರು. ಆ ದೇವಕಾರ್ಯಕ್ಕೆ ಗೋಕರ್ಣಸ್ಥರೆಲ್ಲ ಬರುತ್ತಾರೆ. ಆಟ ಚೆನ್ನಾಗಿ ಆಗದಿದ್ದರೆ ಮೇಳದ ಮರ್ಯಾದೆ ಹೋಗುತ್ತದೆ ಎಂದು ಇವರಿಗೂ ಹೌದೆಂದೆನಿಸಿತು. ಸಾಯಂಕಾಲ ಜಾಲೀಮನೆಯಿಂದ ನಡೆದು ತುಂಬೇಬೀಡಿಗೆ ಹೊರಟರು.

ಸಾಮಾನ್ಯವಾಗಿ ಪಾತ್ರಗಳನ್ನು ಹಂಚುವ ಕೆಲಸವನ್ನು ಮೇಳದ ಮ್ಯಾನೇಜರ ದಿ. ನರಸಿಂಹ ಹೆಗಡೆ ಹಿತ್ಲಳ್ಳಿಯವರು ಮಾಡುತ್ತಿದ್ದರು. ಅವರಷ್ಟು ಸೂಕ್ತವಾಗಿ ಪಾತ್ರಗಳಿಗೆ ನಟರನ್ನು ಆಯ್ಕೆ ಮಾಡುವವರು. ಆ ಕಾಲದಲ್ಲಿ ಇನ್ನಾರೂ ಇರಲಿಲ್ಲ. ದ್ಯಾವಪ್ಪ ಹೆಗಡೆಯವರು ಬರಲಿಲ್ಲವೆಂದಾಗ ಮಾತಿನ ಮಲ್ಲ ವಿಶ್ವೇಶ್ವರ ಹೆಗಡೆಯವರಿಗೆ ಆ ವೇಷ ಮಾಡಲು ಹೇಳಿದರು. ಅವರು ಅನಿವಾರ್ಯವಾದಾಗ ಯಾವ ಪಾತ್ರವನ್ನೂ ಮಾಡಿ 'ಸೈ' ಎಂದು ಪ್ರೇಕ್ಷಕರಿಂದ ಎನಿಸಿಕೊಳ್ಳುತ್ತಿದ್ದರು. ಅಂದು ನಾಮ ಬರೆದು ಇನ್ನೇನು ತಲೆಗೆ ಕಿರೀಟವನ್ನು ಕೂಡ್ರಿಸಬೇಕು ಎನ್ನುವಷ್ಟರಲ್ಲಿ ಜಾಲೀಮನೆಯವರು ಅಲ್ಲಿಗೆ ಹೋಗಿ ತಲುಪಿದರು. ಇವರನ್ನು ಕಂಡಕೂಡಲೇ ಕಿರೀಟ ಕಟ್ಟಲು ಕೈಯೆತ್ತಿಕೊಳ್ಳುವವರಿದ್ದ ವಿಶ್ವೇಶ್ವರ ಹೆಗಡೆಯವರು ಕಿರೀಟವನ್ನು ಕೆಳಗಿಟ್ಟರು. 'ಅಂತ ಇಂದಿನ ಪ್ರಸಂಗ ಹ್ಯಾಂಗ ಆಗೋ ಹೇಳಿದ್ದು ಹಾಂಗೆ ಆಗ್ತು. ಯೆನ್ಗೀಗ ಧೈರ್ಯ ಬಂತು' ಎಂದರು. ಆ ದಿನ ಶೀಘ್ರವಾಗಿ ವೇಷ ತಯಾರು ಮಾಡಿ ಭೀಷ್ಮನ ಪಾತ್ರವನ್ನು ನಿರ್ವಹಿಸಿದ್ದು ಹಳಬರಿಗೆ ಮರೆಯಲು ಸಾಧ್ಯವಿಲ್ಲ.

ಇವಳೊಮ್ಮೆ ಗಣೇಶಪಾಲನಲ್ಲಿ ಕೇವಲ ಕುಣಬಿಗಳ ಸಂಗಡ ಕೃಷ್ಣಸಂಧಾನದ ಕೃಷ್ಣನನ್ನು ಮಾಡಿ ಬಂದ ಪ್ರೇಕ್ಷಕರೆಲ್ಲ ಸೈ ಅನ್ನುವಂತೆ ಮಾಡಿದವರು. ಇವರು ಕೃಷ್ಣ ಪ್ರವೇಶಕ್ಕೆ ಬಳಸುವ ಪದ್ಯ 'ದೇವ ಬಂದ ದೇವರ ದೇವ ಬಂದ'. ಈಗ ಈ ಪದ್ಯವನ್ನು ಬಳಸುವುದು ಕಡಿಮೆ.

ಇವರು ಕೀಚಕರಾಗಿ ಅಭಿನಯಿಸುವಾಗ ಜನರ ಮನ ಸೆಳೆಯುವ ಪದ್ಯವೆಂದರೆ 'ಎಲಗೆ ಸೈರಂಧ್ರಿ ನೀನಿಲ್' ಕೀಚಕನ ಮನೆಗೆ ಮಧು ತರಲು ಸೈರಂಧ್ರಿ ಬರುತ್ತಾಳೆ. ಕೀಚಕನ ಅಕ್ಕಾ ಸುದೇಷ್ಣೆಗೆ ಅವನು ಹೇಗಾದರೂ ಮಾಡಿ ಅವಳನ್ನು ತನ್ನ ಮನೆಗೆ ಕಳಿಸಿಕೊಡು ಎಂದು ದುಂಬಾಲು ಬಿದ್ದುದರ ಪರಿಣಾಮವಿದು. ಮಧು ತೆಗೆದುಕೊಂಡು ಹೊರಟ ಸೈರಂಧ್ರಿಯನ್ನು ನಿಲ್ ಎಂದು ನಿಲ್ಲಿಸುವ ಝಂಪೆತಾಳದ ಪದ್ಯವನ್ನು ಇನ್ನಾರೂ ಅಷ್ಟು ಚೆನ್ನಾಗಿ ಮಾಡಲು ಸಾಧ್ಯವಿಲ್ಲವಾಗಿತ್ತಂತೆ.

ಶೃಂಗಾರ ರಸದಲ್ಲಿ ಎಷ್ಟು ಪ್ರವೀಣನೂ, ಕರುಣಾ ರಸದ ಅಭಿವ್ಯಕ್ತಿಯಲ್ಲೂ ಅಷ್ಟೇ ನಿಷ್ಣಾತರು. ಕರ್ಣನ ರಥವು ರುಧಿರ ತೊಯದಿ ಕೆಸರಾದ ಭೂಮಿಯಲ್ಲಿ ಹುಗಿದು ಹೋದಾಗ ಕೃಷ್ಣನ ಅಣತಿಯಂತೆ ಅರ್ಜುನ ಬಿಲ್ಲಿಗೆ ಬಾಣ ಹೂಡುತ್ತಾನೆ. ಆಗ ಹೂತು ಹೋದ ರಥವನ್ನು ಎತ್ತುವ ಅಭಿನಯ ಮಾಡುತ್ತ, ಸಾವಕಾಶವಾಗಿ 'ಗಳಿಗೆ ಸೈರಿಸು ಪಾರ್ಥ ರಥವೆತ್ತಿ ಸೆಣಸುವ' ಎಂಬುದನ್ನು



ಹೇಳುತ್ತಿದ್ದಾಗ ಅರ್ಜುನನಿಗೂ ಕಣ್ಣಲ್ಲಿ ನೀರು ಬರುವ ಹಾಗಾಗಿತ್ತಂತೆ.

'ವಿದ್ಯುನ್ಮತಿ ಕಲ್ಯಾಣ'ದಲ್ಲಿ, ಕುಶನ ಮಗ ಚಿತ್ರಕೇತು ಬೇಟೆಗೆಂದು ತೆರಳಿದಾಗ, ಒಂಟಿಯಾಗಿ ಸರೋವರದ ದಂಡೆಯ ಮೇಲೆ ಮಲಗಿರುತ್ತಾನೆ. ಆಗ ಅಲ್ಲಿಗೆ ಬಂದ, ರಾಕ್ಷಸಿ ವೃತ್ತಜ್ವಾಲೆ ಅವನನ್ನು ಮೋಹಿಸಿ ತನ್ನ ಅರಮನೆಗೆ ಕೊಂಡೊಯ್ಯುತ್ತಾಳೆ. ಅವಳು ಇವನನ್ನಿಟ್ಟ ಕಾರಾಗ್ರಹದಲ್ಲಿಯೇ, ವೃತ್ತಜ್ವಾಲೆಯ ಅಣ್ಣ ಕಾಲಜಂಘನೂ ವಿದ್ಯುನ್ಮತಿಯನ್ನು ಅಪಹರಿಸಿ ತಂದು ಇಟ್ಟಿರುತ್ತಾನೆ. ಮಲಗಿದ್ದ ಚಿತ್ರಕೇತು ಎಚ್ಚರಾದ ನಂತರ ನೋಡುವುದು ವಿದ್ಯುನ್ಮತಿಯನ್ನು. ಇವಳೇ ಮಾಯಾವಿ ರಾಕ್ಷಸಿ ತನ್ನನ್ನು ತಂದವಳೆಂದು ಭಾವಿಸಿ ಮೃದುವಾಗಿ 'ಯಾರು ನೀನೆಲೆ ಚದುರೆ' ಎಂದು ಕೇಳುತ್ತಾನೆ. ಮಲ್ಲಿಕಾಸ್ಮಿತ ಚದುರೆ ಎನ್ನುವ ತನಕ ಜಾಲೀಮನೆಯವರದು ಶೃಂಗಾರ ಭಾವ.'ಬುಲ್ಲೆದನುಜೆ ನೀನಾರು, ಅಡವಿಯೊಳಿರೆ ನಾನು ಎನ್ನನು ಪೊತ್ತ ಕುಟಿಲ ಗಾರ್ತಿಯೆ ನೀನು' ಎನ್ನುವಾಗ ಅವರು ತೋರಿಸುವ ರೌದ್ರ ರಸದ ಪರಿಣಾಮವಾಗಿ ವಿದ್ಯುನ್ಮತಿ ಪಾತ್ರಧಾರಿ ಓಡಿಹೋಗಿದ್ದೂ ಉಂಟಂತೆ. 'ಪಟ್ಟಾಭಿಷೇಕ'ದ ರಾಮ, 'ಭಕ್ತವಿಜಯ'ದ ಭೀಮ ಇವೂ ಕೂಡ ಜನಮೆಚ್ಚಿದ ಪಾತ್ರಗಳೇ.

ಪುತ್ರಕಾಮೇಷ್ಟಿಯಲ್ಲಿ ಮೊದಲು ಆದಿನಾರಾಯಣನ ಪಾತ್ರ ನಿರ್ವಹಿಸಿದ ನಂತರ ರಾಮನ ಪಾತ್ರ ನಿರ್ವಹಿಸುತ್ತಿದ್ದರಂತೆ. ಇವರು ಅದ್ಭುತವಾಗಿ ಮಾಡುವ ಪಾತ್ರಗಳಲ್ಲಿ ಇಂದ್ರಕೀಲದ 'ಶಬರ' ನೇ ಶ್ರೇಷ್ಠವೇನೋ. ಅರ್ಜುನ ತಪಸ್ಸಿಗೆ ಕುಳಿತಾಗ ಹಂದಿ ರೂಪದ ದಾನವನನ್ನು ಕೊಲ್ಲಲು ಬಾಣ ಬಿಟ್ಟಿದ್ದಾನೆ. ಅದೇ ಕಾಲಕ್ಕೆ ಭಕ್ತನಿಗೆ ದರ್ಶನ ನೀಡಬೇಕೆಂದು ಶಬರನಾಗಿ ಬಂದ ಶಂಕರನೂ ಬಾಣ ಬಿಟ್ಟಿದ್ದಾನೆ. ಆಗ ಜಾಲೀಮನೆ ಹೆಗಡೆಯವರು ಶಬರನಂತೆ ಒಂದು ಕಾಲನ್ನ ಎತ್ತಿಕೊಂಡೇ ಇಡೀ ಪದ್ಯ 'ಏನೆಂಬುತ್ತಾನುಡಿ ವುತ್ತಿದ್ದಿಯ್ಯಾ। ಎಲೆ ಹಾರುವಯ್ಯ। ಏನೆಂಬುತ್ತ ನುಡಿವುತ್ತಿದ್ದಿ, ಹೀನಲತೆಯ ತಿನ್ನುತ್ತಿದ್ದಿ ...।' ಎಂಬುದನ್ನು ಅಭಿನಯಿಸುತ್ತಿದ್ದಾಗ ಅರ್ಜುನ ಪಾತ್ರಧಾರಿಗೆ ಈಗ ಇವರು ತನ್ನನ್ನು ಒದ್ದೆಬಿಡುತ್ತಾನೆಂದು ಬೆದರಿ ರಂಗಸ್ಥಳದಿಂದಲೇ ಓಡಿದರಂತೆ. ಇದೇ ಕಾರಣಕ್ಕಾಗಿಯೇ ಕರ್ಕಿ ಮೇಳದಲ್ಲಿ ಇವರು ಸಾಕಷ್ಟು ಪಾತ್ರ ಮಾಡಿದ್ದರಂತೆ. ಕರ್ಕಿ ಪರಮಜ್ಜ (ದಿ. ಪಿ. ವಿ. ಹಾಸ್ಯಗಾರರ ಅಜ್ಜ) ಹಾಗೂ ಇವರ ಅರ್ಜುನ ಅನೇಕ ಬಾರಿ ಆಗಿದ್ದುಂಟಂತೆ. ಒಂದು ದಿನ ಅವರು ಶಬರರಾದರೆ, ಇನ್ನೊಂದು ದಿನ ಇವರದು ಶಬರ. ಅದೇ ರೀತಿ ದಿ. ರಾಧಾಕೃಷ್ಣ ಭಟ್ಟ, ಗುಬ್ಬಿ ಅಜ್ಜ, ತಿಮ್ಮಣ್ಣ ಹೆಗಡೆ, ಮೂಡ್ಕಣಿ ನಾರಾಯಣ ಹೆಗಡೆ ಇವರೆಲ್ಲರ ಸಂಗಡವೂ ಪಾತ್ರ ಮಾಡಿ ಖ್ಯಾತಿಯನ್ನು ಪಡೆದವರು.

ಇಷ್ಟೇ ಅಲ್ಲ ದೂರದ (ಆಗಿನ ಕಾಲಕ್ಕೆ) ದಕ್ಷಿಣ ಕನ್ನಡ ಜಿಲ್ಲೆಗೂ ತೆರಳಿ ತೆಕ್ಕಟ್ಟೆ ಬಾಬಣ್ಣ, ಹಾಲಾಡಿ ಶೀನ, ಸಾಲಿಗ್ರಾಮ ಮಂಜುನಾಥಯ್ಯ ಇವರ ಜೊತೆಯಲ್ಲಿಯೂ ಮುಖ್ಯಪಾತ್ರಗಳನ್ನೇ ಮಾಡಿ ಹೆಸರು ಮಾಡಿ ಬಂದವರು.



ಇವರ ಪುತ್ರ ತ್ರಯಂಬಕ ಹೆಗಡೆಯವರಿಗೆ ಮರೆಯಲಾರದ ಘಟನೆಗಳಲ್ಲಿ ಮೊದಲನೆಯದೆಂದರೆ ಸ್ವರ್ಣವಲ್ಲೀ ಶ್ರೀಗಳು ( ಬ್ರಹ್ಮೀಭೂತ ಪ. ಪೂ. ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳು) 'ಭೀಷ್ಮ ವಿಜಯ' ಆಟವನ್ನು ಆಡಿಸಿ, ಇವರ ಭೀಷ್ಮನನ್ನು ಹಾಡಿ ಹೊಗಳಿ, ಐವತ್ತೊಂದು ರೂಪಾಯಿಗಳ ಸುವರ್ಣ ಮಂತ್ರಾಕ್ಷತೆ ಕೊಟ್ಟಿದ್ದು. (ಇಂದಾದರೆ 10,000 ರೂ. ಗಳ ಮೊಬಲಗಾಗುತ್ತಿತ್ತು) ಶ್ರೀ ಗುರುಗಳ ಆಶೀರ್ವಾದವೋ ಏನೋ ಎಂಬಂತೆ ಅದೇ ವರ್ಷ ಬೇರೆ ಬೇರೆ ಕಡೆಗಳಲ್ಲಿ ಮೂವತ್ತಮೂರು ಭೀಷ್ಮವಿಜಯ ನಡೆಯಿತಂತೆ. ಇಂಥ ಮಹಾನ ಕಲಾವಿದರು ಕೃಷಿಯಲ್ಲೂ ಎತ್ತಿದ ಕೈ. ಸಾಮಾಜಿಕ ಕೆಲಸದಲ್ಲೂ ತೊಡಗಿಕೊಂಡವರಾದುದರಿಂದ 1954 ರಿಂದೀಚೆಗೆ ತಮ್ಮ ಕಲಾ ಪ್ರದರ್ಶನವನ್ನು ಬಿಟ್ಟಿದ್ದರು. ಆದರೆ 1970ರಲ್ಲಿ ದಿ. ರಾಮಕೃಷ್ಣ ಹೆಗಡೆ ಮಳಗಿಮನೆ, ಜಿ. ಟಿ. ಭಟ್ಟರಿಗೆ ಯಕ್ಷಗಾನವನ್ನು ಕಲಿಯಲೇಬೇಕೆಂಬ ಛಲ ಹುಟ್ಟಿಕೊಂಡಾಗ ಇವರ ಆಸಕ್ತಿ ನೋಡಿ ಕಲಿಸಬಂದವರು. 'ಮಾಗಧ ವಧೆ' ಪ್ರಸಂಗ ಇವರು ಮಾಗಧನನ್ನು ಮಾಡಿದವರಂತೆ. ಆ ಪ್ರಸಂಗದ ಮುಖ್ಯ ವೇಷಗಳು ಮಾಗಧ ಮತ್ತು ಕೃಷ್ಣ. ಇವೆರಡರಲ್ಲೂ ಸಿದ್ಧಹಸ್ತರಾದವರು ಇವರು. ಆಸನದ ಮೇಲೆ ಕುಳಿತು 'ಹರಹರೇನಾಶ್ಚರ್ಯ ಮೂವರು ಧರಾಮರರಲ್ಲ' ವೆಂದು ಅಭಿನಯಿಸಿ 'ಧುರವ ಬಯಸಿಯೆ ಬಂದ ಭೂಪರು ಪರಿಕಿಸುವೊಡೆ' ಈ ಭಾಗವನ್ನು ಎರಡನೇ ಕಾಲದಲ್ಲಿ ನರ್ತಿಸುವುದಕ್ಕೆ ಹೇಳಿಕೊಟ್ಟಿದ್ದರು. ಸಭೆಗೆ ಪ್ರವೇಶಿಸುವಾಗ 'ತಮಾ ಹೀಗೆ ಮಖಷಡಿಯೊ ಅದಕಕ್ಕೊಂದುಥರಾ ಆಕರ್ಷಣೆ ಇರ್ತು'. ಅವರು ಎಪ್ಪತ್ತರ ಹರಯದಲ್ಲಿ ಕುಣಿಯುತ್ತಿದ್ದರೂ ಬಹು ಮೋಹಕವಾಗಿ ಕುಣಿಯುತ್ತಿದ್ದರು.

ಇವರು ಇಷ್ಟೆಲ್ಲಾ ಪ್ರಸಿದ್ಧರೂ , ಸಿದ್ದಿ ಹೊಂದಿದವರೂ ಆಗಿದ್ದರೂ ಏಕೆ ತಮ್ಮ ಮನೆಯ ಮಕ್ಕಳಿಗೆ ಕಲಿಸಲಿಲ್ಲ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೂ ಕಾರಣವಿದೆ. ತಾನು ಆಟ ಕುಣಿದ ಮರುದಿನ ಮನೆ ಕಂಬಳ ಮನೆಗಳಿಗೆ ಸೋಗೆ ಹೊದಿಸುವುದನ್ನು ವರ್ಷದಲ್ಲಿ 28 ಬಾರಿ ಮಾಡಿದ್ದೇನೆ. ನಿಮ್ಮ ಹತ್ತಿರ ಒಂದಾದರೂ ಸಾಧ್ಯವೇ, ನಿಮ್ಮ ಶರೀರದಲ್ಲಿ ಬಲವೇ ಇಲ್ಲ. ಹಾಗಾಗಿಯೇ ತನ್ನಿಂದಲೇ ಪ್ರಾರಂಭ, ತನ್ನ ಕಾಲಕ್ಕೇ ಮುಕ್ತಾಯ. ಆಟ ಕುಣಿದ। ಮನೆ ಮಠ ಮಾರಿದವನು ತಾನಲ್ಲ. ಬಡತನವನ್ನು ಯಾರಿಗೂ ಕಾಣಿಸಲೂ ಇಲ್ಲ. ಬಹುಶಃ ಅವರ ಈ ತತ್ವ ಸರಿ ಇದ್ದರೂ, ತ್ರಿಯಂಬಕ ಹೆಗಡೆಯವರಿಗೆ ಯಕ್ಷಗಾನ ಕಲಿಸಿದ್ದಿದ್ದರೆ, ನಮ್ಮಲ್ಲಿ ಯಕ್ಷಗಾನ ಇನ್ನೂ ಹೆಚ್ಚು ಜೀವಂತವಿರುತ್ತಿತ್ತು ಎಂದು ನಮ್ಮ ಭಾವನೆ. ಯಾರಿಗೆ ಗೊತ್ತು. ಜಾಲೀಮನೆ ವಂಶದಲ್ಲಿ, ಇವರ ತಮ್ಮನ ಮಕ್ಕಳೂ, ಮೊಮ್ಮಕ್ಕಳೂ ಬೇರೆ ಬೇರೆ ರಂಗದಲ್ಲಿ, (ಚಿತ್ರಕಲೆ, ನಾಟಕ, ಮರದಿಂದ ಪ್ರತಿಮೆ ಮಾಡುವುದು ಇತ್ಯಾದಿ ) ಗಳಲ್ಲಿ ಹೆಸರು ಮಾಡುತ್ತಿದ್ದಾರೆ. ಹಾಗೆಯೇ ಈ ರಂಗದಲ್ಲೂ ಮುಂದೊಂದು ದಿನ ಅವರ ಹೆಸರನ್ನು ಮೊಮ್ಮಕ್ಕಳು ಹೇಳಿಸಲೆಂಬುದು ನಮ್ಮ ಆಶಯ.

ಪುಟ ಪ್ರಾಯೋಜಕರು : **ಶ್ರೀ ಗಣಪತಿ ಶಿವರಾಮ ಹೆಗಡೆ, ತಟ್ಟೀಸರ**



## ಆಟ, ತಾಳಮದ್ದಲೆಗಳೆರಡರಲ್ಲೂ ಪಾರಂಗತ

# ದಿ. ಅಣ್ಣಯ್ಯ ಹೆಗಡೆ

ಆಗ 1951-52 ನೇ ಇಸ್ವಿ ಇರಬಹುದೇನೋ. ಬೆಳಗುಂದ್ಲಿಯಲ್ಲಿ ನೂತನ ಮನೆ ಗೃಹಪ್ರವೇಶದ ದಿನ. ಆಗೆಲ್ಲ ಮನೆ ಗೃಹಪ್ರವೇಶಕ್ಕೆ ರಾತ್ರೆ ಜಾಗರ (ತಾಳಮದ್ದಲೆ) ಮಾಡಬೇಕಾಗುತ್ತಿತ್ತು. ಪ್ರಾಮುಖ್ಯವಾಗಿ ಐರಾವತ ಪ್ರಸಂಗವನ್ನು ಮಾಡುತ್ತಿದ್ದರು.

ಬಾಳೆಹದ್ದದ ಕೃಷ್ಣ ಭಾಗವತರ ಪದ್ಯವನ್ನು ನಾನು ಮೊದಲು ಕೇಳಿದ್ದು ಅಲ್ಲಿಯೇ. ಸಣ್ಣವನಾದ ನನಗೆ ಗೊರ್ಸಗದ್ದೆ ವಿಘ್ನೇಶ್ವರ ಹೆಗಡೆಯವರ ಕಂಠಸಿರಿ ಅಪ್ಯಾಯಮಾನವಾಗಿತ್ತು. ಒಳ್ಳೆಯ ಹಾಡುಗಾರರನ್ನು ಕಂಡಕೂಡಲೇ ಅವರ ಶಾರೀರ, ಇವರ ಶಾರೀರಕ್ಕೆ ಹೋಲಿಸುತ್ತಿದ್ದೆ. ಆ ರಾತ್ರೆ ವಿಘ್ನೇಶ್ವರ ಹೆಗಡೆಯವರ ಹಾಗೆ ಹಾಡುತ್ತಾರಲ್ಲ ಭಾಗವತರು ಎಂದು ಆಶ್ಚರ್ಯವಾಯಿತು. ವಿಘ್ನೇಶಾಯ, ಸರಸ್ವತ್ಯೈ ಪಾಽರ್ವತ್ಯೈ ಗುರವೇ ನಮಃ ಎಂದು ಸ್ವಚ್ಛವಾಗಿ ಖಿಲ್ಲಾ ಗಂಟಿನಿಂದ ಭಾಗವತರು ಹಾಡಿದಾಗ ಉಂಟಾದ ಸಂತೋಷ ಅಂದು ಬೆಳಗಿನವರೆಗೂ ಉಳಿಯುವಂತೆ ಮಾಡಿದವರು ಐರಾವತದಲ್ಲಿ ಅರ್ಜುನನ ಪಾತ್ರ ಮಾಡಿದ ದಿ. ಅಣ್ಣಯ್ಯ ಹೆಗಡೆಯವರು. ನನಗೆ ಅವರ ಪರಿಚಯವಾದ ಮೇಲೆ ಅವರನ್ನು ಅಣ್ಣಯ್ಯ ಮಾವ ಎಂದು ಕರೆಯುತ್ತಿದ್ದೆ.

ಕಪ್ಪಾದರೂ ತೇಜಸ್ಸಿನಿಂದ ಕೂಡಿದ ಮುಖ, ಜುಟ್ಟು ಬಿಟ್ಟ ಕ್ರಾಫ್, ಸ್ಪಷ್ಟವಾದ ಮಾತು, ಹದವಾದ ಅಭಿನಯ. ಭಾಗವತರ ಹಾಡಿಗೆ ತಾನೂ ಧ್ವನಿ ಕೂಡಿಸುವುದು ಅವೆಲ್ಲವುಗಳ ಮೂಲಕ ಆ ದಿನದ ಆರ್ಜುನ ನನ್ನ ಮನಸೆಳೆದ. ಆ ದಿನ 'ದೇವೇಂದ್ರ ನಿನ್ನ ಪದಕೆ' ಎಂಬ ಪದ್ಯವನ್ನು ಕುಳಿತಲ್ಲಿಯೇ ಅಭಿನಯಿಸಿದ ಅವರ ರೀತಿ ಇಂದಿಗೂ ನನಗೆ ನೆನಪಿದೆ.

ನಾನು ಅವರ ಯಕ್ಷಗಾನ ಆಟದ ಪಾತ್ರಗಳನ್ನು ನೋಡಿದ್ದೆನಾದರೂ ನೆನಪಿಲ್ಲ. ಬಹುಶಃ ಪಾದುಕಾ ಪಟ್ಟಾಭಿಷೇಕದ ದಶರಥನನ್ನು ನೋಡಿದ ನೆನಪು ಮಸುಕಾಗಿ ಕಾಣುತ್ತದೆ.

ಮೂಲತಃ ಮೆಣಸಿ ಸೀಮೆಯ ಮಣ್ಮನೆಯವರಾದ ಇವರು ಓಣೀತೋಟದ ವರದಪ್ಪ ಹೆಗಡೆಯವರ ಭಾವಂದಿರು. ತನ್ನ 20 ನೇ ವಯಸ್ಸಿನಲ್ಲಿ ಓಣೀತೋಟಕ್ಕೆ ಬಂದ ಮೇಲೆ ಸಾಯುವವರೆಗೂ ಅಲ್ಲಿಯೇ ಉಳಿದಿದ್ದರು. ಯಾವ ಪಾತ್ರವನ್ನಾದರೂ ಚೆನ್ನಾಗಿ ಅಭಿನಯಿಸಬಲ್ಲವರಾದ ಅವರು ಭೀಷ್ಮ ವಿಜಯದ ಸಾಲ್ವ, ಐರಾವತದ ಅರ್ಜುನ, ಸಂಧಾನದ ಕೌರವ, ಐರಾವತದ ಅರ್ಜುನ, ದ್ರೌಪದಿ ಪ್ರತಾಪದ ಅರ್ಜುನ, ಪಟ್ಟಾಭಿಷೇಕದ ದಶರಥಿ ಪಾತ್ರಗಳಲ್ಲಿ ಮಿಂಚಿದವರಾಗಿದ್ದರಂತೆ.

ಕೃಷ್ಣಸಂಧಾನದಲ್ಲಿ ಜಾಲಮನೆಯವರ ಕೃಷ್ಣ ಸುಪ್ರಸಿದ್ಧ. ಆದರಲ್ಲಿಯೂ ವಿದುರನ ಜೊತೆ,

ಪುಟ ಪ್ರಾಯೋಜಕರು : **ಶ್ರೀ ಕೃಷ್ಣ ರಾಮಕೃಷ್ಣ ಹೆಗಡೆ, ಕೊಟ್ಟಳ್ಳಿ**



ಕೃಷ್ಣ ಹೇಳುತ್ತಾ ಬರುವ ಪದ್ಯ ‘ ನೋಡಿದೆಯಾ ವಿದುರ, ಕೌರವ ಮಾಡಿದೋಲಗವ, ಓಡಿ ಹೋಗಲಿ ಕೃಷ್ಣನೆನುತ ...’ ಈ ಪದ್ಯವನ್ನು ಅದ್ಭುತವಾಗಿ ಅಭಿನಯಿಸುತ್ತಿದ್ದರಂತೆ. ಇದಕ್ಕೆ ಪ್ರತಿಯಾಗಿ ಅಷ್ಟೇ ಸಮರ್ಥವಾಗಿ ಕೌರವನ ಪದ್ಯಗಳಾದ ‘ನೋಡಿರೈ, ಕುಲಹೀನನೊಳು ಮಾತಾಡಿ ಬಹ ಗೋವಳನ ಠೀವಿಯ, ಅರಸು ಮಕ್ಕಳ ಸಭೆಯ ಹೊಕ್ಕರಿಯನೀತನು .... ಇವುಗಳಿಗೆ ಅಣ್ಣಯ್ಯ ಹೆಗಡೆಯವರು ಮಾತ್ರ ತುಂಬ ಚೆನ್ನಾಗಿ ಅಭಿನಯಿಸುತ್ತಿದ್ದರಂತೆ.

ಭೀಷ್ಮ ವಿಜಯದಲ್ಲಿ ಅಣ್ಣೇಮಾವನದು ‘ಸಾಲ್ವ’ನ ಪಾತ್ರ. ತುಂಬೇ ಬೀಡಿನ ಸಂಪ್ರೋಕ್ಷಣ ದೇವರ ಕಾರ್ಯದಲ್ಲಿ ವಿದ್ವಜ್ಜನರ ಸಮ್ಮುಖ ನಡೆದ ಭೀಷ್ಮ ವಿಜಯ ಅದ್ಭುತವಾಗಿತ್ತೆಂದು ನೋಡಿದವರ ಅಭಿಪ್ರಾಯ. ಉತ್ತಮ ಮಾತುಗಾರರೂ ಆದ ಇವರು ವನದಲ್ಲಿ ಅಂಬೆಯನ್ನು ಕಂಡೊಡನೆ ವ್ಯವಸ್ಥಿತವಾದ ಪೀಠಿಕೆ ಹಾಕಿ ಅಂಬೆಯನ್ನು ಮಾತನಾಡಿಸುವುದು ಯೋಗ್ಯವೆಂದು ಪ್ರೇಕ್ಷಕರಿಗೆ ಬಿಂಬಿಸಿ ‘ಪರಮ ಸುಂದರಿ, ನಿನ್ನ ಪೆಸರೇನು ಪೇಳು ’ ಪದ್ಯವನ್ನು ಅಭಿನಯಿಸುತ್ತಿದ್ದರಂತೆ.

ಪಟ್ಟಾಭಿಷೇಕದ ದಶರಥ ಕೈಕೇಯಿಯೊಡನೆ ಕೇಳುವ ದೃಶ್ಯ ‘ಏನಾಯಿತಂಬುಜನೇತ್ರೇ ಮಾನಿನಿಯರ ಮೌಳಿ’ ಇದೂ ಅವರು ಉತ್ತಮವಾಗಿ ಅಭಿನಯಿಸುವ ಭಾಗವಾಗಿತ್ತಂತೆ. ಇವೆಲ್ಲಕ್ಕಿಂತ ಅವರ ಐರಾವತದ ಅರ್ಜುನ ಹೆಚ್ಚು ಪರಿಣಾಮಕಾರಿಯಾಗುತ್ತಿತ್ತೆಂದು ನೋಡಿದವರ ಅಭಿಪ್ರಾಯ.

ಗುಣ ಕಂಡಲ್ಲಿ ಗೌರವಿಸುವ ಸಜ್ಜನಿಕೆಯ ಸ್ವಭಾವ ಅವರಿಸಿತ್ತು. ನಾನು ಅರ್ಥ ಹೇಳುವುದನ್ನು ಪ್ರಾರಂಭ ಮಾಡಿದಾಗ ‘ಕೃಷ್ಣ ಸಂಧಾನ’ ದಲ್ಲಿ ನನ್ನದು ಭೀಮ. ಹಾಸಣಗಿ ಎಸ್. ಕೆ. ಭಟ್ಟರದು ದ್ರೌಪದಿ. ಆ ದಿನ ಅಣ್ಣಯ್ಯ ಹೆಗಡೆಯವರು ಬಂದಿದ್ದರು. ನಮ್ಮ ಅರ್ಥವನ್ನು ಕೇಳಿದವರು ‘ನೀವು ಈಗಿನ ಕಾಲದವರು. ಹೊಸ ಹೊಸ ರೀತಿಯಲ್ಲಿ ಅರ್ಥ ಹೇಳುತ್ತೀರಿ. ನಮ್ಮದು ಹಳೆಯ ಥರ್ತಿ. ನಾನೂ ಭೀಮನ ಅರ್ಥ ಹೇಳಿದವನೇ. ಆದರೆ ನಿಮ್ಮಷ್ಟು ವಿಷಯ ಬರುವುದಿಲ್ಲ. ಇದೇ ಸರಿ’ ಎಂದೆಲ್ಲ ಹೊಗಳಿದರು. ನಮಗೆ ಮಾತ್ರ ಸಂಕೋಚವಾಯಿತು.

ಕರ್ಣ ಪರ್ವದ ಕೌರವನ ಪಾತ್ರಕ್ಕೂ ಅವರು ಹೆಸರುವಾಸಿಯಾಗಿದ್ದರು. ವೃಷಸೇನನಿಗೆ ಸಂಗ್ರಾಮದಲ್ಲಿ ಪಾಲ್ಗೊಳ್ಳಲು ಅಪ್ಪಣೆ ಕೊಟ್ಟಿದ್ದು ಕೌರವನೇ. ಭೀಮನನ್ನು ಸೋಲಿಸಿ ಅರ್ಜುನನಿಗೆದುರಾದ ವೃಷಸೇನನು ಅವನ ಬಾಣದಿಂದ ಹತನಾದ. ಈ ದುರ್ವಾರ್ತೆಯನ್ನು ಕರ್ಣನಿಗೆ ಹೇಗೆ ಹೇಳುವುದೆಂಬ ಕರುಣಾಜನಕ ಸನ್ನಿವೇಶದಲ್ಲಿ ತಾನು ವಿಷ ಕುಡಿಯುವುದೇ ಮೇಲು ಎಂದು ತೀರ್ಮಾನಿಸುತ್ತಾನೆ. ಆ ಸಂದರ್ಭದಲ್ಲಿ ಅವರು ಕೌರವನ ಮಾತುಗಳನ್ನು ಅತ್ಯುತ್ತಮವಾಗಿ ಆಡುತ್ತಿದ್ದರು. ತುಂಬಾ ಭಾವುಕವಾಗಿ ಕರ್ಣನಿಗೆ ವೃಷಸೇನ ಸತ್ತ ಸುದ್ದಿಯನ್ನು ಹೇಳುತ್ತಿದ್ದರು.

ಪುಟ ಪ್ರಾಯೋಜಕರು : **ಶ್ರೀ ಗೋಪಾಲಕೃಷ್ಣ ನರಸಿಂಹ ಹೆಬ್ಬಾರ, ನೆಡುತೋಟ**



ರಂಗದಲ್ಲಿ ಇವರು ಸಿಂಗರಾಗಿದ್ದರೂ, ಭೂತಗಳಿಗೆ ತುಂಬಾ ಹೆದರುತ್ತಿದ್ದರು. ಭಾಗವತರು ಹುಡುಗರಾಗಿದ್ದಾಗಿಂದಲೇ ಭಾಗವತಿಕೆ ಮಾಡುತ್ತಿದ್ದರು. ಒಂದು ಸಂಜೆ ಕೊಟ್ಟಳ್ಳಿಗೆ ಬಾಳೆಹದ್ದದಿಂದ ನಾಲ್ವರು ತಾಳಮದ್ದಲೆಗೆಂದು ಹೊರಟಿದ್ದಾರೆ. ಅಮಾವಾಸ್ಯೆಯ ಎದುರು. ಹಾಗಾಗಿ ಸಂಜೆ ಆಗುತ್ತಲೇ, ಏನೂ ಕಾಣುತ್ತಿರಲಿಲ್ಲ. ಅಡವಿಯ ದಾರಿ. ಮುಂದೆ ಮಾಣಿ, (ಭಾಗವತರು ) ಹಿಂದೆ ಅಣ್ಣಯ್ಯ ಹೆಗಡೆಯವರು, ಮಧ್ಯೆ ಸುಬ್ಬಣ್ಣ ತುದಿಮನೆ ಹಾಗೂ ಹಿತ್ಲಳ್ಳಿ ಅನಂತ ಭಟ್ಟರು ಸಾಗುತ್ತಿದ್ದರೆ ಅಣ್ಣಯ್ಯ ಹೆಗಡೆಯವರಿಗೆ ಯಾರೋ ಮರಳು ಸೋಕಿದರು. ಕಾಲಿಂದ ಸಿಡಿದಿರಬಹುದೆಂದು ಮುಂದೆ ಹೋಗುತ್ತಾ ಇದ್ದರು ಅವರು. ಮತ್ತೂ ಎರಡು ಮೂರು ಬಾರಿ ಹೀಗೆ ಆಯಿತು. ಅವರ ಮುಂದೆ ನಡೆಯುತ್ತಿದ್ದ ಅನಂತ ಭಟ್ಟರಿಗೂ ಮರಳು ತಾಗುತ್ತಿತ್ತು. ಇದು ಯಾರ ಕೆಲಸ ಎಂದು ಅಣ್ಣಯ್ಯ ಹೆಗಡೆಯವರು ಪ್ರಶ್ನಿಸಿದಾಗ 'ಯಾರದ್ದೂ ಅಲ್ದೋ ' ಎಂದು ಹೇಳಿ ಮೆಲ್ಲನೆ ಹಿಂದಿನವರಾಗಿ ನಡೆಯತೊಡಗಿದರು. ಸುಬ್ಬಣ್ಣನಿಗೆ 'ಮಾಣಿಯನ್ನು ಎಂಥಾ ಮುಂದೆ ಹಾಕ್ಯೋ. ನೀ ದೊಡ್ಡವ್ ಇದ್ದೈಪಾ, ಅಂವ ಎಲ್ಲಾದ್ರೂ ಹೆದ್ರಕ್ಯಂಬಲ್ಲೆ'' ಎಂದರು. ಸುಬ್ಬಣ್ಣನವರಿಗೆ ವಿಷಯದ ಅಂದಾಜಾಯಿತು. ಅವರು ಮುಂದಾದರು. ಮಧ್ಯೆ ಭಾಗವತರು ಹಾಗೂ ಅಣ್ಣಯ್ಯ ಹೆಗಡೆಯವರು. ನಂತರ ಮರಳು ಸೋಕುವುದು ನಿಂತು ಹೋಯಿತು. (ಅನಂತಯ್ಯ ಭಟ್ಟರು ಮಂತ್ರವಾದಿಯೂ ಆಗಿದ್ದರು) ಕೊಟ್ಟಳ್ಳಿ ತಲುಪಿದ ಮೇಲೆ ಕಾಲು ತೊಳೆಯುತ್ತಿರುವಾಗ ''ಅಣ್ಣೀ ಭಾವ, ಹಾದೀ ಮೇಲೆ ಮರಳು ಸೋಕಿದ್ದು ಯಾರು ಗೊತ್ತಿದ್ದೋ, ಭೂತದ ಚೇಷ್ಟೆ. ಅದ್ ಗೊತ್ತಾಗಿದ್ದಕ್ಕೆಯಾ ಯೆಂಗಾ ಇಬ್ರು ಹಿಂದೆ ಮುಂದೆ ಅದ್ಯೋ. ನಿಂಗ್ಳನ್ನ ಮಧ್ಯ ಸೇರಸ್ಕ್ಯಂಡೊ'' ಇದನ್ನು ಕೇಳಿದ ಕೂಡಲೇ ಆಗ ತಾನೇ ಕಾಲು ತೊಳೆದ ಅಣ್ಣಯ್ಯ ಹೆಗಡೆಯವರು ಮೂರ್ಛೆ ತಪ್ಪಿ ಬಿದ್ದರು. ಪುನಃ ಅವರನ್ನು ಎಬ್ಬಿಸಲು ಅನಂತ ಭಟ್ಟರು ಯಾವುದೋ ಒಂದು ಮಂತ್ರವನ್ನೇ ಉಚ್ಚರಿಸಬೇಕಾಯಿತು.

ತಮ್ಮ ಬದುಕಿನ ಕೊನೆಯ ಅವಧಿಯಲ್ಲಿ ಸ್ವಂತ ಜಮೀನನ್ನು ಮಾಡಿಕೊಂಡಿದ್ದರು. ಅವರ ಮರಣಾನಂತರ ಅವರ ವಾರಸುದಾರರು ಅದನ್ನು ವರದಪ್ಪ ಹೆಗಡೆಯವರಿಗೆ ಮಾರಿದರು.

## ಭಟ್ರಕೇರಿ ಗಣಪತಿ ಹೆಗಡೆ

**- ಶ್ರೀಪಾದ ಹೆಗಡೆ, ಭಟ್ರಕೇರಿ**

ಶ್ರೀ ವೆಂಕಪ್ಪ ಹೆಗಡೆ ಹಾಗೂ ಶ್ರೀಮತಿ ಲಕ್ಷ್ಮೀ ಹೆಗಡೆ ದಂಪತಿಯವರ ಏಕೈಕ ಪುತ್ರನಾಗಿ ಶ್ರೀ ಗಣಪತಿ ವೆಂಕಪ್ಪ ಹೆಗಡೆ, ಭಟ್ರಕೇರಿ ಇವರು 1910ರಲ್ಲಿ ಜನಿಸಿದರು. ಅಕ್ಷರ ಜ್ಞಾನವಿಲ್ಲದವರೇ ಹೆಚ್ಚಾಗಿರುವ ಆಗಿನ ಕಾಲದಲ್ಲಿ ಶ್ರೀ ಕ್ಷೇತ್ರ ಗೋಕರ್ಣದಿಂದ ಶ್ರಾವಣ



ಮಾಸದಲ್ಲಿ ಶಿವಪೂಜೆ (ಧಾರೇಪೂಜೆ ) ಗೆ ಆಗಮಿಸುವ ಹಿರಿಯ ವಿದ್ವಾಂಸರಲ್ಲಿ ಅಕ್ಷರ ಜ್ಞಾನ ಪಡೆದು, ರಾಮಾಯಣ, ಭಾರತ, ಭಾಗವತ , ತುರಂಗ ಭಾರತ, ಕರ್ನಾಟಕ ಭಾರತ ಕಥಾಮಂಜರಿ ಮುಂತಾದ ಪುರಾಣ ಗ್ರಂಥಗಳ ಅಧ್ಯಯನದ ಜೊತೆಯಲ್ಲಿ ಜ್ಯೋತಿಷ್ಯದಲ್ಲೂ ಪ್ರಾಥಮಿಕ ಜ್ಞಾನ ಪಡೆದು, ಸಾಧ್ವಿ ಸಚ್ಚರಿತೆ ಸಹಧರ್ಮಿಣಿ ಶ್ರೀಮತಿ ಸುಬ್ಬಿಯ ಜೊತೆಯಲ್ಲಿ ನಿತ್ಯ ನೈಮಿತ್ತಿಕ, ಕಾಮ್ಯಕರ್ಮಗಳನ್ನು ಚಾಚೂ ತಪ್ಪದೇ ಪಾಲಿಸುತ್ತಾ ಆದರ್ಶ ಗ್ರಹಸ್ಥ ಜೀವನ ನಡೆಸಿದರು. ತೋಟ - ಪಟ್ಟಿಗಳ ರಕ್ಷಣೆ, ಬೆಳವಣಿಗೆ ಜೊತೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಗಂಡು ಕಲೆಯಾದ ಯಕ್ಷಗಾನವನ್ನು ಮೈಮನಗಳಲ್ಲಿ ಮೇಳೈಸಿಕೊಂಡು, ಅದರ ಉಳಿವು ಬೆಳೆವೆಯಲ್ಲಿ ತನ್ನದೇ ಆದ ಸೇವೆ ಸಲ್ಲಿಸಿರುವ ಕಾನನ ಕುಸುಮದಂತೆ ಅರಳಿ ಅಳಿದ ಭರತನಹಳ್ಳಿ ಸೀಮೆಯ ಪ್ರತಿಭಾವಂತ ಹಿರಿಯ ಕಲಾವಿದರಲ್ಲಿ ಶ್ರೀಯುತರೂ ಒಬ್ಬರು.

ಹಿರಿಯರಾದ ಬಾಳೇಹದ್ದ ಶ್ರೀ ಕೃಷ್ಣ ಭಾಗವತರ ಅಂಬೋಣದಂತೆ ''ಶ್ರೀ ಮಹಾಗಣಪತಿ ಪ್ರಸಾದಿತ ಯಕ್ಷಗಾನ ಮಂಡಳಿ '' ಭರತನಹಳ್ಳಿ ಸೀಮಾ ಎಂಬ ಹೆಸರಿನ ಮೇಳದಲ್ಲಿ ಪಾತ್ರಧಾರಿಗಳಾಗಿ, ತನ್ನ ಪ್ರೌಢಿಮೆಯನ್ನು ತೋರಿಸಿದವರು ಇವರು. ಶ್ರೀ ದ್ಯಾವಪ್ಪ ಹೆಗಡೆ ಜಾಲಿಮನೆ (ಹಿತ್ಲಳ್ಳಿ), ರಾಮಜ್ಜನಮನೆ ಕೃಷ್ಣಜ್ಜ ಹಿತ್ಲಳ್ಳಿ, ಕೇರಮನೆ ಗಣಪತಿ ಹೆಗಡೆ, ಪಟೇಲಜ್ಜ ಹಿತ್ಲಳ್ಳಿ , ಓಣಿತೋಟದ ಅಣ್ಣಯ್ಯ ಹೆಗಡೆ, ಬಾಳೇಜಡ್ಡಿ ವೆಂಕಪ್ಪ ಹೆಗಡೆ, ಕೆರೆಮನೆ ಸುಬ್ರಾಯ ಹೆಗಡೆ, ಶ್ರೀ ಅನಂತ ಭಟ್ರು ಹಿತ್ಲಳ್ಳಿ ಇವರೆಲ್ಲ ಆ ಮೇಳದ ಹಿರಿಯ ಕಲಾವಿದರಾದರೆ, ಅದಕ್ಕೆ ಕಿರಿಯರಾದ ಶ್ರೀ ಕೃಷ್ಣ ಹೆಗಡೆ ಬಾಳೇಹದ್ದ ಇವರು ಅಂದೇ ಪ್ರತಿಭಾನ್ವಿತ ಭಾಗವತರಾಗಿದ್ದರು. ಶ್ರೀ ಸುಬ್ರಾಯ ಹೆಗಡೆ ಕಂಪ್ಲಿ (ತುದಿಮನೆ ) ಇವರುಗಳೆಲ್ಲ ಆ ಮೇಳದ ಕಲಾವಿದ ಬಂಧುಗಳು. ಅಂದಿನ ದಿನಗಳಲ್ಲಿ ಬಯಲಾಟದ ಪ್ರಸಂಗಗಳೇ ಹೆಚ್ಚಾಗಿರುವ ಸಂದರ್ಭಲ್ಲಿ ಥೇಟರ್ ಆಟ, ಜೋಡಾಟ ಎಂದರೆ ಕಲಾವಿದನಿಗೆ ಅತ್ಯಂತ ಸಂತಸದ ಹಾಗೂ ಹೆಮ್ಮೆಯ ಕ್ಷಣ. ಬಾಳೇಮರ, ಮಾವಿನ ಚೆಂಡೆ ತೋರಣ, ಗೋಸಂಪಿಗೆ ಹೂವಿನ ಮಾಲೆಯಿಂದ ಅಲಂಕೃತವಾದ ಸಂಪ್ರದಾಯಬದ್ಧ ರಂಗಸ್ಥಳಕ್ಕೆ ಬಾಳೇಮರಕ್ಕೆ ಕುಳಿ ತೋಡಿ ಎಣ್ಣೆ ಹಾಕಿ ಮುಂಗೈ ದಪ್ಪದ ಬತ್ತಿಗೆ ದೀಪ ಹಚ್ಚಿದರೆ, ಆ ವೇದಿಕೆಯ ಮೆರುಗು ಇಂದಿನ ಝಗಗಝಗಿಸುವ ವಿದ್ಯುದ್ದೀಪದಿಂದಲಂಕೃತವಾದ ರಂಗಸ್ಥಳಕ್ಕಿಂತಲೂ ಹೆಚ್ಚು ಆಕರ್ಷಕವಾಗಿತ್ತು.

ಹಿತ್ಲಳ್ಳಿ (ಜಾಲಿಮನೆ) ತ್ರ್ಯಂಬಕ ಹೆಗಡೆಯವರ ಅಭಿಪ್ರಾಯದಂತೆ ಅವರ ಮಾತಿನಲ್ಲೇ ಹೇಳುವುದಾದರೆ , 'ಭಟ್ರಕೇರಿ ಅಜ್ಜನ ಆಳತನ ಯಕ್ಷಗಾನಕ್ಕೆ ಹೇಳಿ ಮಾಡಿಸಿದ ಹಾಗಿತ್ತು. ಆಕರ್ಷಕ ರೂಪ ಇತ್ತು. ಹಾಗಾಗಿ ಪಾತ್ರ ಸಹಜವಾಗಿ ಅಲಂಕೃತವಾಗಿ ಒಪ್ಪುತ್ತಿತ್ತು. ಇದರ ಜೊತೆಗೆ ಹಾವಭಾವ ಪ್ರಭುತ್ವಪೂರ್ಣವಾದ ವಿಮರ್ಶಾತ್ಮಕವಾದ ಮಾತುಗಾರಿಕೆಯೂ ವಿಶೇಷವಾಗಿತ್ತು. ಕುಣಿತ ಕಡಿಮೆಯಾದರೂ ಪಾತ್ರದಲ್ಲಿ ಸಹಜತೆ ಇದ್ದು, ಜಮದಗ್ನಿ, ಪರಶುರಾಮ,



ಕಾರ್ತಿವೀರ್ಯ ಮುಂತಾದ ಪಾತ್ರಗಳಲ್ಲಿ ಎತ್ತಿದ ಕೈ'.

ಕೆಲವು ಪಾತ್ರ ಹಾಗೂ ಸನ್ನಿವೇಶದ ವಿವರ ನೀಡುವುದಾದರೆ, ರೇಣುಕಾ ಮಹಾತ್ಮೆ - ಜಮದಗ್ನಿ. ರೇಣುಕೆ ನಡತೆ ಬಗ್ಗೆ ಖತಿಗೊಂಡ ಜಮದಗ್ನಿ 'ತೊಲಗು ಮಮ ಗೃಹದಿಂದ' ಎಂಬ ಪದ್ಯಕ್ಕೆ ರೇಣುಕೆಯನ್ನು ಬೈದು ಭಂಗಿಸಿ ಇಂತಹ ಹೆಣ್ಣು ಈ ಲೋಕಕ್ಕೇ ಬೇಡ ಎಂದು ತೀರ್ಮಾನಿಸಿ ಮಗನಾದ ಭಾರ್ಗವರಾಮನನ್ನು ಕರೆದು ರೇಣುಕೆಯ ತಲೆ ಕಡಿಸುವ ರೌದ್ರ, ಭೀಕರ ಸಂದರ್ಭ ಕುಳಿತ ಪ್ರೇಕ್ಷಕರಿಗೆ ಆ ಕಾಲದ ಜಮದಗ್ನಿ ಮಹರ್ಷಿಗಳನ್ನು ಸಾಕ್ಷಾತ್ಕರಿಸುತ್ತಿತ್ತು.

ಭೀಷ್ಮ ವಿಜಯದ ಪರಶುರಾಮ : ರಣಕ್ಷೇತ್ರದಲ್ಲಿ ಭೀಷ್ಮನನ್ನು ಕಂಡಾಗ ತನ್ನ ಶಿಷ್ಯ ಇಂತಹ ಕಾರ್ಯ ಎಸಗಿದನೇ, ತತ್ಸಂಬಂಧವಾಗಿ ತನ್ನ ಪರ್ಯಂತವೂ ಆಕ್ಷೇಪ ಬಂತೇ, ಎಂಬ ಸಂದರ್ಭಕ್ಕೆ ಭೀಷ್ಮನಲ್ಲಿ 'ಎತ್ತಲಿರಿಸಿದೆ ಭೀಷ್ಮ ಬುದ್ಧಿಗಳ ನೀನೀಗ' ಎಂದು ಪ್ರಶ್ನಿಸುವ ಪದ್ಯಕ್ಕೆ ಶ್ರೀಯುತರು ತೋರಿಸುವ ಹಾವಭಾವ, ಕಲಾಪ್ರೌಢಿಮೆ, ಸಿಟ್ಟಿನ ಆಟಾಟೋಪ, ವಿಮರ್ಶಾತ್ಮಕ ರೋಚಕ ಸಂಭಾಷಣೆ ಇವುಗಳಿಂದ ಅಂಬೆಯೊಂದಿಗೆ ಭೀಷ್ಮನ ವಿವಾಹ ನಡದೇಹೋಗುತ್ತದೆಯೋ ಎಂದು ಪ್ರೇಕ್ಷಕರಿಗೆ ಅನ್ನಿಸುವ ರೀತಿಯಲ್ಲಿ ಕಲಾಪ್ರದರ್ಶನ ನೀಡುತ್ತಿದ್ದರು. ಜಾಲಿಮನೆ ದ್ಯಾವಪ್ಪ ಹೆಗಡೆಯವರ ಭೀಷ್ಮ, ಭಟ್ಟಕೇರಿ ಗಣಪತಿ ಹೆಗಡೆಯವರ ಪರಶುರಾಮನ ಜೋಡಿ ನೋಡುವುದೆಂದರೆ ಒಂದು ವಿಶೇಷವಾಗಿರುತ್ತಿತ್ತು. ಸುಭದ್ರಾ ಕಲ್ಯಾಣದ ಬಲರಾಮ - ದ್ವಾರಕಾ ಪಟ್ಟಣಕ್ಕೆ ಆಗಮಿಸಿದ ಯೋಗ ಪುರುಷನನ್ನು ಕಾಣಲು ಇಡೀ ನಗರವೇ ಹೊರಟು ನಿಂತಾಗ ಈ ಕೃಷ್ಣ ಎಲ್ಲಿ ಹೋದ ಎಂಬಾಗಿನ 'ಎಲ್ಲಿ ಹೋದ ಕೃಷ್ಣ' ಪದ್ಯದ ಆರ್ಭಟಕ್ಕೆ ಕೃಷ್ಣನ ಪಾತ್ರಧಾರಿ ರಂಗ ಪ್ರವೇಶ ಮಾಡದೇ ಹೆದರಿ ಕುಳಿತ ಸನ್ನಿವೇಶ ಇವರ ಕಲಾ ಸಹಜತೆಗೆ ಒಂದು ಉತ್ತಮ ಉದಾಹರಣೆ. ಹಾಗೇ ಕಾರ್ತಿವೀರ್ಯಾರ್ಜುನದ ಕಾತೀವೀರ್ಯನ ಜಲಕೇಳಿ, ರಾವಣನೊಡನೆ ವ್ಯವಹರಿಸುವ ಸಂದರ್ಭ ಇವೆಲ್ಲವೂ ಅತ್ಯಂತ ರೋಚಕ ಹಾಗೂ ಆಕರ್ಷಕ.

ಪಾದುಕಾ ಪಟ್ಟಾಭಿಷೇಕದ ಭರತ, ವಿಶ್ವಾಮಿತ್ರ ಮೇನಕೆಯ ವಿಶ್ವಾಮಿತ್ರ, ತ್ರಿಶಂಕು ಚರಿತ್ರೆಯ ವಿಶ್ವಾಮಿತ್ರ, ರಾಜಸೂಯದ ಚೈದ್ಯ , ವಿದ್ಯುನ್ಮತಿ ಕಲ್ಯಾಣದ ಕುಶ, ಐರಾವತದ ಇಂದ್ರ, ಭಸ್ಮಾಸುರ ಮೋಹಿನಿಯ ಈಶ್ವರ ಇನ್ನೂ ಹತ್ತು ಹಲವಾರು ಇವರ ಪಾತ್ರಗಳು ಅವಿಸ್ಮರಣೀಯ.

ತಾಳಮದ್ದಲೆಯ ಕಲಾವಿದರೂ ಇವರಾಗಿದ್ದು, ಇವರ ಮಾತಿನಲ್ಲಿ ಪ್ರೌಢತೆ, ವೈಚಾರಿಕತೆ, ಹಂತ ಹಂತವಾಗಿ ವಿಮರ್ಶೆ ಇವು ವಿಶೇಷವಾಗಿ ಕಂಡುಬರುತ್ತಿದ್ದು, ಮುಂದಿನ ಪೀಳಿಗೆಗೆ ಸಹಾಯವಾಗುವಂತಹ ಗ್ರಂಥ ಸಂಗ್ರಹ ಇವರ ಹವ್ಯಾಸಗಳಲ್ಲಿ ಒಂದಾಗಿತ್ತು. ಸ್ವತಃ ಅವರ ಮಾತಿನಲ್ಲೇ ಹೇಳುವುದಾದರೆ , 'ಪ್ರಶ್ನೆ ಕೇಳುತ್ತಾರೆ, ಅದಕ್ಕೆ ಉತ್ತರ ಗೊತ್ತಿದೆ ಎಂದು ನೇರವಾಗಿಯೋ, ಸಹಜವಾಗಿಯೋ ಉತ್ತರ ನೀಡದೇ ಅದರಲ್ಲಿ ಒಂದು ಹೊಸತನ ಇದ್ದು



ಪ್ರೇಕ್ಷಕರಿಗೆ ವಿಚಾರ ವಿಮರ್ಶೆಗೆ ಅವಕಾಶವಾಗುವಂತಿರಬೇಕು. ಹಾಗಿದ್ದರೆ ಮಾತ್ರ ಚಿನ್ನಕ್ಕೆ ಪುಟವಿಟ್ಟ ಹಾಗಾಗುತ್ತದೆ. ಏಕೆಂದರೆ ಕಥೆ ಎಲ್ಲರಿಗೂ ಗೊತ್ತಿರುತ್ತದೆ. ಪದ್ಯವೂ ಇರುತ್ತದೆ. ಹಾಗಾಗಿ ಮಾತುಗಾರಿಕೆಯಲ್ಲಿ ವಿಶೇಷತೆ ಬೇಕು. ಜನ ಒಪ್ಪುವ ಹಾಗಿರಬೇಕು. ಬರೀ ವೇಳೆ ಕಳೆಯುವ ಹರಟೆಯಾಗಬಾರದು' ಎಂಬುದು ಅವರ ಅಭಿಪ್ರಾಯವಾಗಿತ್ತು.

ಪ್ರಾಜ್ಞರನ್ನು, ವಿದ್ವಾಂಸರನ್ನು, ಕಲಾವಿದರನ್ನೂ, ಕಲಾಭಿಮಾನಿಗಳನ್ನೂ ಮನೆಗೆ ಕರೆದು, ಆತಿಥ್ಯ ನೀಡಿ, ಗೌರವಿಸಿ, ಅವರಲ್ಲಿ ವಿಚಾರ ವಿಮರ್ಶೆ ನಡೆಸಿ, ಒಳ್ಳೆಯದನ್ನು ಸಂಗ್ರಹಿಸಿ, ಶಿಸ್ತುಬದ್ಧ ಕಲಾರುವಾಕ್ಕಾದ ಜೀವನ ಶೈಲಿ ರೂಪಿಸಿಕೊಂಡವರಾಗಿದ್ದರು. ಹಾಗೂ ಮನೆಯಲ್ಲಿ ನಡೆಯುವ ಅನಂತನ ಚತುರ್ದಶಿ ಮುಂತಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪ್ರಸಿದ್ಧ ಕಲಾವಿದರನ್ನು ಕರೆಸಿ, ತಾಳಮದ್ದಲೆ ನಡೆಸಿ, ತಮ್ಮ ಮುಂದಿನ ಪರಂಪರೆಗೂ ಯಕ್ಷಗಾನದ ಆಸಕ್ತಿ ತಗಲುವಂತೆ ಮಾಡಿ, ಯಕ್ಷಕಲಾ ಸರಸ್ವತಿಯ ಆರಾಧನೆಯನ್ನು ಸಾರ್ಥಕಗೊಳಿಸಿದರು.

ಹಿರಿಯವರಾದ ಶ್ರೀ ಗಣಪತಿ ಹೆಗಡೆಯವರ ಯಕ್ಷಕಲೆ ಸಾಕಾರಗೊಳ್ಳುವಲ್ಲಿ, ಅವರ ಧರ್ಮಪತ್ನಿ ಶ್ರೀಮತಿ ಸುಬ್ಬಿ ಹೆಗಡೆಯವರು ನೀಡಿದ ಸಹಕಾರ - ಸಹೃದಯತೆ ಅವಿಸ್ಮರಣೀಯ. ಈ ಹಿರಿಯ. ಚೇತನಗಳ ಆದರ್ಶ, ಆಶೀರ್ವಾದ, ಹಾರೈಕೆ ನಮ್ಮೆಲ್ಲರ ಬಾಳಿಗೆ ಶ್ರೀರಕ್ಷೆಯಾಗಿರಲೆಂದು ತ ಪ್ರಾರ್ಥಿಸುತ್ತೇವೆ.

## ಯಕ್ಷಗಾನ, ನಾಟಕ, ಸಿನೇಮಾಗಳಲ್ಲಿ ಮಿಂಚಿದ
# ದಿ. ಹಳ್ಳಿಗದ್ದೆ ಪರಮೇಶ್ವರ ಹೆಗಡೆಯವರು

ನಾಟಕ ಆಕಾಡೆಮಿಯ ಪ್ರಶಸ್ತಿ ವಿಜೇತ ಪರಮೇಶ್ವರ ಹೆಗಡೆಯವರು ಮೂಲತಃ ಕಂಪ್ಲಿಯವರು. ಸಣ್ಣವರಿದ್ದಾಗ ತೀರ ಕಷ್ಟವನ್ನನುಭವಿಸಿದವರು. ಸಿನೇಮಾ ರಂಗದಲ್ಲೂ ಪಾತ್ರ ಮಾಡಿ ಮಿಂಚಿದವರು. ಅವರು ಮೊದಮೊದಲು ಭಾಗವಹಿಸಿ ಹೆಸರು ಮಾಡಿದ್ದು ಯಕ್ಷಗಾನದಲ್ಲೇ.

ಇದಕ್ಕೆ ಕಾರಣವೂ ಇತ್ತು. ಅವರ ಅಜ್ಜ ಶಿವಯ್ಯ ಹೆಗಡೆ ಭಾಗವತಿಕೆಯಲ್ಲಿ ಸೋದೆ ಹದಿನಾರು ಸೀಮೆಗಳಲ್ಲಿ ಹೆಸರು ಮಾಡಿದ್ದವರಂತೆ. ಇವರ ಮಗ ಪರಮೇಶ್ವರ ಹೆಗಡೆಯವರಾಗಿದ್ದರೆ, ಕೃಷ್ಣಭಾಗವತರ ತಾಯಿ ಶಿವಜ್ಜನ ಮಗಳ ಮಗಳು. ಈ ಕಾರಣಕ್ಕಾಗಿಯೇ ಭಾಗವತರು ಪರಮೇಶ್ವರ ಹೆಗಡೆಯವರಿಗೆ ಶಿಷ್ಯನೂ ಹೌದು, ಗುರುವೂ ಹೌದು ಎಂದು ಅವರೇ ಹೇಳಿಕೊಂಡಿದ್ದಾರೆ. ಇವರ ಗುರುಗಳು ತುದಿಮನೆ ಸುಬ್ಬಣ್ಣ ಹಾಗೂ ಜಾಲೇಮನೆ ದೇವೇಂದ್ರ



ಹೆಗಡೆಯವರು. ಪಾತ್ರದಲ್ಲಿ ತಲ್ಲೀನತೆ ಇವರ ಹುಟ್ಟುಗುಣ. ಇವರ ಹಾವಭಾವಗಳ ನಾಟಕೀಯತೆಯಿಂದಾಗಿ ಜನರನ್ನು ತುಂಬಾ ರಂಜಿಸುತ್ತಿದ್ದರು. ತಮ್ಮ ಮಿತಿಯಲ್ಲಿ ಸಾಕಷ್ಟು ಪುಸ್ತಕಗಳನ್ನು ಓದುವವರಾಗಿದ್ದರು. ಯಕ್ಷಗಾನದಲ್ಲಿ ಎದುರಾಳಿ ಎಷ್ಟೇ ದೊಡ್ಡ ಹೆಸರು ಮಾಡಿದ್ದಿದ್ದರೂ ಅವರಿಗೆ ಸಡ್ಡು ಹೊಡೆದು ಸೈ ಎನಿಸಿಕೊಳ್ಳುತ್ತಿದ್ದರು. ಅವರುಗಳ ತಂತ್ರಕ್ಕೆ ಪ್ರತಿತಂತ್ರ ಹೂಡಿ ಜಯಶಾಲಿಯಾಗುತ್ತಿದ್ದರು.

ನಾನು ಚಿಕ್ಕವನಿದ್ದಾಗ ನೋಡಿದ ಆಟ 'ಸುಭದ್ರಾ ಕಲ್ಯಾಣ'. ಆ ದಿನದ ಆಟದಲ್ಲಿ ಇಂದಿಗೂ ನನ್ನ ಮನದಂಗಳದಲ್ಲಿ ಹಚ್ಚಹಸುರಾಗಿರುವುದು ಅವರು ಮಾಡಿದ ಬಲರಾಮನ ಪಾತ್ರ ಮಾತ್ರ. ಕೃಷ್ಣನನ್ನು ಬಲರಾಮ ದೂರುವ ಚಿತ್ರ ಈಗಲೂ ಕಣ್ಮುಂದೆ ನಿಲ್ಲುತ್ತದೆ.

ಯಕ್ಷಗಾನದಲ್ಲಿ ಪಾತ್ರ ಮಾಡಲು ತೊಡಗಿದ ಕೆಲವೇ ವರ್ಷಗಳಲ್ಲಿ 50 ತೊಲೆ ಬೆಳ್ಳಿಯ ತಗಡು ಹೊಡೆದ ಕಿರೀಟವನ್ನು ಇವರು ಮಾಡಿಸಿಕೊಂಡಿದ್ದರು. ಮೆಣಸಿಯಲ್ಲಿ ಒಂದು ಆಟ 'ಪುತ್ರಕಾಮೇಷ್ಠಿ' . ಇವರು ಶೃಂಗಿ (ಋಷ್ಯಶೃಂಗ) ಯ ಪಾತ್ರ ವಹಿಸಬೇಕಾಯಿತಂತೆ. ಹಿತ್ಲಳ್ಳಿ ದಿ. ಅನಂತ ಭಟ್ಟರು ವಸಿಷ್ಠ. ಅವರಲ್ಲಿಗೆ ಹೋಗಿ ಸಂಸ್ಕೃತ ಸಂಭಾಷಣೆ ಕಲಿತು ಗಟ್ಟಿ ಹಾಕಿ ರಾತ್ರೆ ಸಂಸ್ಕೃತದಲ್ಲಿಯೇ ಮಾತನಾಡಿದರಂತೆ. ಇಂದಿನ ಆಟಕ್ಕೊಂದು ಶೃಂಗಿ ಎಂದು ಎಲ್ಲರೂ ಹೊಗಳಿದರಂತೆ.

ದ್ರೌಪದೀ ಪ್ರತಾಪ, ಬಕಾಸುರ ವಧೆ , ಗದಾಪರ್ವ ಪ್ರಸಂಗಗಳ ಭೀಮ, ಸುಭದ್ರಾಕಲ್ಯಾಣ, ಯೋಗಿನೀ ಕಲ್ಯಾಣಗಳ ಬಲರಾಮ, ಪಂಚವಟಿಯ ರಾವಣ, ಹಿರಣ್ಯ ಕಶಿಪು ಇವು ಇವರ ಮೆಚ್ಚುಗೆಯ ಪಾತ್ರಗಳು. ಒಂದು ಜೋಡಿ ಆಟದಲ್ಲಿನ ಎರಡೂ ಮೇಳದವರು 'ಪಾಂಡವ ಪ್ರತಾಪ ರಾಜಸೂಯ' ಪ್ರಸಂಗವನ್ನು ಮಾಡಿದ್ದರಂತೆ. ಇವರಿದ್ದ ಮೇಳದಲ್ಲಿ ಇವರದು ಚೈದ್ಯನ ಪಾತ್ರ (ಶಿಶುಪಾಲ). ಚೈದ್ಯನ ಪ್ರವೇಶ ರಾತ್ರೆ ಮೂರು ಗಂಟೆಗೆ ಆಯಿತು. ಇವರ ಮಾತುಗಾರಿಕೆಯಿಂದಾಗಿ ಬೆಳಕು ಆಗಿದ್ದೇ ಗೊತ್ತಾಗಲಿಲ್ಲವಂತೆ. ಆದರೆ ಇವರ ಪ್ರತಿಸ್ಪರ್ಧಿ ಮೇಳದವರೂ ಚೈದ್ಯನ ಪ್ರವೇಶವನ್ನು ಅಷ್ಟೇ ಹೊತ್ತಿಗೆ ಮಾಡಿಸಿದರು. ಆ ಚೈದ್ಯನ ಪಾತ್ರಧಾರಿ ಕುಣಿತದಲ್ಲಿ ಗಟ್ಟಿ. ಆದರೆ ಮಾತಿನಲ್ಲಿ ಜಳ್ಳಾದ್ದರಿಂದ ಅವರ ಆಟ ಬೇಗನೇ ಮುಗಿದುಹೋಯಿತಂತೆ.

ಘಟ್ಟದ ಕೆಳಗಡೆ ಒಬ್ಬ ಪ್ರಸಿದ್ಧ ನರಸಿಂಹನ ವೇಷಧಾರಿ ಇದ್ದ. ಅವನು ತಾನು ಬಣ್ಣ ಬರೆಯುವುದನ್ನು ಯಾರಿಗೂ ತೋರಗೊಡುತ್ತಿರಲಿಲ್ಲವಂತೆ. ನರಸಿಂಹ ಕಂಬವನ್ನು ಸೀಳಿ ಹೊರಬಂದ ಮೇಲೆಯೇ ಆತನನ್ನು ಹಿರಣ್ಯ ಕಶಿಪು ನೋಡುವುದು. ಕಂಬದಿಂದ ಜಿಗಿದು ಬರುವ ನರಸಿಂಹನನ್ನು ನೋಡಿ ಹೊಸಬರು ಹಿರಣ್ಯಕಶಿಪುವಿನ ಪಾತ್ರ ಮಾಡಿದರೆ ಅವರು ಹೆದರಿ



ರಂಗಸ್ಥಳದಿಂದ ಓಡಿ ಹೋಗುತ್ತಿದ್ದರಂತೆ. ಮುರೂರು ದೇವರ ಹೆಗಡೆಯವರು ಮಾತ್ರ ಆ ನರಸಿಂಹನ ಮುಂದೆ ಧೈರ್ಯವಾಗಿ ನಿಲ್ಲುತ್ತಿದ್ದರಂತೆ. ಪರಮೇಶ್ವರ ಹೆಗಡೆಯವರು ತಾನು ಹಿರಣ್ಯಕಶಿಪುವನ್ನು ಮಾಡಿ ಜೈಸುತ್ತೇನೆ ಎಂದರಂತೆ. ಹರಿ ಎಲ್ಲಿದ್ದಾನೆಂದು ಮಗನನ್ನು ಕೇಳುವಾಗಲೇ ಸಿಟ್ಟನ್ನು ತಂದಕೊಂಡ ಇವರು ನರಸಿಂಹ ಇದ್ದ ಕಂಬಕ್ಕೆ ಕತ್ತಿಯಿಂದ ಹೊಡೆಯುವಾಗ ತನ್ನ ಕಾಲನ್ನು ಅಡ್ಡವಾಗಿಟ್ಟುಕೊಂಡರಂತೆ. ಹಾಗಾಗಿ ನರಸಿಂಹನಿಗೆ ಎಂದಿನಂತೆ ಜಿಗಿಯಲು ಸಾಧ್ಯವಾಗಲಿಲ್ಲ. ಅವನ ಕಾಲನ್ನು ದಾಟಿ ಬರಬೇಕು ಅಥವಾ ಎರಡೂ ಕಾಲುಗಳ ಮಧ್ಯದಿಂದ ರಂಗಸ್ಥಳ ಪ್ರವೇಶಿಸಬೇಕು. ಈ ಗೊಂದಲದಲ್ಲಿ ಸ್ವಲ್ಪ ತಡವಾಗಿ ಅಂತೂ ಕಾಲನ್ನು ದಾಟಿಕೊಂಡು ಬಂದ ನರಸಿಂಹ. ಇವರು ಓಡಿಹೋಗುವ ಪ್ರಮೇಯವೇ ಬರಲಿಲ್ಲ. ಎತ್ತರವಾದ ನಿಲುವಿನ, ಅಗಲವಾದ ಮುಖ ಹೊಂದಿರುವ ಇವರು ಅಂದಿನಿಂದ ಘಟ್ಟದ ಮೇಲಿನ ದೇವರು ಹೆಗಡೆ ಎಂದು ಪ್ರಸಿದ್ಧರಾದರಂತೆ. ಇವರು 'ಕಶ್ಯಪು' ಪಾತ್ರ ಮಾಡುವಾಗಲೇ ಸೊಂಟದ ಕತ್ತಿಯನ್ನೆಳೆಯುವ ರಭಸದಲ್ಲಿ ಕೈಬೆರಳು ಕಡಿದು ರಕ್ತ ಸೋರುತ್ತಿದ್ದರೂ ಪರಿವೆ ಇಲ್ಲದೇ ಅಭಿನಯಿಸಿದ ಉದಾಹರಣೆಯೂ ಇದೆ. ಬಕಾಸುರ ವಧೆ ಪ್ರಸಂಗದಲ್ಲಿ ಅವರದು ಭೀಮ. ಈ ಭಾಗದಲ್ಲಿ ಬಕಾಸುರನಿಗಾಗಿ ಪ್ರಸಿದ್ಧಿ ಪಡೆದ ನಟರು ದಿ. ವೆಂಕಟ್ರಮಣ ಹೆಗಡೆ ಬಾಳೇಜಡ್ಡಿಯವರು. ಆಗ ಎತ್ತಿನಗಾಡಿಯಲ್ಲಿಯೇ ಕುಳಿತ ಭೀಮ ಬಕಾಸುರನಿದ್ದಲ್ಲಿಗೆ ಹೋಗುವ ರಿವಾಜು, ಗಾಡಿಯನ್ನು ಎತ್ತಿನ ಬದಲಾಗಿ ಮನುಷ್ಯರು ಎಳೆಯುತ್ತಿದ್ದರಂತೆ. ಉಳಿದವರು ಭೀಮನ ಪಾತ್ರವನ್ನು ನಿರ್ವಹಿಸಿದಾಗ ಬಾಳೆಜಡ್ಡಿ ಅಜ್ಜ (ಬಕಾಸುರ) ಭೀಮ ಕುಳಿತ ಗಾಡಿಯನ್ನು ಅದ್ಹೇಗೋ ಏರಿಬಿಡುತ್ತಿದ್ದರಂತೆ. ಆದರೆ ಇವರು ಭೀಮನ ವೇಷವನ್ನು ಹಾಕಿದಾಗ ಮಾತ್ರ, ಗಾಡಿ ಏರಲು ಆಗಲೇ ಇಲ್ಲವಂತೆ. ಭೀಮನು ಊಟ ಮಾಡುತ್ತಲೇ ಬಕನನ್ನು ಕೆಳಗೆ ತಳ್ಳಿ ಅವನಿಗೆ ಊಟದ ಒಂದಗುಳೂ ಸಿಗದ ಹಾಗೆ ಮಾಡುವ ತಂತ್ರಗಾರಿಕೆ ಇವರಿಗೆ ಸಿದ್ಧಿಸಿತ್ತು.

ಇವರು ಯಾವುದನ್ನೂ ಮುಚ್ಚಿಟ್ಟುಕೊಳ್ಳುವ ಜನರಾಗಿದ್ದಿಲ್ಲ. ನಂತರ ಯಾರ ಮೇಲೂ ದ್ವೇಷವನ್ನು ಸಾಧಿಸುತ್ತಿರಲಿಲ್ಲ. ಒಮ್ಮೆ ದ್ರೌಪದಿ ಪ್ರತಾಪ ಆಟ. ಇವರದು ಭೀಮ. ರಣರಂಗದಲ್ಲಿ ಊರ್ಧ್ವ ರೋಮನ ಶಿರವನ್ನು ಭೀಮಸೇನ ಒಡೆದು ಹಾಕುವ ಸಂದರ್ಭ ಬರುತ್ತದೆ. ಆಗ ಭಾಗವತರು ಯಾವಾಗಲೂ ಹೇಳುತ್ತಿದ್ದ ರಾಗವನ್ನು ಬದಲಿಸಿ ಹೇಳಿಬಿಟ್ಟರಂತೆ. ಕೋಪದಿಂದ ಊರ್ಧ್ವರೋಮನ ತಲೆಗೆ ಬದಲಾಗಿ ಇವರು ಭಾಗವತರಿಗೇ ಹೊಡೆದರು. ಭಾಗವತರು ರಂಗಸ್ಥಳ ಬಿಟ್ಟು ಒಳಗೆ ಹೋದರು. ಒಳಗಿದ್ದವರು (ಮ್ಯಾನೇಜರರು) ಭಾಗವತರನ್ನು ಸಮಾಧಾನ ಪಡಿಸಿ ಪುನಃ ಅವರು ರಂಗಕ್ಕೆ ಬಂದು ಪದ್ಯ ಹೇಳಲು ತೊಡಗುವವರೆಗೂ ಇವರು ತಮ್ಮ ಮಾತಿನ ಪ್ರೌಢಿಮೆಯನ್ನು ಮೆರೆದು ರಸ ಭಾಸವಾಗದಂತೆ ನೋಡಿಕೊಂಡರಂತೆ. ವೇಷ ಕಳಚಿದ ನಂತರ ಇವರೂ, ಭಾಗವತರೂ ಒಂದೇ. (ಎಷ್ಟೆಂದರೂ ಭಾಗವತರಿಗೆ ಪರಮೇಶ್ವರಪ್ಪಚ್ಚಿ ಅಲ್ಲವೇ?)



ಇವರು ನಾಟಕ ರಂಗಕ್ಕೆ ಹೋದಾಗಲೇ ಮದುವೆಯಾಯಿತು. ಮೊದಲ ಮಡದಿಯಲ್ಲಿ ಒಬ್ಬ ಗಂಡು. ಚಂದ್ರಶೇಖರ - ಪ್ರೌಢಶಾಲೆಯಲ್ಲಿ ಅಧ್ಯಾಪಕರು. ಮಗಳು ಅಳಿಯ ವಿಜಾಪುರದ ಬದಿಗಿದ್ದಾರಂತೆ. ಎರಡನೇ ಹೆಂಡತಿಯ ಮಗ ಮಂಜುನಾಥ, ಕೃಷಿಕ. ಯಕ್ಷಗಾನದಲ್ಲಿ ತುಂಬಾ ಆಸಕ್ತಿ. ಇವರ ಬದುಕಿನಿಂದ ನಾವು ಕಲಿಯುವುದು ಬಹಳಷ್ಟಿದೆ ಎಂದು ನನ್ನ ಅನಿಸಿಕೆ

### ಖಳಪಾತ್ರಕ್ಕೆ ಹೆಸರು ಮಾಡಿದ

## ದಿ. ವೆಂಕಟ್ರಮಣ ಹೆಗಡೆ, ಬಾಳೆಜಡ್ಡಿ

ಅವರ ಅಪ್ಪನ ಹೆಸರೂ ವೆಂಕಪ್ಪ. ಮಗನೂ ವೆಂಕಟ್ರಮಣ. ಹಾಗಾಗಿಯೇ ಇವರಿಗೆ ಬಾಳೆಜಡ್ಡಿ ಮಾವ ಅಥವಾ ಬಾಳೆಜಡ್ಡಿ ಅಜ್ಜ ಎಂದೇ ಜನರೆಲ್ಲ ಕರೆಯುತ್ತಿದ್ದರು. ಇವರ ಕಣ್ಣು, ಆಕಾರ ಇವುಗಳನ್ನು ನೋಡಿದೊಡನೆಯೇ ಭಯಮಿಶ್ರಿತ ಗೌರವ ಇವರ ಬಗ್ಗೆ ಮೂಡುತ್ತಿತ್ತು. ಇವರು ಸಹಜವಾಗಿ ಮಾತನಾಡಿದರೂ ನಮಗೆಲ್ಲ ಅದೊಂದು ಆದೇಶದಂತೆ ಭಾಸವಾಗುತ್ತಿತ್ತು. ಆದರೆ ಅವರು ಎಲ್ಲಿಗೇ ಹೋಗಲಿ, ನಮಗೆ ಅವರ ಸಾನ್ನಿಧ್ಯ ಬೇಕು ಎಂದೆನ್ನಿಸುತ್ತಿತ್ತು.

ನಾವು ಕಂಡದ್ದು ಅವರನ್ನು ಅವರ ಮುಪ್ಪಿನ ವಯಸ್ಸಿನಲ್ಲಿ. ಆಗ ಅವರು ದೈವಭಕ್ತರೂ, ಕಠೋರ ನಿಯಮ ಪಾಲಕರೂ ಆಗಿದ್ದರು. ಅವರ ಒಂದು ವೇಷ ನೆನಪಿದೆ ನಮಗೆ. ಆ ವೇಷವೇ ಬಕಾಸುರ. ಯಕ್ಷಗಾನದಲ್ಲಿ ಖಳಪಾತ್ರಧಾರಿಯ ಬಗ್ಗೆಯೇ ಪ್ರೇಕ್ಷಕರಿಗೆ ಆಸಕ್ತಿ ಇರುತ್ತದೆ. ಚಿಕ್ಕವರಿಗಂತೂ ಬಿಡಿ. ಖಳವೇಷದ ಬಣ್ಣ ಬರೆದುಕೊಳ್ಳುವ ರೀತಿ, ಎಂಥ ಸಣ್ಣ ಆಳಾದರೂ ನಿಜವಾಗಿಯೂ ದೈತ್ಯನೇ ಎದುರಿಗೆ ನಿಂತಂತೆ ಭಾಸವಾಗುವ ಅವರ ವೇಷ ಹಾಗೂ ಅವರ ನಿಲುವಿನಿಂದಾಗಿ ಅವರ ಬಗ್ಗೆ ಆಸಕ್ತಿ ಮೂಡುತ್ತದೆಯೋ ಏನೋ. 'ವಿದ್ಯುನ್ಮತಿಯ ಕಲ್ಯಾಣ' ಪ್ರಸಂಗದಲ್ಲಿ ಕಾಲಜಂಘ, ಕೀಚಕ ವಧೆಯಲ್ಲಿ ವಲಲ ಭೀಮ, ಬಕಾಸುರ ವಧೆಯ ಬಕಾಸುರ, ದ್ರೌಪದೀ ಪ್ರತಾಪದ ಸೂರ್ಯವರ್ಮ ಇವು ಅವರು ಹೆಸರು ಪಡೆದ ಪಾತ್ರಗಳು. ಇವರ ಆಳುತನವೂ ಭಿನ್ನವಾಗಿ ಇದ್ದುದರಿಂದ ಬರಿಮೈ ಭೀಮನನ್ನು ಮಾಡುವುದೇ ಜಾಸ್ತಿಯಾಗಿತ್ತಂತೆ. ಇವರು ಓದಿದವರಲ್ಲವಾದರೂ ಪಾತ್ರಕ್ಕೆ ತುಂಬಾ ಸಹಜತೆಯನ್ನು ತಂದು ಕೊಡುತ್ತಿದ್ದರಂತೆ. ದ್ರೌಪದಿಗೆ 'ಕನ್ನೆ, ನೀ ನಳಲದಿರು, ಇನ್ನು ಸಂತಸ ತಾಳು' ಎಂದು ಧೈರ್ಯ ಹೇಳುವಾಗ ಪ್ರೇಕ್ಷಕರಲ್ಲಿ ಮದುವೆಯಾದವರಿಗೆಲ್ಲ ತಮ್ಮ ತಮ್ಮ ಹೆಂಡಿರು ಕಷ್ಟಪಡುವಾಗ ಅವರನ್ನು ತಾವು ಸಮಾಧಾನ ಪಡಿಸುವ ಸಂದರ್ಭಗಳು ನೆನಪಾಗುತ್ತಿದ್ದವಂತೆ.

ಕೃಷ್ಣಸಂಧಾನದಲ್ಲಿ ಭೀಮನು ದ್ರೌಪದಿಯ ಮೇಲೆ ಅಸಹನೆ ಸೂಸುತ್ತಾನೆ. ತನ್ನ ಸಂಕಷ್ಟಗಳನ್ನು ಹೇಳಿಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಬಾಳೆಜಡ್ಡಿ ಅಜ್ಜ ಬಹು ಮನೋಜ್ಞವಾಗಿ



ಅಭಿನಯಿಸುತ್ತಿದ್ದರಂತೆ. ಅವರು ಆಡುವ ಮಾತುಗಳಂತೂ ನಿತ್ಯ ಜೀವನದ ಅನುಭವಗಳೇ ಆದುದರಿಂದ ಪ್ರೇಕ್ಷಕರೆಲ್ಲರ ಹೃದಯವನ್ನು ತಟ್ಟುತ್ತಿತ್ತು. ಅವರ ಹಿರಣ್ಯಕಶಿಪು, ಮಾಳಕೊಪ್ಪದ ತಿಮ್ಮಜ್ಜನ ಹಿರಣ್ಯಾಕ್ಷ ಹಾಗೂ ಕಾಶೀಮಠದ ಸುಬ್ಬಾ ಭಟ್ಟರ ಪ್ರಲ್ಹಾದ. ಹೀಗೆ ಒಂದು ಪ್ರಲ್ಹಾದ ಚರಿತ್ರೆ ಆಟವಾಗುತ್ತಿತ್ತಂತೆ. ಇವರಿಗೆ ಒಬ್ಬ ಮಗ, ಮಗಳು. ಮಗನ ಹೆಸರು ವೆಂಕಟ್ರಮಣ. ತಂದೆ ಮಗ ಇಬ್ಬರೂ ಈಗಿಲ್ಲ.

### ಎಲ್ಲ ಬಗೆಯ ಪಾತ್ರಗಳನ್ನೂ ಮಾಡುವ

## ವೆಂಕಟ್ರಮಣ ಹೆಗಡೆ, ಬಾಳೆಜಡ್ಡಿ

ಇವರು ಬಾಳೆಜಡ್ಡಿ ಅಜ್ಜನ ಮಗ. ಅಪ್ಪ ಮತ್ತು ಮಗನ ಹೆಸರು ಒಂದೇ ಆದುದರಿಂದ ಇವರನ್ನು ಶಣ್ಣು ಭಾವ ಎಂದೇ ಜನ ಕರೆಯುತ್ತಿದ್ದರು. ಇವರು ನೋಡಲಿಕ್ಕೆ ಎತ್ತರವಾದ ಸುಂದರವಾದ ಆಳ್ತನವನ್ನು ಹೊಂದಿದ್ದರು. ಆದ್ದರಿಂದ ಯಾವ ವೇಷವನ್ನೇ ಮಾಡಿದರೂ ಅದು ಇವರಿಗೆ ಒಪ್ಪುತ್ತಿತ್ತು. ಸುಭದ್ರಾ ಕಲ್ಯಾಣದಲ್ಲಿ ಅರ್ಜುನ, ಕರ್ಣಪರ್ವದಲ್ಲಿ ಶಲ್ಯ, ವಾಲಿ-ಸುಗ್ರೀವ ಕಾಳಗದಲ್ಲಿ ವಾಲಿ ಹೀಗೆ ಹಲವಾರು ಪಾತ್ರಗಳನ್ನು ಮಾಡಿದ ಅನುಭವ ಉಳ್ಳವರಾಗಿದ್ದರು.

ವಿದ್ಯುನ್ಮತಿ ಕಲ್ಯಾಣದಲ್ಲಿ ಇಂದ್ರ ಹಾಗೂ ಚಿತ್ರಕೇತು ಪಾತ್ರಗಳನ್ನು ಮಾಡುತ್ತಿದ್ದರು. ಭರತನಹಳ್ಳಿ ಸೀಮೆ ಮೇಳದ ಕೊನೆಯ ಆಟದವರೆಗೂ ಇವರು ವೇಷ ಕಟ್ಟುತ್ತಿದ್ದರು. ಸರಳ ಸಜ್ಜನಿಕೆಯ ವ್ಯಕ್ತಿಗಳಾದ ಇವರು ಇತ್ತೀಚೆಗಷ್ಟೇ ನಿಧನ ಹೊಂದಿದರು

### ಭಾಗವತರೂ, ಉತ್ತಮ ಸ್ತ್ರೀ ವೇಷಧಾರಿಗಳೂ ಆದ

## ವೇ. ಅನಂತ ಭಟ್ಟರು, ಹಿತ್ಲಳ್ಳಿ

ಕಳೆದ ಶತಮಾನದ ಅದಿ ಭಾಗದಲ್ಲಿಯೇ ಯಕ್ಷಗಾನ ಕಲೆಯನ್ನು ಉತ್ತುಂಗಕ್ಕೇರಿಸಿದವರಲ್ಲಿ ಹಿತ್ಲಳ್ಳಿಯವರೇ ಬಹುಸಂಖ್ಯೆಯಲ್ಲಿದ್ದಾರೆಂಬುದು ಐತಿಹಾಸಿಕ ಸತ್ಯ. ಯಕ್ಷಗಾನ ಸಾಮಾನ್ಯವಾಗಿ ಲೌಕಿಕರ ಕಸುಬಾಗಿತ್ತು. ಆದರೆ ಅದಕ್ಕೆ ಅಪವಾದವಾಗಿ ವೈದಿಕರು ಇದ್ದೇ ಇದ್ದರು. ಪ್ರಸಿದ್ಧ ಜ್ಯೋತಿಷಿಗಳೂ, ಉತ್ತಮ ವಾಗ್ಮಿಗಳೂ ಆದ ವೇ|| ನಾಗೇಂದ್ರ ಭಟ್ಟರು, ಹಿತ್ಲಳ್ಳಿ ಅವರ ತಂದೆ ದಿ. ವೇ. ಅನಂತ ಭಟ್ಟರು ಅಂಥ ಅಪರೂಪದ ವ್ಯಕ್ತಿಗಳಲ್ಲಿ ಒಬ್ಬರು.

ಅವರು ಮರಣ ಹೊಂದಿದ್ದು ಬಹು ಬೇಗನೇ. ಅಂದರೆ ಇಂದಿಗೆ ಸುಮಾರು ಅರವತ್ತೆರಡು



ವರ್ಷಗಳ ಹಿಂದೆ. ಆಗ ಪ್ರಾಯಶಃ ಅವರಿಗೆ ನಾಲ್ವತ್ತು, ನಾಲ್ವತ್ತೈದು ವರ್ಷ ಇದ್ದಿತ್ತೋ ಏನೋ. ಅವರಿಗೆ ಬಾಲ್ಯದಿಂದಲೂ ಯಕ್ಷಗಾನದ ಬಗ್ಗೆ ತುಂಬಾ ಅಭಿರುಚಿ. ಅದಕ್ಕೆ ಕಾರಣ ಅನಂತ ಹೆಗಡೆ (ಹಿತ್ಲಳ್ಳಿ ಮಾಣಿ ಎಂದು ಖ್ಯಾತಿ ಪಡೆದವರು) ಯವರ ಯಕ್ಷಗಾನ ವೇಷಗಳಿರಬಹುದೆಂದು ವೇ. ನಾಗೇಂದ್ರ ಭಟ್ಟರ ಅನಿಸಿಕೆ. ಹಿತ್ಲಳ್ಳಿಯಲ್ಲಿ ಆಟದ ಮೇಳದ ಮ್ಯಾನೇಜರರಿಂದ ಮೊದಲ್ಗೊಂಡು ವಿವಿಧ ಬಗೆಯ ವೇಷಧಾರಿಗಳಿದ್ದರು. ಪ್ರಾರಂಭದಲ್ಲಿ ಇವರಿಗೆ ಯಕ್ಷಗಾನ ಕಲಿಯಲು ಹಿರಿಯರ ಹಾಗೂ ಇವರ ಶಿಷ್ಯವರ್ಗದ ಹೆಗಡೆಗಳಿಂದ ಅಡ್ಡಿ ಬಂತು. ಇನ್ಯಾತಕ್ಕೂ ಅಲ್ಲ. ವೈದಿಕನ ಮನೆ ಮಾಣಿ ಪೌರೋಹಿತ್ಯ ಬಿಟ್ಟು ಯಕ್ಷಗಾನಕ್ಕೆ ಹೋದರೆ ನಾಳೆ ತಮ್ಮ ಮನೆಗೆ ಬರುವ ಪುರೋಹಿತರು ಯಾರು ಎಂಬುದಕ್ಕೆ. ಇವರ ಪಾತ್ರವಾಗಲೀ ಇವರು ಮಾಡುತ್ತಿದ್ದ ಭಾಗವತಿಕೆಯಾಗಲೀ ಕೆಡುವುದನ್ನೇ ಕಾಯುತ್ತಿದ್ದರು. ಯಾಕೆಂದರೆ ಆಗ ಅವರಿಗೆ ಸಗಣಿ ಮುದ್ದೆಯಲ್ಲಿ ಹೊಡೆದು ಅವರನ್ನು ಯಕ್ಷಗಾನದಿಂದ ವಿಮುಖರನ್ನಾಗಿ ಮಾಡೋಣ ಎಂದು. ಆದರೆ ಹಾಗಾಗಲೇ ಇಲ್ಲ. ಇವರು ಗುರುಗಳು ಕಲಿಸಿದ್ದಕ್ಕಿಂತ ಹೆಚ್ಚಾಗಿ ಸ್ವಂತ ಪರಿಶ್ರಮದಿಂದ ಕಲಿತರು. ಸಂಸ್ಕೃತ ಅಭ್ಯಾಸವನ್ನು ಕೂಡ ಅದೇ ರೀತಿ ಕಲಿತವರೇ.

ಇವರು ವೈದಿಕರು, ಅನೇಕರಿಗೆ ಪುರೋಹಿತರೂ, ಅಲ್ಲದೇ ವಿದ್ವಾಂಸರೂ, ಜೊತೆಗೆ ಕಲಾವಿದರೂ ಆಗಿದ್ದರಿಂದ ಎಲ್ಲರೂ ಇವರಿಗೆ ತುಂಬಾ ಗೌರವವನ್ನು ಕೊಡುತ್ತಿದ್ದರು. ಒಮ್ಮೆ ದ್ರೌಪದೀ ಪ್ರತಾಪ ಪ್ರಸಂಗ. ಇವರು ದ್ರೌಪದಿ. ಭೀಮನ ಪಾತ್ರಧಾರಿಗೆ ಯುಕ್ತಿವಾದ ಗೊತ್ತಿಲ್ಲವಾಗಿತ್ತು. ಅರ್ಜುನ ತನ್ನ ಚಮತ್ಕಾರಿಕ ಮಾತುಗಳಿಂದ ತಾನೇ ಮಹಾಭಾರತ ಯುದ್ಧವನ್ನು ಗೆಲ್ಲಿಸಿದವನು ಎಂದು ಸಾಧಿಸುತ್ತಿದ್ದ. ಅವನ ಮುಂದೆ ಭೀಮನದು ಸಪ್ಪೆಯಾಗುತ್ತಿತ್ತು. ಅವರು ಇವರ ಮಾರ್ಗದರ್ಶನ ಬೇಡಿದರು. ಇವರನ್ನು ಕರೆಯುವುದು ಅನಂತಯ್ಯನೆಂದೇ.

ಅನಂತಯ್ಯ: ಭಾರತ ಯುದ್ಧ ಯಾಕಾಗಿ ಆಯ್ತು ?

ಭೀಮನ ಪಾತ್ರಧಾರಿ: " ಕೌರವರು ಪಾಂಡವರಿಗೆ ಭೂಮಿಯನ್ನು ಬಿಡುವುದಿಲ್ಲವೆಂದೂ, ಯುದ್ಧದಲ್ಲಿಯೇ ಪಡೆದುಕೊಳ್ಳಬೇಕೆಂದು ಹಟ ಹಿಡಿದಿದ್ದಕ್ಕೆ "

ಅ. : ಯುದ್ಧದಲ್ಲಿ ಒಬ್ಬನೇ ಒಬ್ಬ ಕೌರವ ಉಳಿದಿದ್ದರೂ ರಾಜ್ಯ ಪಾಂಡವರಿಗೆ ಸಿಗುತ್ತಿತ್ತೇ ?

ಭೀ. : ಇಲ್ಲ

ಅ.: ಎಲ್ಲ ನೂರು ಮಂದಿ ಕೌರವರನ್ನು ಕೊಂದವರು ಯಾರು ?

ಭೀ..: ಭೀಮ

ಅ. : ಉಳಿದವರು ಬದುಕಿದ ಮಾತ್ರಕ್ಕೆ ಪಾಂಡವರಿಗೆ ರಾಜ್ಯ ತಪ್ಪುತ್ತಿತ್ತೇ ?

ಭೀ. : ಇಲ್ಲ.

ಅ.: ಅಂದ ಮೇಲೆ ಯಾರನ್ನು ವಧಿಸುವುದು ಮಹತ್ವದ್ದಾಗಿತ್ತು ?

ಭೀ. : ಕೌರವರನ್ನು

ಅ.: ಅಂದ ಮೇಲೆ ಮಹಾಭಾರತ ಯುದ್ಧವನ್ನು ಜಯಿಸಿದವರು ಯಾರು ? ಕೌರವರನ್ನು ಕೊಂದ ಭೀಮನೋ ? ಅಥವಾ ಉಳಿದವರನ್ನು ಜಯಿಸಿದ ಅರ್ಜುನನೋ ?

ಭೀ. : ಭೀಮನೇ

ಅ. : ಇದನ್ನು ನೆನಪಿಟ್ಟುಕೊಂಡು ಅರ್ಜುನನೊಡನೆ ಸಂಭಾಷಿಸು. ಆಗ ನೀನೇ ಗೆಲ್ಲುತ್ತಿ.

ಅದೇ ರೀತಿ ಆಯಿತು.

ಇವರು ಪ್ರಥಮವಾಗಿ ಪಾತ್ರ ಮಾಡಿದ್ದು ದಕ್ಷಯಜ್ಞದ ದಾಕ್ಷಾಯಿಣಿಯ ಪಾತ್ರವಂತೆ. ಇವರು ಜೋರಿನ ಸ್ತ್ರೀವೇಷಗಳಾದ ದ್ರೌಪದೀ, ಅಂಬೆಗಳನ್ನು ಚೆನ್ನಾಗಿ ಮಾಡುತ್ತಿದ್ದರು. ಕೃಷ್ಣಾರ್ಜುನ ಕಾಳಗದ ಸುಭದ್ರೆಯ ಪಾತ್ರವನ್ನು ಇವರು ಮಾಡಿದ್ದರಂತೆ. ತಾನು, ತವರಿಗೆ ಹೋಗಿ ಅರ್ಜುನ ಹೇಳಿದ ಮಾತುಗಳನ್ನು ಕೃಷ್ಣನಿಗೆ ತಿಳಿಸುವುದಕ್ಕಿಂತ ವಿಷ ತಿನ್ನುವುದೇ ಲೇಸೆಂಬ ಸನ್ನಿವೇಶವನ್ನು ಪರಿಣಾಮಕಾರಿಯಾಗಿ ಅಭಿನಯಿಸುತ್ತಿದ್ದರಂತೆ. ಇವರದು ಅಂಬೆಯ ಪಾತ್ರವೂ ಬಹುಪ್ರಸಿದ್ಧವಂತೆ. ಭೀಷ್ಮನಿಂದ ಸಾಲ್ವನಲ್ಲಿಗೆ ಹೋಗಿ ಅವನಿಂದ ತಿರಸ್ಕೃತಳಾದಾಗ ಹೇಳುವ ಸನ್ನಿವೇಶ ''ಮರಳು ನಾನಾಗಿರ್ಪೆ, ಮತ್ತಿವ ವಿಷಮಪಾತಾಕಿ..'' ಈ ಸನ್ನಿವೇಶವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದರಂತೆ.

ಇವರು ಭಾಗವತಿಕೆಯನ್ನು ಮಾಡುತ್ತಿದ್ದುದರಿಂದ ಭಾಗವತಿಕೆ ಮಾಡಿದ ಸಂದರ್ಭಗಳೇ ಹೆಚ್ಚಾಗಿತ್ತಂತೆ. ಬಾಮನಕೊಪ್ಪದಲ್ಲಿ ಪ್ರಾಯಶಃ 'ವಿದ್ಯುನ್ಮತಿ ಕಲ್ಯಾಣ' ಪ್ರಸಂಗ. ರಾತ್ರೆ ಯಾರ ಹತ್ತಿರವೂ ಪ್ರಸಂಗ ಪಟ್ಟಿ ಇಲ್ಲ. ವೇಷಗಳನ್ನು ಬರೆದುಕೊಂಡಾಗಿದೆ. ಆಗ ಇವರು ಕಥೆಗೆ ವ್ಯತ್ಯಯ ಬರದ ಹಾಗೆ ವೇಷಧಾರಿಗಳಿಗೆ ತೊಂದರೆಯಾಗದ ಹಾಗೆ ಮೂಲವನ್ನೇ ಹೋಲುವ ಪದ್ಯಗಳನ್ನು ಹಾಡಿ ಪ್ರಸಂಗ ಪೂರೈಸಿದ್ದರಂತೆ.

ಸಂಸ್ಕೃತ ವಿದ್ವಾಂಸರಾದ ಇವರು ಪುತ್ರಕಾಮೇಷ್ಟಿಯಾಗದ ವಸಿಷ್ಠರ ಪಾತ್ರವನ್ನು ಚೆನ್ನಾಗಿ ಮಾಡುತ್ತಿದ್ದರಂತೆ. ಋಷ್ಯಶೃಂಗ ಪ್ರವೇಶವಾದ ಮೇಲೆ ಋಷ್ಯಶೃಂಗ ಹಾಗೂ ವಸಿಷ್ಠರ ಸಂಭಾಷಣೆ ಸಂಸ್ಕೃತದಲ್ಲಿಯೇ ಆಗುತ್ತಿತ್ತಂತೆ. ಇವರೇ ಶೃಂಗಿ (ಋಷ್ಯಶೃಂಗ) ಯಾದರೆ ಕೋಂಡುಂನಿಂದ ಪ್ರಾರಂಭವಾದ ಸಂಭಾಷಣೆ ಪರಮಾತ್ಮ ಎನ್ನುವತನಕ ಸರಿಯಾಗಿ ಮುಂದುವರಿಯುತ್ತಿತ್ತಂತೆ. ಇವರೇ ತಯಾರು ಮಾಡಿದ ಶಿಷ್ಯ ಋಷ್ಯಶೃಂಗನ ಪಾತ್ರಧಾರಿಯಾದಾಗ ಅವನು ತಡವರಿಸಿದರೆ



ಇವರು ಸಂಸ್ಕೃತದಲ್ಲಿಯೇ ನಿನ್ನ ಅಭಿಪ್ರಾಯದಲ್ಲಿ ಹೀಗೋ ಎಂದು ಕೇಳಿ ಸಂಭಾಷಣಾ ಸನ್ನಿವೇಶವನ್ನು ಚಂದಗೊಳಿಸುತ್ತಿದ್ದರಂತೆ.

ಇವರ ಕವಿತಾ ಶಕ್ತಿ ಕೂಡಾ ಅದ್ಭುತವಾಗಿತ್ತೆಂದು ವೇ. ನಾಗೇಂದ್ರ ಭಟ್ಟರು ನೆನಪಿಸಿಕೊಳ್ಳುತ್ತಾರೆ. ಒಮ್ಮೆ ಮೊಟ್ಟೆಪಾಲ ದಿ. ವೆಂಕಟ್ರಮಣ ಭಟ್ಟರದು ಕೃಷ್ಣನ ಪಾತ್ರ. ಅವರು ಮೊದಲೇ ಸಿದ್ಧಪಡಿಸಿದ ಪದ್ಯ. ಅದು ಪ್ರಸಂಗದಲ್ಲಿ ಇಲ್ಲವಾದದ್ದು ''ನಡಿರೆ ನೀಡೀರೇ ಸುಮ್ಮನೇ ಭಾ । ಮೆಯರೆಲ್ಲ ನಡಿರೇ ನ। ಡೀರೆ ಸುಮ್ಮನೇ ॥ ತಡೆಯದೆ ಮಡದಿಯರ್ ನಡೆಯಿರಿ ಬಿಡದಿಗೆ। ಹುಡುಗಾಟಿಕೆ ಬಿಡಿ ಗಡಿಬಿಡಿ ನಡೆಸದೆ ॥ ಪದ್ಯ ಹಾಡಿಕೊಂಡು ಅಭಿನಯಿಸಿದರಂತೆ. ಹಿಂದೆ ಇಂಥ ಸನ್ನಿವೇಶಗಳಲ್ಲಿ ಇವರ ಈ ಒಂದು ಪದ್ಯಕ್ಕೇ ಸತ್ಯಭಾಮೆ, ರುಕ್ಮಿಣಿಯರು ಕಣ್ಣು ಕಣ್ಣು ಬಿಡುತ್ತಿದ್ದರಂತೆ. ಆಗ ಅನಂತ ಭಟ್ಟರು ತಕ್ಷಣವೇ ಅದಕ್ಕುತ್ತರವಾಗಿ ಒಂದು ಪದ್ಯ ರಚಿಸಿದರಂತೆ.

''ಪೋಗಲಾರೆವು ಸುಮ್ಮನೇ । ಹೇ ದೇವಾ ದೇವಾ । ಪೋಗಲಾರೆವು ಸುಮ್ಮನೇ ॥ ಶ್ರೀ ಗುರು ವಿಠ್ಠಲ । ಸಾಗರ ಶಯನ ಸು । ರಾಗ ಭೋಗ ನಿಗ । ಮಾನ ಮ ವಂದಿತ । ಪೋಗಲಾರೆವು ಸುಮ್ಮನೇ ॥

ಮೊಟ್ಟೆಪಾಲ ಭಟ್ಟರು ಸಾಮಾನ್ಯದವರಲ್ಲ. ಇನ್ನೊಂದು ಪದ್ಯ ಕಟ್ಟಿ ಹಾಡಿದರು. ಅದಕ್ಕುತ್ತರವಾಗಿ ಅನಂತಯ್ಯನವರೂ ಪದ್ಯ ಕಟ್ಟಿದರು. ಹೀಗೆ ಐದೈದು ಪದ್ಯಗಳ ಸಂವಾದ ವರ್ಷಗಟ್ಟಿತಂತೆ. ಅವರೇ ಕಲ್ಪಿಸಿಕೊಂಡ ಕಥೆ ''ಸಾರಂಗಧರ ಚರಿತೆ'' ಯನ್ನು ಮಹನೀಯರೊಬ್ಬರು ಸಂಪಾದಿಸಿ ಪ್ರಕಟಗೊಳಿಸಲು ಅನುವು ಮಾಡುವವರಿದ್ದರಂತೆ. ಇವರಿಗೆ ಇವರ ವಿರೋಧಿ ಕೂಟ ಬುದ್ಧಿವಂತ ಭಟ್ರು ಎಂದು ಕರೆದದ್ದು ಸಾರ್ಥಕವಾಗಿತ್ತು. ಇವರು ಅಕಾಲ ಮರಣ ಹೊಂದಿದ್ದು ನಮ್ಮ ದೌರ್ಭಾಗ್ಯ.

---

**ಸಾಗಲಿ ....ಹೀಗೇ**

ಸಂಪ್ರದಾಯೀ ಭಾಗವತ
ಕೃಷ್ಣಪ್ಪ
ಅಪ್ಪನ ಹೆಜ್ಜೆಯಲಿ ಮಗ
ತಿಮ್ಮಪ್ಪ

– 'ರಾಯ, ಶಿರಸಿ

---



# ಯಕ್ಷಗಾನ ರಂಗಭೂಮಿಗೆ ಅಧ್ಯಯನಶೀಲತೆ ಅಗತ್ಯ

**-ಶಂಭು ಹೆಗಡೆ, ಕೆರೆಮನೆ**

ಕೊಲೆಯಂತಹ ಮಹಾಪಾತಕ ನಡೆಯುವುದು ಭಾವುಕತೆಯ ಕ್ಷಣದಲ್ಲಿ. ಈ ಭಾವುಕತೆಯನ್ನು ಸಂಯಮದಿಂದ, ವಿವೇಕದಿಂದ ಬಳಸಿಕೊಳ್ಳಬೇಕು. ಭಾವುಕತೆ ಮನುಷ್ಯನಿಗೆ ಜೀವನದಲ್ಲಿ ಬೇಕಾದ ಅತ್ಯಮೂಲ್ಯವಾದ ಟಾನಿಕ್. ಬದುಕಿನ ಅನೇಕ ನಿಷ್ಠುರವನ್ನು ಕಷ್ಟವನ್ನು ಕಳೆಯೋದಕ್ಕೆ ಭಾವುಕ ಸ್ಪರ್ಶ ಒಂದು ಹೊಸ ಚೈತನ್ಯ ಕೊಡುವುದಕ್ಕೆ ಬೇಕಾಗುತ್ತದೆ. ಈ ಸನ್ಮಾನ ಬಹುಶಃ ಅಂಥ ಆವರಣವನ್ನು ನಿರ್ಮಿಸಿಕೊಡುತ್ತದೆ. ಯಾವುದೇ ಕಲಾವಿದನ ಸಂಮಾನದಲ್ಲಿ ಭಾವುಕತೆ ಎದ್ದು ನಿಲ್ಲುವುದು ಯಾಕೆಂದರೆ - ನಮ್ಮ ದೇಶದ ಕಲಾವಿದನ ಬದುಕಿನ ಒಂದು ಮಹಾಗ್ರಂಥದಲ್ಲಿ ಅನೇಕ ಪುಟಗಳಿರುತ್ತವೆ. ಒಂದೊಂದು ಪುಟದಲ್ಲಿಯೂ ಒಂದೊಂದು ವಿಷಯ ಇರುತ್ತದೆ. ಒಂದಕ್ಕಿಂತ ಒಂದು ಭಿನ್ನವಾದ ಅನೇಕ ಸಂಗತಿಗಳಿರುತ್ತವೆ. ಕಲಾವಿದನ ಬದುಕಿನ ಕಷ್ಟ, ನಿಷ್ಠುರ, ಸುಖ-ಸಂತೋಷ ಹೀಗೆ ವರ್ಣಮಯವಾದ ಜೀವನಕ್ರಮ ಅನುಭವಿಸಿರುವ ಕಲಾವಿದರ ಸನ್ಮಾನ ಅದು ಭಾವುಕತೆಗೆ ಹೆಚ್ಚಿನ ಒತ್ತು ನೀಡುತ್ತದೆ. ಆದರೆ ಇಂಥ ಸನ್ನಿವೇಶದಲ್ಲಿ ನಾವು ಬೌದ್ಧಿಕವಾಗೂ ಆಲೋಚನೆ ಮಾಡಬೇಕು. ಒಂದು ಕ್ಷೇತ್ರದ ಕಲಾವಿದನನ್ನು ಕುರಿತು ನಾವು ಸನ್ಮಾನಿಸುವಾಗ, ಅಭಿನಂದಿಸುವಾಗ ಭಾವುಕತೆ ಎಷ್ಟು ನಮಗೆ ಮುಖ್ಯವೋ, ಈ ಭಾವುಕತೆಯ ಉದ್ದೀಪನಕ್ಕೆ ಕಾರಣವಾದಂತಹ ವ್ಯಕ್ತಿ ಪ್ರತಿಭೆ, ಅದರ ಪಾರ್ಶ್ವ ಪರಿಣಾಮ ಏನು? ಅದರ ಅವಶ್ಯಕತೆ ಏನು? ಅದರಿಂದ ನಾವು ಕಲಿಯಬೇಕಾದದ್ದೇನು? ಅಂತೂ ಈ ಸನ್ಮಾನ ಕೊಡುವ ಸಂದೇಶ ಏನು? ಇದನ್ನೆಲ್ಲ ನಾವು ಯೋಚಿಸುವಾಗ ನಾವು ಬೌದ್ಧಿಕರಾಗಬೇಕು. ಯಕ್ಷಗಾನದ ಕುರಿತಾಗಿ, ಯಕ್ಷಗಾನ ಕಲಾವಿದರ ಕುರಿತಾಗಿ ನಮಗೆ ಅಭಿಮಾನದ ಬರಗಾಲ ಖಂಡಿತಾ ಇಲ್ಲ. ಆದರೆ ಈ ಅಭಿಮಾನದ ಜೊತೆಗೆ ಪ್ರಜ್ಞೆ, ವಿವೇಚನೆ, ತರ್ಕಶಕ್ತಿ ಇತ್ಯಾದಿಗಳನ್ನು ಬಳಸಿಕೊಳ್ಳುವುದರಲ್ಲಿ ನಾವು ಎಷ್ಟು ಎಚ್ಚರ ಹೊಂದಿದ್ದೇವೆ ಎನ್ನುವುದು ಬಹಳ ಮುಖ್ಯ. ಈ ಕೃಷ್ಣ ಭಾಗವತರನ್ನು ನಾವು ನೀವು ಇಂದು ಅಭಿನಂದಿಸುತ್ತೇವೆ, ಯಾಕೆ? ಉಳಿದ ಕಲಾವಿದರಿಗಿಂತ ಭಿನ್ನವಾದ ಸಾಧನೆ ಮಾಡಿದ್ದರಿಂದ! ಭಾಗವತರನ್ನು ಕುರಿತು ಆಲೋಚಿಸುವಾಗ ಬಹಳ ವಿಸ್ಮಯ ಅನಿಸುತ್ತದೆ. ೭೫ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಅವರು ೭-೮ ವರ್ಷಕ್ಕೇ ಈ ರಂಗಭೂಮಿ ಒಪ್ಪಿಕೊಂಡರು ಅಂತ ನಾವು ಕೇಳುತ್ತೇವೆ. ಆದರೆ ಆ ಕಾಲದಿಂದ ಈ ಕಾಲದವರೆಗೂ ಕಾಯಾ-ವಾಚಾ-ಮನಸಾ ಈ ರಂಗಭೂಮಿಯನ್ನು ಆತ್ಮೀಯತೆಯಿಂದ ಕಂಡು ಅದಕ್ಕೆ ಒಪ್ಪಿತವಾದಂತಹ ಸಾಧನೆ ಮಾಡಿ ತನ್ನಿಂದ ಈ ಕ್ಷೇತ್ರಕ್ಕೆ ಎಷ್ಟರ ಮಟ್ಟಿಗೆ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚಿಸಿದವರು. ವಾಸ್ತವಿಕವಾಗಿ ಯಕ್ಷಗಾನದಂತಹ ಕಲಾಕ್ಷೇತ್ರಕ್ಕೆ ಈ ಚಿಂತನಶೀಲ, ಈ ತ್ಯಾಗ ಮನೋಭಾವ, ಈ ಸಾಧಕ ಸ್ವಭಾವ ಇರುವ ಕಲಾವಿದರು ಅತ್ಯಂತ ಅಪರೂಪ. ಆ ಕಾರಣಕ್ಕಾಗಿ ಇವತ್ತು ಅವರು ಅತ್ಯಂತ ಮಹತ್ವದ ಕಲಾವಿದರಾಗಿ ಕಾಣಿಸಿಕೊಳ್ಳುತ್ತಾರೆ.

ಪುಟ ಪ್ರಾಯೋಜಕರು : **ಶ್ರೀ ನಾರಾಯಣ ವೆಂ. ಹೆಗಡೆ, ಮಾದನಸರ**



ಒಬ್ಬ ಕಲಾವಿದ ಅಧ್ಯಯನ, ಅವಲೋಕನ ಹಾಗೂ ಆಲೋಚನೆ ಈ ಮೂರು ಸಂಗತಿಗಳಿಂದ ಮಾತ್ರ ಬೆಳೆಯಲಿಕ್ಕೆ ಸಾಧ್ಯ ಉಂಟು. ಈ ದೃಷ್ಟಿಯಿಂದ ಒಂದು ಕಾಲದಲ್ಲಿ ಯಕ್ಷಗಾನದ ಹಾಡುಗಾರಿಕೆಗೆ ಶಾಸ್ತ್ರೀಯತೆಯ ಲೇಪ ಬೇಕೋ ಬೇಡವೋ ಎಂಬ ಆಲೋಚನೆ ಹುಟ್ಟುವುದಕ್ಕಿಂತ ಪೂರ್ವದಲ್ಲೇ ಅವರು ಆ ಕೆಲಸವನ್ನು ಮಾಡಿಕೊಟ್ಟರು. ಯಾವನು ಶಾಸ್ತ್ರೀಯ ಸಂಗೀತ ಕಲಿತು ಒಬ್ಬ ಹಾಡುಗಾರನಾಗುತ್ತಾನೋ ಆ ಕಲಿತ ಶಾಸ್ತ್ರಸ್ತ ಸಂಗತಿಯನ್ನು ಈ ರಂಗಭೂಮಿಗೆ ಈ ಹಾಡುಗಾರಿಕೆಯ ಸ್ಥಿತಿಗತಿಗೆ ಅನುಕೂಲಿಸಿ, ಬಳಸುವ ಜಾಣ್ಮೆಯಿಲ್ಲದಿದ್ದರೆ ಆತ ಕಲಿತದ್ದನ್ನೇ ಹಾಡ್ತಾನೆ. ಅನೇಕರ ಆಲೋಚನೆ ಭಾಗವತರು ಸಂಗೀತ ಕಲಿಬಾರದು, ಏಕೆಂದರೆ ಕಲಿತರೆ ಯಕ್ಷಗಾನ ಕೆಡಿಸ್ತಾರೆ ಅಂತಿದೆ. ಇನ್ನು ಕೆಲವರು ಸಂಗೀತ ಕಲಿಬೇಕು ಅನ್ನುತ್ತಾರೆ. ಯಕ್ಷಗಾನವನ್ನು ನಾವು ಹಾಡು ಎಂದು ಒಪ್ಪಿಕೊಂಡಮೇಲೆ, ಸಂಗೀತ ಎಂದು ಒಪ್ಪಿಕೊಂಡಮೇಲೆ ಅಧ್ಯಯನ ಬೇಡ ಎನ್ನುವುದು ಬಾಲಿಶ ವಿಚಾರವೇ ಸರಿ. ಯಕ್ಷಗಾನ ಭಾಗವತರು ಖಂಡಿತಕ್ಕೂ ಸಂಗೀತ ಕಲಿಬೇಕು. ಕಲಿತರೆ ಕೆಡುವುದಿಲ್ಲ ಎನ್ನುವುದಕ್ಕೆ ಬಾಳೆಹದ್ದ ಭಾಗವತರೇ ಸಾಕ್ಷಿಯಾಗಿದ್ದಾರೆ. ಯಕ್ಷಗಾನ ಕಲೆಯನ್ನು ಒಪ್ಪಿ ಸ್ವೀಕರಿಸಿದ ಮೇಲೆ ಒಂದಿಷ್ಟು ವರ್ಷ ಕರಾರುವಾಕ್ಕಾಗಿ ಅಧ್ಯಯನ ಮಾಡಲೇಬೇಕು. ಅನಿವಾರ್ಯ ಆವರಣ ಸೃಷ್ಟಿಯಾಗಬೇಕು. ಇಂದು ಎಲ್ಲಾ ನೈಸರ್ಗಿಕ ಸಂಗತಿಗಳಿಗೂ ಕೂಡ ಕ್ರಮಬದ್ಧವಾದ ಶಿಕ್ಷಣ ಕೊಡುವ ವ್ಯವಸ್ಥೆ ಇದೆ ಅನ್ನುವಾಗ ಒಂದು ಹಾಡುವ, ಒಂದು ಗಾನ ಪದ್ಧತಿಯನ್ನು ಕಲಿಯದೇ ಬರುತ್ತದೆ, ಒಂದು ನೃತ್ಯಪದ್ಧತಿ ಕಲಿಯಬೇಕಾದ ಅಗತ್ಯ ಇಲ್ಲ, ಪಾತ್ರ ಪೋಷಣೆ - ರಸಪೋಷಣೆ ಕಲಿಯದೇ ಬರುತ್ತದೆ ಎಂಬುದು ತೀರಾ ಅಪಾಯಕಾರಿ ನಂಬುಗೆ. ನಾನು ಬಹುಕಾಲದಿಂದ ಹೇಳುತ್ತ ಬಂದಿದ್ದೇನೆ- ಯಕ್ಷಗಾನವನ್ನು ಮೂರರಿಂದ ಐದು ವರ್ಷ ಸತತ ಅಭ್ಯಾಸ ಮಾಡಬೇಕಾದ ಪ್ರಸಂಗ ಬರ್ತದೆ ಅಂತ. ಇನ್ನುಳಿದ ಭಾರತೀಯ ಸಂಗೀತ ನೃತ್ಯ ಪದ್ಧತಿಗಳಲ್ಲಿ ಕಲಿಕೆಯ ಅವಧಿ ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಕಥಕ್ಕಳಿಯನ್ನು ಏಳರಿಂದ ಹನ್ನೆರಡು ವರ್ಷ ಕಲಿಯಬೇಕು. ತರಬೇತಿ ಯಾವಾಗಲೂ ಕಲೆಯಾಗುವುದಿಲ್ಲ. ಕಲೆಯ ಉಳಿವಿಗೆ ತರಬೇತಿ ಅಗತ್ಯ. ಕಲೆಯ ಸಂರಕ್ಷಣೆಗೆ ಶಾಸ್ತ್ರದ ಅಧ್ಯಯನ ಅಗತ್ಯ. ಆದ್ದರಿಂದ ಯಕ್ಷಗಾನದ ವಿಷಯದಲ್ಲಿ ಅಧ್ಯಯನ ಎನ್ನುವುದು ಬೇಕು. ಯಕ್ಷಗಾನದ ಒಂದೊಂದು ಅಂಗದ ಅಭ್ಯಾಸದ ಸಲುವಾಗಿ ಕಲಾವಿದ ಇಡೀ ಆಯುಷ್ಯ ಕೊಡಬೇಕಾದ ಸಂದರ್ಭ ಉಂಟು. ಯಕ್ಷಗಾನ ರಂಗದಲ್ಲಿ ಅಧ್ಯಯನದ ಮಹತ್ವ ಏನೆಂಬುದನ್ನು ಬಾಳೆಹದ್ದ ಕೃಷ್ಣ ಭಾಗವತರು ಮನಗಾಣಿಸಿಕೊಟ್ಟಿದ್ದಾರೆ. ಅವರು ಬೆಳೆದಿದ್ದಾರೆ ಯಾವ ಕಾರಣದಿಂದ ಅಂದರೆ ಅಧ್ಯಯನದಿಂದ. ಅವರ ಆದರ್ಶ ಅನುಕರಣೀಯ.

ಯಕ್ಷಗಾನ ರಂಗಭೂಮಿ ಅಧ್ಯಯನಶೀಲತೆಯನ್ನು ಮನಸಾರೆ ಒಪ್ಪಿಕೊಳ್ಳಲಿ. ರಂಗಭೂಮಿ ವಿಷಯದಲ್ಲಿ ನಾವು ಕನಸನ್ನು ಕಾಣುವಷ್ಟೇ ವಾಸ್ತವತೆಯನ್ನೂ ಒಪ್ಪಿಕೊಳ್ಳಬೇಕು. ಇವತ್ತು ನಮ್ಮ ಯಕ್ಷಗಾನ ರಂಗಭೂಮಿಯಲ್ಲಿ ಅಧ್ಯಯನಶೀಲತೆಯ ಕೊರತೆ ಎಷ್ಟಿದೆಯೆಂದು ನೋಡಲು ನಾವು



ಕೇವಲ ಯಕ್ಷಗಾನದವರನ್ನಷ್ಟೇ ನೋಡಬಾರದು, ಉಳಿದವರನ್ನು ನೋಡಬೇಕು. ದೇಶದ ಶ್ರೇಷ್ಠ ಕಲಾವಿದನ ಸಾಧನೆಯನ್ನು ನೋಡಬೇಕು. ಎಲ್ಲರೂ ಇಂದು ಭಾಗವತರನ್ನು ವೈಭವೀಕರಿಸುತ್ತಾರೆ, ಯಾಕೆ? ಅವರು ಅಧ್ಯಯನಶೀಲರಾದ್ದರಿಂದ. ಈ ಅಧ್ಯಯನಶೀಲತೆ ಶ್ರೇಷ್ಠ ಎಂದು ಒಪ್ಪಿಕೊಂಡಿದ್ದರಿಂದ. ಒಂದು ವ್ಯಕ್ತಿಯ ಅಧ್ಯಯನಶೀಲತೆಯನ್ನು ಶ್ರೇಷ್ಠ ಎಂದು ಒಪ್ಪಿಕೊಂಡಮೇಲೆ ಉಳಿದ ಕಲಾವಿದರ ಶ್ರೇಷ್ಠತೆಗೆ ಅಧ್ಯಯನಶೀಲತೆ ಬೇಕು ಎಂದು ನಾವು ಏಕೆ ಒಪ್ಪಬಾರದು? ಒಪ್ಪಲೇಬೇಕು. ಎಲ್ಲಿಯತನಕ ಯಕ್ಷಗಾನ ರಂಗಭೂಮಿಗೆ ಅಭ್ಯಾಸ, ಅಧ್ಯಯನಶೀಲತೆಯ ಅವಶ್ಯಕತೆ ನಮಗೆ ಮನವರಿಕೆ ಆಗುವುದಿಲ್ಲವೋ ಅಲ್ಲಿಯತನಕ ನಮ್ಮ ಸಂಕುಚಿತತೆಯನ್ನು ಮೀರಿ ಹೋಗಲು ಆಗುವುದಿಲ್ಲ.

ಈ ಭಾಗವತರ ಇಂದಿನ ಸನ್ಮಾನ ಇರುವುದು ಅಧ್ಯಯನಶೀಲತೆಯನ್ನು ಸಾರಿ ಹೇಳುವುದಕ್ಕೆ ಎಂದು ನನ್ನ ಭಾವನೆ. ಕೃಷ್ಣ ಭಾಗವತರು ಈ ಹೊತ್ತು ಪ್ರಚಲಿತ ಪ್ರಚಾರದಲ್ಲಿದ್ದ ಭಾಗವತರು ಅಲ್ಲ. ಆದರೂ ನೀವು ಹುಡುಕಿದ್ದೀರಿ, ನಾವು ಗುರುತಿಸಿದ್ದೇವೆ ಅವರಲ್ಲಿ ಶ್ರೇಷ್ಠತೆ ಇದೆ ಎಂದು. ಎಲ್ಲಿ ಶ್ರೇಷ್ಠತೆಯನ್ನು ಗುರುತಿಸುವ ಗುಣ ಇರುತ್ತದೆಯೋ ಅಲ್ಲಿ ಸಂಬಂಧಪಟ್ಟಿದ್ದು ಶ್ರೇಷ್ಠವಾಗಿರುತ್ತದೆ. ಈ ಆನಂದಮಯ ಸನ್ಮಾನ ಶ್ರೇಷ್ಠತೆಗೆ ಸಂದ ಗೌರವ; ಅಧ್ಯಯನಶೀಲತೆಗೆ ಸಂದ ಗೌರವ. ಅಧ್ಯಯನ, ಅಭ್ಯಾಸ, ಆಲೋಚನೆ, ಅವಲೋಕನ ಮುಂತಾದವುಗಳಿಂದ ಕಲಾವಿದರು ಬೆಳೆಯಬೇಕು, ಆ ಮೂಲಕವಾಗಿ ಯಕ್ಷಗಾನ ಕಲೆ ಉಳಿಯಬೇಕು.

ಯಕ್ಷಗಾನದಲ್ಲಿ ಈ ಅಧ್ಯಯನದ ಕೊರತೆಯಿಂದಾಗಿ ಯಕ್ಷಗಾನಾಸಕ್ತರೆಲ್ಲ ಹಿಂದೂಸ್ತಾನೀ ಸಂಗೀತಕ್ಕೆ ರೂಪಾಂತರ ಹೊಂದುತ್ತಿದ್ದಾರೆ. ಈ ಜಿಲ್ಲೆಯ ಹಳೆ ಮತ್ತು ಎಳೆ ಹಿಂದೂಸ್ತಾನೀ ಸಂಗೀತಗಾರರೆಲ್ಲ ಯಕ್ಷಗಾನದ ಹಿನ್ನೆಲೆಯಲ್ಲಿ ರೂಪಿತರಾದವರು. ಅದೂ ಸಂತೋಷದ ಸಂಗತಿ. ಯಕ್ಷಗಾನದಲ್ಲೂ ಹೀಗಾಗಬಹುದಿತ್ತಲ್ಲ ಎಂಬುದು ಕೊರಗು. ಅಷ್ಟೇ. ಆದ್ದರಿಂದ ಮನುಷ್ಯನ ಶ್ರೇಷ್ಠ ಅಭಿರುಚಿಯನ್ನು ಕೆಡಿಸುವ ಕೆಲಸವನ್ನು ಯಾವ ಕಲೆ, ಸಾಹಿತ್ಯ, ರಂಗಭೂಮಿ ಮಾಡಬಾರದು. ಹಾಗಾದಾಗ ಆಯಾ ಕಲೆಯಲ್ಲಿ ಸ್ಥಿತ್ಯಂತರ ಉಂಟಾಗುತ್ತದೆ. ಯಾವುದೇ ಶ್ರೇಷ್ಠ ಸಂಗತಿಯನ್ನೂ ಸಮಾಜ ಉಳಿಸಿಕೊಳ್ಳಬೇಕಾದರೆ ಅದಕ್ಕೆ ಬುದ್ಧಿಪೂರಕ ಪ್ರಯತ್ನ ಆಗಲೇಬೇಕು. ಬೌದ್ಧಿಕ ಜಾಗ್ರತೆ ಸದಾ ಬೇಕೆಂಬುದು ನನ್ನ ವಾದದ ತಾತ್ಪರ್ಯ.

ನಾವು ನೀವು ಪ್ರೀತಿಸಿದ, ಗೌರವಿಸಿದ, ಅಭಿಮಾನದಿಂದ ಕಂಡ ಯಕ್ಷಗಾನ ರಂಗಭೂಮಿಯ ಉಳಿವಿನ ಪರ್ಯಾಯವಾದಂಥ ಪ್ರಯತ್ನ ಶ್ರೀ ಬಾಳೆಹದ್ದ ಕೃಷ್ಣ ಭಾಗವತರ ಸನ್ಮಾನ ಸಮಾರಂಭ ಅಂತ ನಾನು ವ್ಯಾಖ್ಯಾನಿಸುತ್ತೇನೆ.

(ಶ್ರೀ ಬಾಳೆಹದ್ದ ಕೃಷ್ಣ ಭಾಗವತರ ಸನ್ಮಾನ ಸಮಾರಂಭದಲ್ಲಿ ಶ್ರೀ ಕೆರೆಮನೆ ಶಂಭು ಹೆಗಡೆಯವರ ಅಧ್ಯಕ್ಷೀಯ ಭಾಷಣದ ಪರಿಷ್ಕೃತ ರೂಪ)

ಪುಟ ಪ್ರಾಯೋಜಕರು : **ಡಾ. ಪ್ರಕಾಶ ಭಟ್ಟ 'ಯಕ್ಷಚೇತನ', ಧಾರವಾಡ**



# ಶ್ರೀ ಭಾಗವತರ' ಸಂಮಾನ ಸಮಾರಂಭ
## - ಒಂದು ವರದಿ

೨೦೦೫ ಮೇ ೧೪ ರಂದು ಮಂಚಿಕೇರಿ ಸಮೀಪದ ಅರಳಿಮಕ್ಕಿ ಶ್ರೀ ಮಹಾಗಣಪತಿ ದೇವಾಲಯದ ಆವರಣದಲ್ಲಿ ಶ್ರೀ ಕೃಷ್ಣ ಭಾಗವತ ಬಾಳೆಹದ್ದ ಅವರ ಸಂಮಾನ ಸಮಾರಂಭ ಸ್ವರ್ಣವಲ್ಲೀ ಶ್ರೀ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಶ್ರೀ ಕೆರೆಮನೆ ಶಂಭು ಹೆಗಡೆ ವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಸಹಕಾರಿ ಧುರೀಣ ಶ್ರೀ ಹೀಪನಳ್ಳಿ ಸೀತಾರಾಮ ಹೆಗಡೆ, ಇಂಥ ಅಪರೂಪದ ಕಾರ್ಯಕ್ರಮ ನಡೆಯುತ್ತಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿದರು. ವಿದ್ವಾನ್ ನಾಗೇಂದ್ರ ಭಟ್ಟ ಹಿತ್ಲಳ್ಳಿ ಸಂಮಾನ ಸಮಿತಿಯ ಗೌರವಾಧ್ಯಕ್ಷರಾಗಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಶ್ರೀ ಟಿ. ವಿ. ಹೆಗಡೆ ಶಿರನಾಲಾ ಹಾಗೂ ಶ್ರೀ ಪ್ರಮೋದ ಹೆಗಡೆ, ಯಲ್ಲಾಪುರ ಅಭಿನಂದನಾ ಭಾಷಣ ಮಾಡಿದರು. ಭಾಗವತರು ವಿಭಿನ್ನ ಸ್ಥಳಗಳಲ್ಲಿ ಹಾಡಿದ ಭಾಗವತಿಕೆಯ ಧ್ವನಿಸುರುಳಿ ಹಾಗೂ ಸಿ. ಡಿ. ಯನ್ನು ಬಿಡುಗಡೆ ಮಾಡಿದ ಅಂಕೋಲಾ ಕ್ಷೇತ್ರದ ಶಾಸಕ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ''ಯಕ್ಷಗಾನಕ್ಕೆ ಪ್ರತ್ಯೇಕ ಅಕಾಡೆಮಿಯು ಅವಶ್ಯ. ಆ ಕುರಿತು ಸಾಕಷ್ಟು ಹೋರಾಟ ಮಾಡಿದ್ದೇವೆ. ಮುಂದಿನ ದಿನಗಳಲ್ಲಾದರೂ ಈ ಆಸೆ ಪೂರೈಸಲಿ'' ಎಂದು ಆಶಿಸಿದರು. ಬಳಿಕ 'ಭಾಗವತ'ರ ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದ ಶ್ರೀ ವಿ. ಟಿ. ಹೆಗಡೆ ಶೀಗೇಹಳ್ಳಿ ಮಾತನಾಡುತ್ತ ''ಯಕ್ಷಗಾನ ಭಾಗವತರೊಬ್ಬರ ಕುರಿತು ಇಷ್ಟು ಅಮೂಲ್ಯ ಪುಸ್ತಕ ಹೊರಬರುತ್ತಿರುವುದು ಸ್ವಾಗತಾರ್ಹ'' ಎಂದು ಹೇಳಿದರು. ಅಭಿನಂದನಾ ಗ್ರಂಥದ ಆಶಯದ ಕುರಿತು ಶ್ರೀ ರಮಾನಂದ ಐನಕೈ ವಿವರಿಸಿದರು.

ಪೂಜ್ಯ ಸ್ವಾಮೀಜಿಯವರು ಬಾಳೆಹದ್ದ ಭಾಗವತ ದಂಪತಿಗಳನ್ನು ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿ ಶ್ರೀ ಕೃಷ್ಣ ಭಾಗವತರು, ''ನನ್ನಲ್ಲಿ ಪ್ರತಿಭೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಅಹಂಕಾರವೂ ನನಗಿಲ್ಲ. ನೀವೆಲ್ಲ ಸೇರಿ ನನಗೆ ಈ ಆದರ ತೋರಿಸಿದ್ದೀರಿ. ತುಂಬಾ ಸಂತೋಷವಾಗಿದೆ'' ಎಂದು ಭಾವುಕರಾಗಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಅಧ್ಯಕ್ಷೀಯ ಮಾತನಾಡಿದ ಶ್ರೀ ಶಂಭು ಹೆಗಡೆ, ಕೆರೆಮನೆ ''ಯಕ್ಷಗಾನ ರಂಗಭೂಮಿಯಲ್ಲಿ ಅಧ್ಯಯನಶೀಲತೆ ಕಡಿಮೆಯಾಗಿದೆ. ಉಳಿದ ಭಾರತೀಯ ಕಲಾ ಪ್ರಕಾರದ ಹಾಗೆ ಇದರಲ್ಲೂ



ಅಧ್ಯಯನ, ಪರಿಶ್ರಮ ಕಂಡುಬಂದರೆ ಈ ಕಲೆ ವಿಶ್ವಮಾನ್ಯತೆ ಪಡೆಯಲು ಸಾಧ್ಯ'' ಎಂದು ನುಡಿದರು.

ಸಮಾರಂಭವನ್ನು ಸಮಾರೋಪಿಸಿ ಆಶೀರ್ವಚನ ನೀಡಿದ ಸ್ವರ್ಣವಲ್ಲೀ ಶ್ರೀ ಶ್ರೀಗಳವರು ''ಕೃಷ್ಣ ಭಾಗವತರು ಹಾಡುವಾಗ ತಾದಾತ್ಮ್ಯ ಹೊಂದುತ್ತಿದ್ದರು. ಯಾವುದೇ ಕೆಲಸದಲ್ಲಿ ಪ್ರಾಮಾಣಿಕ ಫಲ ಪಡೆಯಬೇಕಾದರೆ ತಾದಾತ್ಮ್ಯ ಅವಶ್ಯ. ಈ ಶುದ್ಧ ತಾದಾತ್ಮ್ಯ ಶುದ್ಧ ವ್ಯಕ್ತಿಗಳಿಗೆ ಮಾತ್ರ ಬರುತ್ತದೆ. ಮನಸ್ಸಿನಲ್ಲಿ ಕಪಟತನ ಇದ್ದವರಿಗೆ ಬರಲು ಸಾಧ್ಯವಿಲ್ಲ. ಕೃಷ್ಣ ಭಾಗವತರು ಶುದ್ಧ ಮನುಷ್ಯರು. ಆದ್ದರಿಂದಲೇ ಅವರಿಗೆ ಅದ್ಭುತ ತಾದಾತ್ಮ್ಯ ಸಾಧ್ಯವಾಗಿದೆ. ಇಂಥ ಅಪರೂಪದ ಸಜ್ಜನ, ಅಧ್ಯಯನಶೀಲ ವ್ಯಕ್ತಿಗಳನ್ನು ಗುರುತಿಸಿ ಸಂಮಾನಿಸುತ್ತಿರುವುದು ಸ್ತುತ್ಯಾರ್ಹ. ಹಾಗಾಗಿ ಶ್ರೀ ಕೃಷ್ಣ ಭಾಗವತರು ಹಾಗೂ ಅವರನ್ನು ಸಂಮಾನಿಸುತ್ತಿರುವ ಸಂಘಟಕರು ಇಬ್ಬರೂ ಏಕಕಾಲದಲ್ಲಿ ಅಭಿನಂದನೆಗೆ ಪಾತ್ರರಾಗುತ್ತಾರೆ'' ಎಂದು ಹೇಳಿದರು.

ಪ್ರಾರಂಭದಲ್ಲಿ ರಾಯಸಂ ಅಧ್ಯಕ್ಷ ಶ್ರೀ ಜಿ. ಟಿ. ಭಟ್ಟ ಬೊಮ್ಮನಹಳ್ಳಿ ಎಲ್ಲರನ್ನೂ ಸ್ವಾಗತಿಸಿದರೆ, ಶ್ರೀ ವಿಶ್ವನಾಥ ಭಾಮನಕೊಪ್ಪ ಕೊನೆಯಲ್ಲಿ ವಂದಿಸಿದರು. ಶ್ರೀ ದಿವಾಕರ ಹೆಗಡೆ ಕೆರೆಹೊಂಡ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಸಾವಿರಾರು ಅಭಿಮಾನಿಗಳು ಪಾಲ್ಗೊಂಡಿದ್ದರು. ಸಭಾ ಕಾರ್ಯಕ್ರಮದ ನಂತರ ತಾಳಮದ್ದಲೆ, ಹಿಮ್ಮೇಳ ವೈಭವ ಹಾಗೂ ಯಕ್ಷಗಾನ ಜರುಗಿದವು. ✻



ಪುಟ ಪ್ರಾಯೋಜಕರು : ಶ್ರೀ ನಾಗರಾಜ ರಾಮಚಂದ್ರ, ಜೋಶಿ, ಸೋಂದಾ

* ಶುಭಾಶಯಗಳು *

## ಶ್ರೀ ಸರ್ವೇಶ್ವರ ಪರಮೇಶ್ವರ ಹೆಗಡೆ, ಗೋಣಸರಮನೆ

ಮತ್ತು ಮನೆಯವರು, ಮಕ್ಕಳು ಹಾಗೂ ಮೊಮ್ಮಕ್ಕಳು

---

**ಹಾರ್ದಿಕ ಶುಭಾಶಯಗಳು:-**

## ಶ್ರೀ ವಿನಯ ಟ್ರೇಡರ್ಸ್ (SVT)

ಅಡಿಕೆ ವ ಕಾಳುಮೆಣಸು ವ್ಯಾಪಾರಸ್ಥರು, ಯಲ್ಲಾಪುರ

ಶ್ರೀ ಸುಬ್ರಹ್ಮಣ್ಯ ವಿ. ಹೆಗಡೆ

---

ರಸಋಷಿ ಗಾನಯೋಗಿ ಶ್ರೀಕೃಷ್ಣ ಭಾಗವತರು ನೂರ್ಕಾಲ ಬಾಳಲಿ
ಎಂದು ಹರಕೆ ಹೊತ್ತು ಅವರಿಗೆ ನಮಿಸುವ

## ಶ್ರೀ ಜಿ. ಟಿ. ಭಟ್ಟ, ಶ್ರೀಮತಿ ಪಾರ್ವತಿ ಜಿ. ಭಟ್ಟ

ಮತ್ತು

## ಶ್ರೀ ಪುರುಷೋತ್ತಮ ಜಿ. ಭಟ್ಟ

**ಬೊಮ್ಮನಳ್ಳಿ**

---

* ಶುಭಾಶಯಗಳು *



# ಗಜಾನನ ಸ್ಟೋರ್ಸ್


ಸಿ. ಪಿ. ಬಝಾರ, ಶಿರಸಿ (ಉ. ಕ.)

ಯೋಗ್ಯ ದರದ ಜವಳಿ ಅಂಗಡಿ

- ಶ್ರೀ ವಿ. ಟಿ. ಹೆಗಡೆ, ಜಾನ್ಮನೆ

---

ನಮ್ಮ ತಂದೆ ದಿ. (ತುದಿಮನೆ) ಕಂಪ್ಲಿ ಸುಬ್ಬಣ್ಣನವರ
ಪ್ರೀತಿಯ ಶಿಷ್ಯ ಹಾಗೂ ಒಡನಾಡಿಯಾದ
ಬಾಳೆಹದ್ದ ಕೃಷ್ಣ ಭಾಗವತರಿಗೆ ಹಾರ್ದಿಕ ಶುಭ ಕೋರುವ



ಶ್ರೀ ರಾಮಚಂದ್ರ ಸುಬ್ರಾಯ ಹೆಗಡೆ,
ಕಂಪ್ಲಿ, ಚುಂಚೆಗದ್ದೆ, ಹಾಗೂ ಮನೆಯವರು
ಶ್ರೀ ಮಹಾಬಲೇಶ್ವರ ಹೆಗಡೆ

ಹಾರ್ದಿಕ ಶುಭಾಶಯಗಳೊಂದಿಗೆ .....

ಶ್ರೀ ಕೃಷ್ಣ ಗಣಪತಿ ಭಟ್ಟ, ಶಿಡ್ಲಮನೆ

ಶ್ರೀ ಗೋಪಾಲಕೃಷ್ಣ ಶಿ. ಜೋಶಿ, ಬಾಡ್ಲಕೊಪ್ಪ

ಶ್ರೀ ಕೇಶವ ಗ. ಹೆಗಡೆ, ಕನೇನಹಳ್ಳಿ

ಶ್ರೀ ಗೋಪಾಲ ಪರಮ್ಮೆ ಹೆಗಡೆ, ತೂಕದಬೈಲು

ಶ್ರೀ ಆನಂದಮೂರ್ತಿ ಬೆಂಗಳೂರು

ವೇ॥ ಮೂ. ಕಡ್ಲೆ ಭಟ್ಟರು, (ಶಿರಸಿ) ಬೆಂಗಳೂರು

ಶ್ರೀ ಕಿರಣ ಹೊಳ್ಳ, ಬೆಂಗಳೂರು

ಶ್ರೀ ಎ. ಸಂಪಂಗಿ ರಾಮಯ್ಯ, ಆಂಜನೇಯ ಲೇಔಟ್, ಬೆಂಗಳೂರು

ಶ್ರೀ ಕುಶ್ಮಾ ಪ್ರಿಂಟರ್ಸ್, ಬಿನ್ನಿ ಮಿಲ್, ಬೆಂಗಳೂರು

ಶ್ರೀ ಹರೀಶ ಮಧ್ಯಸ್ಥ, ಬೆಂಗಳೂರು

ಶ್ರೀ ಪ್ರಕಾಶ ರೆಡ್ಡಿ, ಬೆಂಗಳೂರು

ಶ್ರೀ ಗಣಪತಿ ನಾ. ಹೆಗಡೆ, ಗಡೀಮನೆ

ಶ್ರೀ ಜಿ. ಎಸ್. ಭಾಗವತ, ಚಪ್ಪರಮನೆ

ಶ್ರೀ ಚಂದ್ರಶೇಖರ ವೆಂ. ಭಟ್ಟ, ಕೆಳಗಿನಮಂಚಿಕೇರಿ

ಶ್ರೀ ತಿರುಮಲೇಶ್ವರ ಕೆ. ಹೆಗಡೆ, ಎಲೆಮನೆ

ಶ್ರೀ ಜಗನ್ನಾಥ ನ. ಭಟ್ಟ, ಕನೇನಹಳ್ಳಿ

ಶ್ರೀ ಜಯರಾಮ ಭಟ್ಟ, ಗುಂಜಗೋಡ

ಜಾಗೃತ ದಳ, ಹಿರೇಸರ

ಶ್ರೀ ಪರಮೇಶ್ವರ ರಾ. ಭಟ್ಟ, ಹಾಸಣಗಿ

ಶ್ರೀ ಪರಮೇಶ್ವರ ಸು. ಹೆಗಡೆ, ಹುಲಿಮನೆಜಡ್ಡಿ, ಕಾನಗೋಡ

ಶ್ರೀ ಪರಮೇಶ್ವರ ಎ. ಹೆಗಡೆ, ಜಾಲೀಮನೆ

ಶ್ರೀ ನರಸಿಂಹ ಮಾಬ್ಲೇಶ್ವರ ಹೆಗಡೆ, ಹಬ್ಬಮನೆ

ಶ್ರೀ ನಾಗೇಶ ಕೃಷ್ಣ ಭಾಗವತ, ಯಲ್ಲಾಪುರ

ಶ್ರೀ ನಾರಾಯಣ ನಾಗಪ್ಪ ಹೆಗಡೆ, ಕಂಪ್ಲಿ

ಶ್ರೀ ಪ್ರಭಾಕರ ನಾ. ಹೆಗಡೆ, ಬೆಳ್ಳಿಮನೆ

ಹಾರ್ದಿಕ ಶುಭಾಶಯಗಳೊಂದಿಗೆ .....

ಶ್ರೀ ನಾರಾಯಣ ಕೆ. ಹೆಗಡೆ, ಕನೇನಹಳ್ಳಿ

ಡಾ|| ದೇವರಾಜ ಹೊಸಕೋಟೆ, ಬೆಂಗಳೂರು

ಶ್ರೀ ಮಧುಕೇಶ್ವರ ನಾ. ಹೆಗಡೆ, ಶಿಕ್ಷಕರು, ಕುಂದೂರು

ಶ್ರೀ ಮಹಾಬಲೇಶ್ವರ ಜಿ. ಭಟ್ಟ, ಜಡ್ಡಿಗದ್ದೆ

ಶ್ರೀ ಮಧುಕೇಶ್ವರ ನಾ. ಭಟ್ಟ, ಕರಡಿಗೆಮನೆ, ಸ್ವರ್ಣಶ್ರೀ ಟ್ರೇಡರ್ಸ್, ಯಲ್ಲಾಪುರ

ಶ್ರೀ ಮಹಾಬಲೇಶ್ವರ ವೆಂ. ಹೆಗಡೆ, ಹಲಸರಿಗೆ

ಶ್ರೀ ಎ. ಎನ್. ಗೇರಗದ್ದೆ

ಶ್ರೀ ವೆಂಕಟ್ರಮಣ ಸುಬ್ರಾಯ ಹೆಗಡೆ, ಖಾಸಾಪಾಲ

ಶ್ರೀ ರಾಮಚಂದ್ರ ಲ. ಹೆಗಡೆ, ಬಾಡ್ಲಕೊಪ್ಪ

ಶ್ರೀ ವೆಂಕಟ್ರಮಣ ಲ. ಹೆಗಡೆ, ಬಾಡ್ಲಕೊಪ್ಪ

ಶ್ರೀ ರಾಮಕೃಷ್ಣ ಸು. ಹೆಗಡೆ, ಕನೇನಹಳ್ಳಿ

ಶ್ರೀ ಡಿ. ಶಂಕರ ಭಟ್ಟ, 'ಪಾಂಚಜನ್ಯ', ಓಂಕಾರ ಟ್ರೇಡರ್ಸ್, ಯಲ್ಲಾಪುರ

ಶ್ರೀ ಎ. ಎನ್. ಹೆಗಡೆ, ಲಿಂಗನಸರ

ಶ್ರೀ ರತ್ನಾಕರ ಎಸ್. ಪೋಕಳೆ, ಜೋಗಭಟ್ರಕೇರಿ

ವೆ|| ಶಿವರಾಮ ಗ. ಭಟ್ಟ, ತೋರಣಸರ

ಶ್ರೀ ಆರ್. ಎಸ್. ಹೆಗಡೆ, ಕೆಳಗಿನಕಂಪ್ಲಿ

ಶ್ರೀ ಶಂಕರ ಗ. ಭಟ್ಟ, ಮತ್ತು ಸಹೋದರರು, ಕಂಚಿನಳ್ಳಿ

ಶ್ರೀ ವಿನಾಯಕ ಗೌಡರ, ಗೌಡ್ತಿಕೊಪ್ಪ, ಕುಂದರಗಿ

ಶ್ರೀ ರಾಮಚಂದ್ರ, ವಿ. ಭಟ್ಟ, ಮಾಳಕೊಪ್ಪ

ಶ್ರೀ ರಾಮಚಂದ್ರ, ನಾ. ಹೆಗಡೆ, ಬಂಡೀಮನೆ

ಶ್ರೀ ಶಿವರಾಮ ಜಿ. ಹೆಗಡೆ, ಜಾಜಿ, ಕನೇನಹಳ್ಳಿ

ಶ್ರೀ ಶಿವಾನಂದ ಭಟ್ಟ, ಬೆಂಗಳೂರು

ಶ್ರೀ ರಾಜೇಶ ಭಟ್ಟ, ಬೆಳಗುಂದ್ಲಿ

ಶ್ರೀ ಎ. ಡಿ. ಭಟ್ಟ, ಹೊಸ್ಮನೆ

ಶ್ರೀ ಶ್ರೀಪಾದ ದತ್ತಾತ್ರಯ ಭಟ್ಟ, ಕಾನಗೋಡ

ಹಾರ್ದಿಕ ಶುಭಾಶಯಗಳೊಂದಿಗೆ .....

ಶ್ರೀ ಶಿವಾನಂದ ಟಿ. ಎಸ್., ಸಂಜೀವಿನಿ ಮೆಡಿಕಲ್ಸ್, ಮಂಚಿಕೇರಿ

ಶ್ರೀ ವೆಂಕಟ್ರಮಣ ಎ. ಹೆಗಡೆ, ಕುಂಬ್ರಿಗುಡ್ಡೆ

ಶ್ರೀ ಆರ್. ಎನ್. ಭಟ್ಟ, ದುಂಡಿ, ಎಣ್ಣೆಸರ

ಶ್ರೀ ರಮಾನಂದ ಐನಕೈ ಹಾಗೂ ಉಷಾ ಐನಕೈ

ಶ್ರೀ ಎ. ಜಿ. ಹೆಗಡೆ, ಕೋಸಗುಳಿ

ಶ್ರೀ ವೆಂಕಟ್ರಮಣ ಸು. ಹೆಗಡೆ, ಬೆಳಗುಂದ್ಲಿ

ಶ್ರೀ ರಾಧಾಬಾಯಿ ಅ. ಹೆಗಡೆ ಮತ್ತು ಶ್ರೀ ಆರ್. ಜಿ. ಹೆಗಡೆ, ಶೀಗೇಮನೆ

ಶ್ರೀ ಎ. ಜಿ. ಹೆಗಡೆ, ಕನೇನಹಳ್ಳಿ

ಶ್ರೀ ರಾಮಕೃಷ್ಣ ಗೋಪಾಲ ಭಟ್ಟ, ಹುಲಿಮನೆ

ಶ್ರೀ ಎ. ಎನ್. ರಾಜಶೇಖರ, ಬೆಂಗಳೂರು

ಶ್ರೀ ವಿ. ಆರ್. ಹೆಗಡೆ, ಹೆಗಡೆಮನೆ, ಬೆಂಗಳೂರು

ಶ್ರೀ ಶಂಕರ , ಸಿದ್ದೇಶ್ವರ ನಿಲಯ, ಬೆಂಗಳೂರು

ಶ್ರೀ ಶಾಂತಾರಾಮ ವೆಂ. ಹೆಗಡೆ, ಬಿದ್ರಳ್ಳಿ, ಉಮಚಗಿ

ಶ್ರೀ ವೆಂಕಟ್ರಮಣ ಮಂ. ಹೆಗಡೆ, ಅಧ್ಯಕ್ಷರು, ಭೂತನಾಥೇಶ್ವರ ಯಕ್ಷ ಮಂಡಳಿ, ತಟ್ಟೀಕೈ

ಶ್ರೀ ವೆಂಕಟ್ರಮಣ ವಿ. ಭಟ್ಟ, ಹಿರೇಸರ

ಶ್ರೀ ಶಿವರಾಮ ಕೃಷ್ಣಮಯ್ಯರ, ಗೋಕರ್ಣ

ಶ್ರೀ ವಿಘ್ನೇಶ್ವರ ರಾ. ಹೆಗಡೆ, ಕೊಕ್ಕಾರ

ಶ್ರೀ ರಾಘವೇಂದ್ರ, ಸು. ಭಟ್ಟ, ಹಾಸಣಗಿ

ಶ್ರೀ ರಾಮಚಂದ್ರ, ಸ. ಶಾಸ್ತ್ರಿ, ಕೋಸಗುಳಿ

ಶ್ರೀ ಆರ್. ಎಂ. ಹೆಗಡೆ, ಉಲ್ಲಾಳ

ಶ್ರೀ ಆರ್. ವಿ. ಹೆಗಡೆ, ಕೊಟ್ಟಳ್ಳಿ

ಶ್ರೀ ವಿನಾಯಕ ಗೋಪಾಲಕೃಷ್ಣ ಭಟ್ಟ, ಕೊಕ್ಕಾರ

ಶ್ರೀ ಸುಬ್ರಹ್ಮಣ್ಯ ನರಸಿಂಹ ಭಟ್ಟ, ಭರಣಿ , ಕೋಟೆಮನೆ

ಶ್ರೀ ಸರೋಜಾ ಗೋಪಾಲ ಹೆಗಡೆ, ಕೊಕ್ಕಾರ

ಶ್ರೀ ಸುಬ್ರಹ್ಮಣ್ಯ ಗಂಗಾಧರ ಭಟ್ಟ, ಹಾಸಣಗಿ

**ಹಾರ್ದಿಕ ಶುಭಾಶಯಗಳೊಂದಿಗೆ .....**

ಶ್ರೀ ಸುಬ್ರಮಣ್ಯ ನಾ. ಹೆಗಡೆ, ತಾರೇಹಳ್ಳಿ

ಶ್ರೀ ಸುಬ್ರಹ್ಮಣ್ಯ ಗ. ಹೆಗಡೆ, ಭಟ್ರಕೇರಿ, ಶಿರಸಿ

ಶ್ರೀ ಸದಾನಂದ ರಾ. ಭಟ್ಟ, ಕೆಳಗಿನಕೇರಿ, ಕಲ್ಲೇಶ್ವರ

ಶ್ರೀ ಎಸ್. ಎಂ. ವೈದ್ಯ, ವೈದ್ಯಹೆಗ್ಗಾರ

ಶ್ರೀ ಸತ್ಯನಾರಾಯಣ ನಾಗಪತಿ ಭಟ್ಟ, ಮಳಗಿಮನೆ

ಶ್ರೀ ಸುಬ್ರಾಯ ರಾಮಕೃಷ್ಣ ಹೆಗಡೆ, ಕುಂಬ್ರಿಗುಡ್ಡೆ

ಶ್ರೀ ಎಸ್. ಆರ್. ಭಟ್ಟ, ಕವಡಿಕೆರೆ

ಶ್ರೀ ಸುಬ್ರಾಯ ಗೋವಿಂದ ಹೆಗಡೆ, ಜೋಗಭಟ್ರಕೇರಿ

ಶ್ರೀ ಹೇರಂಬ ಪ. ಹೆಗಡೆ, ಭರತನಹಳ್ಳಿ

ಶ್ರೀ ಸುಬ್ರಹ್ಮಣ್ಯ ಶಿವರಾಮ ಹೆಗಡೆ, ಮಾಳಕೊಪ್ಪ

ಶ್ರೀ ಸುರೇಶ ಹೆಗಡೆ, ಹರಿಶಿ, ಬೆಂಗಳೂರು

ಶ್ರೀ ಸತೀಶ ಹೆಗಡೆ ಮತ್ತು ಸಂಗಡಿಗರು, ಕಂಚಿಕೈ , ಸಿದ್ದಾಪುರ

ಶ್ರೀ ಸುಬ್ರಹ್ಮಣ್ಯ ವೆಂಕಟ್ರಮಣ ಹೆಗಡೆ, ಹೊಂಕಣಕೆರೆ

ಶ್ರೀ ಸದಾಶಿವ ಕೃಷ್ಣ ಹೆಗಡೆ, ಉಮಚಗಿ

ಶ್ರೀ ಗಜಾನನ ಸರ್ವೇಶ್ವರ ಹೆಗಡೆ, ಮೇಲಿನಕಂಪ್ಲಿ


ಶ್ರೀ ಗೋಪಾಲಕೃಷ್ಣ ಎಸ್. ಗಾಂವಕರ

ಶ್ರೀ ಪರಮೇಶ್ವರ ವರದಪ್ಪ ಹೆಗಡೆ, ಓಣಿತೋಟ

ಶ್ರೀ ಎನ್. ಜಿ. ಶೇರುಗಾರ, ಮಂಚಿಕೇರಿ

ಶ್ರೀ ಮಹಾಬಲೇಶ್ವರ ತಿ. ಹೆಗಡೆ, ಬೆಳಗುಂದ್ಲಿ

ಶ್ರೀ. ಆರ್. ಟಿ. ಹೆಗಡೆ. [illegible]



# ದಿ ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಒಪ್. ಬ್ಯಾಂಕ್ ಲಿಮಿಟೆಡ್, ಶಿರಸಿ (ಉ.ಕ.)


ಸ್ಥಾಪನೆ : 1920
ದೂರವಾಣಿ : 236304, 236594, 236717
ಟೆಲಿಗ್ರಾಂ : ಫಾರ್ಮರ್ ಬ್ಯಾಂಕ್
ಫ್ಯಾಕ್ಸ್ : 237320
E-Mail - kdccbk@sancharnet.in


84 ವರ್ಷಗಳ ಸಾರ್ಥಕ ಸೇವೆಯೊಂದಿಗೆ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ತರ ಕಾಣಿಕೆ ಸಲ್ಲಿಸುತ್ತಿರುವ ಹಾಗೂ ರಾಜ್ಯದಲ್ಲಿಯೇ ಅತ್ಯುತ್ತಮ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಎಂದು ನಬಾರ್ಡನಿಂದ 1995-96, 1996-97 ಹಾಗೂ 2000-01 ನೇ ಸಾಲಿನ ಬಗ್ಗೆ ಪ್ರಶಸ್ತಿಯೊಂದಿಗೆ ಪುರಸ್ಕರಿಸಲಪ್ಟಟ್ಟ ಜಿಲ್ಲೆಯ ಹೆಮ್ಮೆಯ ಬ್ಯಾಂಕು.

## ಸೇವಾ ವೈಶಿಷ್ಟ್ಯಗಳು

★ ಎಲ್ಲ ವಿಧದ ಬ್ಯಾಂಕಿಂಗ್ ವ್ಯವಹಾರ ★ ಆಕರ್ಷಕ ಬಡ್ಡಿದರದಲ್ಲಿ ವಿವಿಧ ಬಗೆಯ ತೇವಣಿಗಳ ಸ್ವೀಕಾರ
★ ಸಮಾಜದ ಏಳ್ಗೆಗೆ ಅನೇಕ ಆರ್ಥಿಕ ಯೋಜನೆಗಳು
★ ಜಿಲ್ಲೆಯ ರೈತರ ಅನುಕೂಲಕ್ಕಾಗಿ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ಸಹಿತ ವಿವಿಧ ಯೋಜನೆಗಳ ಜಾರಿ
★ ವೃತ್ತಿನಿರತರಿಗೆ ಹಾಗೂ ವೇತನದಾರರಿಗೆ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಹಾಗೂ ಸುಲಭ ಕಂತುಗಳಲ್ಲಿ ಸಾಲ ಸೌಲಭ್ಯ. ★ ದಾಂಡೇಲಿ, ಹಳಿಯಾಳ, ಉಳಗಾ, ನ್ಯೂಮಾರ್ಕೆಟ್ ಯಾರ್ಡ್, ಶಿರಸಿ ಹಾಗೂ ಸಿ. ಪಿ. ಬಝಾರ್, ಶಿರಸಿ ಶಾಖೆಗಳಲ್ಲಿ ಲಾಕರ್ ಸೌಲಭ್ಯ. ★ ಅತೀ ಕಡಿಮೆ ಬಡ್ಡಿದರದಲ್ಲಿ ಸುಲಭ ಕಂತುಗಳ ಗೃಹ ಸಾಲ ನೀಡಿಕೆ ★ ಗ್ರಾಹಕರ ತ್ವರಿತ ಸೇವೆಗಾಗಿ ಪ್ರಧಾನ ಕಛೇರಿ ಹಾಗೂ ತಾಲೂಕಾ ಮಟ್ಟದ ಶಾಖೆಗಳಲ್ಲಿ ಕಂಪ್ಯೂಟರ್ ವ್ಯವಸ್ಥೆ ಅಳವಡಿಕೆ ★ ಆರ್ಥಿಕವಾಗಿ ಹಿಂದುಳಿದ ಜನರ ಏಳ್ಗೆಗಾಗಿ ಸ್ವಸಹಾಯ ಸಂಘಗಳ ಮೂಲಕ ಸಾಲ ಸೌಲಭ್ಯ ★ ಹಿರಿಯ ನಾಗರಿಕರ ತೇವಣಿಗಳ ಮೇಲೆ ಶೇ 1 ರಷ್ಟು ಹೆಚ್ಚಿನ ಬಡ್ಡಿ ನೀಡಿಕೆ
★ ಕೃಷಿ ವಿಮಾ ಯೋಜನೆಗಳನ್ನು ಅನುಷ್ಠಾನಗೊಳಿಸಿ ಜಿಲ್ಲೆಯ ಸಾಲಗಾರ ಹಾಗೂ ಸಾಲಗಾರರಲ್ಲದ ರೈತರ ಬೆಳೆಗೆ ವಿಮಾ ಸೌಲಭ್ಯ
★ ಸಹಕಾರಿ ಸಂಘಗಳ ಸದಸ್ಯರುಗಳಿಗೆ ಯಶಸ್ವಿನಿ ಯೋಜನೆಯ ಸೌಲಭ್ಯ

**ಜಿಲ್ಲಾದ್ಯಂತ 46 ಶಾಖೆಗಳು ನಿಮ್ಮ ಸೇವೆಯಲ್ಲಿ**
**ನಮ್ಮ ಬ್ಯಾಂಕಿನಲ್ಲಿಯ ಉಳಿತಾಯ ನಮ್ಮ ಜಿಲ್ಲೆಗೇ ಸಹಾಯ**
**ತ್ವರಿತ - ಆತ್ಮೀಯ ಸೇವೆ**

**ಎಲ್. ಎಂ. ಹೆಗಡೆ** ಎಂ. ಎ., ಬಿ. ಲಿಟ್.
ವ್ಯವಸ್ಥಾಪಕ ನಿರ್ದೇಶಕರು

**ಎಸ್. ಎಲ್. ಘೋಟ್ನೇಕರ**
ಅಧ್ಯಕ್ಷರು



ಚೇತನಾ ಸಹಕಾರಿ ಆಫ್‌ಸೆಟ್ ಮುದ್ರಣ, ಶಿರಸಿ ಫೋ: 08384-227002